ಡಿ.ಎಲ್. ನರಸಿಂಹಾಚಾರ್



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮

ಅಮೃತೋತ್ಸವಮಾಲೆ-೨೮

ಹೊಸಗನ್ನಡ ಸಾಹಿತ್ಯದ ನಿರ್ಮಾಪಕರು ಮಾಲಿಕೆ-೧೨

ಡಿ. ಎಲ್. ನರಸಿಂಹಾಚಾರ್

ಡಾ॥ ಎಸ್. ವಿದ್ಯಾಶಂಕರ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮

D. L. NARASIMHACHAR - Biography by Dr. S. Vidya shankar, Published by Kannada Sahitya Parishat, Pampa mahakavi Road, Chamarajpet, Bangalore-18.
Pp. viii + 152 1992

ಮೊದಲ ಮುದ್ರಣ : ೧೯೯೨

ಪ್ರತಿಗಳು : ೧೦೦೦

ಬೆಲೆ : ಹತ್ತು ರೂಪಾಯಿ

ಮುದ್ರಣ :
ಬೂದನೂರು ಪ್ರಿಂಟರ್ಸ್
ಕಾಮಾಕ್ಷಿಪಾಳ್ಯ, ಬೆಂಗಳೂರು-560 079

900

ಮೊದಲ ಮಾತು

ಕನ್ನಡ ಸಾಹಿತ್ಯ ಪರಿಷತ್ತು ಅಮೃತೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಅದರ ಸಂಸ್ಮರಣಾರ್ಥವಾಗಿ ೭೫ ಪುಸ್ತಕಗಳನ್ನು ತರಲು ಯೋಜನೆಯೊಂದನ್ನು ಹಮ್ಮಿಕೊಂಡಿದೆ. ಈ ಯೋಜನೆಯಡಿಯಲ್ಲಿ ಹೊಸಗನ್ನಡ ಸಾಹಿತ್ಯದ ನಿರ್ಮಾಪಕರ ಕುರಿತು ಸುಮಾರು ೧೦೦ ಪುಟಗಳ ಗಾತ್ರದ ಕನಿಷ್ಠ ೩೫ ಗ್ರಂಥಗಳನ್ನಾದರೂ ಪ್ರಕಟಿಸಬೇಕೆಂಬುದು ನಮ್ಮ ಅಪೇಕ್ಷೆಯಾಗಿದೆ.

ಮೈಸೂರಿನಲ್ಲಿ ನಡೆದ ಅಖಿಲ ಭಾರತ ೬೦ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭಕ್ಕೆ ಈ ಗ್ರಂಥಮಾಲೆಯ ಕೆಲವು ಗ್ರಂಥಗಳನ್ನಾದರೂ ಪ್ರಕಟಿಸಬೇಕೆಂಬುದು ನಮ್ಮ ಅಪೇಕ್ಷೆಯಾಗಿತ್ತು. ಈಗ ಶ್ರೀ ನಾ. ಕಸ್ತೂರಿ, ಶ್ರೀ ಶಿ. ಶಿ. ಬಸವನಾಳ, ಡಾ॥ ಎಂ. ಎಚ್. ಕೃಷ್ಣ, ಪ್ರೊ॥ ಡಿ. ಎಲ್. ನರಸಿಂಹಾಚಾರ್ ಅವರನ್ನು ಕುರಿತ ಜೀವನ ಚರಿತ್ರೆಗಳ ಪುಸ್ತಕಗಳು ಪ್ರಕಟವಾಗುತ್ತಿವೆ.

ಈ ಮಾಲೆಯ ಗ್ರಂಥಗಳು ಹೊಸಗನ್ನಡ ಸಾಹಿತ್ಯದ ಇತಿಹಾಸವನ್ನು ಅಧ್ಯಯನ ಮಾಡುವವರಿಗೆ ಉಪಯುಕ್ತವಾಗಬೇಕೆಂಬುದು ನಮ್ಮ ಆಶಯ. ಅದಕ್ಕೆ ತಕ್ಕಂತೆ ಆಯಾ ಮಹನೀಯರ ಬಗ್ಗೆ ಸೂಕ್ತರಾದವರಿಂದ ಈ ಗ್ರಂಥಗಳನ್ನು ಬರೆಯಿಸಲಾಗಿದೆ.

ಈ ಗ್ರಂಥಮಾಲೆಯ ಸಂಪಾದಕ ಮಂಡಲಿಯಲ್ಲಿ ಪ್ರೊ. ಅ. ರಾ. ಮಿತ್ರ ಮತ್ತು ಪ್ರೊ. ಎಂ. ಎಚ್. ಕೃಷ್ಣಯ್ಯ ಅವರು ಸದಸ್ಯರಾಗಿರಲು ಒಪ್ಪಿದ್ದು ಸಾಹಿತ್ಯ ಪರಿಷತ್ತಿನ ಪರವಾಗಿ ಅವರನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತೇನೆ.

ಪ್ರೊ॥ ಡಿ. ಎಲ್. ನರಸಿಂಹಾಚಾರ್ ಅವರನ್ನು ಕುರಿತು ಈ ಗ್ರಂಥವನ್ನು ಬರೆದುಕೊಟ್ಟ ಮಾನ್ಯ ಡಾ॥ ಎಸ್. ವಿದ್ಯಾಶಂಕರ ಅವರನ್ನು

ಕೃತಜ್ಞತೆಯಿಂದ ನೆನೆಯುತ್ತೇನೆ. ಇದನ್ನು ಅಚ್ಚುಮಾಡುವಲ್ಲಿ ಶ್ರ
ಬೂದನೂರು ಪ್ರಿಂಟರ್ಸ್‌ನ ಸಿಬ್ಬಂದಿಗೆ ವಂದನೆಗಳು.

ಈ ಗ್ರಂಥವು ಪ್ರೊ|| ಡಿ. ಎಲ್. ನರಸಿಂಹಾಚಾರ್ ಅವರ
ಅಧ್ಯಯನ ಮಾಡುವ ಸಾಹಿತ್ಯ ಮತ್ತು ಸಂಸ್ಕೃತಿಗಳ ವಿದ್ಯಾರ್ಥಿಗಳಿಗೆ ಅ
ಉಪಯುಕ್ತವಾಗುತ್ತದೆ ಎಂದು ಭಾವಿಸುತ್ತೇನೆ. ಇಡೀ ಗ್ರಂಥಮಾಲೆಂ
ಹೊಸಗನ್ನಡ ಸಾಹಿತ್ಯದ ಒಂದು ಸಾಂಸ್ಕೃತಿಕ ಪರಂಪರೆಯಾಗಿ ರೂ
ಮಹದಾಶಯ ನಮ್ಮದು ಎಂದು ನಮ್ರನಾಗಿ ಸೂಚಿಸಬಯಸುತ್ತೇನೆ.

ಬೆಂಗಳೂರು
೬-೧-೧೯೮೨

ಪ್ರೊ|| ಜಿ. ಎಸ್. ಸಿದ್ಧಲಿಂಗ
ಅಧ್ಯಕ್ಷ
ಕನ್ನಡ ಸಾಹಿತ್ಯ ಪರಿಷತ್ತು

ಲೇಖಕನ ನಾಲ್ಕು ಮಾತು

ಕನ್ನಡ ಸಾಹಿತ್ಯ ಪರಿಷತ್ತು ಹೊರತರುತ್ತಿರುವ 'ಹೊಸಗನ್ನಡ ಸಾಹಿತ್ಯದ ನಿರ್ಮಾಪಕರು' ಮಾಲಿಕೆಯಲ್ಲಿ ಪ್ರೊ. ಡಿ. ಎಲ್. ನರಸಿಂಹಾಚಾರ್ಯರ ಬದುಕು ಸಾಹಿತ್ಯದ ಪರಿಚಯವಿರುವ ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯನವರು ಈ ಕೃತಿರಚನೆಗೆ ಮೂಲ ಪ್ರೇರಣೆ. ಬೇರೆ ಕೆಲಸಗಳ ಒತ್ತಡದಲ್ಲಿ ಸಿಕ್ಕಿಹಾಕಿಕೊಂಡಿದ್ದ ನಾನು ಈ ಕೃತಿರಚನೆಯನ್ನು ಸಕಾಲಕ್ಕೆ ಮಾಡಿಕೊಡದೆ ವಿಳಂಬಿಸಿದೆ. ಆದಾಗ್ಯೂ, ತಮ್ಮ ಅವ್ಯಾಜ ಪ್ರೀತಿಯಿಂದ ನನ್ನನ್ನು ಬರೆಯಲು ಒತ್ತಾಯಿಸಿ, ನನ್ನಿಂದ ಇದು ಹೊರಬರಲು ಕಾರಣರಾದ ಅವರಿಗೆ ನಾನು ಋಣಿ.

ನಾನು ಮಹಾರಾಜಾ ಕಾಲೇಜಿಗೆ ಬಂದಾಗ ಆಚಾರ್ಯ ಡಿ.ಎಲ್.ಎನ್. ನಿವೃತ್ತರಾಗಿದ್ದರು. ಹೀಗಾಗಿ ಅವರ ಪಾಠ ಕೇಳುವ, ಶಿಷ್ಯನಾಗುವ, ನಿಕಟ ವಾಗಿ ಅವರನ್ನು ತಿಳಿಯುವ ಭಾಗ್ಯ ನನ್ನದಾಗಲಿಲ್ಲ. ಈ ಕಾರಣಕ್ಕಾಗಿ ಅವರ ಬಗ್ಗೆ ಬರೆಯಲು ನಾನು ಹಿಂಜರಿಯುತ್ತಿದ್ದೆ. ಈ ಘಟ್ಟದಲ್ಲಿ ನನ್ನನ್ನು ಬರೆಯಲು ಪ್ರೋತ್ಸಾಹಿಸಿದವರು ಗುರುಗಳಾದ ಡಾ|| ಎಂ. ಚಿದಾನಂದಮೂರ್ತಿ ಯವರು ಹಾಗೂ ಮಿತ್ರರಾದ ಎನ್. ಬಸವಾರಾಧ್ಯರು. ಮಿತ್ರರಾದ ಎಸ್. ಶಿವಣ್ಣನವರು ನನಗೆ ಬೇಕಾಗಿದ್ದ ಪುಸ್ತಕಗಳನ್ನು ಒದಗಿಸಿ, ಆಗಾಗ್ಗೆ ಕೃತಿರಚನೆ ಎಲ್ಲಿಗೆ ಬಂದಿತೆಂದು ವಿಚಾರಿಸಿಕೊಳ್ಳುತ್ತಿದ್ದರು. ನಾನು ಡಿ.ಎಲ್.ಎನ್. ಅವರ ವಿದ್ಯಾರ್ಥಿಯಲ್ಲದ ಕಾರಣ ಅವರ ಪಾಠಬೋಧನ ಕ್ರಮದ ಪರಿಚಯ ನನಗೆ ನೇರವಾಗಿ ಆಗಿಲ್ಲ. ಈ ಕೊರತೆಯನ್ನು ನಾನು ಡಾ|| ಎಂ. ಚಿದಾನಂದಮೂರ್ತಿ ಯವರ 'ಪ್ರೊ|| ಡಿ.ಎಲ್.ಎನ್. ಅವರ ಬೋಧನ ಕ್ರಮ' ('ಜ್ಞಾನೋಪಾಸಕ') ಎಂಬ ಲೇಖನದಿಂದ ತುಂಬಿಕೊಂಡಿರುವೆನು. ಈ ಲೇಖನದ ಜೊತೆಗೆ ಪ್ರೊ|| ಜಿ. ವರದರಾಜಾರಾವ್ ಅವರ 'ಆಚಾರ್ಯರ ಆತ್ಮೀಯತೆ' (ಪ್ರ.ಕ. ೫೨–೨) ಎಂಬ ಲೇಖನವನ್ನೂ ನಾನು ನನಗೆ ತೋಚಿದಂತೆ ಬಳಸಿಕೊಂಡಿರುವೆನು.

ಈ ಕೃತಿ ರಚನೆ ತುಂಬ ಪರಿಶ್ರಮದ ಕೆಲಸ. ಡಿ.ಎಲ್.ಎನ್. ಅವರ ಎಲ್ಲ ಕೃತಿಗಳನ್ನು, ಲೇಖನಗಳನ್ನು ಈ ನೆಪದಲ್ಲಿ ಮತ್ತೊಮ್ಮೆ ಓದುವ ಅವಕಾಶವಾಯಿತು. ಡಿ.ಎಲ್.ಎನ್. ಅವರ ಬಗೆಗೆ ಬಂದಿರುವ ಎಲ್ಲ ಗ್ರಂಥ ಹಾಗೂ ಲೇಖನಗಳನ್ನು ಪರಿಶೀಲಿಸುವ ಶ್ರಮವಹಿಸಿದ್ದೇನೆ. ಡಿ.ಎಲ್.ಎನ್. ಅವರ ಶಿಷ್ಯರಲ್ಲಿ ಕೆಲವರನ್ನು ಭೇಟಿಮಾಡಿ ವಿವರ ಪಡೆದಿದ್ದೇನೆ. ಡಿ.ಎಲ್.ಎನ್.

ಅವರ ಮಕ್ಕಳಾದ ಶ್ರೀಮತಿ ರಾಜಲಕ್ಷ್ಮಿ ಹಾಗೂ ಶ್ರೀಮತಿ ಪ್ರಭಾ ಅವರ ಭೇಟಿಮಾಡಿ ಡಿ. ಎಲ್. ಎನ್. ಅವರ ಬದುಕಿನ ಅನೇಕ ಸಂಗತಿಗಳ ತಿಳಿದಿದ್ದೇನೆ. ಈ ಎಲ್ಲ ಪರಿಶ್ರಮದ ಹಿನ್ನೆಲೆಯಲ್ಲಿ ಕೃತಿರಚನೆಯಾಗಿ ಆಚಾರ್ಯ ಡಿ.ಎಲ್.ಎನ್. ಅವರ ಬದುಕು–ಸಾಹಿತ್ಯದ ಪರಿಚಯ ಓದುಗ ಈ ಕೃತಿಯ ಮೂಲಕ ಆದಲ್ಲಿ ನನ್ನ ಶ್ರಮ ಸಾರ್ಥಕ.

ಪ್ರೊ॥ ಡಿ. ಎಲ್. ನರಸಿಂಹಾಚಾರ್ ಅವರ ಬಗೆಗೆ ಮೊದಲು ಪುಸ ಬರೆದವರು ಮಿತ್ರರಾದ ಬಿ. ವಿ. ವೈಕುಂಠರಾಜು ಅವರು (ಐ.ಬಿ.ಎ ಪ್ರಕಾಶನ). ಈ ಪುಸ್ತಕವನ್ನು ನನಗೆ ಕೊಟ್ಟಿದ್ದಲ್ಲದೆ ತಮ್ಮ ಹಾಗೂ ಪ್ರ ಡಿ.ಎಲ್.ಎನ್. ಅವರ ನಡುವೆ ಇದ್ದ ಆತ್ಮೀಯ ಸಂಬಂಧವನ್ನು ಮೆಲು ಹಾಕಿ ಕೆಲವು ವಿವರಗಳನ್ನು ನೀಡಿದ ಈ ಮಾನ್ಯ ಮಿತ್ರರಿಗೆ ನಾನು ಕೃತ ನಾಗಿರುವೆನು. ನನ್ನ ಪರವಾಗಿ ಶ್ರೀಮತಿ ರಾಜಲಕ್ಷ್ಮಿ ಹಾಗೂ ಶ್ರೀಮತಿ ಪ್ರ ಅವರನ್ನು ಭೇಟಿಮಾಡಿ ಡಿ.ಎಲ್.ಎನ್. ಅವರ ವಂಶವೃಕ್ಷವನ್ನು ನನಗಾ ಸಿದ್ಧಮಾಡಿಕೊಟ್ಟವರು ಪ್ರೀತಿಯ ಗೆಳೆಯರಾದ ಕೆ. ವೈ. ಶಿವಕುಮಾ ಅವರು. ಈ ಮಿತ್ರರು ಮೈಸೂರಿನಲ್ಲಿದ್ದ ಡಿ.ಎಲ್.ಎನ್. ಅವರ ಮಕ್ಕಳನ ನಾನು ಭೇಟಿಮಾಡಿದ ಸಂದರ್ಭದಲ್ಲಿ ನನ್ನೊಡನಿದ್ದು ನನಗೆ ಎಲ್ಲ ವಿಧ ಸಹಕಾರವನ್ನು ಆ ಸಂದರ್ಭದಲ್ಲಿ ನೀಡಿರುವರು. ಅದಕ್ಕಾಗಿ ನಾನು ಈ ಮಿತ್ರರಿಗೆ ಬಹಳ ಆಭಾರಿಯಾಗಿದ್ದೇನೆ.

ನಾನು ಡಿ.ಎಲ್.ಎನ್. ಅವರ ಮನೆಗೆ ಹೋಗಿದ್ದಾಗ ಶ್ರೀಮತಿ ರಾಜಲಕ್ಷ್ಮಿ ಹಾಗೂ ಶ್ರೀಮತಿ ಪ್ರಭಾ ಅವರು ಪ್ರೀತಿಯಿಂದ ಆದರಿಸಿ ನನಗೆ ಬೇಕಾ ವಿವರಗಳನ್ನು ನೀಡಿರುವರು ; ತಮ್ಮ ತಂದೆಯವರ ಬದುಕಿಗೆ ಸಂಬಂಧಪಟ ಅನೇಕ ಸಂಗತಿಗಳನ್ನು ನೆನಪಿಸಿಕೊಂಡು ತಿಳಿಸಿರುವರು ; ತಮ್ಮ ತಂದೆಯವ ಅನೇಕ ಫೋಟೋಗಳನ್ನು, ಅಮೂಲ್ಯ ಪತ್ರಗಳನ್ನು ತೋರಿಸಿರುವರ ಕೆಲವನ್ನು ಈ ಗ್ರಂಥದಲ್ಲಿ ಬಳಸಿಕೊಳ್ಳಲು ನನಗೆ ಕೊಟ್ಟಿರುವರು. ಈ ಉಪಕಾರಕ್ಕಾಗಿ ಅವರಿಗೆ ಧನ್ಯವಾದಗಳು.


ಈ ಕೃತಿಯನ್ನು ಚೆನ್ನಾಗಿ ಮುದ್ರಿಸಿಕೊಟ್ಟ ಬೂದನೂರು ಪ್ರಿಂಟರ್ಸ್ ಎಲ್ಲ ಸಿಬ್ಬಂದಿ ವರ್ಗದವರಿಗೆ ನನ್ನ ವಂದನೆಗಳು.

ಎಸ್. ವಿದ್ಯಾಶಂಕ

ಪರಿವಿಡಿ



ಪ್ರೊ॥ ಡಿ. ಎಲ್. ನರಸಿಂಹಾಚಾರ್



ಪ್ರೊ ॥ ಎ. ಎಲ್. ಎನ್. ಕುಟುಂಬವರ್ಗ

ಡಿ.ಎಲ್.ಎನ್–ಒಂದು ವ್ಯಕ್ತಿಚಿತ್ರ

ಡಿ. ಎಲ್. ನರಸಿಂಹಾಚಾರ್ಯರು ಹುಟ್ಟಿದ್ದು ತುಮಕೂರು ಜಿಲ್ಲೆಗೆ ಸೇರಿದ ಚಿಕ್ಕನಾಯಕನಹಳ್ಳಿಯಲ್ಲಿ, ತಮ್ಮ ತಾಯಿಯ ತಂದೆಯವರಾದ ಅಣ್ಣಾಸ್ವಾಮಿ ಅಯ್ಯಂಗಾರ್‌ರವರ ಮನೆಯಲ್ಲಿ, 27-10-1906 ರಂದು. ಅವರ ಹುಟ್ಟು ಹೆಸರು ದೊಡ್ಡಬೆಲೆ ಲಕ್ಷ್ಮೀನರಸಿಂಹಾಚಾರ್ಯ ಎಂದು. ದೊಡ್ಡಬೆಲೆಯು ನರಸಿಂಹಾಚಾರ್ಯರ ಪೂರ್ವಿಕರ ಊರು, ತುಮಕೂರಿನ ಸಮೀಪವಿದೆ. ಆದರೆ ಡಿ.ಎಲ್.ಎನ್. ಎಂದೂ ಆ ಊರನ್ನು ಕಂಡವರಲ್ಲ. ಅವರ ತಂದೆಯ ತಂದೆಯವರಾದ ಕೃಷ್ಣಮಾಚಾರ್‌ರವರು ದೊಡ್ಡಬೆಲೆಯಲ್ಲಿ ಕೂಲಿಮಠದ ಮೇಷ್ಟ್ರಾಗಿ ಒಳ್ಳೆಯ ಹೆಸರು ಪಡೆದಿದ್ದರು. ತಂದೆ ಶಾಮಯ್ಯಂಗಾರ್‌ರವರು ಸಬ್‌ರಿಜಿಸ್ಟ್ರಾರ್ ಆಫೀಸಿನ ಗುಮಾಸ್ತೆಯಾಗಿ ಊರಿಂದೂರಿಗೆ ಅಲೆಯಬೇಕಾಗಿದ್ದಿತು. ಹೀಗಾಗಿ ಡಿ.ಎಲ್.ಎನ್.ರವರ ವಿದ್ಯಾಭ್ಯಾಸ ಮಧುಗಿರಿ, ಪಾವಗಡ, ಸಿರಾ, ತುಮಕೂರುಗಳಲ್ಲಿ ನಡೆಯಿತು. ನರಸಿಂಹಾಚಾರ್ಯರ ತಾತ (ತಾಯಿಯ ತಂದೆ) ಅಣ್ಣಾಸ್ವಾಮಿ ಅಯ್ಯಂಗಾರ್ ರವರು ಚಿಕ್ಕನಾಯಕನಹಳ್ಳಿಯ ತಾಲ್ಲೂಕು ಕಛೇರಿಯಲ್ಲಿ ರೆಕಾರ್ಡ್ ಕೀಪರ್ ಆಗಿದ್ದರು, ಒಮ್ಮೆ ಸಬ್‌ಡಿವಿಷನ್ ಅಧಿಕಾರಿಗಳು ಕಛೇರಿಯ ತನಿಖೆಗಾಗಿ ಬಂದು ನಿಷ್ಕಾರಣವಾಗಿ ಅವರ ಮೇಲೆ ಜೋರು ಮಾಡಿದ್ದರಿಂದ ಅವರು ತಮ್ಮ ದಪ್ತರವನ್ನು ಬಿಸಾಡಿ ಕೆಲಸಕ್ಕೆ ರಾಜೀನಾಮೆ ಕೊಟ್ಟುಬಿಟ್ಟರು. ಅವರು ಸೊಗಸಾಗಿ ಭಾರತವಾಚನ ಮಾಡುತ್ತಿದ್ದರಂತೆ. ಅವರು ವಾಚನ ನಡೆಸುತ್ತಿದ್ದ 'ಕಟ್ಟೆ'ಯನ್ನು ಇಂದಿಗೂ ಜನ ತೋರಿಸುತ್ತಾರೆ. ಭಾರತವಾಚನ ದಿಂದ ಅವರು ಬಹಳ ಜನಪ್ರಿಯತೆ ಗಳಿಸಿದ್ದರು. ಡಿ.ಎಲ್.ಎನ್.ರವರ ತಂದೆ ಊರಿಂದೂರಿಗೆ ಅಲೆಯುತ್ತಿದ್ದುದರಿಂದ ನರಸಿಂಹಾಚಾರ್ಯರು ಈ ಅಜ್ಜನ ತೋಳತೊಟ್ಟಿಲಲ್ಲಿ ಬೆಳೆದರು. ಆ ವಾತಾವರಣದಲ್ಲಿ ಬೆಳೆದ ಅವರಿಗೆ ಹನ್ನೆರಡನೆಯ ವಯಸ್ಸಿಗಾಗಲೇ ಜೈಮಿನಿಭಾರತ ಕಂಠಪಾಠವಾಗಿದ್ದಿತು ;

ಕುಮಾರವ್ಯಾಸ ಭಾರತ, ರಾಜಶೇಖರ ವಿಳಾಸ ಮೊದಲಾದ ಪ್ರೌಢಗ್ರಂಥಗಳ ಕಡೆಗೆ ಅವರ ಒಲವು ಹರಿದಿದ್ದಿತು.

ಡಿ.ಎಲ್. ನರಸಿಂಹಾಚಾರ್ಯರ ಪೂರ್ವಿಕರು ಸೇಲಂ ಜಿಲ್ಲೆಯಿಂದ ಬಂದವರು. ಗಂಡಿಕೋಟೆ ಅವರ ನೆಲೆಯಾಗಿದ್ದಿತು. ವಿಜಯನಗರದ ತಾತಾಚಾರ್ಯರ ಕಾಲದಲ್ಲಿ ಅವರು ಈ ಕಡೆಗೆ ಬಂದರಂತೆ. ಅವರು ಮೊದಲಿಗೆ ತಿರುಪತಿಯ ತಿಮ್ಮಪ್ಪನ ಒಕ್ಕಲಾದರೂ ಈಚೆಗೆ ದೊಡ್ಡಬೆಲೆಗೆ ಬಂದು ನೆಲೆಸಿದ ಮೇಲೆ ದೇವರಾಯದುರ್ಗದ ಲಕ್ಷ್ಮೀನರಸಿಂಹ ಅವರ ಮನೆ ದೇವರು. ಈ ಲಕ್ಷ್ಮೀನರಸಿಂಹನ ಮೇಲಣ ಭಕ್ತಿಯಿಂದಾಗಿ ಹುಟ್ಟಿದ ಮಗನಿಗೆ ಶಾಮಯ್ಯಂಗಾರ್‌ರವರು ಲಕ್ಷ್ಮೀನರಸಿಂಹಾಚಾರ್ಯ ಎಂದು ಹೆಸರಿಟ್ಟರು. ಎ.ವಿ. ಸ್ಕೂಲ್‌ನ (ಆಂಗ್ಲೋ ವರ್ನಾಕುಲರ್ ಸ್ಕೂಲ್) ಹಾಜರಿಪುಸ್ತಕದಲ್ಲಿ ಡಿ.ಎಲ್.ಎನ್. ಅವರ ಹೆಸರು ಉದ್ದವಾಯಿತೆಂದು ಅಧ್ಯಾಪಕರು ಡಿ. ಎಲ್. ನರಸಿಂಹಾಚಾರ್ ಎಂದು ಮೊಟಕು ಮಾಡಿದರು. ಅವರು ಪ್ರಾಥಮಿಕ ವಿದ್ಯಾಭ್ಯಾಸ ಮಾಡಿದುದು ಪಾವಗಡದಲ್ಲಿ. ಮುಂದಿನ ಅವರ ವಿದ್ಯಾಭ್ಯಾಸ ಮಧುಗಿರಿ ಮತ್ತು ಶಿರಾಗಳಲ್ಲಿ ಆಯಿತು. ಸಂಸ್ಕೃತವನ್ನು ಓದಬೇಕೆಂಬ ಅಪೇಕ್ಷೆ ಉತ್ಕಟವಾಗಿದ್ದುದರಿಂದ ಮುಂದೆ ತುಮಕೂರಿಗೆ ಬಂದು ನೆಲೆಸಿದ ಮೇಲೆ ಖಾಸಗಿಯಾಗಿ ಅದನ್ನು ಪಂಡಿತರೊಬ್ಬರಿಂದ ಹೇಳಿಸಿಕೊಂಡು ಕಲಿತರು. ಬೆಳಗಿನ ಜಾವ ನಾಲ್ಕು ಘಂಟೆಗೆ ಎದ್ದು ಸಂಸ್ಕೃತವನ್ನು ಅಭ್ಯಾಸ ಮಾಡಿ, ಅನಂತರ ಶಾಲೆಯ ಪಾಠಗಳನ್ನು ಓದುತ್ತಿದ್ದರು. ಮಾಧ್ಯಮಿಕ ದರ್ಜೆಯ ಐದನೆಯ ತರಗತಿಯನ್ನು ಸೇರುವ ಹೊತ್ತಿಗೆ ಅವರು ತುಮಕೂರಿಗೆ ಬರಬೇಕಾಯಿತು. ಫೋರ್ತ್‌ಫಾರಂಗೆ ಬರುವ ಹೊತ್ತಿಗೆ ಅವರು ಗದಾಯುದ್ಧ, ಛಂದೋಂಬುಧಿ ಹಾಗೂ ಪದ್ಯಸಾರದ ಎರಡನೆಯ ಸಂಪುಟಗಳನ್ನು ಚೆನ್ನಾಗಿ ಓದಿಕೊಂಡಿದ್ದರು. ತುಮಕೂರಿನಲ್ಲಿ ಪ್ರೌಢಶಾಲೆ ಓದುತ್ತಿರುವಾಗಲೇ ಅವರಿಗೆ ಕನ್ನಡ ಸಾಹಿತ್ಯದ ಬಗೆಗೆ ಸಹಜವಾದ ಆಕರ್ಷಣೆ ಉಂಟಾಗಿದ್ದಿತು. ಪ್ರಾಚೀನ ಕವಿಗಳ ಕೃತಿಗಳನ್ನು (ತಾಳೆಗರಿ ಪ್ರತಿಗಳನ್ನು) ಓದುವ ಅಭ್ಯಾಸ ಅವರಿಗೆ ಆಗಿದ್ದಿತು; ಮುಂದೆ ಅದು ಅವರ ಹವ್ಯಾಸವಾದುದು ಕುತೂಹಲದ ಸಂಗತಿ.

ಕನ್ನಡ, ಸಂಸ್ಕೃತಗಳ ಮೇಲೆ ಇರುವಷ್ಟು ಆಸಕ್ತಿ ಇಂಗ್ಲೀಷಿನ ಮೇಲೂ

ಡಿ.ಎಲ್.ಎನ್.ರವರಿಗಿದ್ದಿತು. ಅವರು ಇಂಗ್ಲೀಷಿನಲ್ಲಿ ಬರೆದಿರುವ ಲೇಖನಗಳನ್ನು ಓದಿದಾಗ ಆಂಗ್ಲ ಭಾಷೆಯ ಮೇಲಿದ್ದ ಪ್ರಭುತ್ವ ಸ್ಫುಟವಾಗಿ ತಿಳಿಯುತ್ತದೆ, ಇಂಗ್ಲೀಷ್ ಭಾಷೆ ಸಾಹಿತ್ಯಗಳ ಬಗೆಗೆ ಸಾಕಷ್ಟು ಅಧ್ಯಯನ ಮಾಡಿದ್ದ ಅವರಿಗೆ ಇಂಗ್ಲೀಷ್ ಭಾಷೆ ಕರತಲಾಮಲಕವಾಗಿದ್ದಿತು. ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗ ಸಲ್ಲಪ್ಪ ಎನ್ನುವವರ ಮನೆಯಲ್ಲಿ ದೊರೆತ ಕಾಗದದ ಪ್ರತಿಯಲ್ಲಿ ಮೈಸೂರಿನ ಇತಿಹಾಸವಿದ್ದುದನ್ನು ಕಂಡ ಅವರು ಅದನ್ನು ಇಂಗ್ಲೀಷಿಗೆ ಭಾಷಾಂತರಿಸಿ ಎಂ. ಎಚ್. ಕೃಷ್ಣ ಅವರಿಗೆ ಕಳುಹಿಸಿದ್ದರಂತೆ. ತುಮಕೂರಿನ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಕೆ. ವಿ. ಕೃಷ್ಣಸ್ವಾಮಿ ಅಯ್ಯರ್‌ರವರು ವಿದ್ಯಾರ್ಥಿಗಳಲ್ಲಿ ಹುದುಗಿರುವ ಪ್ರತಿಭೆಯನ್ನು ಹೊರಗೆಳೆಯಲು 'ಸ್ಕೂಲ್ ಫೋಕ್' ಎಂಬ ಇಂಗ್ಲೀಷ್-ಕನ್ನಡ ಪತ್ರಿಕೆಯನ್ನು ಪ್ರಾರಂಭಿಸಿದ್ದರು. ಆ ಪತ್ರಿಕೆಯಲ್ಲಿ ಡಿ. ಎಲ್. ಎನ್. ಅವರ 'ದೊಡ್ಡ ಮನುಷ್ಯರು ಯಾರು' ಎಂಬ ಕನ್ನಡ ಲೇಖನ ಹಾಗೂ 'The Story of a Cotton Seed' ಎಂಬ ಇಂಗ್ಲೀಷ್ ಲೇಖನ ಪ್ರಕಟವಾದುವು. ಖಾಸಗಿಯಾಗಿ ಸಂಸ್ಕೃತವನ್ನು ಹೇಳಿಸಿಕೊಂಡು ರಘುವಂಶ ಮತ್ತು ಚಂಪೂರಾಮಾಯಣಗಳನ್ನು ಓದಿದರು. ಇಂಗ್ಲೀಷ್ ಸಾಹಿತ್ಯದ ಬಗೆಗೂ ಒಲವಿದ್ದ ಡಿ.ಎಲ್.ಎನ್. ತಮ್ಮ ಮನೋಧರ್ಮಕ್ಕೆ ಅನುಗುಣವಾಗಿ ರೇನಾಲ್ಡ್ಸನ ಕಾದಂಬರಿಗಳನ್ನು ಓದತೊಡಗಿದರು.

ಅವರು ಓದಿನಲ್ಲಿ ಎಷ್ಟು ಮುಂದಿದ್ದರೊ ಹಾಗೆಯೇ ಆಟಗಳಲ್ಲಿಯೂ ಮುಂದಿದ್ದರು. ಅವರ ಪ್ರೌಢಶಾಲೆಯ ಗೆಳೆಯ ಟಿ.ಪಿ. ಕೃಷ್ಣಾಚಾರ್ (ಇವರು ಮುಂದೆ ರಾಜ್ಯದ ಭೂಗರ್ಭ ಇಲಾಖೆಯ ನಿರ್ದೇಶಕರಾಗಿ ಹೆಸರು ಪಡೆದರು) ತುಮಕೂರಿನ ಹಳೆಯ ಊರಿನ ಒಂದು ಭಾಗದಲ್ಲಿದ್ದರು. ಇವರ ಹಾಗೂ ಡಿ.ಎಲ್.ಎನ್. ಅವರ ಮನೆ ಸಮೀಪದಲ್ಲಿದ್ದುದರಿಂದ ನಿತ್ಯವೂ ಶಾಲೆಗೆ ಜೊತೆಯಲ್ಲಿ ಹೋಗುವ, ಶಾಲೆಯಿಂದ ಬಂದ ಮೇಲೆ ಆಟದ ಮೈದಾನದಲ್ಲಿ ಜೊತೆಗೂಡಿ ಆಡುವ ಹವ್ಯಾಸವಿದ್ದಿತು. ಅವರು ಹೇಳುವಂತೆ ಡಿ.ಎಲ್.ಎನ್. "ಫುಟ್‌ಬಾಲ್ ಆಟದಲ್ಲಿ ಒಳ್ಳೆಯ ಆಟಗಾರರಾಗಿದ್ದರು. ರೈಟ್ ಔಟ್ (right out) ಸ್ಥಾನದಲ್ಲಿ ಬಿರುಗಾಳಿಯಂತೆ ಓಡಿ ಚೆಂಡನ್ನು ಒಯ್ದುಕೊಂಡು ಹೋಗುತ್ತಿದ್ದುದು ಈಗಲೂ ನೆನಪಿಗೆ ಬರುತ್ತಿದೆ. ಸ್ಕೂಲಿನ ಆಟಗಳಲ್ಲಲ್ಲದೆ ಮನೆಯ ಸುತ್ತಲ ಆವರಣದಲ್ಲಿ ಆಡುವ ಆಟಗಳಲ್ಲೂ ಅವರಿಗೆ

ಆಸಕ್ತಿ ಇತ್ತು, ಅದೂ ಗೋಲಿ ಆಡುವುದರಲ್ಲಿ. ಗೋಲಿ ಆಟದಲ್ಲಿ ಅವರದು ಯಾವಾಗಲೂ ಮೇಲುಗೈ.* ನಮ್ಮೆಲ್ಲರನ್ನೂ ಸೋಲಿಸಿ ಸೋತ ತಪ್ಪಿಗಾಗಿ ದೇಕುವಂತೆ (ಮಡಿಸಿದ ಮುಷ್ಟಿಯಿಂದ ಗೋಲಿಯನ್ನು ನೆಲದ ಮೇಲೆ ನೂಕುತ್ತಾ ಹೋಗುವುದು) ಮಾಡಿ ಕೈಯಲ್ಲಿ ರಕ್ತ ಚಿಮ್ಮುವವರೆಗೂ ಕಾಡಿಸುತ್ತಿದ್ದರು."

ತುಮಕೂರಿನ ಪ್ರೌಢಶಾಲೆಯಲ್ಲಿ ಎಂಟ್ರೆನ್ಸ್ ತರಗತಿಯಲ್ಲಿ ಓದುತ್ತಿದ್ದಾಗ ಡಿ.ಎಲ್.ಎನ್. ಅವರಿಗೆ ಆಚಾರ್ಯ ಬಿ.ಎಂ.ಶ್ರೀ. ಅವರನ್ನು ನೋಡುವ ಭಾಗ್ಯ ದೊರೆಯಿತು. ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಬಿ.ಎಂ.ಶ್ರೀ. ಅವರಿಗೆ ಕನ್ನಡದ ಬಗೆಗೆ ವಿಶೇಷವಾದ ಪ್ರೀತಿಯುಂಟಾಗಿದ್ದಿತು. ಅವರು ಡಿ.ಎಲ್.ಎನ್. ಓದುತ್ತಿದ್ದ ಶಾಲೆಗೆ ಬಂದು 'stories from aeneid' ಎಂಬ ಪಠ್ಯಪುಸ್ತಕದ ಮೇಲೆ ಉಪನ್ಯಾಸ ಮಾಡಿದರು. ಅದನ್ನು ಕೇಳಿದ ಮೇಲೆ ಡಿ.ಎಲ್.ಎನ್. ಅವರಿಗೆ 'ಶ್ರೀ' ಅವರ ಮೇಲಿದ್ದ ಗೌರವಾದರ ಭಾವನೆಗಳು ಇನ್ನಷ್ಟು ಹೆಚ್ಚಿದವು. ಯೋಗಾಯೋಗವೋ ಏನೋ ಮುಂದೆ ಅವರು 'ಶ್ರೀ' ಅವರ ಶಿಷ್ಯರಾದರು. ಶ್ರೀಕಂಠಯ್ಯನವರ ಪಾಂಡಿತ್ಯ, ಪ್ರತಿಭೆ, ಮಾತುಗಾರಿಕೆ ಡಿ.ಎಲ್.ಎನ್. ಅವರ ಮೇಲೆ ಗಾಢವಾದ ಪ್ರಭಾವ ಬೀರಿತು. "ಶ್ರೀ ಅವರ ಹೆಸರೆತ್ತಿದರೆ ಡಿ.ಎಲ್.ಎನ್. ಮೈಮರೆಯುತ್ತಿದ್ದರು. ಅವರ ವಿಷಯವಾಗಿ ಹೇಳಲು ಪ್ರಾರಂಭಿಸಿದರೆ ಕೊನೆ ಮೊದಲಿರುತ್ತಿರಲಿಲ್ಲ. ಮೈಸೂರಿನ ಚಾಮರಾಜಪುರಂನಲ್ಲಿ ಶ್ರೀ ಅವರಿದ್ದ ಮನೆಯನ್ನು ತೋರಿಸಿ–ಈ ಮನೆಯ ಮಹಡಿಯ ಮೇಲೆ ನಮ್ಮ ಗುರುಗಳು ಕೇಶಿರಾಜನ 'ಶಬ್ದಮಣಿದರ್ಪಣ' ಪಾಠ ಹೇಳುತ್ತಿದ್ದರು. ಅವರು ಪಾಠ ಹೇಳುತ್ತಿದ್ದ ಗತ್ತನ್ನು ನೋಡಬೇಕಯ್ಯ ಎಂದು ಶಬ್ದಮಣಿದರ್ಪಣವನ್ನು ಅವರು ಹೇಳುತ್ತಿದ್ದ ರೀತಿ, ಶಿಷ್ಯರ ಬಗೆಗೆ ಅವರಿಗಿದ್ದ

---

* 1959ರಲ್ಲಿ ಒಮ್ಮೆ ತೀ.ನಂ.ಶ್ರೀ. ಹಾಗೂ ಡಿ.ಎಲ್.ಎನ್.ರವರು ಟಿ.ಟಿ. ಕೃಷ್ಣಾಚಾರ್‌ರವರ ಬೆಂಗಳೂರಿನ ಮನೆಗೆ ಬಂದರಂತೆ. ಹುಡುಗರು ಮನೆಯ ಬಯಲಿನಲ್ಲಿ ಗೋಲಿ ಆಡುತ್ತಿದ್ದರು. ಆಗ ಡಿ. ಎಲ್. ಎನ್. ಗೋಲಿಗಳನ್ನು ತೆಗೆದುಕೊಂಡು ಶ್ರೀಕಂಠಯ್ಯನವರಿಗೆ "ನೀವು ಹೊಡೀತೀರೇನ್ರಿ, ನೋಡೋಣ" ಎಂದು ಹೇಳಿ, ಅವರು ಸುಮ್ಮನಿದ್ದಾಗ 8–10 ಅಡಿಗಳ ದೂರದಲ್ಲಿದ್ದ ಗೋಲಿಯೊಂದಕ್ಕೆ ಗುರಿ ಇಟ್ಟು ಮೊದಲನೆ ಬಾರಿಗೆ ಹೊಡೆದು "ನೋಡಿದಿರೊ" ಎಂದರಂತೆ.

ವಾತ್ಸಲ್ಯ, ಕನ್ನಡ-ಇಂಗ್ಲೀಷುಗಳಲ್ಲಿ ಶ್ರೀ ಅವರ ಪಾಂಡಿತ್ಯವನ್ನು ವರ್ಣಿಸಿದರು..."[1] ಡಿ.ಎಲ್.ಎನ್. ಅವರ ಪಾಲಿಗೆ ಶ್ರೀ ಅವರು 'ಗುರುಗಳು, ಉಳಿದವರುಗಳು 'ಮೇಷ್ಟ್ರು'. ಹೀಗೆಂದಾಗ, ಶ್ರೀ ಅವರನ್ನು ಬಿಟ್ಟು ಉಳಿದವರುಗಳ ಬಗೆಗೆ ಗೌರವವಿರಲಿಲ್ಲವೆಂದಲ್ಲ, ಆ ಗೌರವ ಹೃದಯಾಂತರಾಳದ್ದು. ಎ. ಆರ್. ಕೃಷ್ಣಶಾಸ್ತ್ರಿಗಳು, ಟಿ. ಎಸ್. ವೆಂಕಣ್ಣಯ್ಯನವರು, ರಾಳ್ಳಪಲ್ಲಿ ಅನಂತಕೃಷ್ಣಶರ್ಮರು–ಇವರುಗಳು ಡಿ.ಎಲ್.ಎನ್.ರವರ ಗುರುವರ್ಗಕ್ಕೆ ಸೇರಿದವರು. ಇವರ ಬಗೆಗೆ ಡಿ.ಎಲ್.ಎನ್. ಅವರಿಗೂ ವಿಶೇಷವಾದ ಪ್ರೀತಿ ಇವರೆಲ್ಲಾ ಅವರ ಮೇಲೆ ಒಂದಲ್ಲಾ ಒಂದು ರೀತಿಯಲ್ಲಿ ತಮ್ಮ ಗಾಢವಾದ ಪ್ರಭಾವವನ್ನು ಬೀರಿದ್ದರು. ಆದರೆ, ಅದೇಕೋ ತಿಳಿಯದು, ಶ್ರೀ ಅವರಲ್ಲಿ ಡಿ.ಎಲ್.ಎನ್. ಅವರ ಭಕ್ತಿ, ಗೌರವಗಳು ಬೇರೆಲ್ಲರಿಗಿಂತ ಹೆಚ್ಚಾಗಿರುವಂತೆ ತೋರುತ್ತಿತ್ತು.

ಎಂಟ್ರೆನ್ಸ್ ಪರೀಕ್ಷೆ ಮುಗಿದ ಮೇಲೆ ಡಿ.ಎಲ್.ಎನ್. ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯಾದರು. ಬಿ.ಎ. ಪದವಿಯ ಮೊದಲ ವರ್ಷದ ಪರೀಕ್ಷೆಯಲ್ಲಿ ರಸಾಯನಶಾಸ್ತ್ರ ವಿಭಾಗದಲ್ಲಿ ಅವರು 60 ಅಂಕಗಳನ್ನು ಪಡೆದಿದ್ದರೂ ಆಗಿನ ಪ್ರಾಧ್ಯಾಪಕರ ಪಕ್ಷಪಾತದಿಂದಾಗಿ. ಪ್ರಭಾವಶಾಲಿಗಳ ಒತ್ತಾಸೆಯಿಲ್ಲದ್ದರಿಂದಾಗಿ, ಅವರಿಗೆ ವಿಜ್ಞಾನ ವಿಭಾಗದಲ್ಲಿ ಸ್ಥಾನ ಸಿಗದೆ ಅನಿವಾರ್ಯವಾಗಿ ಭಾಷೆ, ಭೌತಶಾಸ್ತ್ರ, ರಸಾಯನಶಾಸ್ತ್ರಗಳನ್ನೊಳಗೊಂಡ ಆರ್ಟ್ಸ್ ವಿಭಾಗದಲ್ಲಿ ತಮ್ಮ ವ್ಯಾಸಂಗವನ್ನು ಮುಂದುವರಿಸಬೇಕಾಯಿತು. ಮೊದಲಿನಿಂದಲೂ ಕನ್ನಡದ ಬಗೆಗೆ ಆಸಕ್ತಿಯಿದ್ದ ಡಿ.ಎಲ್.ಎನ್. ಅವರಿಗೆ ಇದರಿಂದಾಗಿ ದುಃಖವೇನೂ ಆಗಲಿಲ್ಲ. ಅವರು ಕಾವ್ಯವಾಚನ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು, ಆದರೆ ಅವರಿಗೆ ಬಹುಮಾನ ಸಿಗಲಿಲ್ಲ. ಆಗ ಅವರ ಗುರುಗಳಾಗಿದ್ದ ಟಿ. ಎಸ್. ವೆಂಕಣ್ಣಯ್ಯನವರಿಗೆ ಅದು ಸ್ವಲ್ಪ ಬೇಸರವನ್ನುಂಟುಮಾಡಿತ್ತು. ಪದವಿ ತರಗತಿಯ ಎರಡನೆಯ ವರ್ಷದಲ್ಲಿದ್ದಾಗ ಡಿ.ಎಲ್.ಎನ್. 'ಕನ್ನಡ ಕಾವ್ಯಗಳಲ್ಲಿ ಋತುವರ್ಣನೆ' ಎಂಬ ವಿಷಯ ಕುರಿತು ಸುದೀರ್ಘ ಲೇಖನವೊಂದನ್ನು ಬರೆದು ತಮ್ಮ ಗುರುಗಳಿಗೆ ಅವನ್ನು ತೋರಿಸಿ

1. ಬಿ.ವಿ. ವೈಕುಂಠರಾಜು : ಸಪ್ತಶೃಂಗ, ಪು. ೧೩–೧೪.

ದರು. ಟಿ. ಎಸ್. ವೆಂಕಣ್ಣಯ್ಯನವರಿಗೆ ಬಹಳ ಸಂತೋಷವಾಯಿತು. ಶಿಷ್ಯನ ಆಳವಾದ ಪಾಂಡಿತ್ಯ ಕಂಡು ಅವರಿಗೆ ಹೆಮ್ಮೆಯೆನಿಸಿತು. ಕೂಡಲೇ ಆ ಲೇಖನವನ್ನು ಪರಿಷತ್ ಪತ್ರಿಕೆಯಲ್ಲಿ ಅವರು ಪ್ರಕಟಪಡಿಸಿದರು.

ಡಿ.ಎಲ್.ಎನ್. ಕನ್ನಡ ಎಂ.ಎ. ತರಗತಿಗೆ ಸೇರಿದುದು ಅನಿರೀಕ್ಷಿತ. 1927ರಲ್ಲಿ ಅವರು ಬಿ.ಎ. ಪದವಿ ಪರೀಕ್ಷೆ ಮುಗಿಸಿದರು. ಫಲಿತಾಂಶ ಬಂದ ಬಳಿಕ ಯಾವುದಾದರೂ ನೌಕರಿಗೆ ಸೇರಬೇಕೆನ್ನುವುದು ಅವರ ಉದ್ದೇಶ ವಾಗಿತ್ತು. ಬೇಸಿಗೆ ರಜೆಯಲ್ಲಿ ತಾಯಿಯೊಂದಿಗೆ ಮೈಸೂರಿನಲ್ಲಿದ್ದ ತಮ್ಮ ಸೋದರಮಾವನವರ ಮನೆಗೆ ಮೊದಲಸಲ ಡಿ.ಎಲ್.ಎನ್. ಬಂದರು. ಆಗ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಎಂ.ಎ. ಪ್ರಾರಂಭಿಸುವರೆಂಬ ಸುದ್ದಿ ಅವರ ಕಿವಿಗೆ ಬಿದ್ದಿತು. ಮನಸ್ಸು ಆ ಕಡೆಗೆ ವಾಲಿತು. ಎಂ.ಎ. ತರಗತಿಗೆ ಸೇರಿ ಕೊಂಡರು. ತರಗತಿಯಲ್ಲಿ ಸಹಪಾಠಿಗಳಾಗಿದ್ದ ಇತರೆ ಮಿತ್ರರೆಂದರೆ ಕುವೆಂಪು, ಕ. ವೆಂ. ರಾಘವಾಚಾರ್, ಅನಂತರಂಗಾಚಾರ್ ಹಾಗೂ ಕೆ. ವೆಂಕಟರಾಮಪ್ಪ ನವರು. ಒಂದು ಬಾಡಿಗೆ ಕೊಠಡಿಯಲ್ಲಿದ್ದುಕೊಂಡು ಬಡ ವಿದ್ಯಾರ್ಥಿಗಳಿಗೆಂದು ತೆರೆಯಲಾಗಿದ್ದ ವಿಶ್ವವಿದ್ಯಾನಿಲಯದ ಹೋಟೆಲಿನಲ್ಲಿ ಊಟಮಾಡಿಕೊಂಡು ಡಿ.ಎಲ್.ಎನ್. ತಮ್ಮ ವಿದ್ಯಾಭ್ಯಾಸ ಮುಂದುವರಿಸಿದರು. ಆಗ ಎಂ.ಎ. ತರಗತಿಗೆ ಪಾಠಮಾಡುತ್ತಿದ್ದ ಗುರುಗಳೆಂದರೆ ಬಿ.ಎಂ.ಶ್ರೀ. ರಾಳ್ಳಪಲ್ಲಿ ಅನಂತ ಕೃಷ್ಣಶರ್ಮ, ಸಿ. ಆರ್. ನರಸಿಂಹಶಾಸ್ತ್ರಿ ಹಾಗೂ ಟಿ. ಎಸ್. ವೆಂಕಣ್ಣಯ್ಯ ನವರುಗಳು. ಎ. ಆರ್. ಕೃಷ್ಣಶಾಸ್ತ್ರಿಗಳು ಕೆಲವು ಕಾಲ ಅವರಿಗೆ ಗುರುಗಳಾ ಗಿದ್ದರು. ಬಿ.ಎಂ.ಶ್ರೀ. ಅವರು ಆಗತಾನೇ ಕನ್ನಡದ ದೀಕ್ಷೆ ತೊಟ್ಟಿದ್ದರು; ಕನ್ನಡದ ತೇರನ್ನು ಮುನ್ನಡೆಸಲು ಉತ್ಸಾಹದಿಂದ ಹೊರಟಿದ್ದರು. ಡಿ.ಎಲ್.ಎನ್. ಅವರ ಜ್ಞಾನದ ಹಸಿವನ್ನು ಕಾಲೇಜಿನ ಬಳಿಯಿದ್ದ ಪ್ರಾಚ್ಯ ವಿದ್ಯಾ ಸಂಶೋಧನಾ ಸಂಸ್ಥೆ ಪೂರೈಸಿತು. ಅಲ್ಲಿ ಅನೇಕ ಹಳಗನ್ನಡ ಕವಿಗಳ ಕೃತಿಗಳನ್ನು ಹಸ್ತಪ್ರತಿಯ ರೂಪದಲ್ಲಿಯೇ ಓದಿದರು.

ಎಂ.ಎ. ಪರೀಕ್ಷೆಯಲ್ಲಿ ಪ್ರಥಮ ಸ್ಥಾನಗಳಿಸಿ ಎಚ್. ವಿ. ನಂಜುಂಡಯ್ಯ ನವರ ಪದಕವನ್ನು ಡಿ.ಎಲ್.ಎನ್. ಪಡೆದರು. ಆ ವರ್ಷ ಮೈಸೂರು ವಿಶ್ವ ವಿದ್ಯಾನಿಲಯವು ಕನ್ನಡಕ್ಕೆ ಒಂದು ಸಂಶೋಧನ ವೇತನವನ್ನು ಕೊಟ್ಟಿತ್ತು. ಕನ್ನಡಕ್ಕೆ ಮೊದಲನೆಯದಾದ ಆ ಸಂಶೋಧನ ವೇತನವೃತ್ತಿಯನ್ನು ಪಡೆಯುವ

ಭಾಗ್ಯ ಡಿ.ಎಲ್.ಎನ್. ಅವರದಾಯಿತು. 'ವೀರಶೈವ ಸಾಹಿತ್ಯದ ಉಗಮ' ಎಂಬುದು ಅವರ ಸಂಶೋಧನೆಯ ವಿಷಯ. ನಿಯಮಿತ ಅವಧಿಗೆ ಮುನ್ನವೇ ತಮ್ಮ ನಿಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಅವರು ಸಾದರಪಡಿಸಿದರು. ಅನಂತರ ಅವರು ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಯಲ್ಲಿ ತಿಂಗಳಿಗೆ 80 ರೂಪಾಯಿ ಸಂಬಳದ ಮೇಲೆ ಕನ್ನಡ ಪಂಡಿತರಾಗಿ ನೇಮಕಗೊಂಡರು. ಆ ಕೆಲಸದ ಜೊತೆಗೆ, ಮಹಾರಾಜಾ ಕಾಲೇಜಿನಲ್ಲಿ ಒಪ್ಪೊತ್ತಿನ ಕನ್ನಡ ಪಂಡಿತರಾಗಿ ನೇಮಕಗೊಂಡರು. ಅವರು ಕೆಲಸಕ್ಕೆ ಸೇರಿದ ಮೊದಲನೆಯ ದಿವಸದ ಸವಿ ನೆನಪನ್ನು ಟಿ. ಪಿ. ಕೃಷ್ಣಾಚಾರ್ ಹೀಗೆ ಮೆಲುಕುಹಾಕಿರುವರು : "ಅವರು ಮೊದಲನೆಯ ದಿವಸ ಕೆಲಸಕ್ಕೆ ಹೋದಾಗ ನಾನೂ ಮೈಸೂರಿನಲ್ಲಿದ್ದೆ. ನಸ್ಯದ ಕಂದು (snuff brown) ಬಣ್ಣದ ಉಲ್ಲನ್ ಸೂಟ್ (woollen suit) ಧರಿಸಿ ಟೈ ಕಟ್ಟಿಕೊಂಡು ಅಗಲವಾದ ಜರಿತಾರಿ ಅಂಚಿದ್ದ ರುಮಾಲನ್ನು ಹಾಕಿಕೊಂಡು ಹೊರಟರು. ನಾನೇ ಅವರ ರುಮಾಲನ್ನು ಕಟ್ಟಿಕೊಟ್ಟುದಾಗಿ ಜ್ಞಾಪಕ. ಅನಂತರ ಕೆಲವು ಕಾಲ ಆವರು ಸೂಟ್ ಹಾಕಿಕೊಂಡೇ ಹೋಗುತ್ತಿದ್ದರು. ಕ್ರಮೇಣ ಷರಾಯಿ ಹೋಗಿ ಕಚ್ಚೆ ಪಂಚೆಗೆ ಎಡೆಕೊಟ್ಟಿತು. ಓಪನ್ ಕಾಲರ್ ಕೋಟು ಟೈ ಸ್ಥಾನದಲ್ಲಿ ಕ್ಲೋಸ್ ಕಾಲರ್ ಕೋಟು ಬಂತು. ರುಮಾಲಂತೂ ಕೊನೆಯವರೆಗೂ ಇತ್ತು..."

ಡಿ.ಎಲ್.ಎನ್. ಗೃಹಸ್ಥಾಶ್ರಮಧರ್ಮ ಸ್ವೀಕರಿಸಿದ್ದೂ ಇದೇ ವೇಳೆಗೆ. ಡಿ.ಎಲ್.ಎನ್. ಲವರ ಸೋದರ ಮಾವನವರಾದ ತಿರುವಳ್ಳೂರ್ ಶ್ರೀನಿವಾಸ ರಾಘವಾಚಾರ್‌ರವರು ಕನ್ನಡದ ಶ್ರೇಷ್ಠ ವಿದ್ವಾಂಸರು. ತಮ್ಮ ಮನೆಯಲ್ಲಿ ಒಳ್ಳೆಯ ಪುಸ್ತಕ ಭಂಡಾರವನ್ನು ಅವರು ಹೊಂದಿದ್ದರು. ಅವರ 'ಅಂಕಗಣಿತಾದರ್ಶ' ಆಗಿನ ಕಾಲದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪರಿಚಿತ ಕೃತಿ. ಡಿ.ಎಲ್.ಎನ್. ಅವರ ಜ್ಞಾನದ ಹಸಿವೆಗೆ ಮೇವು ದೊರೆತದ್ದು (ಪ್ರಾರಂಭದಲ್ಲಿ) ತಿರುವಳ್ಳೂರ್ ಶ್ರೀನಿವಾಸ ರಾಘವಾಚಾರ್‌ರವರ ಮನೆಯಲ್ಲಿದ್ದ ಪುಸ್ತಕ ಭಂಡಾರದಲ್ಲಿಯೇ. ತಿರುವಳ್ಳೂರ್ ಶ್ರೀನಿವಾಸ ರಾಘವಾಚಾರ್‌ರವರ ಜೊತೆಗೂಡಿ ನಾಗಚಂದ್ರನ 'ಪಂಪರಾಮಾಯಣ ಸಂಗ್ರಹ'ವನ್ನು ಡಿ.ಎಲ್.ಎನ್. ಸಂಪಾದಿಸಿರುವರು. ಇವರಿಗೆ ಇಬ್ಬರು ಗಂಡುಮಕ್ಕಳು ಹಾಗೂ ಐವರು ಹೆಣ್ಣು ಮಕ್ಕಳು. ಹೆಣ್ಣುಮಕ್ಕಳಲ್ಲಿ ಕೊನೆಯವರು ಶ್ರೀಮತಿ ಮುತ್ತಮ್ಮ

ನವರು, ಡಿ.ಎಲ್.ಎನ್. ಅವರ ಕೈಹಿಡಿದವರು. ತುಂಬ ಸಾತ್ವಿಕ ಜೀವ. ಡಿ.ಎಲ್.ಎನ್. ಅವರನ್ನು ಚೆನ್ನಾಗಿ ಅರ್ಥಮಾಡಿಕೊಂಡು, ಅವರ ಸಾಹಿತ್ಯ ಸೇವೆಗೆ ನೆರವಾದರು. ಮನೆಗೆ ಯಾರೇ ಬರಲಿ ಪ್ರೀತಿಯ ಆತಿಥ್ಯ ಮಾಡು ತ್ತಿದ್ದರು. ಡಿ.ಎಲ್.ಎನ್. ಅವರನ್ನು ಹೊತ್ತುಗೊತ್ತಿಲ್ಲದೆ ಹುಡುಕಿಕೊಂಡು ಅವರ ಮಿತ್ರರು, ಸಹೋದ್ಯೋಗಿಗಳು, ಶಿಷ್ಯರು ಮನೆಗೆ ಬರುತ್ತಿದ್ದರು. ಬೇಸರಪಟ್ಟುಕೊಳ್ಳದೆ ಬಂದವರಿಗೆ ಕಾಫಿಯ ಉಪಚಾರವನ್ನಾದರೂ ಮಾಡಿ ಕಳುಹಿಸುತ್ತಿದ್ದರು. ಡಿ.ಎಲ್.ಎನ್. ಅವರಿಗೆ 'ಉಪಾಯನ' ಸಂಭಾವನಾ ಗ್ರಂಥವನ್ನು ಅರ್ಪಿಸಿದಾಗ ತಮ್ಮ ಶ್ರೇಯಸ್ಸಿನ ಒಂದು ಪಾಲನ್ನು 'ತಮ್ಮಷ್ಟಕ್ಕೆ ತಾವು ಓದಿ ಬರೆಯಲು ಬಿಟ್ಟುಕೊಟ್ಟ' ತಮ್ಮ ಶ್ರೀಮತಿಯವರಿಗೂ ಸೇರ ಬೇಕೆಂದು ತಿಳಿಸಿದರು. ಇದು ಸರಿಯಾದ ಮಾತು. ಧರ್ಮಪತ್ನಿಯವರ ಸಹಕಾರವಿಲ್ಲದಿದ್ದರೆ ಡಿ.ಎಲ್.ಎನ್. ಈ ಪ್ರಮಾಣದಲ್ಲಿ ಸಂಶೋಧನೆಯ ಕಾರ್ಯ ನಡೆಸುತ್ತಿದ್ದರೊ ಇಲ್ಲವೊ ಹೇಳಲಾಗದು.

ಡಿ.ಎಲ್.ಎನ್. ಅವರ ತಾಯಿ ಶ್ರೀಮತಿ ಲಕ್ಷ್ಮಮ್ಮನವರು ಆಚಾರ ವಂತರು, ಧಾರ್ಮಿಕ ಶ್ರದ್ಧೆಯಿದ್ದವರು. ದೇವರಾಯನದುರ್ಗದ ಲಕ್ಷ್ಮೀ ನರಸಿಂಹನಲ್ಲಿ ಅವರಿಗೆ ವಿಶೇಷವಾದ ಭಕ್ತಿ. ಮೊದಲನೆಯದು ಹೆಣ್ಣಾದಾಗ (ಶ್ರೀಮತಿ ರಾಘವಮ್ಮ) ಗಂಡು ಮಗನಿಗಾಗಿ ದೇವರಲ್ಲಿ ಹರಕೆಹೊತ್ತರು. ಗಂಡು ಮಗುವಾದಾಗ ದೇವರ ಹೆಸರನ್ನೇ ಮಗುವಿಗಿಟ್ಟರು. ಅವರಿಗೆ ಅಷ್ಟು ವಿಶ್ವಾಸ, ನಂಬಿಕೆ ಆ ದೇವರಲ್ಲಿ. ಡಿ.ಎಲ್.ಎನ್. ಬೆಳೆದದ್ದು ಸಾಂಪ್ರದಾಯಿಕ ಅಯ್ಯಂಗಾರ್ ಕುಟುಂಬದ ಪರಿಸರದಲ್ಲಾದರೂ ಅವರು ಓದಿದ ಓದಿನಿಂದಾಗಿ ಅವರ ವ್ಯಕ್ತಿತ್ವಕ್ಕೆ ಸಂಪ್ರದಾಯ ಹೊಂದಿಕೊಳ್ಳಲಿಲ್ಲ. ಶ್ರೀವೈಷ್ಣವರಾಗಿದ್ದುದಕ್ಕೆ ಒಂದೇ ಗುರುತು ಹಣೆಯ ಮೇಲಿಡುತ್ತಿದ್ದ ಕೆಂಪುನಾಮ. ಒಮ್ಮೆ ಮಾತ್ರ ಅವರು ತಮ್ಮ ಮನೆದೇವರಿಗೆ ಕಲ್ಯಾಣೋತ್ಸವ ಏರ್ಪಡಿಸಿದ್ದರು— ಮನೆಯವರ ಒತ್ತಾಯಕ್ಕೆ. ದೇವರ ಬಗೆಗೆ ಭಕ್ತಿಯಿದ್ದರೂ ಅದು ಅವರಲ್ಲಿ ಅಂಧಶ್ರದ್ಧೆಯಾಗಿರಲಿಲ್ಲ. ನಿತ್ಯವೂ ಪೂಜೆ, ಮಂತ್ರಪಠನ ಇತ್ಯಾದಿಗಳನ್ನು ಮಾಡುವುದರಲ್ಲಿಯೂ ಅವರಿಗೆ ನಂಬಿಕೆಯಿರಲಿಲ್ಲ. ಬೆಳಗ್ಗೆ 6-6-30ಕ್ಕೆ ಎದ್ದು ಕಾಫಿ ಕುಡಿದು, ಪತ್ರಿಕೆ ಓದಿ, ಸ್ನಾನಮಾಡಿ, ದೇವರಿಗೆ ಕೈಮುಗಿದು ಬೆಳಗಿನ ಉಪಾಹಾರ ಸ್ವೀಕರಿಸಿ ಓದಲು ಕುಳಿತುಬಿಡುತ್ತಿದ್ದರು. ಹತ್ತು ಗಂಟೆಗೆ

ಕಾಲೇಜಿಗೆ ಹೋಗಲು ಸಿದ್ಧರಾಗುತ್ತಿದ್ದರು. ಕಾಲೇಜಿನಿಂದ ಹಿಂತಿರುಗಿದ ಮೇಲೆ ಕಾಫಿ ಕುಡಿದು ವಾಯುವಿಹಾರಕ್ಕೆ ಹೊರಡುತ್ತಿದ್ದರು. ಮನೆಯಿಂದ ನೂರಡಿ ರಸ್ತೆಯಲ್ಲಿರುವ ಕೃಷ್ಣಾ ಬುಕ್ ಡಿಪೋಗೆ ಬರುತ್ತಿದ್ದರು. ಅಲ್ಲಿಗೆ ಪ್ರೊ|| ಸುಬ್ರಹ್ಮಣ್ಯಂ, ಕೃಷ್ಣಸ್ವಾಮಿ ಅಯ್ಯಂಗಾರ್, ಕೆ. ವಿ. ರಾಘವಾಚಾರ್ ಬಂದು ಸೇರುತ್ತಿದ್ದರು. ಅಲ್ಲಿ ಲಘು ಹರಟೆ ಹೊಡೆದು ಮನೆಗೆ ಹಿಂತಿರುಗುತ್ತಿದ್ದರು. ಹಾಗೆ ಬರುವಾಗ ಕೈಚೀಲದಲ್ಲಿ ಹಣ್ಣು ತರಕಾರಿ ತರುತ್ತಿದ್ದರು. ಡಿ.ಎಲ್.ಎನ್. ಭೋಜನಪ್ರಿಯರು. ಊಟ ರುಚಿಕಟ್ಟಾಗಿರಬೇಕು, ಎಲ್ಲವೂ ಬಿಸಿ ಬಿಸಿಯಾಗಿರಬೇಕು. ಅವರಿಗೆ ಪ್ರಿಯವಾದ ಸಿಹಿಯೆಂದರೆ ಚಿರೋಟಿ ಹಾಗೂ ಬೇಳೆ ಒಬ್ಬಟ್ಟು. ಪುಳಿಯೋಗರೆ ಅವರಿಗೆ ಬಹಳ ಪ್ರಿಯವಾದದ್ದು. ಉಳುಂದೊಗರೆ, ಬೆಂಡೆಕಾಯಿಗೊಜ್ಜು—ಇವೂ ಅವರಿಗೆ ಇಷ್ಟವಾದುವು.

1932ರಲ್ಲಿ ಪೂರ್ಣಕಾಲದ ಪಂಡಿತರಾಗಿ ಡಿ.ಎಲ್.ಎನ್. ನೇಮಕಗೊಂಡರು. ಆಗ ಅವರ ಮಾಸಿಕವೇತನ 120 ರೂಪಾಯಿಗಳು. ಏಳು ವರ್ಷಗಳ ಕಾಲ ಅವರು ಪಂಡಿತರಾಗಿಯೇ ಕೆಲಸ ಮಾಡಬೇಕಾಯಿತು. 1939ರಲ್ಲಿ ಅವರು ಇಂಟರ್ಮೀಡಿಯೇಟ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾದರು. 1945ರಲ್ಲಿ ಉಪಪ್ರಾಧ್ಯಾಪಕರ ಸ್ಥಾನಕ್ಕೆ ಬಡ್ತಿ ದೊರೆತು ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ವರ್ಗವಾದರು. ಆ ವೇಳೆಗೆ ಕನ್ನಡ ಸಾಹಿತ್ಯ ಪರಿಷತ್ತು ಒಂದು ನಿಘಂಟನ್ನು ತಯಾರಿಸುವ ಯೋಜನೆ ಹಾಕಿತು. ಈ ನಿಘಂಟು ಸಮಿತಿಯ ಸದಸ್ಯರಲ್ಲಿ ಡಿ.ಎಲ್.ಎನ್. ಒಬ್ಬರು. 1945ರಲ್ಲಿ ಸರಕಾರ ಡಿ.ಎಲ್.ಎನ್. ಅವರನ್ನು ನಿಘಂಟಿನ ಪ್ರಧಾನ ಸಂಪಾದಕರನ್ನಾಗಿ ನೇಮಕ ಮಾಡಿತು. ಡಿ.ಎಲ್.ಎನ್. ಬೆಂಗಳೂರಿನಲ್ಲಿ ಸಂಸಾರಹೂಡಿ ಬಹಳ ಶ್ರಮವಹಿಸಿ ನಿಘಂಟುವಿನ ಮೊದಲನೆಯ ಸಂಪುಟ ಸಿದ್ಧಪಡಿಸಿದರು. 1956ರಲ್ಲಿ ಕೆ. ವಿ. ಪುಟ್ಟಪ್ಪನವರು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿ ನೇಮಕಗೊಂಡ ಮೇಲೆ ಕನ್ನಡ ವಿಭಾಗದಲ್ಲಿ ಇನ್ನೊಂದು ಪ್ರಾಧ್ಯಾಪಕ ಸ್ಥಾನವನ್ನು ಸೃಷ್ಟಿಸಿದರು. ತಮ್ಮಿಂದ ತೆರವಾದ ಸ್ಥಾನಕ್ಕೆ ತೀ.ನಂ.ಶ್ರೀ. ಅವರನ್ನು ನೇಮಕ ಮಾಡಿದರು. ಡಿ.ಎಲ್.ಎನ್. ತಮ್ಮ 55ನೆಯ ವಯಸ್ಸಿನಲ್ಲಿ 1962ರ ಮಾರ್ಚ್ 31ರಂದು ಪ್ರಾಧ್ಯಾಪಕ ವೃತ್ತಿಯಿಂದ ನಿವೃತ್ತರಾದರು.

ನಿವೃತ್ತಿಯ ನಂತರ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದವರು ಸಂಶೋಧನೆಗೆ ನೆರವು ನೀಡಿದ್ದರಿಂದ ಮತ್ತೆ ಮೂರುವರ್ಷಕಾಲ ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿಯೇ ಸಂಶೋಧನೆ ಕೈಗೊಂಡರು. ಅದರ ಫಲವಾಗಿ 'ಕನ್ನಡ ಗ್ರಂಥ ಸಂಪಾದನೆ' ಎನ್ನುವ ಬಹಳ ಮಹತ್ವದ ಕೃತಿ ಹೊರಬಂದಿತು. ಕೆಲವೇ ದಿನಗಳಲ್ಲಿ ಪ್ರೊ॥ ತೀ.ನಂ.ಶ್ರೀ. ಅವರ ಅಕಾಲಿಕ ಮರಣವಾರ್ತೆ ಬರಸಿಡಿಲಿನಂತೆ ಬಂದೆರಗಿತು. ಆತ್ಮೀಯ ಗೆಳೆಯನ ಅಗಲಿಕೆಯ ಸುದ್ದಿ ಕೇಳಿ ಡಿ.ಎಲ್.ಎನ್. ಬಿಕ್ಕಿ ಬಿಕ್ಕಿ ಅತ್ತರು. 1965ರಲ್ಲಿ ಡಿ.ಎಲ್.ಎನ್. ಅವರಿಗೆ ಮೊದಲನೆಯ ಹೃದಯಾಘಾತ (heart attack)ವಾಗಿದ್ದಿತು – ಕೆಲಸದ ಒತ್ತಡದಿಂದಾಗಿ. ತೀ.ನಂ.ಶ್ರೀ. ಅವರ ಸಾವಿನ ಸುದ್ದಿ ಕೇಳಿದ ಮೇಲೆ ಡಿ.ಎಲ್.ಎನ್. ಅವರಿಗೆ ಮತ್ತೆ ಎಲ್ಲಿ ಹೃದಯಾಘಾತವಾಗುವುದೋ ಎಂದು ಎಲ್ಲರೂ ಹೆದರಿದ್ದರು. ಗೆಳೆಯನನ್ನು ನೆನಸಿಕೊಂಡು ಹಾಗೆ ಬಿಕ್ಕಿ ಬಿಕ್ಕಿ ಅತ್ತದ್ದನ್ನು ಮನೆಯವರು ಹಿಂದೆಂದೂ ನೋಡಿರಲಿಲ್ಲವಂತೆ. ಇದಲ್ಲವೆ ಮಿತ್ರವಾತ್ಸಲ್ಯ !

ಡಿ.ಎಲ್.ಎನ್. ಅವರಿಗೆ ಮತೀಯವಾದ ಸಂಕುಚಿತ ದೃಷ್ಟಿ ಇರಲಿಲ್ಲ. ಅವರು ಎಲ್ಲ ಧರ್ಮಗಳನ್ನೂ ಗೌರವಿಸುವವರು. ಅವರಿಗೆ ಮತಧರ್ಮದ ವಿಷಯದಲ್ಲಿ ಪಾಷಂಡತನ ಹಿಡಿಸುವುದಿಲ್ಲ. "ಸರಸ್ವತಿಯ ರಾಜ್ಯದಲ್ಲಿ ಜಾತೀಯತೆ ಮತೀಯತೆಗಳಿಗೆ ಸ್ಥಾನವಿಲ್ಲ" ಎಂದು ಅವರು ಒಂದೆಡೆ ಹೇಳಿರುವರು. ಅವರನ್ನು ತಿಳಿದ ಯಾರಿಗೇ ಆಗಲಿ ಅವರು ಮತೀಯ ಪಕ್ಷಭಾವನೆಯುಳ್ಳವರೆಂದು ಹೇಳಲಾರರು. 1960ರಲ್ಲಿ ಬಸವಕಲ್ಯಾಣದಲ್ಲಿ ನಡೆಯಬೇಕಾಗಿದ್ದ ಸಾಹಿತ್ಯ ಸಮ್ಮೇಳನಕ್ಕೆ ಡಿ.ಎಲ್.ಎನ್. ರವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. 'ಸಿದ್ಧರಾಮ ಚಾರಿತ್ರ'ದ ಮುನ್ನುಡಿಯಲ್ಲಿ ಡಿ.ಎಲ್.ಎನ್. ಸಿದ್ಧರಾಮನು ಶೈವನೋ ವೀರಶೈವನೋ ಎಂದು ಚರ್ಚಿಸಿದ್ದರು. ಈ ಚರ್ಚೆಯ ಕಿಡಿಯನ್ನೇ ಮುಂದಿಟ್ಟುಕೊಂಡು ಕೆಲವರು ಗಲಾಟೆ ಎಬ್ಬಿಸಿದರು. ಡಿ.ಎಲ್.ಎನ್. ಸಮ್ಮೇಳನದ ಅಧ್ಯಕ್ಷರಾಗುವುದನ್ನು ವಿರೋಧಿಸಿದರು. ಅದರೂ ಸಾಹಿತ್ಯ ಸಮ್ಮೇಳನ ನಡೆಯಿತು, ಬಸವ ಕಲ್ಯಾಣದಲ್ಲಲ್ಲ. ಬೀದರ್‌ನಲ್ಲಿ. ಡಿ.ಎಲ್.ಎನ್. ತಮ್ಮ ಅಧ್ಯಕ್ಷ ಭಾಷಣದಲ್ಲಿ ಸಾಹಿತ್ಯ ಪ್ರಪಂಚದಲ್ಲಿ ಜಾತೀಯತೆ ತಲೆಹಾಕಬಾರದೆಂದು ಒತ್ತಿ ಒತ್ತಿ ಹೇಳಿದರು :

"ಈಗ ಕೆಲವು ವರ್ಷಗಳಿಂದ ಸಾಹಿತ್ಯ ಪ್ರಪಂಚದಲ್ಲಿ ಬೇರೊಂದು ಮನೋಧರ್ಮದ ಪ್ರವೇಶವಾಗಿದೆ. ಜೀವನದ ಇತರ ಕ್ಷೇತ್ರಗಳಲ್ಲಿ ಹಬ್ಬಿರುವ ಜಾತಿ ಮತದೃಷ್ಟಿ ಸಾಹಿತ್ಯದೊಳಕ್ಕೂ ಕಾಲಿಟ್ಟಿದೆ. ಸಾಹಿತ್ಯ ನಿರ್ಮಾಣವಾಗಲಿ ವಿಮರ್ಶೆಯಾಗಲಿ ಸಂಶೋಧನೆಯಾಗಲಿ ಯಾವುದೂ ನಡೆಯುವಂತಿಲ್ಲ. ಈ ದೃಷ್ಟಿ ಪ್ರಬಲವಾಗಿದೆ... ಇದು ದೊಡ್ಡದಾದ ವಿಷಯವಾಗಿರುವುದರಿಂದಲೂ ರಾಗದ್ವೇಷಗಳ ಮಥನ ಇದರ ಬೆಳವಣಿಗೆಯಿಂದ ಉಂಟಾಗುವುದರಿಂದಲೂ ಇವನ್ನು ವಿವರವಾಗಿ ಇಲ್ಲಿ ಪ್ರತಿಪಾದಿಸುವುದು ಸಾಧ್ಯವಿಲ್ಲ. ಆದರೂ ಒಂದೆರಡು ಮಾತನ್ನು ಹೇಳಬೇಕೆನ್ನಿಸುತ್ತದೆ. ಇದರಲ್ಲೇನಾದರೂ ತಪ್ಪುನುಡಿಗಳು ನನ್ನ ಉದ್ದೇಶಕ್ಕೆ ಮೀರಿ ತೋರಿಬಂದರೆ ಅದಕ್ಕಾಗಿ ಮೊದಲೇ ಕ್ಷಮೆ ಬೇಡುತ್ತೇನೆ. ಒಂದು ವಿಶಿಷ್ಟ ಸಮಾಜದ ಮನನೋಯುವುದೆಂಬ ದೃಷ್ಟಿಯಿಂದ ಧರಣಿಪಂಡಿತನ (1650) 'ಬಿಜ್ಜಳರಾಯ ಚರಿತ್ರೆ' ಮುದ್ರಿತವಾಗಿದ್ದರೂ ಹೊರಕ್ಕೆ ಬಾರದಂತಾಯಿತು. 'ಚೆನ್ನಬಸವ ನಾಯಕ' ಕಾದಂಬರಿಯ ಭಾಷಾಂತರ ಪ್ರಸಾರಕ್ಕೆ ಅಡ್ಡಿಯಾಯಿತು. 'ಸಿದ್ಧರಾಮ ಚಾರಿತ್ರ'ದ ಮುನ್ನುಡಿಯ ಕೆಲವಂಶಗಳ ಮೇಲೆ ಟೀಕೆ ಬಂತು. ಈ ದೃಷ್ಟಿ ಸರಿಯೆಂದು ವಾದಕ್ಕಾಗಿ ಒಪ್ಪಿಕೊಳ್ಳೋಣ. ಆಗ ಬಸವಣ್ಣನವರ ವಚನಗಳು, ಹರಿಹರ ಕವಿಯ ಬಸವರಾಜದೇವರ ರಗಳೆ ಮುಂತಾದ ಕೆಲವು ಕೃತಿಗಳು, ಉರಿಲಿಂಗಪೆದ್ದಿಯ ವಚನಗಳು – ಇವೇ ಮುಂತಾದ ಗ್ರಂಥಗಳಲ್ಲಿ ಇತರ ಸಮಾಜಗಳ ಕಟುಟೀಕೆಯಿರುವುದರಿಂದ ಅವನ್ನು ಮುದ್ರಿಸಲೂ ಬಾರದು, ಪ್ರಕಟಿಸಲೂ ಬಾರದು ಎಂದು ಇತರ ಮತೀಯರು ಹೇಳಬಹುದಲ್ಲವೆ? ಒಬ್ಬರ ಆಕ್ಷೇಪಣೆ ಸರಿ ಇನ್ನೊಬ್ಬರ ಆಕ್ಷೇಪಣೆ ತಪ್ಪು ಎಂದು ಹೇಳುವುದಕ್ಕಾಗುತ್ತದೆಯೇ? 'ಅಂ ಮೂರ್ಖಿಂ ತಾಂ ಮೂರ್ಖಿಂ' ಎಂದು ಕಾದಾಡಬಹುದು ಕಾಲದ ಕಡೆಯವರೆಗೂ. ಪ್ರಯೋಜನ ಏನೂ ಇಲ್ಲ. ಘರ್ಷಣೆ ಇನ್ನೂ ಮಿಗಿಲಾಗಿರುತ್ತದೆ; ಅಷ್ಟೆ. ಎಲ್ಲ ಸಮಾಜಗಳಲ್ಲಿಯೂ ಹುಳುಕುಗಳಿವೆ. ಕೆಲವಲ್ಲಿ ಹೆಚ್ಚು ಕೆಲವಲ್ಲಿ ಕಡಿಮೆ ಇರಬಹುದು. ಬೇರೆ ಬೇರೆ ತೆರನಾಗಿಯೇ ಅವು ಇರಬಹುದು. ಯಾರಾದರೂ ಎತ್ತಿ ಆಡಿದಾಗ ಅವನ್ನು ಹಾಸ್ಯ ದೃಷ್ಟಿಯಿಂದ ನೋಡುವುದನ್ನು ಕಲಿಯಬೇಕು. ಇಲ್ಲವೇ 'ಆನೆಯ ಮೇಲೆ ಹೋಹವನ ಶ್ವಾನ ಕಚ್ಚಬಲ್ಲುದೆ' ಎಂದು ಉಪೇಕ್ಷಿಸಲೂ ಬಹುದು. 'ಚೆನ್ನಬಸವ ನಾಯಕ'ವನ್ನು

ನೂರಾರು ವಿದ್ಯಾರ್ಥಿಗಳಿಗೆ ಓದಿಸಿದ್ದೇನೆ. ಅಲ್ಲಿ ಒಂದು ವಿಶಿಷ್ಟ ಸಮಾಜವನ್ನು ತೆಗಳಿದೆಯೆಂದು ನನಗೆ ಅನ್ನಿಸಲಿಲ್ಲ. ಓದಿದ ವಿದ್ಯಾರ್ಥಿಗಳಿಗೂ ಅನ್ನಿಸಲಿಲ್ಲ. ಇದಾದ ಕೆಲವು ವರ್ಷಗಳ ಅನಂತರ ಅದನ್ನು ಕುರಿತು ಟೀಕೆ ಇದ್ದಕ್ಕಿದ್ದಂತೆ ಎದ್ದಿತು. ಕಾರಣಗಳು ಏನೇ ಇರಲಿ, ಇಲ್ಲದ್ದನ್ನು ಇದೆಯೆಂಬುದಾಗಿ ಭಾವಿಸಿ ಸಾಧಿಸುವ ಹಠ ಹೆಚ್ಚಾಯಿತು. ಚರಿತ್ರ ಗ್ರಂಥಗಳಲ್ಲಿ ಕಾವ್ಯವಾಗಿಯೇ ಹೇಳಿರುವುದನ್ನು ಕಾದಂಬರಿಕಾರರು ನಾಟ್ಯಮಾಡಿ ತೋರಿಸಿರುತ್ತಾರೆಂದು ನನ್ನನಿಸಿಕೆ. ಇಂಥ ಅಂಶವನ್ನು ದೊಡ್ಡದನ್ನಾಗಿ ಮಾಡಿ ಗದ್ದಲ ಎಬ್ಬಿಸುವುದು ನ್ಯಾಯವೇ? ವೀರಮ್ಮಾಜಿಯಂಥವರು ಒಂದು ಸಮಾಜಕ್ಕೆ ಮೀಸಲೇನು ? ಬೇರೆ ಸಮಾಜಗಳಲ್ಲಿಲ್ಲವೇನು ? ಹೀಗೆ ನೋಡಿ ದೃಷ್ಟಿಯನ್ನು ವಿಶಾಲವೂ ಉದಾರವೂ ಆಗಿಸಿಕೊಳ್ಳಬೇಕು. ಬೇರೆ ಮಾಡಿದವರಲ್ಲಿ ಇಂಥ ದೃಷ್ಟಿ ಬೆಳೆಯಲಿ ಎಂದು ನನ್ನ ವಿನಯದ ಪ್ರಾರ್ಥನೆ."

ಡಿ,ಎಲ್.ಎನ್. ಮದುವೆಯಾದ ಹೊಸದರಲ್ಲಿ ಎಸ್.ವಿ. ರಂಗಣ್ಣನವರ ಮನೆ ಎದುರಿಗಿದ್ದ ಮನೆಯ ಔಟ್‌ಸ್‌ಹೌಸಲ್ಲಿದ್ದರು. ಆ ಮನೆಗೆ ವಿದ್ಯುಚ್ಛಕ್ತಿಯ ಸೌಕರ್ಯವಿರಲಿಲ್ಲವಂತೆ. 1940ರಲ್ಲಿ ಹೊಸಮನೆ ಕಟ್ಟಿಸಿ ಅಲ್ಲಿಗೆ ವಾಸಕ್ಕೆ ಬಂದರು. ಅಲ್ಲೇ ಮೊದಲನೆ ಮಗಳು ಶ್ರೀಮತಿ ರಾಜಲಕ್ಷ್ಮಿಯವರು ಹುಟ್ಟಿದ್ದು. 1942ರಲ್ಲಿ ಡಿ.ಎಲ್.ಎನ್. ಅವರಿಗೆ ಪುತ್ರ ಸಂತಾನವಾಯಿತು. ಆ ಮಗು ಹುಟ್ಟಿದ ಒಂದೂವರೆ ವರ್ಷಕ್ಕೆ ಅದಕ್ಕೆ ಜ್ವರ ಬಂದಿತು. ಆಗಲೇ ಮಗಳು ರಾಜಲಕ್ಷ್ಮಿಗೂ ಮಲೇರಿಯಾ ಜ್ವರ. ಇಂಜೆಕ್ಷನ್ ಕೊಟ್ಟ ಡಾಕ್ಟರು ಸರಿಯಾಗಿ ಕೊಡದಿದ್ದರಿಂದ ಕೊಟ್ಟ ಜಾಗದಲ್ಲಿ ಗಂಟಾಯಿತು, ಇನ್‌ಫೆಕ್ಷನ್ ಆಯಿತು. ಆಗ ಆಂಟಿಬಯಾಟಿಕ್ ಇನ್ನೂ ಚಾಲ್ತಿಗೆ ಬಂದಿರಲಿಲ್ಲ. ಆರು ತಿಂಗಳ ಔಷಧೋಪಚಾರ ಮಾಡಬೇಕಾಯಿತು. ಗಂಡುಮಗುವಿನ ಜ್ವರಕ್ಕೆ ಸರಿಯಾದ ವೈದ್ಯೋಪಚಾರ ಡಾಕ್ಟರ್ ಮಾಡಲಿಲ್ಲವಾದ್ದರಿಂದ ಜ್ವರ ಮೆದುಳು ಜ್ವರಕ್ಕೆ ತಿರುಗಿ ಮಗು ತೀರಿಕೊಂಡಿತು. ಆಗ ಡಿ.ಎಲ್.ಎನ್. ದಂಪತಿಗಳಿಗೆ ಆದಂತಹ ಆಘಾತ ದೊಡ್ಡದು. ಮನೋಬಲದ ಕುಸಿತಕ್ಕೆ (ಡಿಪ್ರೆಷನ್) ಒಳಗಾದ ಡಿ.ಎಲ್.ಎನ್. ಮನಸ್ಸಿನ ನೆಮ್ಮದಿಗಾಗಿ ರಮಣಮಹರ್ಷಿಗಳ ಆಶ್ರಮಕ್ಕೆ ಹೋಗಿ ಅಲ್ಲಿ ಆರು ತಿಂಗಳು ಇದ್ದರು. ಅವರನ್ನು ಸಮಾಧಾನಮಾಡಿ ಅಲ್ಲಿಂದ ಕರೆತಂದವರು ಅವರ ಬಂಧುಗಳಾದ ಡಾ॥ ಪಾರ್ಥಸಾರಥಿಯವರು.

ಡಿ.ಎಲ್.ಎನ್. ಕುಟುಂಬ ವತ್ಸಲರು. ಗಂಡು ಮಗನಿಲ್ಲದ ನೋವು ಅವರ ಎದೆಯಾಳದಲ್ಲಿದ್ದರೂ ಅವರೆಂದೂ ಆ ನೋವನ್ನು ಪ್ರಕಟಪಡಿಸಿದವರಲ್ಲ. ಅವರಿಗೆ ರಾಜಲಕ್ಷ್ಮಿ, ಪ್ರಭಾ, ಪದ್ಮಿನಿ, ಜಯಶ್ರೀ, ಮಾಧವಿ – ಹೀಗೆ ಐವರು ಹೆಣ್ಣು ಮಕ್ಕಳು. ರಾಜಲಕ್ಷ್ಮಿಯವರು ಎಂ.ಎಸ್ಸಿ. ಮಾಡಿ ಸಿ.ಎಫ್.ಟಿ.ಆರ್.ಐ.ನಲ್ಲಿ ಒಳ್ಳೆಯ ಹುದ್ದೆಯಲ್ಲಿರುವರು. ಎರಡನೆಯ ಮಗಳು ಪ್ರಭಾ ಅವರು ಬೆಂಗಳೂರಿನಲ್ಲಿ ನೆಲೆಸಿರುವರು. ಅವರ ಹಿರಿಯ ಮಗ ತಾತನಂತೆ ಅಪೂರ್ವವಾದ ನೆನಪಿನ ಶಕ್ತಿಯುಳ್ಳವನು; ತಾತನನ್ನೇ ಹೋಲುವವನು. ಆತ ವಿವಾಹವಾಗಿ ಅಮೇರಿಕಾದಲ್ಲಿ ನೆಲೆಸಿರುವನು. ಮೂರನೆಯ ಮಗಳು ಪದ್ಮಿನಿ ಬೊಂಬಾಯಿಯಲ್ಲಿ ನೆಲೆಸಿರುವರು. ನಾಲ್ಕನೆಯ ಮಗಳು ಜಯಶ್ರೀ ತಿರುಚಿಯಲ್ಲಿ ವಾಸವಿರುವರು. ಕೊನೆಯ ಮಗಳು ಮಾಧವಿ ಪೋಸ್ಟ್ ಡಾಕ್ಟೊರಲ್ ಫೆಲೋ ಆಗಿ ಅಮೆರಿಕಾದಲ್ಲಿ ಸಂಶೋಧನ ವ್ಯಾಸಂಗ ಮಾಡುತ್ತಿರುವರು. ಹೆಣ್ಣುಮಕ್ಕಳೆಲ್ಲಾ ವಿದ್ಯಾವತಿಯರು, ಗುಣವತಿಯರು. ಬಾಳಿನಲ್ಲಿ ನೆಮ್ಮದಿ ಕಂಡುಕೊಂಡಿರುವರು.

ಡಿ.ಎಲ್.ಎಸ್. ಅವರಿಗೆ ಮಕ್ಕಳೆಂದರೆ ಬಹಳ ಪ್ರೀತಿ. ಟಿ.ಪಿ. ಕೃಷ್ಣಾಚಾರ್ ಆ ಬಗ್ಗೆ ಹೀಗೆ ಹೇಳುವರು: "ಅವರು ಮಕ್ಕಳಿರುವ ಸ್ನೇಹಿತರ ಅಥವಾ ಬಂಧು ಬಳಗದವರ ಮನೆಗಳಿಗೆ ಹೋಗುವಾಗ ಹಣ್ಣನ್ನೂ, ಸಿಹಿಯನ್ನೂ (ಪೆಪ್ಪರಮೆಂಟು) ತೆಗೆದುಕೊಂಡು ಹೋಗುವುದು ವಾಡಿಕೆ. ಮಕ್ಕಳನ್ನು ಕರೆದು ಸಮೀಪದಲ್ಲಿ ಕೂಡಿಸಿಕೊಂಡು ತಂದಿರುವ ಸಿಹಿಯನ್ನು ಕೊಟ್ಟು ಆನಂದಪಡುತ್ತಾರೆ. ಒಂದುಸಲ ಬೆಂಗಳೂರಿನಲ್ಲಿದ್ದಾಗ ನರಸಿಂಹಾಚಾರ್ಯರು ಮನೆಗೆ ಬಂದರು. ಆಗ ನನ್ನ ಮಗಳು, ಮೊಮ್ಮಗ ಇದ್ದರು. ನನ್ನ ಮೊಮ್ಮಗನನ್ನು ತೊಡೆಯ ಮೇಲೆ ಕೂಡಿಸಿಕೊಂಡು ನನ್ನ ಮಗಳ ಕಡೆ ತಿರುಗಿ "It is this fellow that has made your father grand" ಎಂದು ಹೇಳಿದರು. ಸೂಕ್ಷ್ಮವಾದ ವಿಷಯಗಳನ್ನು ಅವರದೇ ಆದ ರೀತಿಯಲ್ಲಿ ಹೇಳುವುದು ನರಸಿಂಹಾಚಾರ್ಯರ ವೈಶಿಷ್ಟ್ಯ."

ಹೆಣ್ಣುಮಕ್ಕಳು ವಿದ್ಯಾವತಿಯರಾಗಬೇಕೆಂಬುದು ಡಿ.ಎಲ್.ಎನ್. ಅವರ ಆಸೆ. ತಮ್ಮ ಹೆಣ್ಣುಮಕ್ಕಳಿಗೆ ಅವರು ಒಳ್ಳೆಯ ಶಿಕ್ಷಣ ಕೊಡಿಸಿದರು. ತಮ್ಮ ಪತ್ನಿಯ ಅಕ್ಕನ ಮಗಳು ಇಂಗ್ಲೀಷ್‌ನಲ್ಲಿ ಎಂ.ಎ. ಮಾಡಲು ಅವರು ಪ್ರೋತ್ಸಾ

ಓಸಿದರು. ಅವರೇ ದೆಹಲಿಯಲ್ಲಿ ಇಂಗ್ಲಿಷ್ ಪ್ರೊಫೆಸರ್ ಆಗಿದ್ದ ಡಾ॥ ಶಾಂತಾ ಕಡಾಂಬಿ. ಡಿ.ಎಲ್.ಎನ್. ಕೊಟ್ಟ ಪ್ರೋತ್ಸಾಹದಿಂದಾಗಿ ಅವರು ಫುಲ್‌ಬ್ರೈಟ್ ಸ್ಕಾಲರ್‌ಷಿಪ್ ಪಡೆದು ಅಮೇರಿಕಾಗೆ ಹೋಗಿ ಯೇಲ್ ವಿಶ್ವವಿದ್ಯಾಲಯದಲ್ಲಿ (yale university) ಪಿಹೆಚ್.ಡಿ. ಮಾಡಿ ಬಂದರು.

ಡಿ.ಎಲ್.ಎನ್. ಅವರಿಗೆ ಇನ್ನೊಂದು ಪ್ರಿಯವಾದ ವಿಷಯವೆಂದರೆ ಪ್ರವಾಸ. ಉಪನ್ಯಾಸಕ್ಕಾಗಿ ಇಲ್ಲವೆ ವಿಶ್ವವಿದ್ಯಾನಿಲಯಗಳ ಅಧ್ಯಯನ ಮಂಡಲಿ, ಪರೀಕ್ಷಾ ಮಂಡಲಿಗಳ ಸಭೆಗೆ ಪರಸ್ಥಳಗಳಿಗೆ ಹೋದಾಗ ಮಿತ್ರರ ಮನೆಗಳಲ್ಲಿ ತಂಗುತ್ತಿದ್ದರು. ಅಲ್ಲೂ, ಮಾತುಕಥೆಯಾಡುವಾಗಲೆಲ್ಲಾ, ಯಾವುದಾದರೂ ಒಂದು ಸಂಶೋಧನಾತ್ಮಕವಾದ ವಿಷಯವನ್ನು ಚರ್ಚಿಸುತ್ತಿದ್ದರೇ ಹೊರತು ಕಾಡುಹರಟೆಯಲ್ಲಿ ಕಾಲಕಳೆಯುತ್ತಿರಲಿಲ್ಲ. ಪರಸ್ಥಳಕ್ಕೆ ಹೋದಾಗ ಅಲ್ಲಿನ ಸಾಹಿತಿ ಮಿತ್ರರನ್ನು ಭೇಟಿಮಾಡಿ ಅವರೊಡನೆ ಸಾಹಿತ್ಯಕವಾದ ಚರ್ಚೆ ನಡೆಸುತ್ತಿದ್ದರು. ಡಿ.ಎಲ್.ಎನ್. ಅವರ ಆತ್ಮೀಯ ಮಿತ್ರರಲ್ಲಿ ಒಬ್ಬರಾದ ನಂ. ಶಿವರಾಮಶಾಸ್ತ್ರಿಗಳು ತಮ್ಮ ಮಿತ್ರನ ವಿದ್ವತ್ತು, ಸ್ನೇಹ ಗುಣಗಳನ್ನು ಹೀಗೆ ನೆನೆದಿರುವರು :

"ಒಮ್ಮೆ ಅವರೂ ನಾನೂ ಗೋವಿಂದ ಪೈಗಳನ್ನು ನೋಡುವುದಕ್ಕೆಂದು ಮಂಜೇಶ್ವರಕ್ಕೆ ಹೋಗಿದ್ದೆವು. ಪೈಗಳಿಗೆ ಅವರನ್ನು ನೋಡಿದಾಗ ಆದ ಆನಂದ ಅಷ್ಟಿಷ್ಟಲ್ಲ. ನಾವು ಮನೆಯಲ್ಲಿದ್ದಾಗ, ಸಮುದ್ರ ತೀರಕ್ಕೆ ಹೋದಾಗ, ಊಟಕ್ಕೆ ಕುಳಿತಾಗ, ಉದ್ದಕ್ಕೂ ಮಾತು, ಚರ್ಚೆ, ಸಂಶಯ ಪರಿಚ್ಛೇದ... ಮಾರನೆಯ ದಿನ ಅವರ ಮನೆಯಲ್ಲಿ ಒಂದು ದೇವಕಾರ್ಯ. ಆದರೂ ಗೋವಿಂದ ಪೈ ಅವರು "ಅತಿಥಿ ವಿಶೇಷ"ರಿಗಾಗಿ ನಿಯಮವನ್ನು ಸಡಿಲಿಸಿ ನಮ್ಮೊಡನೆ ಉಪಾಹಾರವನ್ನು ಸ್ವೀಕರಿಸಿ ನಮ್ಮನ್ನು ಬೀಳ್ಕೊಟ್ಟರು. ಅಲ್ಲಿಂದ ಮಂಗಳೂರಿನಲ್ಲಿ ಮುಳಿಯ ತಿಮ್ಮಪ್ಪಯ್ಯನವರನ್ನು ನೋಡುವುದಕ್ಕೆ ಹೋದಾಗ, ಅವರು ಅಸ್ವಸ್ಥರಾಗಿದ್ದರೂ ಆಚಾರ್ಯರನ್ನು ಆದರಿಸಿ ಸಾಕಷ್ಟು ವಿಷಯ ವಿನಿಮಯ ಮಾಡಿಕೊಂಡರು. ಆಮೇಲೆ ಮೂಡಬಿದರೆಯಲ್ಲಿ ಶ್ರೀ ಗೋಪಾಲ ಪೈಗಳ ಅತಿಥಿಗಳಾಗಿ ಹೋದೆವು. ಆ ಹೊತ್ತು ದುರ್ಗಾಷ್ಟಮಿ, ಜೈನರಿಗೆ "ಜೀವದಯಾಷ್ಟಮಿ". ನಮ್ಮ ಬೇರೆ ಕಾರ್ಯಕ್ರಮದ ಜೊತೆಗೆ ಆ ರಾತ್ರಿ ನರಸಿಂಹಾಚಾರ್ಯರು ಬಸದಿಯಲ್ಲಿ ಉಪನ್ಯಾಸ ಮಾಡುವಂತೆ ಏರ್ಪಾಡಾಗಿತ್ತು.

ಅಲ್ಲಿ ಈ ಬ್ರಾಹ್ಮಣ, ಜೈನಧರ್ಮದ ವಿಷಯವಾಗಿಯೂ ಆ ದಿನದ ಮಹತ್ತ್ವವನ್ನು ಕುರಿತೂ ಕೊಟ್ಟ ಉಪನ್ಯಾಸ ಜೈನಬಾಂಧವರನ್ನು ಬೆರಗುಗೊಳಿಸಿ, ಆಚಾರ್ಯರ ವಿಷಯದಲ್ಲಿ ಎಲ್ಲರಿಗೂ ಪೂಜ್ಯಭಾವನೆಯನ್ನು ಹುಟ್ಟಿಸಿತು.”

ಬೇರೆಯವರ ಶೋಧನೆಯನ್ನು ತಮ್ಮದೆಂದು ಹೇಳಿಕೊಳ್ಳುವ ಸಂಕುಚಿತ ಮನಸ್ಸು ಡಿ.ಎಲ್.ಎನ್. ಅವರದ್ದಲ್ಲ. ಅವರು ಯಾವತ್ತೂ ಉದಾರ ಮನಸ್ಸಿನವರು. ಇದಕ್ಕೆ ನಿದರ್ಶನವಾಗಿ ಖ್ಯಾತ ಶಾಸನತಜ್ಞರಾದ ಎನ್. ಲಕ್ಷ್ಮೀನಾರಾಯಣರಾವ್ ಉಲ್ಲೇಖಿಸುವ ಈ ಘಟನೆಯನ್ನು* ನೋಡಬಹುದು : ೧೯೫೨ರಲ್ಲಿ ಇವರು ನನ್ನ ಆಹ್ವಾನವನ್ನು ಮನ್ನಿಸಿ ನೀಲಗಿರಿಗೆ ಬಂದು ನಮ್ಮ ಮನೆಯಲ್ಲಿ ಐದು ಆರು ದಿನಗಳಿದ್ದರು. ಈ ಸಮಯದಲ್ಲಿ ಆಗತಾನೇ ನಾನು ಪಡಿಯಚ್ಚು ಮಾಡಿಕೊಂಡು ಬಂದಿದ್ದ ಹತ್ತನೆಯ ಶತಮಾನದ ಒಂದು ಕನ್ನಡ ಶಾಸನವನ್ನು ಪರೀಕ್ಷಿಸುತ್ತಿದ್ದೆ. ಅದರ ಪಾಠವನ್ನು ಅವರ ಕೈಗೆ ಕೊಟ್ಟು ಅದರಲ್ಲಿ ಉತ್ಸಾಹವೆಂಬ ಛಂದಸ್ಸಿನಲ್ಲಿ ರಚಿತವಾದ ಪದ್ಯವೊಂದನ್ನು ಅವರಿಗೆ ತೋರಿಸಿ, ಈ ಛಂದಸ್ಸಿನ ವಿಷಯದಲ್ಲಿ ಅವರಿಗೆ ಗೊತ್ತಿರುವ ಅಂಶಗಳನ್ನೆಲ್ಲಾ ನನಗೆ ತಿಳಿಸಬೇಕೆಂದು ಕೇಳಿಕೊಂಡೆ. ಆಗ ಅವರು ಸಂಪೂರ್ಣವಾಗಿ ಶಾಸನ ಪಾಠವನ್ನು ಪರಿಶೀಲಿಸಿ ಇದು ಅನೇಕ ದೃಷ್ಟಿಗಳಿಂದ ಬಹು ಮಹತ್ವವಾದ ಶಾಸನವೆಂದೂ ಆದಷ್ಟು ಬೇಗ ಅದನ್ನು ಪ್ರಕಟಿಸಬೇಕೆಂದೂ ಹೇಳಿದರು. ಈ ಕೆಲಸವನ್ನು ಅವರೇ ಒಪ್ಪಿಕೊಂಡರೆ ಬಹಳ ಚೆನ್ನಾಗಿರುವುದೆಂದು ನಾನು ಸೂಚಿಸಿದೆ. ಅದಕ್ಕೆ ಅವರು ಸಮ್ಮತಿಯನ್ನು ಕೊಟ್ಟರೂ ಆ ಶಾಸನದ ಮೇಲಿನ ಲೇಖನವು ನಮ್ಮಿಬ್ಬರ ಹೆಸರಿನಲ್ಲಿ ಇರಬೇಕೆಂದು ಅಭಿಪ್ರಾಯಪಟ್ಟರು. ಹಾಗಾದರೆ ಅವರ ಹೆಸರೇ ಮೊದಲನೆಯದಾಗಿರಬೇಕೆಂದು ಸಲಹೆಕೊಟ್ಟೆ. ಆದರೆ ಇದಕ್ಕೆ ಅವರು ಒಪ್ಪದೆ ನನ್ನ ಹೆಸರೇ ಮೊದಲು ಇರಬೇಕೆಂದು ಒತ್ತಾಯಪಡಿಸಿದರು. ನನ್ನ ಮೇಲೆ ಅವರಿಗಿದ್ದ ಪ್ರೀತಿ ಗೌರವಗಳಿಗೆ ಇದೇ ಒಂದು ನಿದರ್ಶನ. ಎಪಿಗ್ರಾಫಿಕಾ ಇಂಡಿಕಾ (ಸಂಪುಟ xxix–ಪುಟಗಳು 203–209)ದಲ್ಲಿ ಪ್ರಕಟಿತವಾಗಿರುವ ಈ ಲೇಖನದ ಟೀಕೆಯು ಅವರ ಅಸಾಮಾನ್ಯ ಪಾಂಡಿತ್ಯವನ್ನು ವ್ಯಕ್ತಪಡಿಸುತ್ತದೆ. ನರಸಿಂಹಾಚಾರ್ಯರಿಗೆ

* ‘ಕನ್ನಡ ನುಡಿ’ ಸಂಪುಟ ೩೪ ಸಂಚಿಕೆ ೧೫–೧೬, ಪು.೩

ಇದ್ದಷ್ಟು ಶಾಸನ ಪರಿಚಯ ಮತ್ತಾವ ಕನ್ನಡ ವಿದ್ವಾಂಸರಿಗೂ ಇಲ್ಲವೆಂದೇ ನನ್ನ ಖಚಿತವಾದ ಅಭಿಪ್ರಾಯ."

ಡಿ.ಎಲ್.ಎನ್. ಅವರಿಗೆ ಅತ್ಯಂತ ಪ್ರಿಯರಾದವರು ತೀ.ನಂ.ಶ್ರೀ., ನಂ.ಶಿವರಾಮಶಾಸ್ತ್ರಿ, ಕ.ವೆಂ. ರಾಘವಾಚಾರ್, ಟಿ.ಪಿ. ಕೃಷ್ಣಾಚಾರ್, ಕೆ. ವೆಂಕಟರಾಮಪ್ಪ ಹಾಗೂ ಕುವೆಂಪು. ಅವರ ಮಿತ್ರವರ್ಗದಲ್ಲಿ ವಿ. ರಾಘವನ್. ಎನ್. ಅನಂತರಂಗಾಚಾರ್, ಪುತಿನ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಸ. ಸ. ಮಾಳವಾಡ, ಡಿ. ಕೆ. ಭೀಮಸೇನರಾವ್, ಮರಿಯಪ್ಪಭಟ್, ಎಂ.ಆರ್. ಶ್ರೀನಿವಾಸಮೂರ್ತಿ, ಬಿ. ಶಿವಮೂರ್ತಿಶಾಸ್ತ್ರಿ, ಎ.ಎನ್. ಮೂರ್ತಿರಾವ್, ಆರ್ ಎಲ್. ನರಸಿಂಹಯ್ಯ, ಡಿ.ವಿ.ಕೆ. ಮೂರ್ತಿ, ಕೂಡಲಿ ಚಿದಂಬರಂ–ಇವರೇ ಮೊದಲಾದವರು ಸೇರುವರು. ಅವರ ಶಿಷ್ಯವರ್ಗದಲ್ಲಿ ತುಂಬ ಪ್ರಿಯರಾದವರೆಂದರೆ ಎಸ್. ವಿ. ಪರಮೇಶ್ವರಭಟ್ಟ, ದೇಜಗೌ, ವರದರಾಜಾರಾವ್, ಎಚ್. ಎಂ. ಶಂಕರನಾರಾಯಣರಾವ್, ಎಂ. ಚಿದಾನಂದಮೂರ್ತಿ, ಎಚ್. ಎಸ್. ಬಿಳಿಗಿರಿ, ಎನ್. ಬಸವಾರಾಧ್ಯ, ಜಿ.ಜಿ. ಮಂಜುನಾಥ್ ಮೊದಲಾದವರು. ತಮ್ಮ ಬಂಧುಗಳಲ್ಲಿ ಬಹಳವಾಗಿ ಇಷ್ಟಪಡುತ್ತಿದ್ದುದು ತಮ್ಮ ಪತ್ನಿಯ ಸಹೋದರ ಡಾ॥ ಎಸ್. ಟಿ. ಪಾರ್ಥಸಾರಥಿಯವರನ್ನು.

ಡಿ. ಎಲ್. ಎನ್. ಅವರ ಪತ್ರವ್ಯವಹಾರ ಬಹಳ ಅಚ್ಚುಕಟ್ಟಿನದು, ಯಾರೇ ಪತ್ರ ಬರೆಯಲಿ ಕೂಡಲೇ ಉತ್ತರಿಸುತ್ತಿದ್ದರು. ಬೇರೆಯವರಿಂದ ಬಂದ ಪತ್ರಗಳನ್ನು ಅವರು ರಕ್ಷಿಸಿಟ್ಟಿದ್ದರೆ ಬಹಳ ಉಪಕಾರವಾಗುತ್ತಿತ್ತು. ಅವರು ತಮಗೆ ಪ್ರಿಯವೆನ್ನಿಸಿದ ಮೂರು ನಾಲ್ಕು ಪತ್ರಗಳನ್ನು ಜೋಪಾನ ಮಾಡಿದ್ದರು–ಅವುಗಳಲ್ಲಿ ಪ್ರೊ॥ ಎ.ಆರ್. ಕೃಷ್ಣಶಾಸ್ತ್ರಿ, ಎಚ್.ಎಸ್. ಬಿಳಿಗಿರಿ ಹಾಗೂ ಎಂ. ಚಿದಾನಂದಮೂರ್ತಿ–ಇವರು ಬರೆದವುಗಳು ಮುಖ್ಯವಾದವು. ಪ್ರೊ॥ ಎ. ಆರ್. ಕೃಷ್ಣಶಾಸ್ತ್ರಿಗಳು ಡಿ. ಎಲ್. ಎನ್. ಅವರಿಗೆ ಕೆಲಕಾಲ ಗುರುಗಳಾಗಿದ್ದವರು. ಅವರು 22–10–1963ರಲ್ಲಿ ಡಿ. ಎಲ್. ಎನ್. ಅವರಿಗೆ ಬರೆದ ಪತ್ರ :

My dear Narasimhachar,

Your kind letter dated the 19th instant. My health is going from bad to worse. I am getting weaken

weaken every day, Doctors are unable to diognose my complaint.

I have read with great pleasure and profit yours editions of Virata Parva, Pamparamayana Sangraha, Siddaramapurana, Vaddaradhana, Sabdamani darpana and Sukumara charita learned introductions Prefixed to them, and articles contributed to Souveneers and Presentation Volumes. I am Particularly impressed by the articles that have appeared from time to time in the Prabuddha Karnataka such as those on 'Megu' 'Pul' 'Eeril'. They show in addition to a knowledge of Sanskrit, Prakrit and Various Dravidian languages, Profound scholarship and reasearch ability of the first order. I am sure your forthcoming book on Textual criticism will be a masterpiece in the line. I eagarly look forward to its publication. With kind regards.

Yours Sincerely,
A. R. Krishnasastri

P.S. you notice that owing to extreeme nervous weakness, I am not able to even write properly.

ARK

ಎಚ್.ಎಸ್. ಬಿಳಿಗಿರಿಯವರು ಸುಪ್ರಸಿದ್ಧ ಭಾಷಾಶಾಸ್ತ್ರಜ್ಞರು. ಅವರು ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಭಾಷಾಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಅವರು ಡಿ.ಎಲ್.ಎನ್. ಅವರಿಗೆ 28.6.67 ರಂದು ಬರೆದ ಪತ್ರ:

ಪೂಜ್ಯ ಗುರುಗಳಾದ ಶ್ರೀಮಾನ್ ಡಿ.ಎಲ್. ನರಸಿಂಹಾಚಾರ್ಯರಿಗೆ ಬಿಳಿಗಿರಿಯು ಮಾಡುವ ನಮಸ್ಕಾರಗಳು.

ನಾನು ಮೈಸೂರಿನಲ್ಲಿ ತಮ್ಮನ್ನು ಕಾಣಲು ಬಂದಿದ್ದಾಗ, ತಮ್ಮಿಂದ ಸಂಪಾದಿತವಾದ 'ಶಬ್ದಮಣಿದರ್ಪಣ'ದ ಮೇಲೆ ಬಂದ ಟೀಕೆಗಳನ್ನು ಸಂಗ್ರಹಿಸಿ ಕಳುಹಿಸುವುದಾಗಿ ಹೇಳಿದ್ದೆ. ಟೀಕಾಕಾರರು ಮಾಡಿದ ಆಕ್ಷೇಪಣೆಗಳೆಲ್ಲವನ್ನೂ

ಓದಿ, ಹಿಂದಿನ ಸಂಪಾದನೆಗಳನ್ನು ನೋಡಿ ಎಲ್ಲವನ್ನೂ ಸಂಗ್ರಹವಾಗಿ ಬರೆದಿಡಲು ಇಷ್ಟು ದಿನ ಬೇಕಾಯಿತು. ಟೀಕಾಕಾರರು ತೋರಿಸಿರುವ ದೋಷಗಳೆಲ್ಲಾ ನನ್ನ ಅಭಿಪ್ರಾಯದಲ್ಲಿ ಅಲ್ಪವಾದವುಗಳು. ಆದರೆ ಅವರು ಉಪಯೋಗಿಸಿರುವ ಕಟುವಾಕ್ಯಗಳು ಮಾತ್ರ ದೋಷಗಳ ಅಲ್ಪತೆಗೆ ಹೊಂದಲಾರವು. ಅವರು ಮಾಡಿರುವ ಟೀಕೆಗಳನ್ನೆಲ್ಲಾ ಸೂತ್ರ, ವೃತ್ತಿ, ಪ್ರಯೋಗ, ಇತರ, ಅಚ್ಚಿನ ದೋಷಗಳು ಎಂದು ಐದು ತಲೆಬರಹಗಳಲ್ಲಿ ಕೊಟ್ಟಿದ್ದೇನೆ. ಅವರ ಲೇಖನಗಳ ಮಾಲೆ ಇನ್ನೂ ಮುಗಿದಿಲ್ಲ. ಕೇವಲ ನಾಮಪ್ರಕರಣದ ವರೆಗೆ ಬಂದಿದ್ದಾರೆ. ಆದರೆ ಈಗ ಬಂದಿರುವಷ್ಟರ ಆಧಾರದ ಮೇಲೆ, ಮುಂದಿನವುಗಳನ್ನು ತಿದ್ದಿಕೊಳ್ಳಬಹುದು.

ಕಳೆದ ಒಂದು ವಾರದಿಂದ ಈ ಕೆಲಸ ಮಾಡಿ, ನನ್ನ ಮನಸ್ಸಿನಲ್ಲಿ ಒಂದು ಆಸೆ ತಲೆದೋರಿದೆ. 'ಶಬ್ದಮಣಿದರ್ಪಣ'ದ ವ್ಯಾಖ್ಯಾನವೊಂದನ್ನು ಹೊಸಗನ್ನಡದಲ್ಲಿ ಬರೆಯಬೇಕೆಂದೆನ್ನಿಸಿದೆ. ಸೂತ್ರ, ಪ್ರತಿಪದಾರ್ಥ (ಅದರಲ್ಲೇ ಪದಚ್ಛೇದ ಅನ್ವಯಗಳಿರುತ್ತವೆ) ಮತ್ತು ಹೊಸಗನ್ನಡ ವೃತ್ತಿ, ಪ್ರಯೋಗ, ವ್ಯಾಖ್ಯಾನ–ಹೀಗೆ ಯೋಚಿಸಿದ್ದೇನೆ. ವ್ಯಾಖ್ಯಾನದಲ್ಲಿ ಅನೇಕ ವಿಷಯಗಳನ್ನು ಸೇರಿಸಬೇಕೆಂದಿದ್ದೇನೆ. ಪಾರಿಭಾಷಿಕ ಪದಗಳ ವಿವರಣೆ, ಸಂಸ್ಕೃತ ವ್ಯಾಕರಣದ ಪ್ರಕ್ರಿಯೆಗಳು, ಕೇಶಿರಾಜನ ದೋಷಗಳು, ಆಧುನಿಕ ಭಾಷಾವಿಜ್ಞಾನದ ದೃಷ್ಟಿಯಿಂದ ವಿಶ್ಲೇಷಣೆ ಮುಂತಾದುವುಗಳನ್ನು ಸೇರಿಸಬೇಕೆಂದಿದ್ದೇನೆ. ಪ್ರತಿಯೊಂದು ವಿಷಯ ಪೂರ್ಣವಾದಾಗಲೂ ಅದರ ಸಾರಾಂಶ, ನಾಗವರ್ಮ ಭಟ್ಟಾಕಲಂಕರು ಹೇಗೆ ಬರೆದಿದ್ದಾರೆ ಎಂಬುದರ ವಿವರ ಕೊಡಬೇಕೆಂದಿದ್ದೇನೆ. ಅಲ್ಲದೆ, ಪ್ರತಿ ಪ್ರಕರಣದ ಮೊದಲು, ಆ ಪ್ರಕರಣದಲ್ಲಿ ಹೇಳಿರುವ ವಿಷಯಗಳು (ಸೂತ್ರಗಳ analysis), ಕಡೆಯಲ್ಲಿ ಬೇಕಿದ್ದರೆ ಸಾರಾಂಶ. ಇಷ್ಟೆಲ್ಲವನ್ನೂ ನಾನು ಮಾಡಲು ನನಗೆ ಅರ್ಹತೆಯಿದೆಯೋ ಎಂಬ ಅಳುಕು ಇದೆ. ತಮ್ಮ ಆಶೀರ್ವಾದಗಳನ್ನು ತಿಳಿಸಿದರೆ ನಾನು ಮುಂದುವರಿಯುತ್ತೇನೆ.

ಇಲ್ಲಿ ನಾನು ಆರೋಗ್ಯ. ತಾವು ಆರೋಗ್ಯವೆಂದು ನಂಬಿದ್ದೇನೆ.

ಇಂತೀ ನಮಸ್ಕಾರಗಳು,
ಬಿಳಿಗಿರಿ

ಎಂ. ಚಿದಾನಂದಮೂರ್ತಿಯವರು ಪ್ರತಿಭಾವಂತ ಸಂಶೋಧಕರು, ಡಿ.ಎಲ್.ಎನ್. ಅವರ ಪ್ರೀತಿಯ ಶಿಷ್ಯರು. ಅವರು ಚಿಕಾಗೊ ವಿಶ್ವವಿದ್ಯಾಲಯದ 'South Asia Language and Area Centre' ಶಾಖೆಯಲ್ಲಿ ಕನ್ನಡ ಬಾರದವರಿಗಾಗಿ – ವಿದೇಶೀಯರಿಗಾಗಿ – ಕನ್ನಡ ಕಲಿಸಲು ಚಿಕಾಗೋಕ್ಕೆ ಹೋಗಿದ್ದರು. ಅಲ್ಲಿ ಅವರು ಇದ್ದ ಅವಧಿಯಲ್ಲಿ, ಅಕ್ಟೋಬರ್ 24, 1967ರಲ್ಲಿ ಡಿ.ಎಲ್.ಎನ್. ಅವರಿಗೆ ಪತ್ರವೊಂದನ್ನು ಬರೆದಿದ್ದರು. ಪತ್ರದಲ್ಲಿ ಪರಕೀಯರಿಗೆ ಕನ್ನಡ ಕಲಿಸುವುದು ತಮಗೆ ಹೊಸ ಅನುಭವವಾಗಿರುವುದನ್ನು ಅವರು ಪ್ರಸ್ತಾಪಿಸಿರುವರು; ಅಮೆರಿಕಾದಲ್ಲಿ Phonemic Theory ಬಿದ್ದುಹೋಗಿದ್ದು Phoneme ಎಂಬ ಮಾತನ್ನೇ ಬಳಸುವುದಿಲ್ಲವೆಂದಿರುವರು; ಅಲ್ಲಿ ಈಗ Distinctive features theory ಬಳಕೆಗೆ ಬಂದಿದೆ ಎಂದಿರುವರು. ಚಿಕಾಗೋವಿನ ಹವಾಮಾನ, ತಾವು ನೋಡಿದ, ಮೆಚ್ಚಿದ Museum of Natural History ಯಲ್ಲಿ ಲ ಈ ಆಕಾರದ ಒಂದು ಚೈನೀಸ್ ಶಾಸನವನ್ನು ನೋಡಿದ್ದಾಗಿಯೂ ಈ ಶಾಸನದ ಕಲ್ಲು ಆಮೆಯ ಮೇಲೆ ನಿಂತಿರುವುದಾಗಿಯೂ ಹೇಳಿ, ಆಮೆ ಚೀನಾದಲ್ಲಿ ಬಾಳಿಕೆಗೆ, ಶಾಶ್ವತತೆಗೆ, ಭದ್ರತೆಗೆ ಸಂಕೇತವೆಂದೂ, ಅದನ್ನು ನೋಡಿದಾಗ ತಮಗೆ 'ಆಚಂದ್ರಾರ್ಕತಾರಂಬರಂ' ಜ್ಞಾಪಕಕ್ಕೆ ಬಂದಿತೆಂದೂ ಪತ್ರದಲ್ಲಿ ತಿಳಿಸುವರು.

ಈ ಮೂರು ಪತ್ರಗಳಲ್ಲಿ ಮೊದಲನೆಯದು ಡಿ.ಎಲ್.ಎನ್. ಅವರ ಗುರುಗಳದ್ದು. ಅದು ಅವರು ತಮ್ಮ ಕೊನೆಗಾಲದಲ್ಲಿ ಬರೆದದ್ದು. ಉಳಿದ ಎರಡು ಪತ್ರಗಳು ಡಿ.ಎಲ್.ಎನ್. ಅವರ ಅಚ್ಚುಮೆಚ್ಚಿನ ಶಿಷ್ಯರದ್ದು. ಈ ಮೂರೂ ಪತ್ರಗಳನ್ನೂ ಜೋಪಾನ ಮಾಡಿದ್ದು ಅವರ ಮೇಲಿನ ಪ್ರೀತಿಯ ಸಲುವಾಗಿ.

ಡಿ.ಎಲ್.ಎನ್. ಅವರಿಗೆ ಅತ್ಯಂತ ಪ್ರಿಯವಾದುದು ವ್ಯಾಸಂಗ. ಅದು ಅವರಿಗೆ ಬದುಕಿನಲ್ಲಿ ಆನಂದವನ್ನು ದೊರಕಿಸಿಕೊಡಬಲ್ಲ ಸಾಧನ. ಅವರೇ ತಮ್ಮ ವ್ಯಾಸಂಗದ ಹವ್ಯಾಸದ ಬಗೆಗೆ ಒಂದೆಡೆ ಹೀಗೆ ಹೇಳಿರುವರು : "ನನ್ನ ವ್ಯಾಸಂಗದ ಹವ್ಯಾಸವು ಒಂದು ವಿಹಾರ. ಕೈಗೆ ಸಿಕ್ಕಿದ ಪುಸ್ತಕವನ್ನು ತತ್ಕಾಲದ ಕುತೂಹಲದಿಂದ ಪ್ರೇರಿತನಾಗಿ ಓದುತ್ತ, ಓದುವಾಗ ಅದರ ಸವಿಯೊಳಗೆ ಮುಳುಗುತ್ತ ಆಮೇಲೆ ಮರೆತುಬಿಡುವುದೆಂದರೆ ನನಗೆ ಬಲು ಪ್ರಿಯ

ವಾದದ್ದು. ಓದಿದ್ದನ್ನೆಲ್ಲಾ ಮರೆಯದ ಜಿಗುಟಾದ ಸ್ಮರಣಶಕ್ತಿ ನನಗಿಲ್ಲ. ಅದು ಅವಶ್ಯಕವೂ ಇಲ್ಲ. ಅದರಿಂದ ಮನೋಬುದ್ಧಿಗಳಿಗೆ ಭಾರವಾಗಿ ಬಳಲಿಕೆಯುಂಟಾಗುತ್ತದೆ. ಓದಿದ ಹಲವು ವಿಷಯಗಳಲ್ಲಿ ಕೆಲವಾದರೂ ನನ್ನ ಸುಪ್ತ ಜೀವನದೊಳಹೊಕ್ಕು ಅಲ್ಲಿ ನಿಕ್ಷಿಪ್ತವಾಗಿದ್ದು ಅನಿರೀಕ್ಷಿತವಾಗಿ ನೀರ್ಗುಳ್ಳೆಯಂತೆ ಮೇಲಕ್ಕೆ ತೇಲಿ ಬರುವುದಷ್ಟೇ ನನಗೆ ಸಾಕು. ಇಷ್ಟು ಮಟ್ಟಿನ ಸ್ಮರಣದಿಂದಲೇ ಮಿಗಿಲಾದ ಹರ್ಷ ಮೂಡುತ್ತವೆ. ಹಚ್ಚನೆಯ ಹುಲ್ಲುಗಾವಲ ಹರವಿನಲ್ಲಿ ಸ್ವೇಚ್ಛೆಯಾಗಿ ತಿರುಗಾಡುತ್ತ ಸೊಂಪಾಗಿ ಕಾಣುವೆಡೆಗಳಲ್ಲಿ ತಂಗಿ ಒಡಿಹುಲ್ಲನ್ನು ಕಬಳಿಸುವ ಹಸುವಿನಂತೆ ಇದೆ ನನ್ನ ವ್ಯಾಸಂಗ ಹವ್ಯಾಸ. ನನ್ನ ಕೊಠಡಿಯ ಆರಾಮ ಕುರ್ಚಿಯ ಮೇಲೆ ಮಲಗಿ ಕೈಗೆ ಎಟುಕಿದ ಪುಸ್ತಕವನ್ನು ತೆರೆದು ಓದುತ್ತ ಇಹದ ತಾಪತ್ರಯ ದೂರ ಸರಿದಂತೆಲ್ಲ ತನ್ಮಯತೆಯ ಮಡುವಿನಲ್ಲಿ ಮೆಲ್ಲಮೆಲ್ಲನೆ ಮುಳುಗಿಬಿಡುತ್ತೇನೆ. ಪಕ್ಕದ ಮೇಜಿನ ಮೇಲೆ ಇರುವ ಗಂಧದ ಕಡ್ಡಿಗಳು ಉಗುಳುವ ಹೊಗೆ ಸುರುಳಿಸುರುಳಿಯಾಗಿ ಅಂಕುಡೊಂಕಾಗಿ ಮೇಲೇರಿ ಹರಡಿ ಕೊಠಡಿಯ ಪರಿಮಿತಾಕಾಶದಲ್ಲಿ ಕರಗಿ ಹೋಗುವಂತೆ ನಾನೂ ಬಾರಿಬಾರಿಗೆ ಕರಗಿಬಿಡಬೇಕೆಂಬ ಹಂಬಲ ನನಗೆ ಹಿರಿದಾಗಿದೆ."

ಎಂತಹ ಭಾವಪೂರ್ಣವಾದ ಬರವಣಿಗೆ ಅವರದು! ಅವರ ಸರಳವಾದ, ಸ್ಫುಟವಾದ, ಆದರೆ ಅಷ್ಟೇ ಬಿಗಿಯಾದ ಬರವಣಿಗೆಯಲ್ಲಿ ಅವರ ವ್ಯಕ್ತಿತ್ವ ಅರಳಿರುವುದನ್ನು ನಾವು ಕಾಣಬಹುದು. ಅವರ ಆಳವಾದ ವ್ಯಾಸಂಗ, ಬಹುಶ್ರುತತ್ವ, ಪಾಂಡಿತ್ಯ ಅವರ ಮಾತುಗಳಲ್ಲಿ ಭಾರವಾಗಿ ಮಲಗಿಲ್ಲ, ಅವರ ಬದಲಿಗೆ ಸುಲಲಿತವಾಗಿ ಹರಿದಿದೆ. ಅವರ ಮನೋಧರ್ಮ ಅವರ ಮಾತುಗಳಲ್ಲಿ, ಅಂದರೆ, ಅವರ ಬರವಣಿಗೆಯಲ್ಲಿ ನಿಚ್ಚಳವಾಗಿ ಪಡಿಮೂಡಿದೆ. ಸಂಶೋಧಕನ ಭಾಷೆ ಗಂಭೀರವಾಗಿರಬೇಕೆ, ಬೇಡವೆ? ಎಂಬ ಚರ್ಚೆಯಿದೆ. ಆಲಂಕಾರಿಕ ಭಾಷೆ ಸಂಶೋಧನೆಯ ವಿವರಣೆಗೆ ಅನಗತ್ಯ. ಅದು ಸರಳವಾಗಿದ್ದಷ್ಟೂ ವಿಷಯದ ಮನವರಿಕೆಗೆ ಸುಲಭ ಸಾಧ್ಯವಾಗುತ್ತದೆ. ಡಿ.ಎಲ್.ಎನ್. ಅವರಲ್ಲಿ ಪಾಂಡಿತ್ಯ ವಿಶೇಷವಾಗಿದ್ದರೂ ಆ ಪಾಂಡಿತ್ಯದ ಪ್ರದರ್ಶನ ಭಾಷೆಯಲ್ಲಿ ವ್ಯಕ್ತಗೊಳ್ಳುವುದು ಅವರಿಗೆ ಬೇಡವಾದದ್ದು. ಆದ್ದರಿಂದಲೇ ಅವರ ಸಂಶೋಧನೆಗಳು ಓದುಗರಿಗೆ ಭಾರವಾಗುವುದಿಲ್ಲ.

ಡಿ.ಎಲ್.ಎನ್. ಅವರ ನಿರ್ಲಿಪ್ತ ಮನೋಭಾವ ಆಶ್ಚರ್ಯಕರವಾದುದು. ಎಂ. ಯಾಮುನಾಚಾರ್ಯರು ಹೇಳುವಂತೆ "ತನ್ನ ಅಧಿಕಾರದ ಅಭ್ಯುದಯ ವನ್ನು ಕುರಿತು ಒಂದು ಸಲವಾದರೂ ತನಗೆ ಸಲ್ಲಬೇಕಾದದ್ದು ಸಲ್ಲಲಿಲ್ಲ ಅನ್ನುವ ಉದ್ಗಾರವನ್ನಾಗಲೀ ಅಥವಾ ತನ್ನ ಮುಂದಿನ 'ಪ್ರಾಸ್ಪೆಕ್ಟ್' ಕುರಿತಾಗಲಿ ಪ್ರಸ್ತಾಪಮಾಡಿದ್ದನ್ನು ನಾನು ಕೇಳಿಲ್ಲ. ಅದರ ವಿಷಯದಲ್ಲಿ ಮೊದಲಿನಿಂದ ಕೊನೆಯುವರೆಗೂ ಅನಾಸಕ್ತರಾಗಿಯೇ ಉಳಿದಿದ್ದಾರೆ. ಇದರ ಚಿಂತೆಯನ್ನು ಅವರೆಂದೂ ಮಾಡಿದ ಹಾಗೆ ತೋರುವುದಿಲ್ಲ. ಇಂದಿನ ವಾತಾ ವರಣದಲ್ಲಿ ಹೀಗಿರುವವರು ವಿರಳ."[1]

ಡಿ.ಎಲ್.ಎನ್. ಅಪ್ಪಟ ಪ್ರಾಮಾಣಿಕರು. ಅವರ ಪ್ರಾಮಾಣಿಕತೆಗೆ ಒಂದು ನಿದರ್ಶನ: ಡಿ.ಎಲ್.ಎನ್. ಅವರ ಮಗಳು ರಾಜಲಕ್ಷ್ಮಿಯವರು ಕನ್ನಡ ಎಂ.ಎ. ತರಗತಿಗೆ ಅರ್ಜಿ ಹಾಕುತ್ತೇನೆ ಎಂದಾಗ ತಂದೆಯಾದವರು ಬೇಡವೆಂದರು. "ನಿನ್ನಲ್ಲಿ ಪ್ರತಿಭೆಯಿದೆ, ಸ್ವಪ್ರತಿಭೆಯಿಂದ ನೀನು ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣಳಾದಾಗ್ಯೂ ತಂದೆಯಿಂದಾಗಿ ಅದು ಪ್ರಾಪ್ತವಾಯಿತು ಎಂದು ಜನ ಹೇಳುವರು. ಇದು ನಿನ್ನ ಪ್ರತಿಭೆಗೆ ಅವಮರ್ಯಾದೆ; ನಾನು ಎಷ್ಟೇ ಪ್ರಾಮಾಣಿಕತೆಯಿಂದಿದ್ದರೂ ಜನ ನನ್ನನ್ನು ತಪ್ಪು ತಿಳಿಯುವರು – ಮಗಳಿಗೆ ಪ್ರಥಮ ದರ್ಜೆ ಕೊಟ್ಟ ಎಂದು ಆಪಾದನೆ ಮಾಡುವರು. ಈ ಸ್ಥಿತಿಯಲ್ಲಿ ನೀನು ಕನ್ನಡ ಓದುವುದು ಬೇಡ" – ಎಂದರು.*

ಡಿ.ಎಲ್.ಎನ್. ಅವರಿಗೆ ಬದುಕಿದ್ದಾಗ ದೊರೆಯಬೇಕಾಗಿದ್ದ ಗೌರವ ಸಲ್ಲಲಿಲ್ಲ. ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಅವರನ್ನು ಗೌರವಿಸಿತು. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ ದೊರೆಯಿತು. ಮೈಸೂರು ವಿಶ್ವವಿದ್ಯಾನಿಲಯ ಅವರಿಗೆ ಗೌರವ ಡಿ.ಲಿಟ್ ಪದವಿ ನೀಡಿ ಗೌರವಿಸಿತು. ಇವುಗಳ ಹೊರತಾಗಿ ಅವರಿಗೆ ಬೇರಾವ ಗೌರವವೂ ದೊರೆಯಲಿಲ್ಲ. ಅವನ್ನು ಅವರು ಅಪೇಕ್ಷಿಸಿಯೂ ಇರಲಿಲ್ಲ. ಆದರೂ, ಈ ಪ್ರಶಸ್ತಿ, ಬಹುಮಾನ, ಸನ್ಮಾನಗಳು ತನ್ನನ್ನು ಸಾಹಿತ್ಯ ಸೇವೆಗೆ ಮುಡಿಪಿಟ್ಟ ಜೀವಕ್ಕೆ ಶಾಂತಿ ಸಮಾ ಧಾನಗಳನ್ನು ತರುತ್ತವೆನ್ನುವುದರಲ್ಲಿ ಸತ್ಯಾಂಶವಿದೆ. ಡಿ.ಎಲ್.ಎನ್. ಅವರ

---

1. ಜ್ಞಾನೋಪಾಸಕ, ಪು. ೩೫

* ಈ ವಿಷಯ ನನಗೆ ತಿಳಿಸಿದವರು ಶ್ರೀಮತಿ ರಾಜಲಕ್ಷ್ಮಿಯವರು.

ಆತ್ಮೀಯರಲ್ಲಿ ಒಬ್ಬರಾದ ಸಂ. ಶಿವರಾಮಶಾಸ್ತ್ರಿಗಳು ಹೀಗೆಂದಿರುವರು.[1] "ನಮ್ಮ ತಲೆಮಾರಿನ ಅನೇಕರಂತೆ ಎಷ್ಟೋ ವೇಳೆ ಅವರು ಆಶಾಭಂಗ, ನಿರುತ್ಸಾಹ, ನಿರಾಶೆ ಇವಕ್ಕೆ ತುತ್ತಾಗಿದ್ದಾರೆ. ನನಗೆ ತಿಳಿದಮಟ್ಟಿಗೆ ಅವರ ಉದ್ಯೋಗ ಜೀವನದಲ್ಲಿ ಅವರಿಗೆ ಬಂದ ಬಡ್ತಿಗಳೆಲ್ಲವೂ ಅಡಚಣೆಯಿಲ್ಲದೆ, ಹೊಡೆದಾಟವಿಲ್ಲದೆ, ಸುಗಮವಾಗಿ ಬರಲಿಲ್ಲ. ಆದರೂ ಅವರ ಕನ್ನಡದ ನಿಷ್ಠೆ ಅಚಲ. ಆತ್ಮವಿಶ್ವಾಸ ಅಷ್ಟೇ ಅಚಲ. ಸಂಸಾರದಲ್ಲೂ ಕ್ಲೇಶಗಳನ್ನು ಅನುಭವಿಸಿ ಸ್ವಲ್ಪ ಹಣ್ಣಾದ ಅವರು ತಮ್ಮ – ಮಿತ್ರರಲ್ಲಿ – ಅವರೂ ಇವ ರಂತೆಯೇ – ಸದಾ ಸ್ನೇಹಪರರು, ಅನುಕಂಪಿಗಳು. ನಕ್ಕು ನಗಿಸತಕ್ಕವರು, ಸಹಾಯಶೀಲರು."

ಡಿ.ಎಲ್.ಎನ್. ಅವರ ಪ್ರತಿಭೆ ಅಸಾಧಾರಣವಾದುದು ; ಪಾಂಡಿತ್ಯ ಹಳೆಯ ತಲೆಮಾರಿಗೆ ಗೌರವತರುವಂಥಹದು ; ನಿರಂತರವಾದ ಅಧ್ಯಯನ ಅವರ ವ್ಯಕ್ತಿತ್ವಕ್ಕೆ ಶೋಭಾಯಮಾನವಾದುದು. ಅವರ ಸಂಪಾದಿತ ಕೃತಿ ಗಳಾದ ವಡ್ಡಾರಾಧನೆ, ಸುಕುಮಾರ ಚರಿತೆ, ಪಂಪರಾಮಾಯಣ ಸಂಗ್ರಹ, ಸಿದ್ಧರಾಮ ಚಾರಿತ್ರ ; ಕೆಲವು ಕನ್ನಡ ಅಪೂರ್ವ ಪದಗಳ ಅರ್ಥ ಮತ್ತು ನಿಷ್ಪತ್ತಿಯನ್ನು ಕುರಿತ 'ಶಬ್ದವಿಹಾರ' ; ಗ್ರಂಥಸಂಪಾದನಾ ವಿಧಾನವನ್ನು ಶಾಸ್ತ್ರೀಯವಾಗಿ ತಿಳಿಯ ಹೇಳುವ 'ಕನ್ನಡ ಗ್ರಂಥ ಸಂಪಾದನೆ' ; ವಿಕ್ರಮಾ ರ್ಜುನ ವಿಜಯದ ಟೀಕೆಯಾದ 'ಪಂಪಭಾರತ ದೀಪಿಕೆ' ; ಅವರ ಅನೇಕ ಸಂಶೋಧನ ಲೇಖನಗಳು ಕನ್ನಡಕ್ಕೆ ಅಮೂಲ್ಯ ಕೊಡಿಗೆಗಳಾಗಿವೆ. ಇವು ಅವರ ಸಾಹಿತ್ಯ ತಪಸ್ಸಿನ ಫಲಗಳು. ಕನ್ನಡಕ್ಕೆ ಗೌರವ ತರುವ ಮೌಲಿಕ ಗ್ರಂಥಗಳು. ಸೃಜನಶೀಲ ಸಾಹಿತ್ಯಕ್ಕೆ ದೊರೆಯುವ ಗೌರವ, ಪ್ರತಿಷ್ಠೆಗಳು : ಪುರಸ್ಕಾರಗಳು ಸೃಜನೇತರ ಸಾಹಿತ್ಯಕ್ಕೆ ದೊರೆಯುತ್ತಿಲ್ಲ. ಇದು ನಿಜಕ್ಕೂ ದುರದೃಷ್ಟ. ಕನಿಷ್ಠ, ಕೇಂದ್ರ ಸಾಹಿತ್ಯ ಅಕಾಡೆಮಿಯಾದರೂ ಅವರ ಸಾಹಿತ್ಯ ಸೇವೆಯನ್ನು ಗೌರವಿಸಬೇಕಾಗಿತ್ತು. ಜ್ಞಾನಪೀಠ ಪ್ರಶಸ್ತಿ ಅವರಿಗೆ ಎಂದೋ ದೊರೆಯಬೇಕಾಗಿತ್ತು. ಅದಕ್ಕೆ ಅವರು ನಿಸ್ಸಂಶಯವಾಗಿ ಅರ್ಹರು. ಅರ್ಹರನ್ನು ಸಮಾಜ ಗುರುತಿಸುತ್ತಿಲ್ಲವೆನ್ನುವುದು ನೋವಿನ ಸಂಗತಿ.

---

1. ಉಪಾಯನ, ಪು. xiv

ಸಾವು ಎರಡು ಬಾರಿ ಕದತಟ್ಟಿ ಹೋಗಿತ್ತು. ಒಮ್ಮೆ ಸಂಜೆಯ ವಾಕಿಂಗ್ ಮುಗಿಸಿಕೊಂಡು ಕೋರ್ಟ್ ಹಾಯ್ದು ಬರುತ್ತಿರುವಾಗ ನಾಗರಹಾವೊಂದು ಡಿ.ಎಲ್.ಎನ್. ಅವರನ್ನು ಕಚ್ಚಿಬಿಟ್ಟಿತು. ಮನೆಗೆ ಬರುವಷ್ಟರಲ್ಲಿ ನಡೆಯು ಲಾಗದಷ್ಟು ಕಾಲು ಬೆಂಡಾಗಿಬಿಟ್ಟಿತು. ಬದುಕುವುದು ಕಷ್ಟವೆನ್ನಿಸಿ ಮನೆ ಯವರೆಲ್ಲಾ ಗಾಬರಿಗೊಂಡರು. ಹಾವಿನ ವಿಷಕ್ಕೆ ಮಂತ್ರಚಿಕಿತ್ಸೆ ಮಾಡುವ ರುದ್ರಪ್ಪನವರನ್ನು ಕರೆದುಕೊಂಡು ಬರಲಾಯಿತು. ಇದರಲ್ಲೆಲ್ಲಾ ಡಿ.ಎಲ್.ಎನ್. ಅವರಿಗೆ ನಂಬಿಕೆಯಿರಲಿಲ್ಲ. ದೈವಕೃಪೆಯಿಂದ ಅವರು ಗಂಡಾಂತರದಿಂದ ಪಾರಾದರು. ಎರಡನೆಯ ಬಾರಿ ಸಾವು ಅವರ ಮೇಲೆ ಆಕ್ರಮಣ ಮಾಡಿತು. 1965ರ ಏಪ್ರಿಲ್ 1ನೇ ತಾರೀಖು ಡಿ.ಎಲ್.ಎಲ್, ಲಘುಹೃದಯಾಘಾತಕ್ಕೆ ಒಳಗಾದರು. ಮನೆಯವರೆಲ್ಲಾ ಗಾಬರಿಗೊಂಡು ಅವರನ್ನು ಆಸ್ಪತ್ರೆಗೆ ಸೇರಿಸಲು ಆಂಬ್ಯುಲೆನ್ಸ್‌ಗಾಗಿ ಪ್ರಯತ್ನಿಸಿದರು. ಅಂದು ಮೂರ್ಖರ ದಿನ. ಆಂಬ್ಯುಲೆನ್ಸ್ ತರಿಸುವುದೂ ಕಷ್ಟವಾಯಿತು. ಯೋಗ್ಯ ಚಿಕಿತ್ಸೆಯಿಂದಾಗಿ ಡಿ.ಎಲ್.ಎನ್. ಸಾವಿನ ಅಂಚಿನಿಂದ ಬದುಕಿಬಂದರು.

ಮೂರನೆಯ ಬಾರಿ ಸಾವು ಅವರನ್ನು ಬಿಡಲಿಲ್ಲ. ನಿವೃತ್ತಿಯ ನಂತರ ಸೋಮಾರಿಯಂತೆ ಕಾಲಕಳೆಯಲು ಡಿ.ಎಲ್.ಎನ್. ಅವರಿಗೆ ಇಷ್ಟವಿರಲಿಲ್ಲ. ಏನಾದರೂ ಕೆಲಸಮಾಡುತ್ತಿರುವುದು ಅವರ ಜಾಯಮಾನ. ಬಂಧುಗಳು–ಮಿತ್ರರು–ಶಿಷ್ಯರು ಅವರ ಅನಾರೋಗ್ಯವನ್ನು ಬಲ್ಲರು. ಹೆಚ್ಚು ಆಯಾಸ ಗೊಳ್ಳದಂತೆ ನೋಡಿಕೊಳ್ಳುತ್ತಿದ್ದರು. ಆಗಾಗ್ಗೆ ಅವರನ್ನು ಎಚ್ಚರಿಸುತ್ತಿದ್ದರು, ಆ ವೇಳೆಯಲ್ಲಿ ನಿಘಂಟು ಕೆಲಸ ಅವರಿಗೆ ಗಂಟುಬಿದ್ದಿತು. ಡಿ.ಎಲ್.ಎನ್. ಅವರ ವಿದ್ವತ್ತು ಪಾಂಡಿತ್ಯವನ್ನು ವ್ಯರ್ಥವಾಗಿಸಬಾರದೆಂದು ಆಲೋಚಿಸಿದ ಅವರ ಹಿತೈಷಿಗಳು ಅವರು ಮನೆಯಲ್ಲಿಯೇ ಇದ್ದುಕೊಂಡು ನಿಘಂಟಿನ ಕೆಲಸ ಮಾಡುವುದೆಂದು ಯೋಜಿಸಿದರು. ಅವರ ಸಹಾಯಕ್ಕೆ ಶ್ರೀ ಜಿ. ಜಿ. ಮಂಜುನಾಥನ್ ಅವರ ಸೇವೆಯನ್ನು ಮೈಸೂರು ವಿಶ್ವವಿದ್ಯಾನಿಲಯದಿಂದ ಎರವಲು ಪಡೆಯಲಾಯಿತು. ನಿಘಂಟಿನ ಕೆಲಸ ತೀವ್ರವಾಗಿ ಸಾಗಿತು. 1971ರ ಏಪ್ರಿಲ್ ತಿಂಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಲೋಕ ಭವನದಲ್ಲಿ ಸಮಾವೇಶಗೊಂಡ ಕನ್ನಡ ನಿಘಂಟು ಸಮಿತಿಯು ಎಂಟು ದಿನಗಳ ಎರಡು ಹೊತ್ತಿನ ದೀರ್ಘಾಧಿವೇಶನವನ್ನು ಹಮ್ಮಿಕೊಂಡಿತು. ಈ ಅಧಿವೇಶನಕ್ಕೆ

ಮುಂಚೆ ಒಂದು ತಿಂಗಳು ಬೆಳಿಗ್ಗೆ ಮತ್ತು ಮಧ್ಯಾಹ್ನ ಡಿ.ಎಲ್.ಎನ್. ಹಾಗೂ ಕ. ವೆಂ. ರಾಘವಾಚಾರ್‌ರವರು ಕುರಿತು ದೀರ್ಘವಾಗಿ ಚರ್ಚಿಸಿ ನಿಘಂಟಿನ ಕರಡನ್ನು ಸಿದ್ಧಪಡಿಸಿದ್ದರು. ಈ ಶ್ರಮದ ಜೊತೆಗೆ, ಆಲೋಕ ಭವನದಲ್ಲಿ ನಡೆದ ಎಂಟು ದಿನಗಳ ನಿಘಂಟಿನ ಕೆಲಸದ ಆಯಾಸವೂ ಸೇರಿದ್ದರಿಂದ ಡಿ.ಎಲ್.ಎನ್. ಅಸ್ವಸ್ಥರಾದರು. ಮೇ ಒಂದರ ಮಧ್ಯಾಹ್ನ ಅವರು ತೀವ್ರ ಹೃದಯಾಘಾತಕ್ಕೆ ಗುರಿಯಾದರು. ಒಂದು ವಾರ ಅವರು ನರಳಿದರು. ಕೊನೆಕೊನೆಗೆ ಅವರು ಮೂತ್ರಪಿಂಡ ವ್ಯಾಧಿಗೆ ತುತ್ತಾದರು. ಅವರು ಕೊನೆ ಗಳಿಗೆಯಲ್ಲಿ ಜ್ಞಾನಶೂನ್ಯರಾಗಿದ್ದಾಗಲೂ ಅವರ ಬಾಯಿಯಿಂದ ಕನ್ನಡ ನಿಘಂಟು ಮತ್ತು ಆ ನಿಘಂಟಿನ ಶಬ್ದಗಳು ಅಸ್ಪಷ್ಟವಾಗಿ ಬರುತ್ತಿದ್ದುವಂತೆ. 1971 ರ ಮೇ ಏಳರ ರಾತ್ರಿ ಅವರು ಕಣ್ಣುಮುಚ್ಚಿದರು. ಶಬ್ದಗಳ ಹುಟ್ಟು ಸಾವಿನ ಬಗೆಗೆ ಸದಾ ವಿಚಾರ ಮಾಡುತ್ತಿದ್ದ ಅವರು ತಮ್ಮ ಸಾವಿನ ಕೊನೆಯ ಗಳಿಗೆಗಳಲ್ಲೂ ಶಬ್ದಗಳ ಬಗೆಗೇ ಧ್ಯಾನಿಸುತ್ತಿದ್ದರೆಂದರೆ ಆಶ್ಚರ್ಯವಲ್ಲವೆ!

ವಂಶವೃಕ್ಷ

- ನರಸಿಂಹಾಚಾರ್ — ರಂಗನಾಯಕಮ್ಮ
  - ತಾತಾಚಾರ್
    - ನರಸಿಂಹಾಚಾರ್
      - ಕನಕಮ್ಮ
    - ರಾಘವಾಚಾರ್
      - ಎಸ್. ಆರ್. ಶಾಮಣ್ಣ
      - ಎಸ್.ಆರ್.ರಾಜಗೋಪಾಲ್
      - ಎಸ್.ಆರ್. ಪಾರ್ಥಸಾರಥಿ
    - ಕೃಷ್ಣಸ್ವಾಮಿ
      - ಎಸ್.ವೇಣುಗೋಪಾಲ್
  - ಕೃಷ್ಣಮಾಚಾರ್ — ಕೃಷ್ಣಮ್ಮ (ಲಕ್ಷ್ಮಮ್ಮ)
    - ಶಾಮೈಂಗಾರ್ — ಲಕ್ಷ್ಮಮ್ಮ
      - ರಾಘವಮ್ಮ — ಶ್ರೀನಿವಾಸರಂಗಾಚಾರ್
      - ಡಿ.ಎಲ್.ನರಸಿಂಹಾಚಾರ್ — ಮುತ್ತಮ್ಮ
        - ರಾಜಲಕ್ಷ್ಮಿ
        - ಪ್ರಭಾ
        - ಪದ್ಮಿನಿ
        - ಜಯಶ್ರೀ
        - ಮಾಧವಿ
  - ಶೇಷಾಚಾರ್ (ಅವಿವಾಹಿತರು)
  - ಕೃಷ್ಣಮಾಚಾರ್ — ಅಚ್ಚಮ್ಮ
    - ಡಿ. ನರಸಿಂಹಅಯ್ಯಂಗಾರ್ (ಮುತ್ತಣ್ಣ) — ಚೀನಮ್ಮ
      - ಡಿ.ಎಲ್.ನರಸಿಂಹ ಅಯ್ಯಂಗಾರ್(ದೊರೆ) — ಇಂದಿರಾ
      - ಡಿ. ರಾಮಕೃಷ್ಣ — ಗಾಯತ್ರಿ
    - ರಂಗಸ್ವಾಮಿ ಅಯ್ಯಂಗಾರ್ — ಚೀನಮ್ಮ

ಬೋಧನ ಕ್ರಮ

ಪ್ರೊ॥ ಡಿ.ಎಲ್.ಎನ್.ರವರ ಶಿಷ್ಯ ಸಮುದಾಯಕ್ಕೆ ತಾವು ಅವರ ಶಿಷ್ಯರೆಂದು ಹೇಳಿಕೊಳ್ಳಲು ಹೆಮ್ಮೆ; ತಮ್ಮ ಬಾಳಿನ ಹಲವು ಪುಣ್ಯಗಳಲ್ಲಿ ಇದೂ ಒಂದೆಂದು ಹೇಳಿಕೊಳ್ಳಲು ಅಭಿಮಾನ. ಅವರು ಸರ್ವಶ್ರೇಷ್ಠ ವಿದ್ವಾಂಸರು. ಮಾದರಿ ಅಧ್ಯಾಪಕನಿಗಿರಬೇಕಾದ ಎಲ್ಲ ಲಕ್ಷಣಗಳನ್ನೂ ಒಳಗೊಂಡ ಭವ್ಯ ವ್ಯಕ್ತಿತ್ವ ಅವರದು. ಅವರು ವಿದ್ವಾಂಸರಾದರೂ ವಿದ್ವತ್ತು ಅವರ ಮೇಲೆ ಸವಾರಿಮಾಡುವುದಿಲ್ಲ; ಅವರ ಪಾಠ ವಿದ್ವತ್ತಿನ ಭಾರದಿಂದ ಕುಗ್ಗುವುದಿಲ್ಲ. ಅಪಾರ ಪರಿಶ್ರಮದಿಂದ ಲಭ್ಯವಾದ ಪಾಂಡಿತ್ಯ, ತೀಕ್ಷ್ಣವಾದ ನೆನಪಿನಶಕ್ತಿ, ಸೂಕ್ಷ್ಮವಾದ ವಿಮರ್ಶನ ಪ್ರಜ್ಞೆ, ಕಾಪಟ್ಯವಿಲ್ಲದ ಸರಳ ವ್ಯಕ್ತಿತ್ವ—ಈ ಗುಣಗಳು ವಿದ್ಯಾರ್ಥಿಗಳನ್ನು ಆಕರ್ಷಿಸಿರಬಹುದು; ಅವರು ಡಿ.ಎಲ್.ಎನ್.ರವರನ್ನು ತಮ್ಮ ಆರಾಧ್ಯಮೂರ್ತಿಯಾಗಿ ಸ್ವೀಕರಿಸಲು ಕಾರಣವಾಗಿರಬಹುದು.

"ವಯಸ್ಸಿನ ದೆಸೆಯಿಂದಲ್ಲದೆ ಪಾಂಡಿತ್ಯದ ಭಾರದಿಂದ ಸಸುಬಾಗಿರುವ ಕೊಂಚ ಸ್ಥೂಲಕಾಯದ, ಎಣ್ಣೆಗೆಂಪಿನ ಕಟ್ಟಾಳು; ಶುಭ್ರವಾದ ತೆಳ್ಳನೆಯ ಪಂಚೆ, ಕೊರಳು ಮುಚ್ಚಿದ ಕೋಟು (ನಾವು ಕಂಡಂತೆ ಮೊದಲು ಟೈಕಾಲರ್ ಧರಿಸುತ್ತಿದ್ದುದುಂಟು), ತಲೆಗೊಂದು ಟೋಪಿ ಇಲ್ಲವೆ ಜರಿಯಂಚಿನ ಪೇಟ. ಬಲದ ಕೈಯಲ್ಲಿ ಛತ್ರಿ, ಎಡಗೈಯಲ್ಲಿ ನಾಲ್ಕಾರು ದಪ್ಪನೆಯ ಪುಸ್ತಕಗಳು. ಇಷ್ಟು ಭಾರವನ್ನೂ ತಡೆದುಕೊಳ್ಳಬಲ್ಲ ಮಜಭೂತಾದ ಎಕ್ಕಡಗಳು—ಇವರೆ, ನಮ್ಮ ದೊ.ಲ.ನ." ಇದು ಎಚ್. ದೇವೀರಪ್ಪನವರು ತಮ್ಮ 'ಮೇಷ್ಟ್ರು' ಡಿ.ಎಲ್.ಎನ್. ರವರ ಬಗೆಗೆ ಬರೆದಿರುವ ವ್ಯಕ್ತಿಚಿತ್ರ. ಡಿ.ಎಲ್.ಎನ್.ರವರ ಧ್ವನಿ ಸ್ವಲ್ಪ ಗಡಸು. ಉಚ್ಚಾರಣೆಯಲ್ಲಿ ಅವರದೇ ಆದ ಒಂದು ಬಗೆಯಾದ ಕಾಕು. ಅವರ ಪಾಠವನ್ನು ಹೊಸದಾಗಿ ಆಲಿಸಿದಾಗ ವಿದ್ಯಾರ್ಥಿಗಳಿಗೆ ಈ ಕೆಲವು ವೈಲಕ್ಷಣ್ಯಗಳು ಸ್ವಲ್ಪ ಸೋಜಿಗವಾಗಿ ಕಂಡುಬರುವುದುಂಟು. ಕೆಲವು

ದಿನಗಳ ಬಳಿಕ ಅವು ಒಗ್ಗಿದ ಮೇಲೆ ಅವರ ಪಾಠದ ಹಿರಿಮೆಯೇನು ಎನ್ನುವುದು ವೇದ್ಯವಾಗುವುದು. ಅವರದು ತುಂಬ ಸಂಕೋಚ ಪ್ರವೃತ್ತಿ "ವಿದ್ಯಾರ್ಥಿಗಳಿಗೆ ಪಾಠ ಹೇಳುವಾಗಲೋ, ದೊಡ್ಡ ದೊಡ್ಡ ಸಭೆಗಳ ಮುಂದೆ ಭಾಷಣ ಮಾಡುವಾಗಲೋ ಅವರು ಮುಖಕೊಟ್ಟು ಮಾತನಾಡುವುದು ಕಡಿಮೆ. ತಲೆ ತಗ್ಗಿಸಿ ವಾಗ್ಬಾಣಗಳನ್ನು ಬಿಡಬೇಕು. ಇಲ್ಲವೆ ಇನ್ನೆತ್ತಲೊ ದೃಷ್ಟಿಯಿಟ್ಟು, ಪ್ರಕೃತ ವಿಷಯದ ಮೇಲೆ ಲಕ್ಷ್ಯವಿಟ್ಟು ವಿಚಾರಮಾಡುತ್ತಿರ ಬೇಕು. ಯಾರಾದರೂ ಉಡಾಳರು ಇವರ ಮಾತಿನ ಮಧ್ಯೆ ಪ್ರವೇಶಿಸಿ ಏನಾದರೊಂದು ಸೊಟ್ಟ ಪ್ರಶ್ನೆ ಹಾಕಿದರೆಂದರೆ ತುಂಬ ಹಿಂಸೆಯಾಗುವಂತೆ ತೋರುತ್ತದೆ. ಕೇಳಬೇಕಾದವರು ಕಣ್ಣು ಮನ ಬಿಚ್ಚಿ ಕಿವಿಗೊಟ್ಟು ಕೇಳಿದರೆ ದೊರೆಯುವುದು ಶುಚಿರುಚಿಯಾದ ರಸಕವಳ. ಒಂದೊಂದು ವೇಳೆ ಇವರ ಅಂತರಂಗದ ಆವೇಗಗಳಿಗೆ ತಕ್ಕಂತೆ ಅಷ್ಟೇ ಬೇಗ ಬೇಗ ಮಾತಿನ ಮಾಲೆ ದೊರೆಯುವುದಿಲ್ಲ. ಅಂಥ ಸಂದರ್ಭದಲ್ಲಿ ಕೊಂಚ ಕಷ್ಟಪಡುತ್ತಿರುತ್ತಾರೆ. ಆಗ ಇವರ ಪಾಂಡಿತ್ಯ ಪ್ರತಿಭೆ ಬಹುಶ್ರುತತ್ವ ಅರಿತು ಮೆಚ್ಚಿಕೊಂಡವರು, ಇವರಲ್ಲಿರುವ ನ್ಯೂನತೆಯನ್ನು ಕಂಡಿರುವವರು ಒಳಗೊಳಗೇ ನಗುತ್ತಿರುತ್ತಾರೆ. ಅವರು ನಗುತ್ತಿರುವರೆಂಬುದು ಇವರಿಗೂ ಗೊತ್ತಿರುತ್ತದೆ. ಇದನ್ನೆಲ್ಲ ಬಲ್ಲವರೆ ಬಲ್ಲರು, ಆದರೆ ಈ ಯಾವ ನ್ಯೂನತೆಯೂ ಬೇರೆಯವರಿಗೆ ಕಾಣಿಸುವುದಿಲ್ಲ. ಏಕೆಂದರೆ ಇವರು ಕೇಳುವವರನ್ನು ತುಂಬ ಗಹನವಾದ ವಿಚಾರಗಳ ಲಹರಿಗಳ ಕುದುರೆಗಳ ಮೇಲೆ ಕೂರಿಸಿ ಕರೆದೊಯ್ಯುತ್ತಿರು ತ್ತಾರೆ."[1]

ತಮ್ಮ ಪಾಂಡಿತ್ಯದ ಔನ್ನತ್ಯವೆಷ್ಟೆಂಬುದನ್ನು ಡಿ.ಎಲ್.ಎನ್.ರವರೇ ತಿಳಿದಿಲ್ಲ—ಎಂದು ಪ್ರೊ|| ತೀ.ನಂ.ಶ್ರೀ. ಯವರು ಅವರ ವಿದ್ವತ್ತಿನ ವೈಶಾಲ್ಯ ವನ್ನು ಕುರಿತು ಒಮ್ಮೆ ಹೇಳಿದ್ದರು. ಅವರ ಪಾಠ ಕೇಳಿದ ವಿದ್ಯಾರ್ಥಿಗಳ ಪಾಲಿಗೆ ಅವರು ಜ್ಞಾನದ ನಡೆದೇಗುಲ. ತಮ್ಮ ವಿದ್ಯಾರ್ಥಿಗಳಿಗೆ ತಮಗೆ ತಿಳಿದದ್ದನ್ನು ಹೇಳುವ ಉತ್ಸಾಹ. ಹೀಗಾಗಿ ಅವರು ಬಿ. ವೆಂಕಟಾಚಾರ್ಯರ 'ದೇವಿ ಚೌಧುರಾಣಿ'ಯನ್ನು ಪಾಠಮಾಡಲಿ ಇಲ್ಲವೆ 'ದುರ್ಗೇಶನಂದಿನಿ'ಯನ್ನು

---

1. ನಮ್ಮ ಮೇಷ್ಟ್ರು (ಜ್ಞಾನೋಪಾಸಕ) ಪು. ೨೯

ಪಾಠಮಾಡಲಿ ಕಾದಂಬರಿ ಪ್ರಪಂಚದ ವಿಶ್ವರೂಪದರ್ಶನವನ್ನೇ ಮಾಡಿಸು ವಷ್ಟು ಪಾಶ್ಚಾತ್ಯ ಸಾಹಿತ್ಯ ವಿಮರ್ಶಾ ಜ್ಞಾನದಿಂದ ತರಗತಿಯನ್ನು ತುಂಬಿ ಬಿಡುತ್ತಿದ್ದರು. ಛಂದಸ್ಸನ್ನೇ ಕುರಿತು ಅವರು ಪಾಠಮಾಡಲಿ ವೈದಿಕ ಛಂದಸ್ಸು ಉಪನಿಷತ್ತಿನ ಛಂದಸ್ಸು, ಮಹಾಕಾವ್ಯಗಳ ಛಂದಸ್ಸು, ಪ್ರಾಕೃತ ಛಂದಸ್ಸು ಮೊದಲಾದುವುಗಳನ್ನು ಹಂತಹಂತವಾಗಿ ವಿವರಿಸುತ್ತಿದ್ದರು. ಕನ್ನಡ ಛಂದಸ್ಸಿಗೆ ಬರುವ ವೇಳೆಗೆ ಶಿಕ್ಷಣದ ಅವಧಿಯೇ ಮುಗಿಯುತ್ತ ಬರುತ್ತಿತ್ತು. ಆದರೂ ವಿದ್ಯಾರ್ಥಿಗಳನ್ನು ಮನೆಗೇ ಬರಮಾಡಿಕೊಂಡು ಚೊಕ್ಕವಾದ ತಿಂಡಿತೀರ್ಥಗಳನ್ನಿತ್ತು ಪಾಠವನ್ನು ಪೂರೈಸುತ್ತಿದ್ದರು. ಡಿ.ಎಲ್.ಎನ್. ರಸಾರ್ದ್ರ ಮನೋಭಾವವನ್ನು ಪಾಠಮಾಡುವಾಗ ವಿದ್ಯಾರ್ಥಿ ಗಳು ಗುರುತಿಸುತ್ತಿದ್ದರು. ಕವಿಯ ಮನೋಭಾವದೊಂದಿಗೆ ಒಂದಾಗಿ ಭಾವತಲ್ಲೀನತೆಯಿಂದ ಪಾಠಮಾಡುವಾಗ ಅವರು ಒಮ್ಮೊಮ್ಮೆ ಗದ್ಗದಿತ ರಾಗುತ್ತಿದ್ದರು ಇಲ್ಲವೆ ಹನಿಗಣ್ಣಾಗುತ್ತಿದ್ದರು. ಡಾ॥ ಹಾ. ಮಾ. ನಾಯಕರು ತಮ್ಮ ಗುರುಗಳು 'ಅಶ್ವತ್ಥಾಮನ್' ನಾಟಕ ಪಾಠ ಹೇಳುತ್ತಿದ್ದಾಗ ಅವನಿ ಗೊದಗಿದ ದುರಂತವನ್ನು ವಿವರಿಸುವಾಗ ಗದ್ಗದಿತರಾದುದನ್ನೂ: ಕೆ. ವಿ. ಅಯ್ಯರ್‌ರವರ 'ರೂಪದರ್ಶಿ' ಕಾದಂಬರಿ ಹೇಳುವಾಗ ಪಲವು ಘಟ್ಟಗಳಲ್ಲಿ ಅವರ ಕಣ್ಣಂಚಿನಲ್ಲಿ ನೀರಾಡಿದುದನ್ನೂ ಕಂಡಿರುವರು.[1]

ಡಿ.ಎಲ್.ಎನ್. ಅವರಿಗೆ ಬಹಳ ಪ್ರಿಯವಾದುದು 'ಕನ್ನಡ ಸಾಹಿತ್ಯ ಚರಿತ್ರೆ'ಯ ಪಾಠ. ಕನ್ನಡ ಕವಿಗಳ ಪ್ರಕಟಿತ/ಅಪ್ರಕಟಿತ ಕೃತಿಗಳೆಲ್ಲವರ ಗಾಢವಾದ ಪರಿಚಯ ಅವರಿಗಿದ್ದಿತು. ಆ ಕಾಲಕ್ಕೆ ವಿದ್ಯಾರ್ಥಿಗಳಿಗೆ ಆರ್. ನರಸಿಂಹಾಚಾರ್ಯರ ಕವಿಚರಿತೆಯ ಮೂರು ಸಂಪುಟಗಳು. ಡಾ॥ ಎ. ವೆಂಕಟ ಸುಬ್ಬಯ್ಯನವರ 'ಕೆಲವು ಕನ್ನಡ ಕವಿಗಳ ಜೀವನ ಕಾಲವಿಚಾರ'—ಈ ಕೃತಿ ಗಳನ್ನು ಬಿಟ್ಟರೆ ಅಭ್ಯಾಸಕ್ಕೆ ಬೇರಾವ ಗ್ರಂಥ ಸಾಮಗ್ರಿಯೂ ಇರಲಿಲ್ಲ. ಪತ್ರಿಕೆ ಗಳಲ್ಲಿ ಪಲವು ಬಿಡಿಲೇಖನಗಳು ಪ್ರಕಟವಾಗಿದ್ದವು. ವಿದ್ಯಾರ್ಥಿಗಳಿಗೆ ಅನು ಕೂಲವಾಗಲಿ ಎಂಬ ಉದ್ದೇಶದಿಂದ ಅವರು ಸಾಹಿತ್ಯ ಚರಿತ್ರೆಯನ್ನು ಹೇಳಿ ಬರೆಯಿಸುತ್ತಿದ್ದರು. ಕವಿಗಳ ಕಾಲ ದೇಶ ಮತ ಮೊದಲಾದ ವಿಷಯಗಳನ್ನು

---

1. ಗುರು ಸನ್ನಿಧಿಯಲ್ಲಿ (ಜ್ಞಾನೋಪಾಸಕ) ಪು.೭೭

ಅವರು ಸಮರ್ಥಿಸುತ್ತಿದ್ದ ವಿಧಾನ ವಿದ್ಯಾರ್ಥಿಗಳ ಪಾಲಿಗೆ ಆಶ್ಚರ್ಯಕರವಾಗಿ ತೋರುತ್ತಿತ್ತು.

ತಮ್ಮ ಮೆಚ್ಚಿನ ಕವಿಗಳಾದ ಪಂಪ ಕುಮಾರವ್ಯಾಸ ಹರಿಹರರನ್ನು ಕುರಿತು ಮಾತನಾಡುವಾಗ ಅವರು ಭಾವಪರವಶರಾಗುತ್ತಾರೆ. ಅವರ ಅಭಿಪ್ರಾಯಗಳ ತುಣುಕುಗಳಿವು: "ಕುಮಾರವ್ಯಾಸ ಒಬ್ಬ Prodigy ಕಣಯ್ಯ. ಅವನ ಊರ್ವಶೀಪ್ರಸಂಗವಿದೆಯಲ್ಲ ಅದು White-hot Point. ಶ್ರೀಕೃಷ್ಣ ಭೀಷ್ಮ ಪ್ರಸಂಗ ಓದಿದಾಗಲಂತೂ ಇಂದಿಗೂ ನನಗಾಗುವ ಅನುಭವ ವನ್ನು ಹೇಳಲಿ ಆರೆ." "ರನ್ನ ನನ್ನನ್ನೀಗ ಮೊದಲಿನ ಹಾಗೆ ವಶಗೊಳಿಸಿ ಕೊಳ್ಳಲಾರನಯ್ಯ" "ಪಂಪನಿಗೆ ನಾಲಗೆಯಿಲ್ಲ. ರನ್ನನಿಗೆ ನಾಲಿಗೆ ಇದೆ' ಅಂತಾ ಶ್ರೀ ವೆಂಕಣ್ಣಯ್ಯನವರು ಹೇಳ್ತಿದ್ರಯ್ಯ. ಅದು ಸತ್ಯಾನ್ನೋ ಹಾಗೆ ತೋರುತ್ತೆ. ಅವನು ಮಹಾಕವಿ ಅನ್ನೋದಕ್ಕಿಂತ ಮಹಾಸಹೃದಯ ಎನ್ನ ಬಹುದು."

ಹಳಗನ್ನಡ ನಡುಗನ್ನಡ ಸಾಹಿತ್ಯದಲ್ಲಿ ಡಿ.ಎಲ್.ಎನ್. ರವರಿಗಿಂತಲೂ ನಿಷ್ಣಾತರಾದ ವಿದ್ವಾಂಸರನ್ನು ಕಾಣುವುದು ಕಷ್ಟ. ತೀ.ನಂ.ಶ್ರೀ.ಯವರು ಹೇಳುವಂತೆ "ಭಾಷೆಯ ರಹಸ್ಯ, ಸಾಹಿತ್ಯದ ಸ್ವಾರಸ್ಯ ಎರಡನ್ನೂ ಏಕರೀತಿ ಯಲ್ಲಿ ಉತ್ಸಾಹದಿಂದ ಮನಮುಟ್ಟಿಸಬಲ್ಲ ಸವ್ಯಸಾಚಿಗಳು ಅವರು." ಕವಿ ಹೃದಯವನ್ನು ಅರಿತು ಪ್ರವೇಶಿಸುವ ಮನೋಭಾವ ಡಿ.ಎಲ್.ಎನ್.ರವರದು. ರಸಸ್ಯಂದಿಯಾದ ಪದ್ಯ ಭಾಗಗಳನ್ನು ಪಾಠಮಾಡುವಾಗ ಮೂರು ನಾಲ್ಕು ಬಾರಿ ಅವನ್ನು ಓದುವುದು ಅವರ ಪರಿಪಾಠ. ಅವರು ಪದ್ಯವನ್ನು ಓದುವ ರೀತಿಯೇ ವಿಶಿಷ್ಟವಾದುದು. ಕೈಯನ್ನು ಅತ್ತ ಇತ್ತ ಆಡಿಸುತ್ತ ತಲೆಯನ್ನು ತೂಗುತ್ತ ಓದಿ ಸ್ವಲ್ಪಹೊತ್ತು ಕಣ್ಣುಮುಚ್ಚಿ ಆಸ್ವಾದಿಸಿ ನಗುಮುಖದಿಂದ ವಿವರಿಸುವರು. ಪಾಠ ಹೇಳುವಾಗ ಎಲ್ಲಿಯಾದರೂ ಅಪೂರ್ವಪದವೊಂದು ಬಂದರೆ ಪದ್ಯವನ್ನು ವಿವರಿಸಿಯಾದಮೇಲೆ ಕುರ್ಚಿಯಿಂದ ಮೆಲ್ಲಗೆ ಎದ್ದು ಕಪ್ಪುಹಲಗೆಯ ಮೇಲೆ ಆ ಪದದ ನಿಷ್ಪತ್ತಿಯನ್ನು ಬರೆದು ವಿವರಿಸುವ ರೀತಿಯನ್ನು ಅವರ ವಿದ್ಯಾರ್ಥಿಗಳೆಲ್ಲರೂ ಬಲ್ಲರು. ಆದಿಪುರಾಣದ 1.61 ನೆ ಪದ್ಯದಲ್ಲಿ ಊರ್ಮಿಮಾಲಿನಿಯ ವರ್ಣನೆ ಬಂದಿದೆ. ಅದನ್ನು ಡಿ.ಎಲ್.ಎನ್. ಅನುಭವಿಸಿ ವಿವರಿಸಿದ ಬಗೆ ಹೀಗಿದೆ: "ಪಂಪ ಎಲ್ಲಿಯೋ ಕಂಡು ಆನಂದಿಸಿದ

ಯಾವುದೋ ನದಿಯ ಒಂದು ಭಂಗಿಯನ್ನು ಇಲ್ಲಿ ಚಿತ್ರಿಸಿದ್ದಾನೆ. ನನಗಂತೂ ಈ ಪದ್ಯ ದಿನದಿನಕ್ಕೆ ಹೊಸದು. ಎಷ್ಟು ಸುಕುಮಾರವಾದ ಚಿತ್ರ !"[1]

ಪ್ರೊ॥ ಡಿ.ಎಲ್.ಎನ್.ರವರು ಶ್ರೇಷ್ಠ ವಿದ್ವಾಂಸರಾದರೂ ಅವರ ವಿದ್ವತ್ತು ಭಾವುಕತೆಯನ್ನು ಚಿವುಟಿಹಾಕಿರಲಿಲ್ಲ. ಕವಿ ತನ್ನ ವಿದ್ವತ್ ಪ್ರದರ್ಶನಕ್ಕಾಗಿ ಪದ್ಯ ರಚಿಸಿದ್ದರೆ ಅದನ್ನು Scholastic ಎಂದು ತಳ್ಳಿಹಾಕುತ್ತಿದ್ದರು. ಪದ್ಯ ಓದುವಾಗ ಎಷ್ಟೋಸಾರಿ ಪದ್ಯದ ನಾದಮಾಧುರ್ಯಕ್ಕೇ ಮನಸೋತು ಮಾರುಹೋಗುತ್ತಿದ್ದುದುಂಟು. "ಮಂದಮಂದಂ ತೀಡಿತ್ತಾಲೋಲಗಂಗಾ ಲಲಿತ ಲಹರಿಕಾಸಾರಸಾರಂ ಸಮೀರಂ" "ಪ್ರಿಯಹಂಸೀಯುತನಾದೆಯು ತೀರಸ್ಥಲವಂಗ ಚೂತಲವಲೀ ಪುಷ್ಪಾಸವಾಸ್ವಾದಿತಾಲಿಯುತೋದ್ಯಾನದೆಯು ಸೀತೋದೆಯ ಪೋಲ್ವೆಗಿಲ್ಲ ತೊರೆಗಳ್"—ಇಂತಹ ಕಡೆಗಳಲ್ಲಿ ಬರುವ ಭಾವವನ್ನು ಹೊರಲು ಸಮರ್ಥವಾದ ಬಂಧವನ್ನು ಬಹುವಾಗಿ ಮೆಚ್ಚುತ್ತಿದ್ದರು. ಪದ್ಯವನ್ನು ಓದುವ ರೀತಿಯಿಂದಲೇ ಅದರ ಸ್ವಾರಸ್ಯ ಹೆಚ್ಚುವಂತೆ ಮಾಡುತ್ತಿದ್ದರು. "ಮೊಗಂ ಉತ್ಫುಲ್ಲ ಸರೋಜಹಾಸಿ" ಎಂದು ನಾವು ಓದಿದರೆ ಅದನ್ನೇ ಅವರು "ಮೊಗಂ ? ಉತ್ಫುಲ್ಲ ಸರೋಜ ಹಾಸಿ" ಎಂದು ಪ್ರಶ್ನೋತ್ತರ ರೂಪಕ್ಕೆ ತಿರುಗಿಸುತ್ತಿದ್ದರು. ಈ ಒಂದು ಸಣ್ಣ ಮಾರ್ಪಾಟಿನಿಂದ ಪದ್ಯದ ಸೊಗಸು ಹೆಚ್ಚುವಂತೆ ಮಾಡುತ್ತಿದ್ದರು.[2]

ಡಿ.ಎಲ್.ಎನ್. ಅವರ ಬೋಧನಾ ವಿಧಾನದಲ್ಲಿನ ಅನನ್ಯತೆಯನ್ನು ಕುರಿತು ಅವರ ಶಿಷ್ಯರಾದ ಪ್ರೊ॥ ಎಚ್. ಎಂ. ಶಂಕರನಾರಾಯಣರಾವ್‌ರವರು ಹೀಗೆ ಹೇಳುವರು : "ಒಂದು ಕನ್ನಡ ಕಾವ್ಯವನ್ನು ಹಲವು ಬಾರಿ ಓದಿ, ಮನನ ಮಾಡಿ ಅರ್ಥವನ್ನು ಪರಿಭಾವಿಸಿ ಆ ಬಳಿಕ ಅದನ್ನು ಉತ್ಸಾಹದಿಂದ ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ಬೋಧಿಸುವುದು ಆಚಾರ್ಯರ ಪದ್ಧತಿ. ಅವರ ಸಾಮಾನ್ಯ ತರಗತಿಗಳು ಹಿತಕರವಾಗಿರುತ್ತಿರಲಿಲ್ಲ. ಪ್ರೌಢ ತರಗತಿಗಳು ಉದ್ಬೋಧಕವಾಗಿರುತ್ತಿದ್ದುವು ಎನ್ನುವುದು ಸತ್ಯಕ್ಕೆ ದೂರವಾದ ಮಾತು. ಭಾಷೆಯ ಕ್ಲೇಶವಿಲ್ಲದೆ ಮೊದಲೇ ವಿದ್ಯಾರ್ಥಿಗಳು ಓದಿಕೊಂಡು ಬರುವ ಕನ್ನಡ

---

1. ಡಾ॥ ಎಂ. ಚಿದಾನಂದಮೂರ್ತಿ : ಪ್ರೊ॥ ಡಿ.ಎಲ್.ಎನ್. ಅವರ ಬೋಧನ ಕ್ರಮ (ಜ್ಞಾನೋಪಾಸಕ) ಪು.೮೩
2. ಅದೇ, ಪು. ೮೪

ಕಾದಂಬರಿಗಳನ್ನು ವರ್ಷದ ಉದ್ದಕ್ಕೂ ಪಾಠ ಮಾಡುವುದು ಎಂಥ ಕ್ಲಿಷ್ಟಕರವಾದ ವಿಷಯವೆಂಬುದನ್ನು ಕನ್ನಡದ ಉಪಾಧ್ಯಾಯರೆಲ್ಲ ಬಲ್ಲರು. ಆದರೆ ಅದೇ ಪ್ರೌಢಕೃತಿಗಳ ಪಾಠದ ಮಾತು ಬೇರೆ. ಆಚಾರ್ಯರ ಮಾತಿನ ಮೋಡಿಯ ವಿಷಯವನ್ನು ಕುರಿತು ಎರಡು ಮಾತು. ಆನರ್ಸ್ ತರಗತಿಗೆ ಅವರು ನಮಗೆ 'ಪಂಪಭಾರತ'ವನ್ನು ಪಾಠ ಮಾಡಿದರು. ಒಮ್ಮೆ 'ಸುರಹೊನ್ನೆ' ಹೂವಿನ ಮೇಲೆ ಪಂಪನು ರಚಿಸಿದ ಪದ್ಯವನ್ನು ಓದಿದಾಗ ಆ ಹೂವು ನಮ್ಮ ಕಣ್ಣ ಮುಂದೆ ಬಂದು ನಿಂತಂತಾಯಿತು. ಹಾಗೆಯೇ ಶಿಶುಪಾಲವಧೆ, ದ್ಯೂತ ಪ್ರಕರಣ, ಇಂದ್ರಕೀಲ ಪ್ರಕರಣಗಳು ಸಹ. ಒಮ್ಮೆ ಬನುಮಯ್ಯನವರ ಹೈಸ್ಕೂಲಿನಲ್ಲಿ ಪಂಪ ಸಹಸ್ರ ವಾರ್ಷಿಕ ಸಂದರ್ಭದಲ್ಲಿ 'ಪಂಪಭಾರತ'ದ ಮೇಲೆ ಅವರು ಎರಡೂವರೆ ಗಂಟೆಗಳ ಕಾಲ ಮಾಡಿದ ಭಾಷಣ ಅದ್ಭುತವಾಗಿತ್ತು. ಕೃಷ್ಣಸಂಧಾನದ ಸಂದರ್ಭದಲ್ಲಿ ಕರ್ಣನ ಮನಸ್ಸಿನಲ್ಲಾದ ಹೋರಾಟವನ್ನೂ, ದುಶ್ಶಾಸನನ ವಧೆಯ ಸಂದರ್ಭದಲ್ಲಿ ಭೀಮನ ಕೋಪದ ತೀವ್ರತೆಯನ್ನೂ ಅವರು ಉಜ್ವಲವಾಗಿ ವರ್ಣಿಸಿದರು..."[1]

ಡಿ.ಎಲ್.ಎನ್. ತೀವ್ರ ಭಾವುಕರು. ಪಾಠ ಮಾಡುವಾಗ ಅವರ ಈ ವಿಶಿಷ್ಟಗುಣದ ಪರಿಚಯ ವಿದ್ಯಾರ್ಥಿಗಳಿಗಾಗುತ್ತಿತ್ತು. ಒಮ್ಮೆ, ಶಾಕುಂತಲಾ ನಾಟಕದ ಕೊನೆಯ ಅಂಕದಲ್ಲಿ ಬರುವ "ಮೊಳೆವಲ್ ಶೋಭಿಸೆ ನಿರ್ನಿಮಿತ್ತ ಹಸಿತಂ ಚೆಲ್ವಾಗೆ..." ಎಂಬ ಪದ್ಯವನ್ನು, ಮತ್ತೊಮ್ಮೆ King Lear ನಾಟಕದ ಕೊನೆಯಲ್ಲಿ ವೃದ್ಧ ಲಿಯರ್ ನಿಷ್ಕಾರಣವಾಗಿ ಸೆರೆ ಬಿದ್ದಿದ್ದ ತನ್ನ ಮುಗ್ಧ ಕುಮಾರಿ ಕಾರ್ಡೀಲಿಯಳ ಕೂಡೆ ಸೆರೆಮನೆಗೆ ಹೋಗುವಾಗ "No, no, no, no ! come let's away to prison : We two alone will sing like birds in the cage " ಎಂದು ಪ್ರಾರಂಭವಾಗುವ ಮಾತುಗಳನ್ನು ಅವರು ಓದುವಾಗ ಅವರ ಕೊರಳು ಹಿಡಿಮಕೊಂಡಿತು. ಕಣ್ಣಂಚಿನಲ್ಲಿ ಹನಿ ಮಿಂಚಿತು. ತಂದೆ ಮಕ್ಕಳ ಪ್ರೀತಿಯ ಸನ್ನಿವೇಶವನ್ನು ಕಂಡಾಗಲೆಲ್ಲಾ ಅವರು ಹಾಗೆ ಅತ್ಯಂತ ಆರ್ದ್ರರಾಗುತ್ತಾರೆ.[2]

---

1. ಪ್ರಾಚಾರ್ಯ ಡಿಎಲ್‌ಎನ್ ಅವರು (ಕನ್ನಡ ನುಡಿ ಸಂ.೩೪ ಸಂಚಿಕೆ ೧೫-೧೬)
2. ಸುಜನಾ : ವಿದ್ವತ್ತಿನ ನಿಧಿ (ಜ್ಞಾನೋಪಾಸಕ) ಪು.೫೬-೫೭

ಪಂಪನ ಆದಿಪುರಾಣವನ್ನು ಪಾಠ ಮಾಡುವಾಗ ಸಹೃದಯಿಯಾಗಿ ಕವಿಯಲ್ಲಿನ ದೋಷವನ್ನು ಎತ್ತಿ ಹೇಳುತ್ತಿದ್ದರು. ಆದಿಪುರಾಣದ 1.66 ನೆ ಪದ್ಯದ ಕೊನೆಯಲ್ಲಿ ಬರುವ "ಬಸಂತದೊಳ್ ಬಸದಿಯ ಬಾಗಿಲಂ ತೆಱೆದ ಮಾಟ್ಕೆಯೊಳಿದ್ದುವು ಬಂದ ಪೂವುಗಳ್" ಎಂಬ ಮಾತನ್ನು ವಿವರಿಸುತ್ತ "ಪಂಪಕವಿಯಲ್ಲಿ ಎಷ್ಟೋ ಸಾರಿ ಮೊದಲು ಒಂದು ಹೊಳವು, ನಂತರ ಅದರ ಸಮರ್ಥನೆ, ವಿವರಣೆ" ಎಂದು ವಿಮರ್ಶಿಸುತ್ತಿದ್ದರು. 14ನೇ ಆಶ್ವಾಸದ ಕೊನೆಯನ್ನು ಕುರಿತು "That Finishes the real poetry of Pampa" ಪಂಪಭಾರತದ 12.33 ನೆ ಪದ್ಯವನ್ನು ಕುರಿತು "The usual way in which Pampa wants the Sun to Set". "ವರ್ಣನೆಯಲ್ಲಿ ಕಥೆ ಎಲ್ಲಿಯೋ ಹೊಯ್ತು", "ಸಂಪ್ರದಾಯ ಪಂಪನನ್ನೂ ಬಿಟ್ಟಿಲ್ಲ", "ಪಂಪನಿಗೆ ಹಾಸ್ಯದಲ್ಲಿ ಅಭಿರುಚಿಯಿಲ್ಲ. ಕನ್ನಡ ಕವಿಗಳಲ್ಲಿ ಯಾರಿಗಾದರೂ ಹಾಸ್ಯದೃಷ್ಟಿಯಿದ್ದರೆ ಅದು ಕುಮಾರವ್ಯಾಸನಿಗೆ. ಪಂಪ ನಕ್ಕದ್ದನ್ನು ಕಾಣುವುದೇ ಅಪೂರ್ವ. ಗಾಂಭೀರ್ಯದ ಎತ್ತರದಲ್ಲಿ ಪರಿಹಾಸದ ನೆರಳೂ ಇಲ್ಲ", "ಜೀಟಿ ವರ್ಣನೆಯಲ್ಲಿ ಪಂಪ ಹರಟೆಮಲ್ಲ", "ಪಂಪನಿಗೆ ಎಷ್ಟೋ ಸಾರಿ ಇರುವ ನೂಲು ಸ್ವಲ್ಪ, ಮಗ್ಗ ದೊಡ್ಡದು; ಆದ್ದರಿಂದ ಅನಾವಶ್ಯಕವಾದುದನ್ನು ಸೇರಿಸುತ್ತಾನೆ"—ಹೀಗೆ ನಿರ್ದಾಕ್ಷಿಣ್ಯವಾಗಿ ಪಂಪನನ್ನು ಖಂಡಿಸುತ್ತಿದ್ದರು. ಅವರ ಖಂಡನೆಯಲ್ಲಿ ಸಹಾನುಭೂತಿ ಇರುತ್ತಿತ್ತು, ಸಂಯಮವಿರುತ್ತಿತ್ತು.[1]

ಒಂದು ಕೃತಿಯಲ್ಲಿನ ಉತ್ತಮ ಗುಣವನ್ನು ಎತ್ತಿ ಹೇಳುವಲ್ಲಿ ಅವರು ಎಂದೂ ಕೃಪಣರಾಗಿರುತ್ತಿರಲಿಲ್ಲ. ಕುಮಾರವ್ಯಾಸ ಭಾರತದ ಉದ್ಯೋಗ ಪರ್ವದಲ್ಲಿ ಕೃಷ್ಣ ಸಂಧಿಗೆ ಹೋದ ಪ್ರಸಂಗ ಜಾಳುಜಾಳಾಗಿದೆ, ಸಾಂದ್ರತೆಯಿಲ್ಲ ಎಂದು ಹೇಳುವ ಪ್ರೊ. ಡಿ.ಎಲ್.ಎನ್. "ಪಂಪ ಮಾತ್ರ ಇಲ್ಲಿ ಅದ್ಭುತವಾಗಿ ಚಿತ್ರಿಸಿದ್ದಾನೆ, ಸಿದ್ಧಿ ಪಡೆದಿದ್ದಾನೆ" ಎಂದು ವಿಮರ್ಶಿಸುವರು. ಪಂಪಭಾರತದ 1.76 ನೆ ಪದ್ಯವನ್ನು ಕುರಿತು "Compact but never abrupt bevity": 7.64 ನೆ ಪದ್ಯದ ಭಾಷೆಯನ್ನು ಕುರಿತು "Telegraphic language": 8.24 ನೆ ಪದ್ಯವನ್ನು ಕುರಿತು "a lovely Stanza - The mere quick-

---

1. ಅದೇ ಪು.೮೫

ness of it''; ಅರ್ಜುನ ಕಿರಾತನ ಗಂಟಲನ್ನು ಮೆಟ್ಟುವ ಪ್ರಸಂಗ ''rather a funny thing''; ಒಂಬತ್ತನೆಯ ಆಶ್ವಾಸದಲ್ಲಿ ಕೃಷ್ಣ ವಿದುರನ ಮನೆಗೆ ಹೋದ ಪ್ರಸಂಗವನ್ನು ಕುರಿತು "ಕೃಷ್ಣ ವಿದುರನ ಮನೆಗೆ ಹೋದ ಸನ್ನಿವೇಶ ಕುಮಾರವ್ಯಾಸನಿಗೆ ಗಣಿ ಸಿಕ್ಕಂತೆ ಆಗಿದೆ. ಪಂಪ ವಿಸ್ತರಿಸದಿದ್ದು ದನ್ನು ಕುಮಾರವ್ಯಾಸ ಎತ್ತಿಕೊಳ್ಳುತ್ತಾನೆ"; 9.85 ನೆ ಪದ್ಯವನ್ನು ಕುರಿತು "ಪ್ರತಿಮೆಗೆ ಕಣ್ಣು ಬಿಡಿಸಿದಂತಿದೆ ಈ ಪದ್ಯ"; 10.23 ನೆ ಪದ್ಯವನ್ನು ಕುರಿತು "ವಾಚ್ಯಾರ್ಥದ ಸುತ್ತ ಹಾರಾಡುವ ಅರ್ಥಪಕ್ಷಿಗಳನ್ನು ಗಮನಿಸಿ"; 12.139ನೆ ಪದ್ಯವನ್ನು ಕುರಿತು "ಕಾಸಿನಗಲದ ದಂತದಲ್ಲಿ ಚಿತ್ರ ಕೊರೆದಂತೆ"—ಇಲ್ಲೆಲ್ಲಾ[1] ಅವರ ಸಂಗ್ರಹ ವಿಮರ್ಶನಾಶಕ್ತಿಯು ವಿದ್ವತ್ತು ಹಾಗೂ ತೀಕ್ಷ್ಣವಾದ ಪ್ರತಿಭೆ ಇವುಗಳಿಂದ ಪಾಕಗೊಂಡು (blend ಆಗಿ) ಬಂದಂತೆ ಭಾಸವಾಗುತ್ತದೆ.

ಪ್ರೊ. ಡಿ.ಎಲ್.ಎನ್. ಅವರಿಗೆ ಪ್ರಿಯವಾದುದು ತೌಲನಿಕ ವಿಮರ್ಶೆ. 'ಒಂದು ಕೃತಿಯನ್ನು ಓದಿ ಅದರ ಯೋಗ್ಯಾಯೋಗ್ಯತೆಗಳನ್ನು ನಿರ್ಧರಿಸುವುದ ಕ್ಕಿಂತ, ಆ ಕೃತಿಯ ಆಕರ, ಅಲ್ಲಿ ಬರುವ ಸನ್ನಿವೇಶಗಳ ಆಕರಗಳು, ಕವಿಯ ಮೇಲೆ ಪ್ರಭಾವ ಬೀರಿರುವ ಕೃತಿಗಳು, ಇವುಗಳನ್ನು ಬಳಸಿಕೊಂಡಿರುವ ರೀತಿ; ಈ ಕವಿಯ ಕೃತಿಯಿಂದ ಸನ್ನಿವೇಶಗಳನ್ನೋ ಪದಪುಂಜಗಳನ್ನೋ ಮುಂದಿ ನವರು ಬಳಸಿಕೊಂಡಿರುವ ರೀತಿ—ಇವೆಲ್ಲವುಗಳನ್ನು ಗಮನದಲ್ಲಿಟ್ಟುಕೊಂಡು ಒಂದಕ್ಕೊಂದನ್ನು ಹೋಲಿಸಿ ವಿಮರ್ಶಿಸುವ ತೌಲನವಿಧಾನದಿಂದ ಕವಿಯ ಯೋಗ್ಯತೆಯನ್ನು ಹೆಚ್ಚು ಖಚಿತವಾಗಿ ತಿಳಿಯಬಹುದು' ಎಂಬುದು ಅವರ ಅಭಿಮತ.[2] ಪಂಪನ 'ಆದಿಪುರಾಣ' ಪಾಠ ಮಾಡುವಾಗ ಪಂಪನು ಹೆಜ್ಜೆಹೆಜ್ಜೆಗೆ ಜಿನಸೇನಾಚಾರ್ಯರ 'ಪೂರ್ವಪುರಾಣ'ವನ್ನು ಅನುಸರಿಸಿದ್ದರೂ ಅವನ ಪ್ರತಿಭೆಯ ಸ್ವತಂತ್ರ ಮಿಂಚು ಹೆಜ್ಜೆಹೆಜ್ಜೆಗೆ ಹೊಳೆಯುವುದೆಂದು ಹೇಳಿ ತೌಲನಿಕ ವಿಮರ್ಶೆ ಯಿಂದ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತಿದ್ದರು. ಪಂಪನ ಮೇಲೆ ವಾಲ್ಮೀಕಿ ವ್ಯಾಸ ಭಾಸ ಕಾಳಿದಾಸ ಬಾಣ ಮುಂತಾದ ಸಂಸ್ಕೃತ ಕವಿಗಳ ಪ್ರಭಾವ ಹೇರಳವಾಗಿರುವುದನ್ನು ಎತ್ತಿ ತೋರಿಸುತ್ತಿದ್ದರು: "ಪಂಪ ಭಾರತದ 3.23 ರಲ್ಲಿ ವಾಲ್ಮೀಕಿಯ ಪ್ರಭಾವವಿದೆ, ಆದರೆ ವಾಲ್ಮೀಕಿಯ ವರ್ಣನೆಯೇ ಸೊಗ

1. ಅದೇ, ಪು. ೮೬
2. ಅದೇ, ಪು. ೮೭

ಸಾದುದು.” “ಭಟ ಖಡ್ಗಮಂಡಲೋತ್ಪಲವನ ವಿಭ್ರಮ ಭ್ರಮರಿಯುಪ್ಪ ಮನೋಹರಿ ರಾಜ್ಯಲಕ್ಷ್ಮಿ (ಆದಿಪುರಾಣ 14.30) ಎಂಬಲ್ಲಿನ ಸಮಾಸ ಬಾಣನದು, ಈ ಸುಂದರೋಕ್ತಿ ಪೂರ್ವಪುರಾಣದಲ್ಲಿಲ್ಲ. ಪಂಪನ ವೈಶಿಷ್ಟ್ಯವೇನೆಂದರೆ ಬಾಣನ ಗದ್ಯಕೃತಿಯಲ್ಲಿ ಲಯದ ಚೆಲುವನ್ನು (rhythmic beauty) ಕಂಡುಹಿಡಿದು ಅದೇ ಸಮಾಸವಾಕ್ಯವನ್ನು ವೃತ್ತದಲ್ಲಿ ಬಳಸಿಕೊಂಡದ್ದು. ಸಂಸ್ಕೃತ ಬಳಸಿದರೆ ಹೀಗೆ ಬಳಸಬೇಕು. ಪಂಪನ ಛಂದೋಪ್ರಜ್ಞೆಗೆ ಇದು ಉಜ್ವಲ ಸಾಕ್ಷಿ.” “ಪಂಪನ ಮಾರ್ಪಾಟುಗಳ ಸಾರ್ಥಕತೆಗೆ ಮತ್ತೊಂದು ಉದಾಹರಣೆ—ಬಾಣನ ಲಕ್ಷ್ಮೀವಿಡಂಬನೆ ಪ್ರಸಿದ್ಧವಾದುದು, ಸುಂದರವಾದುದು, ಆದರೆ ಅದು ಮಂತ್ರಿ ಶುಕನಾಸನು ರಾಜಕುಮಾರ ಚಂದ್ರಾಪೀಡನಿಗೆ, ಯೌವನದ ಹೊಸ್ತಿಲಲ್ಲಿ ಕಾಲಿಡುತ್ತಿರುವವನಿಗೆ, ನೀತಿಬೋಧೆ ಮಾಡುವ ಸಂದರ್ಭದಲ್ಲಿ ಬರುತ್ತದೆ. ಪಂಪನು 13ನೆ ಆಶ್ವಾಸದಲ್ಲಿ ಬೇರೊಂದು ಸಂದರ್ಭದಲ್ಲಿ ತಂದಿರುವುದು ಅವನ ಔಚಿತ್ಯಪ್ರಜ್ಞೆಗೆ ಒಳ್ಳೆಯ ಉದಾಹರಣೆ.”[1]

ವ್ಯಾಸಭಾರತದಿಂದ ಕೆಲವು ಸನ್ನಿವೇಶಗಳನ್ನು ಪಂಪ ಆರಿಸಿಕೊಳ್ಳದೆ ಬಿಟ್ಟಿದ್ದನ್ನು ಪ್ರೊ॥ ಡಿ.ಎಲ್.ಎನ್. ಕಟುವಾಗೆ ಟೀಕಿಸಿದ್ದುಂಟು. “ವ್ಯಾಸಭಾರತದಲ್ಲಿ ಧರ್ಮರಾಜ ದ್ಯೂತದಲ್ಲಿ ಸೋತನಂತರ ಕುಪಿತನಾದ ಭೀಮ ಅರ್ಜುನನಿಗೆ ಬೆಂಕಿ ತಾ, ದರ್ಮಜನ ಕೈ ಸುಡುತ್ತೇನೆ ಎಂದು ಕೂಗುತ್ತಾನೆ. ಪಂಪ ಇದನ್ನು ಕೈಬಿಟ್ಟಿರುವುದು ದೊಡ್ಡ ದೋಷ. ವ್ಯಾಸನಲ್ಲಿ—What a stroke of genius !” ಸೌಪ್ತಿಕ ಪರ್ವದಲ್ಲಿ ಬರುವ ಕಾಗೆ ಗೂಬೆಗಳ ವೃತ್ತಾಂತ –ಅಶ್ವತ್ಥಾಮ ಅದನ್ನು ಕಂಡು ಪಾಂಡವರನ್ನು ಮೋಸದಿಂದಲೇ ಕೊಲ್ಲಬೇಕೆಂದು ನಿಶ್ಚಯಿಸಿದ್ದು—ಪಂಪ ಈ ಸನ್ನಿವೇಶವನ್ನು ಬಿಟ್ಟುಬಿಟ್ಟಿದ್ದಾನೆ. ಈ ಸನ್ನಿವೇಶವನ್ನು ಕುರಿತು ಅವರು ಆಡಿದ ಮಾತುಗಳಿವು—“It is the most terrible thing ; Titanic imagination - not possible to go beyond Vyasa here, ಎಡ್ಗರ್ ಅಲನ್ ಪೋನಂಥವರೇ ಬರಬೇಕೇನೋ !”[2]

---

1. ಅದೇ, ಪು, ೮೮
2, ಅದೇ, ಪು, ೮೯

ಆದಿಪುರಾಣದಲ್ಲಿನ ಭರತ ಬಾಹುಬಲಿ ಪ್ರಸಂಗ ವಿವರಿಸುವಾಗ 'ಭರತೇಶ ವೈಭವ'ದಲ್ಲಿ ಅದು ನೀರಸವಾಗಿ ಬಂದಿರುವುದನ್ನು ವಿಮರ್ಶಿಸುತ್ತಾ ರತ್ನಾಕರನಿಗೆ ಅವನ ಯೋಗ್ಯತೆಗೆ ಮೀರಿ ಪ್ರಶಂಸೆ ಸಿಕ್ಕಿರುವುದನ್ನು "Rathnakara is unnecessarily made much of" ಎನ್ನುವ ಮಾತಿನ ಮೂಲಕ ವ್ಯಕ್ತಪಡಿಸಿದರು.[1] ಪಂಪ ಏಕಲವ್ಯನ ಪ್ರಸಂಗವನ್ನು ಸದ್ದಿಲ್ಲದೆ ಕೈಬಿಟ್ಟಿರುವುದನ್ನು ಪ್ರಸ್ತಾಪಿಸುತ್ತಾ ಅದು ನೇರವಾಗಿ ಕತೆಗೆ ಸಂಬಂಧಿಸಿಲ್ಲ, ಅದರಿಂದ ಅರ್ಜುನನ ಪಾತ್ರ ಕೆಳಗಿಳಿಯುತ್ತದೆ. ಆದರೂ, ಏಕಲವ್ಯನದು ಎಂತಹ ಮಹಾಪಾತ್ರ! ಎಂದರು.[2]

ಪ್ರೊ|| ಡಿ.ಎಲ್.ಎನ್. ಪಾಠಮಾಡುವಾಗ ಒಂದು ಪದದ ಬಗೆಗೆ ವಿವರಣೆ ಕೊಡಲು ಸಾಧ್ಯವಿಲ್ಲದಿದ್ದಾಗ ಅವರು ಅದರ ಆಕರಗಳನ್ನು ಸೂಚಿಸಿ ನಿಷ್ಪತ್ತಿ ನನಗೆ ಗೊತ್ತಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಿದ್ದರು. ವಿದ್ಯಾರ್ಥಿಗಳು ಬೇಕೆಂದೇ ತಪ್ಪು ನಿಷ್ಪತ್ತಿಯನ್ನು ಹೇಳಿದಾಗ ಅವರು 'ಇಲ್ಲೆಲ್ಲಾ ಊಹೆಯ ಆಟ ನಡೆಯೋದಿಲ್ಲ' ಎಂದು ಹೇಳಿ ಅದಕ್ಕೆ ಸಂಬಂಧಿಸಿದಂತೆ ನಾಲ್ಕಾರು ಕಡೆಗಳಿಂದ ವಿಷಯ ಸಂಗ್ರಹಣೆ ಮಾಡಿ ಹೇಳುತ್ತಿದ್ದರು. ಹೀಗಾಗಿ ನಿರ್ದುಷ್ಟತೆ ಮತ್ತು ಪ್ರಾಮಾಣಿಕತೆಗೆ ಮತ್ತೊಂದು ಹೆಸರು ಡಿ.ಎಲ್.ಎನ್. ಎಂಬ ಖ್ಯಾತಿಗೆ ಅವರು ಪಾತ್ರರಾಗಿದ್ದರು. ಯಾವುದಾದರೂ ಹೊಸ ಸಂಗತಿಯನ್ನು ಪಾಠಮಾಡುವಾಗ ಹೇಳಿದಾಗ ಅವರು 'ಅದು ಕಾಪಿರೈಟ್' ಎಂದು ಅರ್ಧ ತಮಾಷೆಯ ಧ್ವನಿಯಲ್ಲಿ, ಅರ್ಧ ಗಂಭೀರವಾಗಿ ಹೇಳಿಬಿಡುತ್ತಿದ್ದರು. ಇದಕ್ಕೆ ಕಾರಣಗಳೂ ಇಲ್ಲದಿರಲಿಲ್ಲ. ಉಪಾಧ್ಯಾಯರು ತರಗತಿಗಳಲ್ಲಿ ಹೇಳಿದ್ದನ್ನು ತೆಗೆದುಕೊಂಡು ಹೋಗಿ ಲೇಖನಗಳನ್ನು ಬರೆದುಬಿಡಬಹುದು. ಅಂತಹ ಒಂದೆರಡು ಉದಾಹರಣೆಗಳನ್ನು ವಿದ್ಯಾರ್ಥಿಗಳ ಮುಂದೆ ಅವರು ಪ್ರಸ್ತಾಪಿಸಿದ್ದುಂಟು.[3]

1, ಅದೇ
2, ಅದೇ, ಪು. ೮೯
3, ಡಾ|| ಜಿ. ವರದರಾಜರಾವ್ : ಆಚಾರ್ಯರ ಆತ್ಮೀಯತೆ (ಪ್ರಬುದ್ಧ ಕರ್ನಾಟಕ : ಸಂ. ೫೩ ಸಂಚಿಕೆ ೨) ಪು. ೧೩೭–೧೩೮

ವಿದ್ಯಾರ್ಥಿಗಳಿಗೆ ಅವರ ಮನೆಗೆ ಹೋಗುವುದರಲ್ಲಿ ಯಾವುದೋ ಒಂದು ರೀತಿಯ ಉತ್ಸಾಹವಿರುತಿತ್ತು. ಹೋಗಿ ಕರೆದ ತಕ್ಷಣ 'ಓ' ಎಂದು ಆಳವ ಧ್ವನಿಯಲ್ಲಿ ಉತ್ತರಿಸಿ ಹೊರಬಂದು 'ಬಾ' ಎಂದು ಏಕವಚನದಲ್ಲಿ ಒಳಗೆ ಕರೆದು ಕುಳ್ಳಿರಿಸಿದರೆ ಮಾತಿನ ಬಹುಭಾಗವನ್ನು ವಿದ್ಯಾರ್ಥಿಯೇ ಆಡಬೇಕಾಗುತ್ತಿತ್ತು. 'ಏನು ಸಮಾಚಾರ', 'ಹೇಗಿದ್ದೀಯ' ಎಂಬ ಆತ್ಮೀಯವಾದ ನುಡಿಗಳು ವಿದ್ಯಾರ್ಥಿಗೆ ಸಲುಗೆಯನ್ನು ತಂದುಕೊಡುತ್ತಿದ್ದವು. ಯಾವುದೋ ಪದ್ಯ ಅರ್ಥವಾಗಿಲ್ಲ – ಸರಿ, ಪುಸ್ತಕ ತೆಗೆದು ಓದಿ ಅರ್ಥ ಹೇಳುತ್ತಿದ್ದರು. ಯಾವುದೋ ಸಂದೇಹ – ಸರಿ, ತಮ್ಮ ಹಳೆಯ ಟಿಪ್ಪಣಿ ಪುಸ್ತಕಗಳನ್ನು ತೆಗೆದು ಧೂಳು ಕೊಡವಿ, ಹುಡುಕಿ, ಅಲ್ಲಿಂದ ಓದಿ ಹೇಳುತ್ತಿದ್ದರು. ಬುದ್ಧಿವಂತ ವಿದ್ಯಾರ್ಥಿ ತಾನು ಹೊಸದಾಗಿ ಕಂಡುಕೊಂಡ ವಿಷಯ ತಿಳಿಸಿದಾಗ, ಎಷ್ಟೋ ಸಾರಿ, 'ಇದನ್ನಾಗಲೇ ನಾನು ನೋಡಿದ್ದೇನಯ್ಯಾ' ಎಂದು ತಮ್ಮ ಟಿಪ್ಪಣಿಯಿಂದ ತೆಗೆದು ತೋರಿಸುತ್ತಿದ್ದುದುಂಟು.

ವಿದ್ಯಾರ್ಥಿಗಳು ಮಧ್ಯಕಾಲೀನ ಪರೀಕ್ಷೆಯಲ್ಲಿ ಬರೆದ ಉತ್ತರ ಪತ್ರಿಕೆಗಳನ್ನು ಆಮೂಲಾಗ್ರವಾಗಿ ಒಂದು ಸಾಲು, ಶಬ್ದ ಬಿಡದೆ ಓದುತ್ತಿದ್ದರು. ಸುಮ್ಮನೆ ಊಹೆಮಾಡಿ ಬರೆದಿದ್ದರೆ 'ಆಧಾರ ಎಲ್ಲಿ ?' ಎಂದೂ 'ಉಡಾಫೆ' '**gas**' 'ಗಫ' ಎಂದೂ ಪಕ್ಕದಲ್ಲಿ ಗುರುತುಹಾಕಿ ಸೂಚಿಸಿಬಿಡುತ್ತಿದ್ದರು. ಒಮ್ಮೆ ಒಬ್ಬ ವಿದ್ಯಾರ್ಥಿ ಉತ್ತರ ಪತ್ರಿಕೆಯಲ್ಲಿ 'ಮಂಕುತಿಮ್ಮನ ಕಗ್ಗ, ಅನುಭಾವದ ಮುಗ್ಗ, ಸಗ್ಗಕ್ಕೇರಲು ಹಗ್ಗ' ಎಂದೆಲ್ಲ ಬರೆದಿದ್ದ. ಗುರುಗಳು ಅದನ್ನು ತಂದು ತರಗತಿಯಲ್ಲಿ ಓದಿದರು. ಅವರು ಓದಿದ ಧಾಟಿಯಲ್ಲಿ ಮೆಚ್ಚುಗೆಯಿರುವಂತೆ ತೋರುತ್ತಿತ್ತು. 'ಯಾರಯ್ಯಾ ಇದನ್ನು ಬರೆದದ್ದು ?' ಎಂದರು. ಅದನ್ನು ಬರೆದಿದ್ದ ವಿದ್ಯಾರ್ಥಿ ಒಡನೆಯೇ ಪುಟಿದೆದ್ದು 'ನಾನು ಸಾರ್' ಎಂದ. ಗುರುಗಳು ಮತ್ತೆ ಅದನ್ನು ಓದಿ 'ಆ ಹಗ್ಗಕ್ಕೆ ನೇಣು ಹಾಕಿಕೊ! ಅಲ್ಲಯ್ಯಾ ಮಂಕುತಿಮ್ಮನ ಕಗ್ಗ ಸ್ಫೂರ್ತಿಯಿಂದ ಸಹಜವಾಗಿ ಮೂಡಿಬಂದ ಶುದ್ಧ ಕಾವ್ಯವಲ್ಲ. ಅದನ್ನು ಬೇಕಾದರೆ ನೀತಿಕಾವ್ಯ ಎಂದು ಕರೆಯಬಹುದೇನೋ ! ವಿಮರ್ಶೆಯಲ್ಲಿ ಎಚ್ಚರವಾಗಿರಬೇಕು' ಎಂದು ತಿಳಿಸಿದರು.[1] ವಿದ್ಯಾರ್ಥಿ ಉತ್ತರ

1, ಹಂಪ ನಾಗರಾಜಯ್ಯ : ಗುರುಸ್ಮರಣೆ (ಕನ್ನಡ ನುಡಿ ಸಂ. ೩೪ ಸಂಚಿಕೆ ೧೫-೧೬) ಪು. ೮

ಚೆನ್ನಾಗಿ ಬರೆದಿದ್ದಲ್ಲಿ ಅದನ್ನು ಸಮಗ್ರವಾಗಿ ತರಗತಿಯಲ್ಲಿ ಓದಿ ಹೇಳಿ ತೆರೆದ ಮನಸ್ಸಿನಿಂದ ಕೊಂಡಾಡುತ್ತಿದ್ದರು. ಆಚಾರ್ಯ ಡಿ.ಎಲ್.ಎನ್. ರವರು ಗುಣಗ್ರಾಹಿಗಳೆಂಬುದನ್ನು ಎರಡು ಘಟನೆಗಳ ಮೂಲಕ[1] ಪ್ರೊ॥ ಜಿ. ವರದ ರಾಜಾರಾವ್‌ರವರು ವಿವರಿಸಿರುವರು. "ಕಾದಂಬರಿಯ ಸಾಮಾನ್ಯ ಪ್ರಶ್ನೆಯೇ ಬಹು ಪ್ರಿಯವಾಗಿ ಕಂಡಿದ್ದರಿಂದ, ಅದನ್ನೇ ಆರಿಸಿಕೊಂಡು ಬರೆದಿದ್ದೆ. ಹಡ್ಸನ್ ಅವರ **'An Introduction to the Study of Literature'** ಎಂಬ ಪುಸ್ತಕ ವನ್ನು ಮೇಲಿಂದ ಮೇಲೆ ಓದಿ ಸಂತೋಷಗೊಂಡಿದ್ದ ನನಗೆ ಆ ವಿಷಯದತ್ತ ಸಹಜವಾಗಿಯೇ ಗಮನ ಹೋಗಿತ್ತು. ಕಾದಂಬರಿಯ ಸ್ವರೂಪವನ್ನು ಸಾಕಷ್ಟು ವಿವರಿಸಿ, ಹಡ್ಸನ್ ಉದಾಹರಿಸಿದ್ದ **"pocket theatre"** ಎಂಬ ಪದದ ಸ್ವಾರಸ್ಯವನ್ನು ಬಹುವಾಗಿ ಮೆಚ್ಚಿಕೊಂಡು ವಿಮರ್ಶಿಸಿದ್ದೆ. ಶ್ರೀ ಡಿ.ಎಲ್.ಎನ್. ರವರು ನನ್ನ ಉತ್ತರವನ್ನು ಸಮಗ್ರವಾಗಿ ಓದಿ ಹೇಳಿ, ತೆರೆದ ಮನಸ್ಸಿನಿಂದ ಕೊಂಡಾಡಿದರು. ಇನ್ನೊಮ್ಮೆ ನಯಸೇನನ 'ಧರ್ಮಾಮೃತ'ವನ್ನು ಕುರಿತು ಬರೆದಿದ್ದ ನನ್ನ ಉತ್ತರವನ್ನು ಮೆಚ್ಚಿಕೊಂಡು ನಾನು ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಅಂಕಗಳನ್ನು ಕೊಟ್ಟಿದ್ದರು. ಆಗ ನಾನು ವಿಸ್ಮಯವನ್ನು ವ್ಯಕ್ತಪಡಿಸಲು, 'ಸಾಕೇನಯ್ಯಾ ನಂಬರು ?' ಎಂದು ಬಹಳ ಆತ್ಮೀಯವಾಗಿ ಕೇಳಿದರು. ನಾನು ನನ್ನ ಸ್ವೈಜ ಶಂಕೆಯನ್ನು ವ್ಯಕ್ತಪಡಿಸಿದೆ. ಆಗ ಅವರು "ಬಹಳ ಶ್ರಮವಹಿಸಿ ಪುಸ್ತಕವನ್ನು ಓದಿರುವಂತಿದೆ. ಅದಕ್ಕಾಗಿ ಕೈ ಧಾರಾಳವಾಯಿತು" ಎಂದರು.

ಆಚಾರ್ಯ ಡಿ.ಎಲ್.ಎನ್. ರವರಿಗೆ ಛಂದಸ್ಸು, ವ್ಯಾಕರಣಗಳ ಬಗೆಗೆ ಎಲ್ಲಿಲ್ಲದ ಪ್ರೀತಿ, ಗೌರವ. ಅವನ್ನು ಲಘುವಾಗಿ ಕಾಣುವುದು ಅಷ್ಟಾಗಿ ಅವರಿಗೆ ಹಿಡಿಸದು. ಅವರ ಸಾಂಪ್ರದಾಯಿಕ ನಿಷ್ಠೆ, ಒಲವು ಆ ವಿಷಯಗಳ ಬಗೆಗೆ ಅನನ್ಯವಾದುದು. ಯಾರಾದರೂ ಈ ಶಾಸ್ತ್ರ ವಿಷಯಗಳ ಬಗೆಗೆ ಅನುಚಿತವಾಗಿ ವರ್ತಿಸಿದರೆ ಅವರಿಗೆ ಕಂಡಾಬಟ್ಟೆ ಕೋಪ ಬರುತ್ತಿತ್ತು, ಆಚಾರ್ಯರಿಗೆ ವಿಪರೀತ ಕೋಪ ಬರಿಸಿದ ಪ್ರಸಂಗವೊಂದು ತರಗತಿಯಲ್ಲಿ ನಡೆಯಿತು. ಆಚಾರ್ಯರ ಕೋಪಕ್ಕೆ ಗುರಿಯಾದವರು ಶ್ರೀ ಬ್ರಹ್ಮಪ್ಪ ನವರು. ಈ ಸ್ವಾರಸ್ಯ ಪ್ರಸಂಗವನ್ನು ಅವರು ಹೀಗೆ ಒಂದೆಡೆ[2] ನಿರೂಪಿಸಿರುವರು.

1. ನೋಡಿ : ಪೂರ್ವೋಕ್ತ, ಪು. ೧೧೭
2. ಕನ್ನಡ ನುಡಿ, ಸಂ. ೩೪, ಸಂಚಿಕೆ ೧೫–೧೬, ಪು. ೨೧

"೧೯೪೮-೪೯ರಲ್ಲಿ ನಾನು ಬಿ.ಎ. (ಆನರ್ಸ್) ಕೊನೆಯ ತರಗತಿಯಲ್ಲಿದ್ದೆ. ಛಂದಸ್ಸು ನೆನಪಿಟ್ಟುಕೊಳ್ಳುವುದು ನನಗೆ ತಲೆನೋವಿನ ಕೆಲಸವಾಗಿತ್ತು. ಕನ್ನಡ ಕೈಪಿಡಿಯಲ್ಲಿ ಸಂಸ್ಕೃತ ವೃತ್ತಗಳ ಛಂದೋವಿಲಾಸವನ್ನು ಯಾಂತ್ರಿಕವಾಗಿ ನಿರೂಪಿಸಿದೆ. ಉದಾಹರಣೆಗಾಗಿ ಚಂಪಕಮಾಲಾ ತೆಗೆದುಕೊಳ್ಳಿ. "ನಜಭಜ ಜಂಜರಂ ಚಂಪಕಮಾಲಂ" ಇದರಲ್ಲಿ ನೀರಸತೆ ಎದ್ದು ಕಾಣುವುದಿಲ್ಲವೆ ? ಇಂಥವನ್ನು ಮರೆಯದಂತೆ ನೆನಪಿಟ್ಟುಕೊಳ್ಳುವುದು ಪಂಡಿತ ಬುದ್ಧಿಗೆ ಮಾತ್ರ ಸಾಧ್ಯ. ನನಗೂ ಶಾಸ್ತ್ರಭಾಗಕ್ಕೂ ಎಣ್ಣೆ ಸೀಗೆಕಾಯಿಯ ಸ್ನೇಹ. ವ್ಯಾಕರಣ, ಛಂದಸ್ಸು, ಕಾವ್ಯಮೀಮಾಂಸೆ ಇವು ಇಂದಿಗೂ ನನಗೆ ಹಿಡಿಸಲಿಲ್ಲ ಇಂದಿಗೂ ಹಿಡಿಸುವುದಿಲ್ಲ. ತಪ್ಪುಡು ಕುಟ್ಟುವ ಕಾರ್ಯವೆಂದು ನಾನೇ ತೀರ್ಮಾನಕ್ಕೆ ಬಂದಿದ್ದೆ. ವಿದ್ವಾಂಸರು ಒಪ್ಪಲಿ ಬಿಡಲಿ ಇಂದಿಗೂ ಅದೇ ನನ್ನ ತೀರ್ಮಾನ. ಆದರೂ ಹಾಳಾದ ಪರೀಕ್ಷೆ ಒಂದಿದೆಯಲ್ಲ. ಇದು ನನಗೆ ಒಪ್ಪಲಿ ಬಿಡಲಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಬೇಕಾದರೆ ಇವನ್ನು ಒಗ್ಗಿಸಿಕೊಳ್ಳಲೇಬೇಕು. ಬಲವಂತಕ್ಕೆ ಮಕ್ಕಳು ಔಷಧಿ ಕುಡಿಯುವಂತೆ ನಾನೂ ಮುಖ ಸಿಂಡರಿಸಿಕೊಂಡು ಸಾಹಿತ್ಯದ ಈ ಶಾಸ್ತ್ರ ವಿಭಾಗಕ್ಕೆ ತಾಳ ಹಾಕಬೇಕಾಯಿತು.

ಪರಮಪೂಜ್ಯ ದೊ.ಲ.ನ.ರವರು ಛಂದಸ್ಸಿಗೆ ಬರುತ್ತಿದ್ದರು. ಎಲ್ಲ ಛಂದೋವಿಧಾನಗಳೂ ಅವರ ತುಟಿ ನಾಲಗೆಯಲ್ಲಿ ನರ್ತಿಸುತ್ತಿದ್ದವು. ಆಗಾಗ ನಮ್ಮನ್ನು ಪ್ರಶ್ನೆ ಕೇಳಿ ಕೆಣಕುತ್ತಿದ್ದರು. ಛಂದಸ್ಸು ನನ್ನ ತಲೆಯಲ್ಲಿ ನಿಲ್ಲಲೊಲ್ಲದು, ನಾನು ಬಿಡಲೊಲ್ಲೆ. ಏನಾದರೂ ಮಾಡಿ ಹೊಸ ವಿಧಾನವನ್ನು ಕಂಡುಹಿಡಿಯಬೇಕೆಂದು ಹಟತೊಟ್ಟೆನು. ನನ್ನ ಹೆಸರೇ ಬ್ರಹ್ಮ! ಸೃಷ್ಟಿ ಕಾರ್ಯ ನನಗೆ ಹೊಸದೇನಲ್ಲ. ವಿನೋದವಾಗಿಯೂ ಇರಬೇಕು, ವಿಷಯ ಪೂರ್ಣವಾಗಿಯೂ ಇರಬೇಕು. ನನ್ನಲ್ಲೇ ಚಿಂತನ ಮಂಥನ ನಡೆಯಿತು. ನನ್ನ ಪ್ರತಿಭೆಯ ಸಂಪುಟ ಅರಳಿತು. ಕಲ್ಪನಾವಿಲಾಸ ಗರಿಗೆದರಿತು ! ಸಂಸ್ಕೃತ ವೃತ್ತಗಳ ಛಂದೋವಿಲಾಸವನ್ನೆಲ್ಲಾ ಕರಾರುವಾಕ್ಕಾಗಿ, ರಸವತ್ತಾಗಿ ನಾನೇ ರಚಿಸಿದೆ. ತುಂಬ ರಹಸ್ಯವಾಗಿ ಈ ಸೃಷ್ಟಿಕಾರ್ಯ ನಡೆಯಿತು. ಒಮ್ಮೆ ಪೂಜ್ಯ ದೊ.ಲ.ನ.ರವರ ಗಮನಕ್ಕೆ ತಂದು ಭೇಷ್ ಎನ್ನಿಸಿಕೊಳ್ಳಬೇಕೆಂಬ ಚಪಲ ನನ್ನನ್ನು ಕಾಡಿತು. ಒಂದು ದಿನ ತಡೆದೆ. ಅನಂತರ ತಡೆಯದಾದೆ. ನನ್ನ ಸೃಷ್ಟಿಕಾರ್ಯವನ್ನು ಧೈರ್ಯಮಾಡಿ ಡಿ;ಎಲ್.ಎನ್.ರವರ ಮುಂದಿಟ್ಟೆ.

ನೋಡುತ್ತಿದ್ದಂತೆ ಮೊಟ್ಟಮೊದಲು ಅವರ ಕಣ್ಣಿಗೆ ಬಿದ್ದ ಛಂದೋವಿಲಾಸವೆಂದರೆ "ಕುರಿಗೊಬ್ಬರ ತೋಟಕೆ ಜೀವರಸ" ಈ ಮಹಾಕಾವ್ಯ. ಇದರಲ್ಲಿ ತೋಟಕವೃತ್ತದ ರಚನಾವೈಖರಿಯೆಲ್ಲ ಅಡಗಿದೆ. ನೆನಪೂ ಇಟ್ಟುಕೊಳ್ಳಬಹುದು; ಇಷ್ಟೇ ರಸಪೂರ್ಣವಾಗಿ ಉಳಿದ ಛಂದೋವಿಧಾನಗಳಿಗೂ ನನ್ನ ಬ್ರಹ್ಮಸೃಷ್ಟಿ ಪರಿಪೂರ್ಣವಾಗಿ ನಡೆದಿದ್ದಿತು.

ಇದ್ದಕ್ಕಿದ್ದಂತೆ ದೊ.ಲ.ನ.ರವರ ಮುಖ ಕೆಂಪಿಟ್ಟಿತು. ಕಣ್ಣು ಕೆಂಡವಾಯಿತು. ತುಟಿ ನಡುಗಿದವು. ಗದೆಯೆತ್ತುವ ಠೀವಿಯಲ್ಲಿ ಮೈ ತೂಗಾಡಿತು; ನೀನು ಮಹಾವಿದ್ವಾಂಸನೇನಯ್ಯ ಎಂಬ ನಾಂದಿಯೊಡನೆ ನನ್ನ ಮೇಲೆ ಕನ್ನಡದ, ಇಂಗ್ಲಿಷಿನ ಹಾಗೂ ಸಂಸ್ಕೃತದ ಬೈಗುಳ ಸುರಿಮಳೆಯಾಯಿತು. ನನ್ನ ಸೃಷ್ಟಿಯಲ್ಲೇ ಭೂಕಂಪವಾದಂತೆ ನಾನು ಬೆವತುಹೋದೆನು. ನನ್ನ ಮಹಾಯೋಜನೆಯೆಲ್ಲ ಅಭಾಸಕ್ಕೆ ಗುರಿಯಾಯಿತು. ಆಗಾಗ ನನ್ನನ್ನು ನಿಲ್ಲಿಸಿ ದೊ.ಲ.ನ.ರವರು ಮುಖದ ಮೇಲೆ ನೀರಿಳಿಸಿದರು, ಕಾಲಭೈರವನಂತೆ ಕೂಗಾಡಿದರು. ನಾನು ತುಟಿಪಿಟಕ್ಕೆನ್ನಲಿಲ್ಲ. ತರಗತಿಯಲ್ಲಿ ಉಳಿದವರಿಗೂ ದೊ.ಲ.ನ.ರವರ ಭಾರ್ಗವಾವೇಶಕ್ಕೆ ಕಾರಣ ತಿಳಿಯದು. ಆ ಘಂಟೆಯೆಲ್ಲ ನನ್ನ ಮೇಲೆ ರೇಗಾಡುವುದರಲ್ಲೇ ಕಳೆದುಹೋಯಿತು. ಅವರು ರೇಗುವುದು ನಾನು ಸತ್ತ ಶವದಂತೆ ತೆಪ್ಪಗಿರುವುದು! ಎರಡೂ ಎರಡು ಪರಮಾವಧಿಯನ್ನು ಮುಟ್ಟಿದ್ದವು.

ತರಗತಿ ಮುಗಿಯಿತು. ಉಳಿದವರು ಕಾರಣವನ್ನು ಕೇಳಿದರು. ನಾನು ವಿವರಿಸಿದೆ. ತಮ್ಮ ಸಂತಾಪವನ್ನು ಸಹಪಾಠಿಗಳು ವ್ಯಕ್ತಪಡಿಸಿದರು. ಒಬ್ಬಿಬ್ಬರು "ನೀನು ತಿರುಗಿಬೀಳಬೇಕಾಗಿತ್ತು, ನಿನ್ನ ಹೇಡಿತನ ವಿದ್ಯಾರ್ಥಿ ಸಮುದಾಯಕ್ಕೇನೆ ಅಪಮಾನಕರವಾದುದು" ಎಂದು ನನ್ನನ್ನು ಹೀಯಾಳಿಸಿದರು.

ಒಂದು ವಾರ ನಾನು ದೊ.ಲ.ನ.ರವರ ತರಗತಿಗೆ ಚಕ್ಕರ್ ಹೊಡೆದೆ. ಅವರಲ್ಲಿ ಹೋಗಿ ಕ್ಷಮೆ ಕೇಳಲಿಲ್ಲ. ಕೇಳಬಾರದೆಂಬ ಹಠವೇನೂ ಇರಲಿಲ್ಲ, ಅವರನ್ನು ನೆನೆದರೇ ನಡುಕ ಬರುವಾಗ ಪ್ರತ್ಯಕ್ಷವಾಗಿ ದರ್ಶನಮಾಡುವ ಧೈರ್ಯವೆಲ್ಲಿ? ಒಂದು ವಾರ ಕಳೆದ ಮೇಲೆ ದೊ.ಲ.ನ.ರವರೇ ಪ್ರಯಾಸಪಟ್ಟು ನನ್ನನ್ನು ಹುಡುಕಿಕೊಂಡು ಬಂದರು. "ರೀ ಬ್ರಹ್ಮಪ್ಪ!" ಎಂದು

ಕೂಗಿದರು. ತಿರುಗಿ ನೋಡಿದೆ. ಅನಿರೀಕ್ಷಿತವಾಗಿ ದೊ.ಲ.ನ.ರವರ ದರ್ಶನ! ಜಂಘಾಬಲವೇ ಉಡುಗಿದಂತಾಯಿತು! "ಇಲ್ಲಿ ಬನ್ರಿ" ಎಂದು ಕರೆದರು. ವಿಧಿಯಿಲ್ಲ, ಪುಣ್ಯಕೋಟಿ ಹಸುವಿನಂತೆ ಅವರ ಬಳಿ ಹೋಗಿ ತಲೆ ತಗ್ಗಿಸಿಕೊಂಡು ನಿಂತೆನು. ನನ್ನ ಬ್ರಹ್ಮಸೃಷ್ಟಿಯ ಛಂದೋವಿಲಾಸದ ಲೇಖನವನ್ನು ಹಿಡಿದುಕೊಂಡು "ಇದನ್ನು ಯಾವ ಉದ್ದೇಶದಿಂದ ನೀವು ಬರೆದಿರಿ ?" ಎಂದು ದೊ.ಲ.ನ.ರವರು ಮೃದುವಾಗಿ ಕೇಳಿದರು. ನನಗೂ ತುಸು ಧೈರ್ಯ ಬಂದಿತು. "ನೆನಪಿಟ್ಟುಕೊಳ್ಳಲು ಈ ರೀತಿ ಮಾಡಿದೆ ಸಾರ್" ಎಂದು ಗೊಣಗಿದೆನು. "ಹಾಗೋ ? ನಡೆಯಿರಿ ಹೋಟೇಲಿನಲ್ಲಿ ಮಾತಾಡೋಣ" ಎಂದು ಕೈಹಿಡಿದು ಕರೆದುಕೊಂಡು ಹೆಲ್ತ್ ಕಿಚನ್ನಿಗೆ ಹೋದರು. ಮಾಣಿಯನ್ನು ಕರೆದು ಬಾದಾಮಿ ಹಲ್ವ ತರಿಸಿದರು, ಮಸಾಲೆ ದೋಸೆ ತರಿಸಿದರು. ನನಗೂ ಬಲವಂತವಾಗಿ ತಿನ್ನಿಸಿ ಅವರೂ ತಿಂದರು. "ಬ್ರಹ್ಮಪ್ಪ ನಾನೇ ದುಡುಕಿದೆ, ಕ್ಷಮಿಸು" ಎನ್ನುತ್ತ ಎರಡು ತೊಟ್ಟು ಕಂಬನಿ ಮಿಡಿದರು. ನಾನು ಹರಶಿವ ಎನ್ನಲಿಲ್ಲ. "ನಡಿ ಕ್ಲಾಸಿಗೆ ಹೋಗೋಣ" ಎಂದು ಕರೆದುಕೊಂಡುಹೋದರು. ಕ್ಲಾಸಿನಲ್ಲಿ ನಿಂತು ಮತ್ತೊಮ್ಮೆ ನನ್ನನ್ನು ವೃಥಾ ಬೈದುದಕ್ಕಾಗಿ ಕ್ಷಮೆ ಕೇಳಿದರು. ಅಂದಿನಿಂದ ನನಗೂ ಅವರಿಗೂ ತುಂಬಾ ಹತ್ತಿರವಾಯಿತು."

ಇದು 'ದೊಡ್ಡಬೆಲೆ'ಯ ಆಚಾರ್ಯರ ದೊಡ್ಡಗುಣ!

ಪ್ರೊ॥ ಡಿ. ಎಲ್. ಎನ್.ರವರಿಗೆ ವ್ಯಕ್ತಿಗಳ ಬಗ್ಗೆ, ಅವರ ವೈಯಕ್ತಿಕ ಸಂಗತಿಗಳ ಬಗ್ಗೆ ಮಾತನಾಡುವುದು ಸ್ವಲ್ಪವೂ ಹಿಡಿಸುತ್ತಿರಲಿಲ್ಲ. ಪ್ರೊ. ಕೆ.ಜಿ. ಕುಂದಣಗಾರರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದ ಸಂದರ್ಭದಲ್ಲಿ ಡಿ. ಎಲ್. ಎನ್. ಅವರ ಮನೆಗೆ ಬಂದ ಕೆಲವರು ಮಾತಿನ ನಡುವೆ 'ಸಾರ್, ಕುಂದಣಗಾರರು ಯಾವ ಜಾತಿ ?' ಎಂದು ಕೇಳಿದರು. ಸಂತೋಷದಿಂದ ಮಾತನಾಡುತ್ತಿದ್ದ ಡಿ. ಎಲ್. ಎನ್. ಇದ್ದಕ್ಕಿದ್ದಂತೆ ಒಂದು ಕ್ಷಣ ಸುಮ್ಮನಾದರು. ಕೋಪ ಬಂದರೂ, ಅದನ್ನು ತೋರಿಸಿಕೊಳ್ಳದೆ 'ನೋಡಪ್ಪಾ, ನನಗೆ ಕುಂದಣಗಾರರು ಗೊತ್ತೇ ಹೊರತು, ಅವರ ಜಾತಿ ಯಾವುದು ಎನ್ನುವುದು ಗೊತ್ತಿಲ್ಲ' ಎಂದರು. ಅಲ್ಲಿಗೆ ಮಾತು ಸಾಕು ಎನ್ನುವಂತೆ ಮುಂದೆ ಮಾತನಾಡಲಿಲ್ಲ. ಒಂದೆರಡು ನಿಮಿಷ ಯಾರೂ ಮಾತನಾಡ

ಲಿಲ್ಲ. ಬಂದವರು 'ಆ ಪ್ರಶ್ನೆ ನಿಮ್ಮನ್ನು ಕೇಳಬಾರದಿತ್ತು ಕ್ಷಮಿಸಿ' ಎಂದು ಹೇಳಿ ಹೊರಟುಹೋದರು. ಈ ಘಟನೆ ಅವರ ಮನೋಧರ್ಮಕ್ಕೆ ಸಾಕ್ಷಿ.[1]

ತರಗತಿಯಲ್ಲಿ ವಿದ್ಯಾರ್ಥಿ ತನಗೆ ಸಂಬಂಧಪಡದ ವಿಷಯಗಳನ್ನು ಕೇಳ ಕೂಡದು. ಇದನ್ನು ಆಚಾರ್ಯ ಡಿ. ಎಲ್. ಎನ್. ವಿದ್ಯಾರ್ಥಿಗಳಲ್ಲಿ ನಿರೀಕ್ಷಿಸು ತ್ತಿದ್ದರು. ಒಮ್ಮೆ ಅಪ್ರಿಯವಾದ ಘಟನೆಯೊಂದು ನಡೆಯಿತು: ಡಿ. ಎಲ್. ಎನ್. ತರಗತಿಯಲ್ಲಿ ಪಾಠ ಮುಗಿಸಿದ ಮೇಲೆ ವಿದ್ಯಾರ್ಥಿಯೊಬ್ಬ 'ಸಾರ್, ವಡ್ಡಾರಾಧನೆಗೆ ಮುನ್ನುಡಿ ಪೀಠಿಕೆ ಟಿಪ್ಪಣಿ ಯಾವಾಗ ಬರೆಯುತ್ತೀರಿ ಸಾರ್?' ಎಂದು ವಿನಯ ಗೌರವದಿಂದ ಕೇಳಿದ. ಕೂಡಲೆ ಗುರುಗಳು ಕೆರಳಿದರು. ಅದುವರೆಗೂ ಬಗ್ಗಿಸಿದ್ದ ತಲೆಯನ್ನು ಹಾವಿನ ಹೆಡೆಯಂತೆ ಎತ್ತಿ 'ಇದೇ ತಲೆಹರಟೆ ಎನ್ನುವುದು. That is none of your business' ಎಂದು ರೇಗಿದರು. ಆದರೆ ಅದೆಲ್ಲಾ ಕೆಲವು ಕ್ಷಣಗಳ ವರೆಗೆ ಮಾತ್ರ. ತರಗತಿಯಿಂದ ಹೊರಗೆ ಬರುತ್ತಿದ್ದಂತೆಯೇ ಆ ವಿದ್ಯಾರ್ಥಿಯನ್ನು ಹತ್ತಿರಕ್ಕೆ ಕರೆದ ಗುರುಗಳು ಅವನ ಬೆನ್ನಮೇಲೆ ಕೈಹಾಕಿ 'ನೋಡಪ್ಪಾ, ವಡ್ಡಾರಾಧನೆಗೆ ಪೀಠಿಕೆ ಬರೆಯಲು ನನಗೆ ಹಂಬಲವಿಲ್ಲವೆನ್ನಬೇಡ. ಅದು ಅಷ್ಟು ಸುಲಭದ ಕೆಲಸವಲ್ಲ. ಅನೇಕ ಸಿಕ್ಕುಗಳಿವೆ. ಅವನ್ನೆಲ್ಲಾ ಹೆಕ್ಕಿ ನೋಡುತ್ತಿದ್ದೇನೆ. ಡಾ॥ ಆ.ನೇ. ಉಪಾಧ್ಯೆ ಯವರಿಗೂ ನನಗೂ ಕೆಲವು ಭಿನ್ನಾಭಿಪ್ರಾಯಗಳಿವೆ. ಸಮಸ್ಯೆಗೆ ಸಮಾಧಾನ ದೊರೆತಾಗ ಸಂತೋಷದಿಂದ ಬರೆಯುತ್ತೇನೆ' ಎಂದರು.[2] 'ಗುರುಗಳಿಗೆ ಕೋಪ ಬರುವುದು ಅಪರೂಪ. ಬಂದರೂ ಅದು ಹೆಚ್ಚು ಹೊತ್ತು ಇರುತ್ತಿರಲಿಲ್ಲ. ವಾತ್ಸಲ್ಯದ ಕಾವಿಗೆ ಕರಗಿಹೋಗುತ್ತಿತ್ತು.

ಒಂದು ಪದ್ಯ ಓದಿ ಅರ್ಥವಿವರಣೆ ಕೊಡುವಷ್ಟಕ್ಕೆ ಡಿ.ಎಲ್.ಎನ್. ತರಗತಿ ಮುಗಿಯುತ್ತಿರಲಿಲ್ಲ. 'ಪಂಪಭಾರತ' ಪಾಠಮಾಡುತ್ತಿದ್ದರೆ ಪಂಪನನ್ನು ನೆಪಮಾಡಿಕೊಂಡು ಸಮಗ್ರ ಕನ್ನಡ ಸಾಹಿತ್ಯದ ಸಿಂಹಾವಲೋಕನ ಮಾಡು ತ್ತಿದ್ದರು. ಎನ್. ಪ್ರಹ್ಲಾದರಾವ್‌ರವರು ತಮ್ಮ ಗುರುಗಳ ಬೋಧನೆಯಲ್ಲಿನ

---

1. ಬಿ. ವಿ. ವೈಕುಂಠರಾಜು : ಸಪ್ತಶೃಂಗ, ಪು. ೧೦
2. ಹಂಪ. ನಾಗರಾಜಯ್ಯ : ಪೂರ್ವೋಕ್ತ

ವೈಶಿಷ್ಟ್ಯವನ್ನು ಹೀಗೆ ಗುರುತಿಸುವರು[1] : "ಅವರ ಶಕ್ತಿ ಅಮೋಘವಾದದ್ದು. ಸಾಹಿತ್ಯದ ರಸವತ್ತಾದ ಭಾಗಗಳೆಲ್ಲಾ ನಮ್ಮ ನಾಲಗೆಯ ತುದಿಯಲ್ಲಿರಲಿ ಎನ್ನುವುದು ವಿದ್ವಾಂಸರ ಪ್ರಥಮ ಲಕ್ಷಣ. ಕ್ಲಿಷ್ಟವಾದ ಒಂದು ಪದ, ರಸವತ್ತಾದ ಒಂದು ವಾಕ್ಯ ಬಂದಿತೆಂದರೆ ಗುರುಗಳು ಪಾಠವನ್ನು ಅಲ್ಲಿಗೆ ನಿಲ್ಲಿಸಿ ಅದರ ವಿವರಣೆಗಾಗಿ ಕನ್ನಡ ಸಾಹಿತ್ಯ ಸಾಗರವನ್ನೇ ಈಸಾಡಿ ಹತ್ತಾರು ಉದಾಹರಣೆಗಳನ್ನು ಕೊಡುತ್ತಿದ್ದರು. ಕೇವಲ ಪುಸ್ತಕಗಳಿದ್ದ ಮಾತ್ರಕ್ಕೇ ವಿಶ್ವವಿದ್ಯಾನಿಲಯದ ಓದು ಪೂರ್ಣವಾಗುವುದಿಲ್ಲ. ಅದರ ಪೂರ್ಣತೆಗೆ ಇಂಥಾ ನುರಿತ ವಿದ್ವಾಂಸರ ಸಹವಾಸ ಅತ್ಯಗತ್ಯ. ಒಂದು ಗಂಟೆಯ ಪಾಠದಲ್ಲಿ ನುರಿತ ವಿದ್ವಾಂಸರು ಅದೆಷ್ಟು ವಿಷಯಗಳನ್ನು ಅಡಕಮಾಡಬಲ್ಲರೆಂಬುದಕ್ಕೆ ಶ್ರೀಯುತರ ತರಗತಿಗಳು ಉತ್ತಮ ನಿದರ್ಶನಗಳಾಗಿವೆ. ಚಿಕ್ಕದೇವರಾಜ ಒಡೆಯರ ಕಾಲದ ಸಾಹಿತ್ಯವನ್ನು ಪಾಠ ಹೇಳುವಾಗ ಅವರು ಮೈಸೂರಿನ ಪ್ರಾಚ್ಯಸಂಶೋಧನ ಮಂದಿರದಿಂದ ಓಲೆಗರಿಯ ಪ್ರತಿಗಳನ್ನು ತಂದು, ಓದಿ, ಟಿಪ್ಪಣಿ ಮಾಡಿಕೊಂಡು, ಅದರ ಆಧಾರದ ಮೇಲೆ ಮಾತನಾಡುವಷ್ಟು ಖಚಿತವಾದ ವಿದ್ವತ್ತನ್ನು ಕಾಣುವುದು ಅಪರೂಪ: ವ್ಯಾಸಂಗವೇ ಅವರಿಗೊಂದು ಆನಂದದ ಕೆಲಸ. ಓದುವುದೇ ಅವರ ಕರ್ತವ್ಯ. ಓದಿ ತಿಳಿದುಕೊಳ್ಳದ ಯಾವ ವಿಷಯದ ಮೇಲೂ ಏನೂ ಮಾತನಾಡದ ಅವರ ಸಂಯಮ ಅದ್ವಿತೀಯವಾದುದು..."

---

1. ಜ್ಞಾನೋಪಾಸಕ, ಪು. ೯೬–೯೭

ಶಿಷ್ಯ ಮಿತ್ರ ವಾತ್ಸಲ್ಯ

ಡಿ.ಎಲ್.ಎನ್. ಕೆಲಸಕ್ಕೆ ಸೇರಿದ ಹೊಸತರಲ್ಲಿ ಕನ್ನಡದ ಬಗ್ಗೆ, ಕನ್ನಡ ಓದುವವರ ಬಗ್ಗೆ ತೀರಾ ತಿರಸ್ಕಾರವಿದ್ದಿತು. ಆಗ ಭಾಷೆ ಎಂದರೆ ಇಂಗ್ಲೀಷ್, ಸಾಹಿತ್ಯವೆಂದರೆ ಇಂಗ್ಲೀಷ್ ಸಾಹಿತ್ಯ ಎಂಬ ಭಾವನೆ ಆಳವಾಗಿ ಬೇರುಬಿಟ್ಟಿತ್ತು. ಆ ಪರಿಸರದಲ್ಲಿ ಕನ್ನಡಕ್ಕೆ ಮರ್ಯಾದೆ, ಗೌರವ ತಂದುಕೊಡುವುದು ಕನ್ನಡ ಓದಿದವರು ಯಾವ ವಿಷಯದ ಬಗ್ಗೇ ಆಗಲಿ ತಿಳಿದುಕೊಂಡಿದ್ದಾರೆ, ಓದಿ ಕೊಂಡಿದ್ದಾರೆ ಎಂಬುದನ್ನು ತಿಳಿಯಪಡಿಸಬೇಕಾಗಿದ್ದಿತು. ಅದಕ್ಕಾಗಿ ಡಿ.ಎಲ್.ಎನ್. ವಿಜ್ಞಾನ ವಿಷಯಗಳು, ಮನಶ್ಶಾಸ್ತ್ರ, ತತ್ವಶಾಸ್ತ್ರ, ಭಾಷಾ ಶಾಸ್ತ್ರ, ಸಮಾಜಶಾಸ್ತ್ರ, ಇತಿಹಾಸ, ಇಂಗ್ಲೀಷ್ ಸಾಹಿತ್ಯ ಮತ್ತು ವಿಮರ್ಶೆ ಇತ್ಯಾದಿಗಳ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದರು. ತಮ್ಮ ವಿದ್ಯಾರ್ಥಿಗಳೂ ಕನ್ನಡಕ್ಕೆ ಮರ್ಯಾದೆ ತರಲು ಇವೆಲ್ಲವನ್ನೂ ಓದಬೇಕೆಂದು ಅವರು ಇಷ್ಟ ಪಡುತ್ತಿದ್ದರು. 'ನೀವು ತೊಂಡುದನ ಮೇಯುವಂತೆ ಮೇಯಬೇಕು' ಎಂದು ವಿದ್ಯಾರ್ಥಿಗಳನ್ನು ಕುರಿತು ಆಗಾಗ್ಗೆ ಹೇಳುತ್ತಿದ್ದರು.

ತಮ್ಮ ಶಿಷ್ಯರು ಬರೆದ ಒಳ್ಳೆಯ ಲೇಖನವೊಂದು ಕಣ್ಣಿಗೆ ಬಿದ್ದಾಗ, ತಮ್ಮ ಮೆಚ್ಚುಗೆಯನ್ನು ಇತರರ ಮುಂದೆಯೋ ಕಾಗದ ಬರೆದೋ ವ್ಯಕ್ತ ಪಡಿಸುವ ವಿಶಾಲ ಮನಸ್ಸು ಅವರದು. ಜಿ. ವರದರಾಜರಾಯರ 'ಶ್ರೀ ಪುರಂದರದಾಸರ ಕೀರ್ತನೆಗಳು' ಎಂಬ ಲೇಖನದ ಬಗ್ಗೆ; ಎಸ್. ವಿ. ಪರಮೇಶ್ವರ ಭಟ್ಟರ 'ಇಂದ್ರಚಾಪ' ಕವನ ಸಂಕಲನದ ಬಗ್ಗೆ ಅವರು ಮಾಡಿದ ಪ್ರಶಂಸೆ ಅನೇಕರಿಗೆ ತಿಳಿದಿದೆ. ಡಾ॥ ಚಿದಾನಂದಮೂರ್ತಿಯವರ ಅನೇಕ ಸಂಶೋಧನ ಲೇಖನಗಳ ಬಗ್ಗೆ ಅವರು ಮೆಚ್ಚಿ ಬಾಯಿತುಂಬ ಹೊಗಳಿದ್ದನ್ನು ಕೇಳಿದವರಿರುವರು. ಎಚ್. ಎಂ. ಶಂಕರನಾರಾಯಣರಾವ್‌ರವರು 'ಆತ್ಮ ರಾಮದಾಸ' ಎಂಬ ಹೊಸ ಕವಿಯನ್ನು ಕುರಿತು ಪರಿಷತ್ಪತ್ರಿಕೆಯಲ್ಲಿ ಲೇಖನ ವೊಂದನ್ನು ಬರೆದಾಗ, ಅದನ್ನು ಓದಿದ ಅವರು ತಮ್ಮ ಶಿಷ್ಯನನ್ನು ಕುರಿತು

'ಸರಿಯಾದ ದಾರಿಯಲ್ಲಿ ಹೋಗಿದ್ದೀಯೆ' ಎಂದು ಬೆನ್ನುತಟ್ಟಿ ಪ್ರೋತ್ಸಾಹಿಸಿದರು. ೧೯೪೪ರಲ್ಲಿ ತಮ್ಮ ಈ ಶಿಷ್ಯನೇ ಪಂಪಭಾರತದ ಹದಿಮೂರನೆಯ ಆಶ್ವಾಸಕ್ಕೆ ಟೀಕೆಯನ್ನು ಬರೆದಾಗ ಅದನ್ನು ಓದಿ ನೋಡಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ತಾವು ಸಂಪಾದಿಸಿದ 'ಶಬ್ದಮಣಿ ದರ್ಪಣ'ವನ್ನು ಕುರಿತು ಡಾ|| ಎಂ. ಎಂ. ಕಲ್ಬುರ್ಗಿ, ಹಂಪ ನಾಗರಾಜಯ್ಯ ಅವರು ಬರೆದ ಲೇಖನಗಳನ್ನು ಪ್ರಸ್ತಾಪಿಸುತ್ತಾ "ಎರಡರಲ್ಲೂ ಶಬ್ದಮಣಿ ದರ್ಪಣ ಆದಷ್ಟು ನಿರ್ದುಷ್ಟವಾಗಿರಬೇಕೆಂಬ ಕಾತರ ಕರೆಕರೆಗಳು, ಎರಡರಲ್ಲೂ ಅನ್ವೇಷಕ ಚಿಕಿತ್ಸಕ ದೃಷ್ಟಿಗಳಿವೆ. ಅವರ ಹಂಬಲದಲ್ಲಿ ಸ್ವಲ್ಪಭಾಗವಾದರೂ ಪ್ರಕೃತ ಸಂಪಾದಕನಲ್ಲಿದೆಯೆಂದು ಅವರು ತಿಳಿದುಕೊಂಡರೆ ಸಾಕು" ಎಂದಿರುವರು. ತಮ್ಮನ್ನು ಟೀಕಿಸಿದವರ ಬಗ್ಗೆ ಅವರು ಪ್ರಕಟಪಡಿಸಿದ ಸೌಜನ್ಯ ಯಾರೇ ಆಗಲಿ ಮೆಚ್ಚುವಂತಹದು.

ಡಿ.ಎಲ್.ಎನ್. ತಮ್ಮ ಶಿಷ್ಯರು ಯಾರೇ ಇರಲಿ, ಎಲ್ಲೇ ಇರಲಿ ಅವರು ತಮ್ಮ ಓದಿನಲ್ಲಿ, ಪಾಠಪ್ರವಚನದಲ್ಲಿ ಸಂದೇಹ ಬಂದು ಅದು ಬಗೆಹರಿಯದೆ ಹೋದಾಗ ಪತ್ರ ಬರೆದಲ್ಲಿ ಆವರ ಸಂದೇಹವನ್ನು ಕೂಡಲೆ ಪರಿಹರಿಸುತ್ತಿದ್ದರು. ಶ್ರೀ ವರದರಾಜಾರಾಯರು 'ಗಿರಿಜಾಕಲ್ಯಾಣ ಮಹಾಪ್ರಬಂಧ ಸಂಗ್ರಹ' ದಲ್ಲಿನ 'ಸಲೆ ರವಿ ತೇಜಂಗುಂದುತೆ...' ಎಂದು ಪ್ರಾರಂಭವಾಗುವ ಕಂದಪದ್ಯದಲ್ಲಿ ಪ್ರಯೋಗವಾಗಿರುವ **'ಎಲೆನಿಂದುವು'** ಎಂಬ ಪ್ರಯೋಗವನ್ನು 'ಕರ್ಣಾಟಕ ಕಾದಂಬರೀ ಸಂಗ್ರಹ'ದಲ್ಲಿ ಚಂದ್ರಾಪೀಡನು ಮಹಾಶ್ವೇತೆಯನ್ನು ಕಂಡು ಕುತೂಹಲಗೊಂಡು 'ಒಯ್ಯನೆ ಬೆಸಗೊಳ್ವೆನಾರ್ಗೆ ಸತಿ ನೀಂ ಪೆಸರೇಂ' ಎಂಬ ಪದ್ಯಚರಣದಲ್ಲಿ (III – ೩೪) ಬರುವ **'ಆರ್ಗೆ ಸತಿ ನೀಂ'** ಎಂಬ ಪ್ರಯೋಗವನ್ನು ಕುರಿತು ವಿವರಣೆ ನೀಡಬೇಕೆಂದು ಪ್ರಾರ್ಥಿಸಿ ಕಾಗದ ಬರೆದರು. ಆ ಪತ್ರಕ್ಕೆ ಡಿ.ಎಲ್.ಎನ್. ಬರೆದ ಉತ್ತರದಲ್ಲಿ[1]

"...ನೀವು ಕೇಳಿದ ಪ್ರಶ್ನೆಗಳಿಗೆ ನನಗೆ ತೋರಿದಂತೆ ಇಲ್ಲಿ ಬರೆದಿದ್ದೇನೆ. ವಿಚಾರಮಾಡಿ ತೃಪ್ತಿಕರವಾಗಿರುವಂತೆ ಕಂಡುಬಂದರೆ ಪರಿಗ್ರಹಿಸಬಹುದು.

(೧) ಗಿರಿಜಾ ಕಲ್ಯಾಣದ ಪದ್ಯ : ಅದರ ಅನ್ವಯ : ಜಗದೊಳ್ ಶಿಶಿರ ನೃಪತಿಯಾಜ್ಞೆಗೆ ಸಲೆ ರವಿ ತೇಜಂಗುಂದುತೆ ನಿಲಲಂಜುತ್ತೋಡೆ ಪುಗುವನದ್ರಿಯ ಮಱೆಯೊಳ್ ನಿಲೆ ; ಪರಿವ ಹಾವು ಉರಿವ ಕಿಚ್ಚು ಎಲೆ ನಿಂದುವು.

ಇಲ್ಲಿನ ಪಾಠಾಂತರ 'ಗೆಲೆ' ಎಂಬುದನ್ನು 'ನಿಲೆ' ಎಂದು ಓದಬೇಕು. ಶಿಶಿರ ರಾಜನ ಆಜ್ಞೆಗೆ ಸೂರ್ಯ ಹೆದರಿ ಕಳೆಗುಂದಿ ಪಶ್ಚಿಮಾದ್ರಿಯ ಮರೆಯಲ್ಲಿ ಹೊಕ್ಕು ನಿಲ್ಲಲು ಓಡುವನು; ಹರಿದಾಡುವ ಹಾವೂ, ಉರಿಯುವ ಕಿಚ್ಚೂ ಎಲೆಯಂತೆ ನಿಂತವು. ಎಂದರೆ ಸ್ವಲ್ಪವೂ ಅಲುಗಾಡದೆ ನಿಂತವು. ಇಲ್ಲಿನ 'ಎಲೆ ನಿಂದುವು' ಎಂಬ ದೇಸಿಯನ್ನು ಗಮನಿಸಬೇಕು. "ಎಲೆ ಮಿಡುಕದೆ ನೆನೆಯುತಿರ್ದಿರೇನಂ ಮನದೊಳ್" ಎಂಬಲ್ಲಿನ 'ಎಲೆ ಮಿಡುಕದೆ' ಎಂಬರ್ಥವೇ ಇಲ್ಲಿಯೂ. 'ಎಲೆನಿಲ್' ಎಂಬುದು ಸಂಯುಕ್ತಧಾತು. ಸೂರ್ಯಪ್ರತಿಮೆನಿಂದ ಭಟಾರರ್ ಎಂಬಲ್ಲಿ ಪ್ರತಿಮೆಯಂತೆ ನಿಂತ ಎಂಬ ಹಾಗೆಯೇ ಎಲೆಯಂತೆ ನಿಂತ ಎಂದರೆ ನಿಷ್ಪಂದವಾಗಿ ನಿಂತ ಎಂಬರ್ಥ ಇಲ್ಲಿ.

ಪದ್ಯದ ತಾತ್ಪರ್ಯ: ಶೀತದ ಹೆದರಿಕೆಗೆ ಸೂರ್ಯನೂ ಕೂಡಾ ನಿಸ್ತೇಜನಾಗಿ ಬೆಟ್ಟದ ಮರೆಯಲ್ಲಿ ನಿಲ್ಲಲು ಹವಣಿಸುತ್ತಿದ್ದಾನೆ: ಶೀತಕ್ಕೆ ಸೆಡೆತು ಹರಿಯುವ ಹಾವು ಅಲುಗಾಡದೆ ನಿಂತಿತು. (This may refer to hibernation of Snakes in winter); ಉರಿಯುವ ಕಿಚ್ಚು ಹಬ್ಬದೆ, ಇದ್ದ ಸ್ಥಳದಲ್ಲೆ ಸ್ತಬ್ಧವಾಯಿತು. ಇವೆಲ್ಲ ಶೀತದ ಅಗ್ಗಳಿಕೆಯನ್ನು ತೋರಿಸುತ್ತವೆ.

(೨) ಕಾದಂಬರೀ ಸಂಗ್ರಹದ ಪದ್ಯ: 'ಒಯ್ಯನೆ ಬೆಸಗೊಳ್ವೆನಾರ್ಗೆ ಸತಿ ನೀಂ' ಇತ್ಯಾದಿ. ಇಲ್ಲಿನ ಸತಿ ಎಂಬುದನ್ನು ಸಂಬೋಧನೆಯೆಂದು ತಿಳಿಯಬೇಕು. 'ಹೆಂಗುಸೇ ನೀಂ ಆರ್ಗೆ (= ನೀನು ಯಾರು) ; ಆರ್ಗೆ ಸತಿ (ಯಾರಿಗೆ ಹೆಂಡತಿ ?) ಎಂದು ಅರ್ಥ ಮಾಡುವುದು ಸರಿಯಾಗಲಾರದು. ಇದು ಚಂದ್ರಾಪೀಡನು ಮನಸಾ ಮಾಡಿಕೊಂಡ ಸಂಬೋಧನೆ. ಇಲ್ಲಿ ಸತಿ, ಕನ್ಯೆ ಮುಂತಾದ ಸಮಸ್ಯೆಗಳಿಗೆ ಎಡೆಯುಂಟೆಂದು ಕಾಣುವುದಿಲ್ಲ. 'ಏನಾಮುಪಸೃತ್ಯ ಪೃಚ್ಛಾಮಿ'(ಒಯ್ಯನೆ ಬೆಸಗೊಳ್ವೆನ್) ಇಲ್ಲಿನ 'ಏನಾಂ' ಎಂಬುದರ ಭಾವವನ್ನು 'ಸತಿ ಆರ್ಗೆ ನೀಂ' ಎಂದು ತಂದಿದ್ದಾನೆ ಕವಿ."

ಈ ಪತ್ರ ಡಿ.ಎಲ್.ಎನ್. ರವರ ಶಿಷ್ಯ ವಾತ್ಸಲ್ಯಕ್ಕೆ ಒಂದು ಅತ್ಯುತ್ತಮ ಉದಾಹರಣೆ. ಸಂದೇಹವನ್ನು ಪರಿಹರಿಸುವಲ್ಲಿ ಅವರು ನೀಡುವ ವಿಸ್ತೃತ ವಿವರಣೆಯನ್ನು ಗಮನಿಸಿದಾಗ ಅವರ ವಿದ್ವತ್ತಿನ ಬಗೆಗೆ ಸಹಜವಾಗಿಯೇ ನಮಗೆ ಗೌರವವುಂಟಾಗುತ್ತದೆ. ಶ್ರೀ ವರದರಾಜಾರಾಯರಿಗೆ ಬರೆದಂತೆ ಎಷ್ಟೋ ಜನ ಮಿತ್ರರಿಗೂ ಡಿ.ಎಲ್.ಎನ್. ಪತ್ರ ಬರೆದಿರುವರು. ಅವನ್ನೆಲ್ಲ ಸಂಗ್ರಹಿಸಿ ಪ್ರಕಟಿಸಿದರೆ ತುಂಬ ಉಪಯೋಗವಾದೀತು.

ಡಿ.ಎಲ್.ಎನ್. ತಮ್ಮ ವಿದ್ಯಾರ್ಥಿಗಳಲ್ಲಿನ ಪ್ರತಿಭೆಯನ್ನು ಗುರುತಿಸಿ ಅವರಿಗೆ ತೆರೆದ ಮನಸ್ಸಿನ ಪ್ರೋತ್ಸಾಹ ನೀಡುತ್ತಿದ್ದರು. ಶ್ರೀ ವರದರಾಜಾ ರಾಯರ ಕುಮಾರರಾಮನ ಸಾಂಗತ್ಯದ ಬಗೆಗಿನ ನಿಜವಾದ ಆಸಕ್ತಿಯನ್ನು

ಕಂಡ ಡಿ.ಎಲ್.ಎನ್. "ಕುಮಾರರಾಮನ ಬೇರೆ ಬೇರೆ ಕೃತಿಗಳನ್ನು ಅಭ್ಯಾಸ ಮಾಡಿ, ಒಳ್ಳೆಯ ಪುಸ್ತಕವೊಂದನ್ನು ಬರೆದು Ph d.ಗೆ ಏಕೆ ಪ್ರಯತ್ನಿಸ ಬಾರದು" ಎಂದು ಹುರಿದುಂಬಿಸಿ ಪತ್ರ ಬರೆದರು. ಅಷ್ಟೇ ಅಲ್ಲ, ಅವರಿಗೆ ಮಾರ್ಗದರ್ಶಿಗಳಾದರು ; ನಂಜುಂಡನ 'ಕುಮಾರರಾಮ ಸಾಂಗತ್ಯ' ಎಲ್ಲೂ ದೊರೆಯದಿದ್ದಾಗ ಅದನ್ನು ದೊರಕಿಸಿಕೊಟ್ಟರು ; ವಾರಕ್ಕೆ ಒಂದೆರಡು ಗಂಟೆಗಳ ಕಾಲ ತಪ್ಪದೆ ಸೇರುವಂತೆ ತಮ್ಮ ವೇಳಾಪತ್ರಿಕೆಯಲ್ಲಿ ಕಾಲವನ್ನು ನಿಗದಿ ಮಾಡಿದರು ; ಶಿಷ್ಯನಿಗೆ ತಲೆದೋರಿದ ಸಮಸ್ಯೆಗಳನ್ನು ಗಂಟೆಗಟ್ಟಲೆ ಕುಳಿತು ಚರ್ಚಿಸಿ ಪರಿಹರಿಸುತ್ತಿದ್ದರು : ಶಿಷ್ಯನು ಕಲೆಹಾಕಿದ ಆಧಾರಸಾಮಗ್ರಿಯಲ್ಲಿ ಕಂಡುಬರುತ್ತಿದ್ದ ನ್ಯೂನತೆಯನ್ನು ಬಹಳ ಸ್ಪಷ್ಟವಾಗಿ ತೋರಿಸಿಕೊಡುತ್ತಿದ್ದರು. ಹಾಗೆಯೇ, ಶಿಷ್ಯನು ಸಾಂಗತ್ಯ ಗ್ರಂಥಗಳ ಬೆಳವಣಿಗೆಯನ್ನು ಕುರಿತು ತಯಾರಿಸಿದ್ದ ನಕ್ಷೆಯನ್ನೂ, ಪಾಂಚಾಳಗಂಗನ ಪ್ರತಿಗಳಲ್ಲಿ ವಿದಿತವಾಗುವ ಕಥಾಂತರಗಳನ್ನು ಸೂಚಿಸಿ ತಯಾರಿಸಿದ್ದ ಮತ್ತೊಂದು ಪಟ್ಟಿಯನ್ನೂ ಕಂಡು ತುಂಬ ಆತ್ಮೀಯವಾಗಿ ಮೆಚ್ಚಿಕೊಂಡು ಹೊಗಳಿದರು. ಸು. 700 ಪುಟಗಳ ಹಸ್ತಪ್ರತಿಗೆಯನ್ನು ಸಿದ್ಧಪಡಿಸಿ ಗುರುಗಳಿಗೆ ಒಪ್ಪಿಸಿದಾಗ ಅವರು ಅದನ್ನು ಹಾಗೆಯೇ ತೂಗಿನೋಡಿ ''This is a monumental work'' ಎಂದು ದೊಡ್ಡ ಮಾತನ್ನು ಆಡಿದರು. ದೊಡ್ಡವರು ಎಂದಿಗೂ ದೊಡ್ಡವರೇ !

ಡಿ.ಎಲ್.ಎನ್. ಅವರದು ನಿಷ್ಕಪಟ ಸ್ವಭಾವ ; ಪರಿಶುದ್ಧವಾದ ಮನಸ್ಸು. ಗುರು–ಶಿಷ್ಯರಲ್ಲಿ ಸಲಿಗೆ ಹೆಚ್ಚಿದಂತೆಲ್ಲ ಅವರು ಒಮ್ಮೊಮ್ಮೆ ಸಾಹಿತ್ಯದ ಸೀಮೆಯನ್ನೂ ಮೀರಿ ಶಿಷ್ಯನ ಸಂಸಾರದ ಕಷ್ಟಸುಖಗಳನ್ನೂ ವಿಚಾರಿಸುತ್ತಿದ್ದರು. ಶ್ರೀ ವರದರಾಜಾಚಾರ್ಯರು ತಮ್ಮ ಎಳೆಯ ಕುಮಾರನನ್ನು ಕಳೆದುಕೊಂಡಾಗ, ವಿಷಯ ತಿಳಿದ ಡಿ.ಎಲ್.ಎನ್. ಮಾರನೆಯ ದಿನ ಮುಂಜಾನೆಯೇ ಮನೆಯ ಬಾಗಿಲಿಗೆ ಬಂದು, ಶ್ರೀ ವರದರಾಜಾಚಾರ್ಯರಿಗೆ ಧೈರ್ಯ ಹೇಳುವುದಕ್ಕಿಂತ ಹೆಚ್ಚಾಗಿ, ತಾವೇ ಕಣ್ಣೀರು ಸುರಿಸುತ್ತಾ "ನಮ್ಮಿಬ್ಬರದೂ ಒಂದೇ ಗೋತ್ರ ದಯ್ಯಾ" ಎಂದು ಹೃದಯ ತತ್ತರಿಸುವಂತೆ ನುಡಿದರು (ಡಿ.ಎಲ್.ಎನ್.ರವರೂ ಇದ್ದೊಬ್ಬ ಮಗನನ್ನು ಕಳೆದು ಕೊಂಡಿದ್ದರು).

ಡಿ.ಎಲ್.ಎನ್.ರವರ ಆತ್ಮೀಯತೆಯ ಸವಿಯನ್ನು ಅನುಭವಿಸಿದವರಲ್ಲಿ ಅವರ ಶಿಷ್ಯರಾದ ಬಿ. ವಿ. ವೈಕುಂಠರಾಜುರವರೂ ಒಬ್ಬರು. ೧೯೬೦ರಲ್ಲಿ ತುಮಕೂರಿನ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸುವ ಅವಕಾಶ ಅವರಿಗೆ ಲಭಿಸಿತ್ತು. ಕೆಲಸಕ್ಕೆ ಹಾಜರಾಗುವುದಕ್ಕೆ ಮೊದಲು ಅವರಿಂದ ಆಶೀರ್ವಾದ ಪಡೆದು (ಚಾರ್ಜಿಗೆ ದುಡ್ಡಿಲ್ಲದಿದ್ದುದರಿಂದ ಅವರಿಂದಲೇ ಖರ್ಚಿಗೆ ಹಣ ಪಡೆದು) ತುಮಕೂರಿಗೆ ಹೋಗಿ ಕೆಲಸಕ್ಕೆ ಹಾಜರಾಗುವಷ್ಟರಲ್ಲಿ ಮೈಸೂರಿನಿಂದ ಅವರ ಪತ್ರ ಬಂದಿತ್ತು. "ತರಗತಿಗೆ ಹೋಗುವ ಮುಂಚೆ ಆಯಾ ವಿಷಯಗಳಲ್ಲಿ ಪೂರ್ವಭಾವಿ ಸಿದ್ಧತೆ ಮಾಡಿಕೊಂಡು ಹೋಗು. ಕ್ಲಾಸಿನಲ್ಲಿ ಅನವಶ್ಯಕವಾದ ವಿಚಾರಗಳನ್ನು ಹೇಳಿ ವೇಳೆಯನ್ನು ಹಾಳುಮಾಡ ಕೂಡದು. ಇಡೀ ಸಮಯವನ್ನು ಆಯಾ ವಿಷಯಕ್ಕೆ ಮಾತ್ರ ವಿನಿಯೋಗಿಸು. ಪಾಠ ಹೇಳುವಾಗ ಏನಾದರೂ ಸಂದೇಹ ಬಂದರೆ ಇಲ್ಲವೇ ವಿದ್ಯಾರ್ಥಿಗಳು ಯಾವುದಾದರೂ ಪ್ರಶ್ನೆ ಕೇಳಿದಾಗ ಉತ್ತರ ಹೊಳೆಯದಿದ್ದರೆ ಬಾಯಿಗೆ ಬಂದದ್ದು ಹೇಳಕೂಡದು. 'ನೋಡಿಕೊಂಡು ಬರುತ್ತೇನೆ' ಎಂದು ಹೇಳಿ ಮತ್ತೆ ಆ ತರಗತಿಗೆ ಹೋಗುವಾಗ ಆ ವಿಷಯವನ್ನು ನೋಡಿಕೊಂಡು ಹೋಗು" ಎಂದು ಬರೆದಿದ್ದರು. ತಾವು ಅನುಸರಿಸಿದ ಸೂತ್ರವನ್ನೇ ತಮ್ಮ ಶಿಷ್ಯರೂ ಅನುಸರಿಸಬೇಕೆನ್ನುವುದು ಅವರ ಆಶಯವಾಗಿದ್ದಿತು.[1]

ಗಂಡುಮಕ್ಕಳಿಲ್ಲದ ಅವರು ತಮ್ಮ ಶಿಷ್ಯರನ್ನು ಮಕ್ಕಳಂತೆಯೇ ಕಂಡರು. ಕಾಲೇಜಿನ ಫೀಸು ಪರೀಕ್ಷೆಯ ಫೀಸು ಕಟ್ಟಲು ಅವರು ಎಷ್ಟೋ ವಿದ್ಯಾರ್ಥಿಗಳಿಗೆ ಹಣ ನೀಡಿದ್ದರು. ಒಮ್ಮೆ ಒಬ್ಬ ವಿದ್ಯಾರ್ಥಿ ಸಹಾಯ ಬೇಡಿ ಬಂದ. ಅವರ ಹತ್ತಿರ ಒಂದು ಕಾಸೂ ಇರಲಿಲ್ಲ. ಒಳಗೆ ಹೋಗಿ ತಮ್ಮ ಮಕ್ಕಳು ಡಬ್ಬಿಯಲ್ಲಿ ಕೂಡಿಹಾಕಿದ್ದ ಹಣವನ್ನು ತಂದುಕೊಟ್ಟರು. ಅವರಿಂದ ಸಹಾಯ ಪಡೆದ ವಿದ್ಯಾರ್ಥಿಗಳು ಕೆಲಸಕ್ಕೆ ಸೇರಿಕೊಂಡ ಮೇಲೆ ಆ ಹಣವನ್ನು ಹಿಂದಕ್ಕೆ ಕೊಡಲು ಹೋದರೆ ಅವರು ತೆಗೆದುಕೊಳ್ಳುತ್ತಿರಲಿಲ್ಲ; ಅಗತ್ಯ ವಿರುವ ವಿದ್ಯಾರ್ಥಿಗಳಿಗೆ ಸಹಾಯಮಾಡು ಎನ್ನುತ್ತಿದ್ದರು.[2]

---

1. ಸಪ್ತಶೃಂಗ, ಪು. ೭೭
2. ಬಿ. ವಿ. ವೈಕುಂಠರಾಜು ; ಪ್ರೊ|| ಡಿ. ಎಲ್. ನರಸಿಂಹಾಚಾರ್ (ಐಬಿಎಚ್ ಪ್ರಕಾಶನ) ಪು. 42

೧೯೬೦ರಲ್ಲಿ ಅವರು ೪೧ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದಾಗ ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳೂ ಅಧ್ಯಾಪಕರೂ ಸೇರಿ ದೊಡ್ಡ ಸನ್ಮಾನ ಸಮಾರಂಭವನ್ನೇ ಏರ್ಪಡಿಸಿದ್ದರು. ಈ ಸಮಾರಂಭದಲ್ಲಿ ಅವರ ಶಿಷ್ಯರು, ಸ್ನೇಹಿತರು 'ಜ್ಞಾನೋಪಾಸಕ' ಎಂಬ ನೆನಪಿನ ಕಾಣಿಕೆಯನ್ನು ಅರ್ಪಿಸಿದರು. ಅವರು ನಿವೃತ್ತರಾದ ಐದು ವರ್ಷಗಳ ನಂತರ ಅವರ ಶಿಷ್ಯರೂ ಸ್ನೇಹಿತರೂ ಸೇರಿ 'ಉಪಾಯನ' ಎನ್ನುವ ಅಭಿನಂದನಾ ಗ್ರಂಥವನ್ನು ಅರ್ಪಿಸಿದರು. ಈ ಎಲ್ಲ ಸನ್ಮಾನಗಳು ಅವರು ವಿದ್ಯಾರ್ಥಿಗಳೊಡನೆ, ಮಿತ್ರರೊಡನೆ ಬೆಳೆಸಿಕೊಂಡಿದ್ದ ಆತ್ಮೀಯ ಸಂಬಂಧವನ್ನು ಸಂಕೇತಿಸುತ್ತದೆ. ತಾವು ಸೇವೆ ಸಲ್ಲಿಸಿದ ವಿಶ್ವವಿದ್ಯಾನಿಲಯವೇ ಗೌರವ ಡಾಕ್ಟರೇಟ್ ನೀಡಿದಾಗ ಅವರಿಗಾದ ಆನಂದ ಅಷ್ಟಿಷ್ಟಲ್ಲ. ವಿಶ್ವವಿದ್ಯಾನಿಲಯ ಅವರ ಪಾಂಡಿತ್ಯವನ್ನು ಗೌರವಿಸುವುದರ ಮೂಲಕ ತನ್ನನ್ನೂ ಗೌರವಿಸಿಕೊಂಡಿತು. ಪದವಿ ಎನ್ನುವುದು ಕೃತಜ್ಞತೆಯ ಸಂಕೇತವಷ್ಟೆ.

ಒಂದು ಅಪೂರ್ವ ಪದದ ನಿಷ್ಪತ್ತಿಯನ್ನೊ ಅರ್ಥವನ್ನೊ ನಿಖರವಾಗಿ ಗುರುತಿಸಿದಾಗ ಅವರಿಗೆ ಯಾವ ಆನಂದ ದೊರೆಯಿತೆಂಬುದನ್ನು ಅವರ ಮುಖ ನೋಡಿಯೇ ಅರಿಯಬೇಕು ; ಆ ಆನಂದದಲ್ಲಿ ನಾವೂ ಭಾಗಿಗಳಾಗಬೇಕು. ಒಂದು ಕಗ್ಗಂಟನ್ನು ಬಿಡಿಸಿದ ಸಂದರ್ಭವನ್ನು ಆಚಾರ್ಯ ತೀ.ನಂ.ಶ್ರೀ. ಅವರು ಹೀಗೆ ನೆನೆದಿರುವರು.[1] "...ಒಂದು ಸಂಜೆ ನರಸಿಂಹಾಚಾರ್ಯರು ನಮ್ಮ ಮನೆಗೆ ಬಂದಿದ್ದಾಗ, "ಎಲ್ಲಿ, ಆದಿಪುರಾಣ ತೆರೆಯಿರಿ" ಎಂದರು ;

ಪೊಳೆವಲರಮರ್ದಿನ ಕಪ್ಪುರ–
ವಳುಕಿನ ಕತ್ತುರಿಯ ಕೊಳತ ದೂರ್ವಾಭರಣಂ–
ಗಳ ಪೊಳೆವ ಮಾಣಿಕಂಗಳ
ಬೆಳಗಿದೆ ಸೂಚಿಸಿತು ಭರತನಂತಃಪುರಮಂ ॥ (೧೧.೪೩)

ಎಂಬ ಪದ್ಯವನ್ನು ತೋರಿಸಿ "ಇಲ್ಲಿ 'ಕೊಳತ' ಎಂದರೆ ಏನು ?" ಎಂದರು. ಇದು ಬಹುದಿನಗಳಿಂದ ಕನ್ನಡದ ಉಪಾಧ್ಯಾಯರನ್ನು ಬಾಧಿಸಿರುವ ಪ್ರಶ್ನೆ.

---

1. 'ಜ್ಞಾನೋಪಾಸಕ'ದ ಮುನ್ನುಡಿ, ಪು. ೨-೩

ಪ್ರೊ॥ ಕುಂದಣಗಾರರ ಇತ್ತೀಚಿನ ಪರಿಷ್ಕರಣದಲ್ಲಿ ಕೂಡ "[ಕೊಳದ]" ಎಂಬುದು ಮೂಲಪಾಠವಾಗಿರಬಹುದೆಂದು ಊಹೆ ಮಾಡಿ ಕೈಬಿಡಲಾಗಿದೆ. ನಾನು ತಲೆಯಲ್ಲಾಡಿಸಿದೆ. "ಅದು 'ಕೊಳೆತುಹೋದ' ಎಂಬುದಂತೂ ಅಲ್ಲ. ಇಲ್ಲಿ ಱಟಿ ಇರಬೇಕೋ ಹೇಗೆ ?" ಎಂದೆ. ನರಸಿಂಹಾಚಾರ್ಯರು "ಅದರ ಸರಿಯಾದ ರೂಪ 'ಕೊಱತ' (= ಎಳೆಯ, ಹೊಸ) ಎಂದು ಅದರ ಅರ್ಥ. ತೆಲುಗಿನ 'ಕೊತ್ತ'ವನ್ನು ಜ್ಞಾಪಿಸಿಕೊಳ್ಳಿ" ಎಂದರು. ಅವರ ಮುಖದ ಮೇಲೆ ಉಲ್ಲಾಸದ ಮಿಂಚು ಹೊಳೆಯಿತು. ಅವರ ಬೆಳಕಿನಲ್ಲಿ ನನ್ನ ಬಹುಕಾಲದ ಸಂದೇಹ ಸರಿಹೋಯಿತು ! ತೆಲುಗಿನ 'ಕ್ರೊತ್ತ' (= ಹೊಸ)ದ ಪೂರ್ವ ರೂಪವು ಹಳಗನ್ನಡದಲ್ಲಿ ನಿಂತ ರೂಪವೂ ಒಂದೇ : 'ಕೊಱತ'. ತೆಲುಗಿನಲ್ಲಿ ಕೊಱತ > ಕ್ರೊತ್ತ, ಪೊಱಿಲ್ > ಪ್ರೋಲು ; ತಮಿಳಿನ 'ಕುಱನ್ದೈ' (=ಶಿಶು) ಮೊದಲಾದ 'ಶಬ್ದಗಳನ್ನು ಇಲ್ಲಿ ಸ್ಮರಿಸಬಹುದು. ಅಂತೂ ಪಂಪನ ಆದಿ ಪುರಾಣದಲ್ಲಿ 'ಕೊಱತ ದೂರ್ವಾಭರಣ' ಎಂದರೆ 'ಎಳೆಯ ಗರಿಕೆಯ ಆಭರಣ'; ಇದು ಮಾಂಗಲ್ಯ ಸೂಚಕವಾದ ದ್ರವ್ಯ. ಪಂಪನು ಈ ಅಪೂರ್ವ ಪದವನ್ನು ಉಳಿಸಿಕೊಟ್ಟದ್ದಕ್ಕಾಗಿ ಅವನಿಗೆ ನಾವು ಕೃತಜ್ಞರಾಗಿರಬೇಕು ; ದ್ರಾವಿಡ ಭಾಷಾ ಶಾಸ್ತ್ರಜ್ಞಾನದ ಬಲದಿಂದ ಅದರ ಮೂಲವನ್ನು ಬೆಳಗಿ, ಅರ್ಥವನ್ನು ಸ್ಫುಟ ಮಾಡಿಕೊಟ್ಟದ್ದಕ್ಕಾಗಿ ಪಂಪನ ಭಕ್ತರಾದ ನರಸಿಂಹಾಚಾರ್ಯರಿಗೆ ನಾವು ಕೃತಜ್ಞ ರಾಗಿರಬೇಕು..." ಇದು ಆತ್ಮೀಯರಲ್ಲಿ ಬೆರೆತು ಆನಂದಿಸುತ್ತಿದ್ದುದಕ್ಕೆ ಒಂದು ನಿದರ್ಶನ. ಈ ಆನಂದದ ಮುಂದೆ ಪದವಿ, ಪ್ರತಿಷ್ಠೆ, ಬೆಳ್ಳಿ, ಬಂಗಾರ ಇವೆಲ್ಲವೂ ಗೌಣ.

ಡಿ.ಎಲ್.ಎನ್. ತುಂಬ ಸ್ನೇಹಪರರು. "ನನಗೆ ತುಂಬ ಸ್ನೇಹಿತರಿಲ್ಲ" ಎಂದು ಅವರೇ ಹೇಳುತ್ತಿದ್ದರು. ಸ್ನೇಹಿತರನ್ನು ಹುಡುಕಿಕೊಂಡು ಅವರು ಹೋಗುತ್ತಲೂ ಇರಲಿಲ್ಲ. ಹಾಗೆಂದಮಾತ್ರಕ್ಕೆ ಅವರು ಒಬ್ಬಂಟಿಗರಾಗಿರಲು ಇಚ್ಛಿಸುತ್ತಿದ್ದರೆಂದಲ್ಲ. ಅನವಶ್ಯಕವಾದ ಹಗುರವಾದ 'ಸುಖಸಂಕಥಾ ವಿನೋದ'ಗಳಲ್ಲಿ ಅವರಿಗೆ ಹೆಚ್ಚು ಶ್ರದ್ಧೆಯಿರಲಿಲ್ಲ. ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ಹೇಳುವಂತೆ ಒಮ್ಮೆ ಅವರೊಂದಿಗೆ ಸ್ನೇಹ ವೇರ್ಪಟ್ಟಿತೆಂದರೆ ದಿನದಿನಕ್ಕೆ ಅವರ ಸೌಜನ್ಯ ನಿರಹಂಕಾರತ್ವ ಆತ್ಮೀಯತೆ ಇವು ನಮ್ಮಲ್ಲಿ ಆಳವಾದ ಪರಿಣಾಮವನ್ನುಂಟುಮಾಡಿ "ಈ ಬಾಳಿನ ಸೌರಭವೇ ಈ

ಬಗೆಯ ಸ್ನೇಹಬಂಧನ" ಎಂಬ ಭಾವವುಂಟಾಗುತ್ತಿದ್ದಿತು."[1] ಡಿ.ಎಲ್.ಎನ್. ಸರಸಿಗಳು, ರಸಿಕರು. ಪ್ರಸಿದ್ಧ ಕಾವ್ಯಗಳ ಶೃಂಗಾರ, ಪ್ರಕೃತಿ, ನವರಸ ವರ್ಣನೆ, ಶಬ್ದಾಲಂಕಾರ ಅರ್ಥಾಲಂಕಾರ, ಸ್ವಾರಸ್ಯವಾದ ಚಾಟು ಶ್ಲೋಕಗಳು, ಸರ್ವಜ್ಞ, ಸಂಸ್ಕೃತದ ಚತುರೋಕ್ತಿಗಳು—ಇವುಗಳ ಧಾಟಿಯನ್ನು ಅವರು ಹಿಡಿವರೆ ಕಾಲದ ಪರಿವೆಯೇ ಇಲ್ಲದೆ ಆ ವಿಷಯಗಳಲ್ಲಿ ವಿಹರಿಸುತ್ತ ಕೇಳುಗರನ್ನು ಮುಗ್ಧಗೊಳಿಸುತ್ತಿದ್ದರು.

ಪ್ರೊ॥ ತೀ. ನಂ. ಶ್ರೀಕಂಠಯ್ಯನವರು ಹಾಗೂ ಡಿ.ಎಲ್.ಎನ್. ಆತ್ಮೀಯ ಮಿತ್ರರು. ಇಬ್ಬರ ಸ್ವಭಾವವೂ ಪರಸ್ಪರ ವ್ಯತಿರಿಕ್ತ. ತೀ.ನಂ.ಶ್ರೀ. ಯವರು ಮಾತಿನಲ್ಲಿ ತೀರಾ ಸಂಯಮಿಗಳು , ಸ್ವಲ್ಪ ಸೂಕ್ಷ್ಮವೂ ಹೌದು. ಡಿ.ಎಲ್.ಎನ್. ಮಾತಿನಲ್ಲಿ ಗಡಸು ; ಒಮ್ಮೊಮ್ಮೆ ಉಚಾಯಿಸುತ್ತಿದ್ದುದೂ ಉಂಟು. ಆದರೆ ಇಬ್ಬರದೂ ಶುಭ್ರ ಮನಸ್ಸು. ಅಲ್ಲಿ ಸ್ನೇಹಕ್ಕೆ ಸದ್ಭಾವನೆಗಳಿಗೆ ಮಾತ್ರ ಅವಕಾಶ.[2]

ತೀ.ನಂ.ಶ್ರೀ. ಬಹುಕಾಲದಿಂದಲೂ ಚತ್ತಾಣ ಬೆದಂಡೆಗಳ ಬಗ್ಗೆ ವಿಚಾರ ಮಾಡುತ್ತಿದ್ದರು. ಒಮ್ಮೆ ಅವರನ್ನು ಅವರ ವಿದ್ಯಾರ್ಥಿಮಿತ್ರರು ಒತ್ತಾಯ ಮಾಡಿ ವಿಚಾರಗೋಷ್ಠಿಯಲ್ಲಿ ಆ ಬಗ್ಗೆ ಪ್ರಬಂಧವನ್ನು ಓದಲು ಒಪ್ಪಿಸಿದರು. ಆ ದಿನದ ಗೋಷ್ಠಿಯ ಅಧ್ಯಕ್ಷತೆಯನ್ನು ಡಿ.ಎಲ್.ಎನ್. ವಹಿಸಿದ್ದರು. ತೀ.ನಂ.ಶ್ರೀ.ಯವರ ಪ್ರಬಂಧ ಬಹಳ ಸೊಗಸಾಗಿತ್ತು. ನರಸಿಂಹಾಚಾರ್ಯರು ಕೊನೆಯಲ್ಲಿ ಮಾತನಾಡುತ್ತ 'ಗುಬ್ಬಚ್ಚಿ ಕಾಳನ್ನು ಸಂಗ್ರಹಿಸುವಂತೆ ಬಹುಕಾಲದಿಂದ ವಿಷಯವನ್ನು ಕೂಡಿ ಹಾಕಿಕೊಂಡು ಬಂದಿದ್ದಾರೆ' ಎಂದು ಆರಂಭಿಸಿ, ಆ ಪ್ರಬಂಧದ ಒಂದೆರಡು ವಿವರಗಳ ಬಗ್ಗೆ ಆಕ್ಷೇಪಣೆಗಳನ್ನು ಎತ್ತಿದ್ದರು. ಅದಕ್ಕೆ ತೀ.ನಂ.ಶ್ರೀ. ಉತ್ತರಿಸಿದ್ದು, ಡಿ.ಎಲ್.ಎನ್. ಒಪ್ಪದೇ ಇದ್ದದ್ದು, ಭಿನ್ನಾಭಿಪ್ರಾಯಗಳಲ್ಲೂ ವ್ಯಕ್ತವಾಗುತ್ತಿದ್ದ ಸಜ್ಜನಿಕೆ ಕೇಳುಗರ ಮನಸ್ಸಿನ ಮೇಲೆ ಗಾಢ ಪರಿಣಾಮವನ್ನುಂಟುಮಾಡಿದುವು. ಹಾಗೆಯೇ, ಡಿ.ಎಲ್.ಎನ್.

---

1 'ರಸಫಲ', ಪು.167

2 ಡಾ॥ ಎಂ. ಚಿದಾನಂದಮೂರ್ತಿ : ತೀನಂಶ್ರೀ ಮತ್ತು ಡಿ.ಎಲ್.ಎನ್. ಕೆಲವು ನೆನಪುಗಳು (ಕನ್ನಡ ನುಡಿ, ಸಂ. ೩೪, ಸಂಚಿಕೆ ೧೫-೧೬) ಪು. ೪೭

ಅವರ 'ಕನ್ನಡ ಗ್ರಂಥ ಸಂಪಾದನೆ'ಯು ಬಿಡುಗಡೆಯ ದಿನ ತೀ.ನಂ.ಶ್ರೀ. ಸೂಚಿಸಿದ ಕೆಲವು ಭಿನ್ನಾಭಿಪ್ರಾಯಗಳ ಬಗ್ಗೆ ಡಿ.ಎಲ್.ಎನ್. ನಡೆದುಕೊಂಡ ರೀತಿಯೂ ಅಷ್ಟೇ ಕೇವಲ ಅನುಕರಣ ಯೋಗ್ಯವಾದುವು.[1] ಕನ್ನಡ ರಗಳೆಯ ಮೂಲವನ್ನು ಅಪಭ್ರಂಶ ಸಾಹಿತ್ಯದ 'ಪಜ್ಝಟಿಕೆ'ಯಲ್ಲಿ ಕಾಣಬಹುದೆಂಬ ಸಂಗತಿಯನ್ನು ನರಸಿಂಹಾಚಾರ್ಯರೂ ತೀ.ನಂ.ಶ್ರೀಕಂಠಯ್ಯನವರೂ ಒಟ್ಟಿಗೆ ಏಕಕಾಲಕ್ಕೆ ಸ್ವತಂತ್ರವಾಗಿ ಕಂಡುಕೊಂಡರಂತೆ. ಇದರಿಂದಾಗಿ, ಅದರ ಬಗ್ಗೆ ಅವರು ಬರೆಯಲಿ ಎಂದು ಇವರು, ಇವರು ಬರೆಯಲಿ ಎಂದು ಅವರು ಸುಮ್ಮನಾಗಿ ಆ ಬಗ್ಗೆ ಸಮಗ್ರವಾಗಿ ಯಾರೂ ಬರೆಯದೆ ಹೋದದ್ದು ದುರದೃಷ್ಟ.

ತೀ.ನಂ.ಶ್ರೀ. ಹಾಗೂ ಡಿ.ಎಲ್.ಎನ್. ಇವರ ನಡುವೆ ನಡೆಯುತ್ತಿದ್ದ ಸರಸ ವಾಗ್ವಾದ ಕೇಳುಗರ ಪಾಲಿಗೆ ಒಂದು ರಸಕವಳ. ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ವರ್ಣಿಸುವಂತೆ[2] ಆ ಸರಸ ವಾಗ್ವಾದದಲ್ಲಿ "ಎರಡು ದಿಗ್ಗಜಗಳು ಒಂದನ್ನೊಂದು ತಾಕುವಂತೆ, ಎರಡು ಕತ್ತಿವರಸೆ ವೀರರು ಒಬ್ಬರನ್ನೊಬ್ಬರು ತಮ್ಮ ವಾಗ್ಬಾಣದಿಂದ ಪರೀಕ್ಷಿಸುವಂತೆ ಇತ್ತು. ಮಧ್ಯೆ ಮಧ್ಯೆ ಕತ್ತಿಗಳ ಘರ್ಷಣೆಯಿಂದ ಹೊರಡುವ ಕೆಂಡದ ಕಿಡಿಗಳು ಅನಿರೀಕ್ಷಿತವಾದ ಕಾವ್ಯರತ್ನದ ಉದಾಹರಣೆಗಳು ಚಿಮ್ಮುತ್ತಿದ್ದವು. ಅದು ಪರಸ್ಪರ ಮೆಚ್ಚುಗೆ ಮತ್ತು ಪ್ರೇಮದ ವಾಗ್ಯುದ್ಧ. ಅವರಲ್ಲಿ ಯಾರು ಹೆಚ್ಚು ಯಾರು ಕಡಿಮೆ ಎಂದು ಹೇಳುವುದು ನಮಗಂತೂ ಸಾಧ್ಯವಾಗಲಿಲ್ಲ. ಆದರೆ ಅವರಿಬ್ಬರೂ ನಮಗಿಂತ ಹೆಚ್ಚು ಎಂಬುದಂತೂ ಖಚಿತವಾಯಿತು. ನನಗೆ ಹೊಳೆದುದು "ನರಸಿಂಹಾಚಾರ್ಯರದು ಆಳವಾದ ಪಾಂಡಿತ್ಯ, ಶ್ರೀಕಂಠಯ್ಯನವರದು ಸರ್ವವ್ಯಾಪಿ ವಿಶಾಲ ಪಾಂಡಿತ್ಯ."

ಡಿ.ಎಲ್.ಎನ್. ತಮ್ಮ ಮಿತ್ರರುಗಳ ನಡುವೆಯಿರುವಾಗ ಅವರೊಡನೆ ಆತ್ಮೀಯವಾಗಿ ಸರಸ ಸಲ್ಲಾಪದಲ್ಲಿ ಮುಳುಗಿರುತ್ತಿದ್ದರು. ಅವರು ಗಂಭೀರ ಪ್ರವೃತ್ತಿಯವರಾದರೂ ಮಿತ್ರರ ನಡುವೆ ಇರುವಾಗ ವಿನೋದಪ್ರಿಯರಾಗಿರುತ್ತಿದ್ದುದನ್ನು ಶ್ರೀ ಗೊರೂರರು ಪ್ರಸಂಗವೊಂದರ ಮೂಲಕ ವಿವರಿಸುವರು :

---

1. ನೋಡಿ : ಅದೇ, ಪು. ೪೭
2. 'ರಸಫಲ', ಪು. 169

"ಈಗ ಅನೇಕ ವರ್ಷಗಳ ಕೆಳಗೆ ಬೆಳ್ಳಾರ ಚಿನ್ನದ ಗಣಿಗೆ ಆಗಿನ ಅಲ್ಲಿನ ಮುಖ್ಯಾಧಿಕಾರಿ ಶ್ರೀ ಟಿ.ಪಿ. ಕೃಷ್ಣಾಚಾರ್ ಅವರ ಆಹ್ವಾನದ ಮೇಲೆ ಕೆಲವು ಮಿತ್ರರು ಗಣಿಯನ್ನು ನೋಡಲು ಹೋದೆವು. ಅವರ ಪೈಕಿ, ನನಗೆ ನೆನಪಿರುವ ಮಟ್ಟಿಗೆ ತೀ.ನಂ.ಶ್ರೀ. ಪು.ತಿ.ನ., ಡಿ.ಎಲ್.ಎನ್., ಸಂ. ಶಿವರಾಮಶಾಸ್ತ್ರಿ, ನಾನು–ಮತ್ತಾರಿದ್ದರೋ ಸರಿಯಾಗಿ ನೆನಪಿಲ್ಲ–ಇದ್ದೆವು. ಶ್ರೀಮಾನ್ ರಾಧಾಕೃಷ್ಣನ್ ಮತ್ತು ಟಿ.ಪಿ. ಕೃಷ್ಣಾಚಾರ್ಯರು ಅತಿಥಿ ಸತ್ಕಾರದ ವ್ಯವಸ್ಥೆಯನ್ನೆಲ್ಲಾ ಬಹು ಸೊಗಸಾಗಿ ಮಾಡಿದ್ದರು. ಅಚ್ಚುಕಟ್ಟಾಗಿ ರಾತ್ರಿಯ ಭೋಜನವನ್ನು ಹೊಡೆದು ಹಾಸಿಗೆಗಳ ಮೇಲೆ ಹೊರಳಾಡುತ್ತ, ಲೋಕಾಭಿರಾಮವಾಗಿ ಹರಟೆ ಹೊಡೆಯುತ್ತಿದ್ದೆವು. ಆರೋಗ್ಯ, ಆಹಾರ, ದೇಹರಕ್ಷಣೆ ಇವುಗಳ ಮಾತು ಬಂದು ಆಯುರ್ವೇದ, ಅಲೋಪತಿ, ಹೋಮಿಯೋಪತಿ, ಯುನಾನಿ ವೈದ್ಯಪದ್ಧತಿಗಳನ್ನೆಲ್ಲ ಚರ್ಚಿಸುತ್ತಿದ್ದೆವು. ಮಾತು ಸ್ವಲ್ಪ ಹಗುರವಾದ ವಿನೋದ ರೀತಿಯಲ್ಲಿ ನಡೆಯುತ್ತಿದ್ದಿತು. ಡಿ.ಎಲ್. ನರಸಿಂಹಾಚಾರ್ಯರು ಇದ್ದಕ್ಕಿದ್ದಂತೆ ಒಂದು ಹಾಸ್ಯಪದವನ್ನು ಹಾರಿಸಿಬಿಟ್ಟರು. ಗಾಢಾಂಧಕಾರದಲ್ಲಿ ಮಿಂಚು ಫಳಾರನೆ ಹೊಳೆಯುವಂತೆ, ಸೂರು ಹಾರಿ ಹೋಗುವಂತೆ ನಾವೆಲ್ಲ ನಕ್ಕೆವು. ಡಿ.ಎಲ್. ನರಸಿಂಹಾಚಾರ್ಯರು-ಯಾವಾಗಲೂ ಗಂಭೀರ ಪ್ರಕೃತಿಯವರು–ಅಂತಹ ಚಮತ್ಕಾರದ ಮಾತನ್ನು ಒಗೆಯುವರೆಂದು ನಾವಾರೂ ಭಾವಿಸಿರಲಿಲ್ಲ."[1]

ಡಿ.ಎಲ್.ಎನ್. ಪಾಠಮಾಡುವಾಗ ವಿದ್ಯಾರ್ಥಿಗಳನ್ನು ಎಂದೂ ನಗಿಸಲು 'ಪ್ರಯತ್ನ'ಪಟ್ಟಿರಲಿಲ್ಲ. ಅವರ ಬೋಧನಕ್ರಮದಲ್ಲಿ ತೆಳುವಾದ ಮುಗುಳ್ನಗೆ ಮೂಡಿಸಬಲ್ಲರು, ನಗುವಿನ ಬುಗ್ಗೆಯನ್ನೇ ಉಕ್ಕಿಸಬಲ್ಲರು. ಅವರು ಪೌರಾಣಿಕ ಅಂಶಗಳಿಗೆ ಸಮಕಾಲೀನ ಅಂಶಗಳನ್ನು ಜೋಡಿಸುವುದರ ಮೂಲಕ ಹಾಸ್ಯವನ್ನು ಉಕ್ಕಿಸುತ್ತಿದ್ದರು. ಪಂಪಭಾರತದ ಕರ್ಣಾರ್ಜುನರ ಯುದ್ಧದ ಸನ್ನಿವೇಶದಲ್ಲಿ ಮೇಲೆ ನಿಂತು ನೋಡುತ್ತಿದ್ದ ದೇವತೆಗಳಿಗೆ ಬಾಣಗಳ ಹಂದರದಿಂದ ಕರ್ಣಾರ್ಜುನರು ಮರೆಯಾದಾಗ ನಾರದ ಹಾರಿ ಇಳಿದುಬಂದು ಬಾಣಗಳನ್ನು ಬಗಿದು ಅವರನ್ನು ಕಂಡು ಮೇಲೆ ಹಾರಿದನಂತೆ. 'ಇದು ತಡಿಕೆ ಕಿತ್ತು

---

1. 'ರಸಫಲ', ಪು. 167.

ಕ್ರಿಕೆಟ್ ಮ್ಯಾಚ್ ನೋಡುವಂತೆ' ಎಂದಾಗ ಯಾರಿಗೆ ತಾನೇ ನಗು ಬರದು ?'[1]

1. ಡಾ॥ ಎಂ. ಚಿದಾನಂದಮೂರ್ತಿ : ಪ್ರೊ॥ ಡಿ. ಎಲ್. ಎನ್. ಅವರ ಬೋಧನ ಕ್ರಮ ('ಜ್ಞಾನೋಪಾಸಕ') ಪು. ೯೨

ಕನ್ನಡವೇ ಅಲ್ಲವೆ ಎಂಬುದನ್ನು ನಿರ್ಣಯಿಸುವ ಮುನ್ನ ಈ ಕೆಳಗಿನ ಅಂಶ ಗಳನ್ನು ಗಮನಿಸಬೇಕೆಂದು ಡಿ.ಎಲ್.ಎನ್. ಹೇಳುವರು.[1]

೧. ಅದು ಕನ್ನಡವೇ ಆಗಿದ್ದರೆ ಯಾವ ಧಾತು ಮೂಲದಿಂದ ಬಂದಿರ ಬಹುದೆಂಬುದನ್ನು ಕಂಡುಹಿಡಿಯಬೇಕು ; ಅದೇ ಧಾತುವಿನಿಂದ ಹುಟ್ಟಿರುವ ಬೇರೆ ಶಬ್ದಗಳೇನಾದರೂ ಇದ್ದರೆ ಅವನ್ನು ಕಾಣಿಸಬೇಕು.

೨. ಕನ್ನಡದಲ್ಲಿ ಆ ಧಾತುವಿಲ್ಲದಿದ್ದರೆ ಇತರ ದ್ರಾವಿಡ ಭಾಷೆಗಳಲ್ಲಿ ಅದಿರಬಹುದು ; ಅದರಿಂದ ಜನ್ಯವಾದ ಇತರ ಶಬ್ದಗಳೂ ಇರಬಹುದು ; ಇವನ್ನು ತೋರಿಸಬೇಕು.

೩. ಒಂದು ಶಬ್ದ ಸಂಸ್ಕೃತದಲ್ಲಿ ಏಕಾಕಿಯಾಗಿದ್ದು ಅದರ ನಿಷ್ಪತ್ತಿ ಸಂದೇಹಗ್ರಸ್ತವೆಂದು ಕಂಡುಬಂದಾಗ, ಕನ್ನಡ ಮುಂತಾದ ದ್ರಾವಿಡ ಭಾಷೆ ಗಳಲ್ಲಿ ಆ ಶಬ್ದಮೂಲವೂ ಅದರಿಂದ ಕವಲೊಡೆದು ಬಂದಿರುವ ಶಬ್ದಸಮು ದಾಯವೂ ಇದ್ದಾಗ, ಅದು ದ್ರಾವಿಡ (ಕನ್ನಡ) ಶಬ್ದವೆಂದು ತೀರ್ಮಾನಿಸ ಬಹುದು.

೪. ಯಾವುದಾದರೂ ವಸ್ತುವನ್ನೋ ಭಾವವನ್ನೋ ಹೇಳುವ ಶಬ್ದ ವೊಂದು ದ್ರಾವಿಡ ಭಾಷೆಗಳಲ್ಲಿ ಏಕಮಾತ್ರವೇ ಆಗಿದ್ದು ಸಂಸ್ಕೃತದಲ್ಲಿ ಸಮಾ ನಾರ್ಥಕವಾದ ಹಲವು ಶಬ್ದಗಳಿದ್ದರೆ ಆಗ ಆ ಶಬ್ದ ದ್ರಾವಿಡವಾಗಿರಬಹುದು.

೫. ಸಂಸ್ಕೃತದ ಒಡಹುಟ್ಟುಗರಾದ ಇಂಡೋ ಯುರೋಪಿಯನ್ ಭಾಷೆಗಳಲ್ಲಿ ಒಂದು ಶಬ್ದಕ್ಕೆ ಸಂವಾದಿ ಶಬ್ದಗಳಿಲ್ಲದಿದ್ದು, ಎಲ್ಲ ದ್ರಾವಿಡ ಭಾಷೆಗಳಲ್ಲೂ ಆ ಶಬ್ದವಿದ್ದರೆ ಆಗ ಅದು ದ್ರಾವಿಡವೇ ಇರಬಹುದು.

ಮೇಲ್ಕಂಡ ಅಂಶಗಳಲ್ಲಿ ಒಂದೋ ಹಲವೋ ಖಚಿತವಾಗಿ ನಿರ್ಣೀತ ವಾದರೆ ಆಗ ಆ ಶಬ್ದ ದ್ರಾವಿಡವೋ ದ್ರಾವಿಡೇತರವೋ ಎಂಬುದನ್ನು ಸ್ಥಾಪಿಸ ಬಹುದು.

ನಿಘಂಟಿನಲ್ಲಿ ಒಂದು ಶಬ್ದದ ಅರ್ಥವನ್ನು ಕೊಟ್ಟು ಆ ಅರ್ಥಕ್ಕೆ ಪ್ರಮಾಣಗಳನ್ನು ತೋರಿಸಿಕೊಡಬೇಕು. ಯಾವ ಯಾವ ಕೃತಿಗಳಲ್ಲಿ ಈ ಶಬ್ದ ಪ್ರಯೋಗವಾಗಿದೆಯೆಂಬುದನ್ನು ಉದಾಹರಣೆಗಳೊಡನೆ ತಿಳಿಸಬೇಕು. ಕನ್ನಡಕ್ಕೆ ಸಂಸ್ಕೃತ, ಉರ್ದು, ಮರಾಠಿ, ಇಂಗ್ಲಿಷ್ ಮೊದಲಾದ ಭಾಷೆಗಳಿಂದ ಶಬ್ದಗಳು ರೂಪಾಂತರ ಹೊಂದಿಯೋ ಅಥವಾ ಹೊಂದದೆಯೋ ಬಂದಿವೆ.

1. ಭಾಷಾ ವಿಹಾರ ('ಪೀಠಿಕೆಗಳು ಲೇಖನಗಳು') ಪು. ೮೫೧

ಇಂತಹ ಸಂದರ್ಭದಲ್ಲಿ ಆ ಶಬ್ದಗಳ ಮೂಲರೂಪವೇನೆಂಬುದನ್ನು ತಿಳಿಸಬೇಕು. ಡಿ.ಎಲ್.ಎನ್. ಹೇಳುವಂತೆ "ಇದು ಸುಲಭಸಾಧ್ಯವಲ್ಲ. ಗಣಿತ ಶಾಸ್ತ್ರದಲ್ಲಿರುವಂತೆ ಇಲ್ಲಿಯೂ ಕೆಲವು ಸೂತ್ರಗಳಿವೆ. ಈ ಸೂತ್ರಗಳನ್ನು ಅನುಸರಿಸಿದ್ದೇ ಆದರೆ ಶಬ್ದದ ಮೂಲರೂಪವನ್ನು ಅತ್ಯಂತ ಕರಾರುವಾಕ್ಕಾಗಿ ತಿಳಿಸುವುದು ಸಾಧ್ಯ. ಉದಾಹರಣೆಗೆ 'ಅಕ್ಕಿ' ಎಂಬ ಶಬ್ದವನ್ನು ತೆಗೆದುಕೊಳ್ಳಿ. ಈ ಪದವು ತಮಿಳಿನಲ್ಲಿ 'ಅರಿಸಿ'ಯೆಂದೂ ತೆಲುಗಿನಲ್ಲಿ 'ಅರಿ' ಯೆಂದೂ ಆಗುತ್ತದೆ. ಆದರೆ 'ಅರ್ಕಿ' ಶಬ್ದವು ಗ್ರಂಥಸ್ಥವಾಗಿದ್ದಂತೆ ಕಾಣಬರುವುದಿಲ್ಲ. ಒಂದು ಸೂತ್ರದ ಪ್ರಕಾರ ಕನ್ನಡ ಶಬ್ದದ 'ಕ'ಕಾರವು ಇತರ ದ್ರಾವಿಡ ಭಾಷೆಗಳಿಗೆ ಬಂದಾಗ 'ಸಿ' ಅಥವಾ 'ಶಿ' ಎಂದು ಮಾರ್ಪಾಟು ಹೊಂದುತ್ತದೆ. ಆದುದರಿಂದ ಮೂಲಪದವು 'ಅರ್ಕಿ' ಎಂದಿರಬೇಕು. ತಮಿಳು, ತೆಲುಗು ರೂಪಾಂತರಗಳಲ್ಲಿ ಒಂದು 'ರ'ಕಾರವಿರುವುದನ್ನು ಗಮನಿಸಿದರೆ ಮೂಲದಲ್ಲಿಯೂ ಒಂದು 'ರ'ಕಾರವಿರಬೇಕೆಂದು ಭಾಸವಾಗುತ್ತದೆ. ಅಂದರೆ ಮೂಲಪದವು 'ಅಕ್ಕಿ'ಗೆ ಬದಲು 'ಅರ್ಕಿ' ಎಂದಿರಬೇಕು. ಆದರೆ ಈ ಶಬ್ದಪ್ರಯೋಗ ಇನ್ನೂ ದೊರೆತಿಲ್ಲ. ಇಂದಲ್ಲ ನಾಳೆಯಲ್ಲ ಇನ್ನು ಹತ್ತು ವರ್ಷಗಳ ಬಳಿಕ ದೊರೆತರೂ ಅದು 'ಅರ್ಕಿ'ಯೆಂದೇ ಇರುತ್ತದೆ. ಇದು ಖಂಡಿತ."[1]

ಶಬ್ದಪ್ರಪಂಚದಲ್ಲಿ ನಡೆಯುವ ವಿಚಿತ್ರ ಶಬ್ದವ್ಯಾಪಾರಗಳಿಗೆ ಲೆಕ್ಕವಿಲ್ಲ. 'ಶಬ್ದಪಾರಮಾರ್ಗಮಶಕ್ಯಂ' ಎಂದು ಕೇಶಿರಾಜ ಹೇಳಿರುವುದು ಈ ಹಿನ್ನೆಲೆಯಲ್ಲಿಯೇ. ಶಬ್ದಪ್ರಪಂಚದಲ್ಲಿನ ಈ ವಿಚಿತ್ರ ವ್ಯಾಪಾರವನ್ನು ಸಾವಧಾನವಾಗಿ ಪರೀಕ್ಷಿಸಿನೋಡುವ ನಿತ್ಯಕುತೂಹಲ, ಆಸಕ್ತಿ ಡಿ.ಎಲ್.ಎನ್. ಅವರದು. ಕನ್ನಡಕ್ಕೆ ಶಾಸ್ತ್ರೀಯವಾದ ಆಧುನಿಕವಾದ ಸಮಗ್ರ ನಿಘಂಟನ್ನು ಕೊಡುವುದಕ್ಕಾಗಿ ಡಿ.ಎಲ್.ಎನ್. ತಮ್ಮ ಜೀವಮಾನದ ಅವಧಿಯನ್ನೆಲ್ಲಾ ಸವೆಸಿದರು. ಸುಮಾರು ನಾಲ್ಕು ದಶಕಗಳ ಕಾಲ ಇದಕ್ಕಾಗಿ ಅಹರ್ನಿಶಿ ದುಡಿದಿರುವರು. ಅವರಿಗೆ ನಿಘಂಟು ರಚನೆಯಲ್ಲಿ ದೈವದತ್ತವಾಗಿ ಲಭ್ಯವಾದ ನೆನಪಿನ ಶಕ್ತಿ ಅಸಾಧಾರಣವಾಗಿ ನೆರವಾಗಿದ್ದಿತು ; ಬಹುಭಾಷಾಜ್ಞಾನ ಸಹಾಯಮಾಡಿದ್ದಿತು;

---

1 ನಿಘಂಟು ರಚನೆ ('ಪೀಠಿಕೆಗಳು ಲೇಖನಗಳು') ಪು. ೯೫೦

ಅಪಾರವಾದ ಭಾಷಾಪಾಂಡಿತ್ಯವಿದ್ದುದರಿಂದಾಗಿ ಯಾವುದೇ ಒಂದು ಶಬ್ದದ ಅರ್ಥವನ್ನಾಗಲಿ, ನಿಷ್ಪತ್ತಿಯನ್ನಾಗಲಿ ಸುಲಭವಾಗಿ ಬಿಡಿಸಿ ಹೇಳಲು ಸಾಧ್ಯವಾಗಿದ್ದಿತು ; ಒಂದು ಶಬ್ದದ ಪ್ರಯೋಗವನ್ನು ಪರಿಶೀಲಿಸುತ್ತಿದ್ದಾಗ ಆ ಶಬ್ದದ ಬೇರೆ ಬೇರೆ ಕಾವ್ಯದಲ್ಲಿನ ಪ್ರಯೋಗಗಳು ನಿರಾಯಾಸವಾಗಿ ನೆನಪಿಗೆ ಬರುತ್ತಿದ್ದಿತು. ಅವರ ಈ ವಿಶಿಷ್ಟಶಕ್ತಿಯಿಂದಾಗಿ ಒಂದು ಪದದ ನಿರ್ದಿಷ್ಟವಾದ ಅರ್ಥವನ್ನು ಗೊತ್ತುಮಾಡಲು ಅವರಿಗೆ ಸುಲಭಸಾಧ್ಯವಾಗುತ್ತಿತ್ತು. ಭಾಷೆಯಲ್ಲಿ ನಡೆಯುವ ವಿಚಿತ್ರ ಶಬ್ದವ್ಯಾಪಾರಗಳ ಬಗೆಗೆ ಡಿ.ಎಲ್.ಎನ್. ನಡೆಸಿರುವ ಶೋಧವನ್ನು ಅವರ 'ಶಬ್ದವಿಹಾರ'ವೆನ್ನುವ ಅಮೂಲ್ಯ ಕೃತಿಯಲ್ಲಿ ನೋಡಬಹುದಾಗಿದೆ. ಪ್ರೊ॥ ಎಸ್. ವಿ. ಪರಮೇಶ್ವರಭಟ್ಟರು ಹೇಳುವಂತೆ "ಆಚಾರ್ಯರದು ನಿಶಿತಮತಿ. ಅದು ಪಾದರಸದಂತೆ ಚುರುಕು, ಕ್ಷುರಧಾರೆಯಂತೆ ಹರಿತ. ವ್ಯಕ್ತಿಯನ್ನು ನೋಡಿದೊಡನೆಯೆ ಅವಧಿಜ್ಞಾನದಿಂದ ಭವಾವಳಿಯನ್ನು ಹೇಳುವ ನಮ್ಮ ಜೈನಕಾವ್ಯಗಳ ಯತಿಗಳಂತೆ ಶ್ರೀಯುತರು ಒಂದು ಕಠಿಣಪದ ಸಿಕ್ಕಿದೊಡನೆಯೆ ಅದರಲ್ಲಿ ಸಾವಿರ ವರುಷದ ಭಾಷಾಚರಿತ್ರೆಯನ್ನು ಕಂಡು ಸಂಸ್ಕೃತ ಪ್ರಾಕೃತ ದ್ರಾವಿಡ ಭಾಷೆಗಳಲ್ಲಿ ಅದರ ರೂಪ ಕಾಲಕಾಲಕ್ಕೆ ಹೇಗಿತ್ತು, ಅರ್ಥ ಹೇಗೆ ಹಿಗ್ಗಿತು ಅಥವಾ ಕುಗ್ಗಿತು, ಯಾವ ಯಾವ ಕವಿ ಎಲ್ಲೆಲ್ಲಿ ಅದನ್ನು ಹೇಗೆ ಹೇಗೆ ಪ್ರಯೋಗಿಸಿದ್ದಾನೆ ಎಂದೆಲ್ಲ ನಿಮಿಷಾರ್ಧದಲ್ಲಿ ತಿಳಿಸಿಬಿಡುತ್ತಾರೆ. ಒಂದು ವೇಳೆ ನರಸಿಂಹಾಚಾರ್ಯರೂ ಆ ಪದಕ್ಕೆ ಪ್ರಶ್ನಾರ್ಥಕ ಚಿಹ್ನೆಯಿಂದ ಅಲಂಕಾರ ಮಾಡಿದರು ಎಂದರೆ ಆ ಪದಕ್ಕೆ ಅರ್ಥೈಸಿಕೊಳ್ಳುವ ಅದೃಷ್ಟ ಇನ್ನೂ ಖುಲಾಯಿಸಿಲ್ಲ ಎನ್ನಬೇಕು ಅಷ್ಟೆ !"[1]

ಒಂದು ಶಬ್ದದ ರೂಪದ ಬಗೆಗೆ, ಒಂದು ಪದದ ಅರ್ಥದ ಬಗೆಗೆ ಡಿ.ಎಲ್.ಎನ್. ತಮ್ಮ ಮಿತ್ರರೊಡನೆ ನಿತ್ಯವೂ ಚರ್ಚಿಸುತ್ತಿದ್ದರು. ಚರ್ಚೆ ನಡೆಯುತ್ತಿದ್ದ ರೀತಿಯನ್ನು ಕ. ವೆಂ. ರಾಘವಾಚಾರ್ಯರು ಸ್ವಾರಸ್ಯ ಕೆಡದಂತೆ ಒಂದೆಡೆ[2] ಹೀಗೆ ದಾಖಲಿಸಿರುವರು : "ನಾವಿಬ್ಬರೂ ಒಂದೇ ಊರಿನಲ್ಲಿದ್ದಾಗ ದಿನಕ್ಕೊಮ್ಮೆಯಾದರೂ ಸಂಧಿಸದ ದಿನವಿಲ್ಲ. ಎಷ್ಟೋ ವೇಳೆ

---

1 ಜ್ಞಾನೋಪಾಸಕ, ಪು. ೨೨

2 ತುಮಕೂರಿನವರ ಗುತ್ತಿಗೆ (ಕನ್ನಡ ನುಡಿ, ಸಂ. ೩೪, ಸಂಚಿಕೆ ೧೫–೧೬) ಪು-೧೧

ದಿನಕ್ಕೆ ಎರಡು ಮೂರು ಸಲ ಕಲೆಯುತ್ತಿದ್ದೆವು. ಘಂಟೆಗಟ್ಟಲೆ ಮಾತಾಡುತ್ತಿದ್ದ ನಾವು ಕ್ಷೇಮಸಮಾಚಾರಕ್ಕಾಗಿ, ಮಿಕ್ಕವರ ಟೀಕೆಗಾಗಿ ಕಳೆಯುತ್ತಿದ್ದದ್ದು ಒಂದೆರಡು ನಿಮಿಷಗಳು ಮಾತ್ರ. ಮಿಕ್ಕ ಕಾಲವೆಲ್ಲ ಯಾವುದೋ ಪ್ರಯೋಗ, ಯಾವುದೋ ಶಬ್ದರೂಪ, ಯಾವುದೋ ಪದದ ಅರ್ಥ – ಇವುಗಳ ಚರ್ಚೆಗೆ ಮೀಸಲು. ಇತರರಿಗೆ ಅರ್ಥವಾಗದ, ಆಸಕ್ತಿ ಇರದ ನಮ್ಮ ಈ ದಿನನಿತ್ಯದ ಚರ್ಚೆ ಗುಂಪಿನ ಮಿಕ್ಕವರಿಗೆ ಒಮ್ಮೊಮ್ಮೆ ಬೇಸರತರುತ್ತಿದ್ದದ್ದೂ ಉಂಟು. ಆದರೆ ನಮ್ಮ ವಾದದ ಕಾವಿನಿಂದ, ಮಾತಿನ ಬಿಸಿಯಿಂದ ಅವರ ಬೇಸರ ಬೇಗನೆ ಕರಗಿಹೋಗುತ್ತಿತ್ತು. ನಮ್ಮ ಮನೆಯಲ್ಲೊ ಅವರ ಮನೆಯಲ್ಲೊ ನಾವು ಯಾವುದಾದರೂ ವಿಷಯವನ್ನು ಚರ್ಚಿಸುತ್ತಿದ್ದಾಗ ಮೊದಮೊದಲು ಮನೆಯವರು ದಿಗಿಲು ಬೀಳುತ್ತಿದ್ದುದ್ದುಂಟು, "ಯಾಕೆ ಹೀಗೆ ಆಸ್ತಿಗೆ ಕಚ್ಚಾಡುವ ದಾಯಾದಿಗಳಂತೆ ಕಚ್ಚಾಡುತ್ತಿದ್ದಾರೆ ಇವರು ? ಏನಿದು ಮಾರಾಮಾರಿ ?" ಎಂದು ಗಾಬರಿಗೊಳ್ಳುತ್ತಿದ್ದದ್ದುಂಟು. ಕ್ರಮೇಣ ನಮ್ಮ ವಾಗ್ವಾದದ ವೈಖರಿ ಅವರಿಗೆ ಪರಿಚಯವಾಗಿ ಅದೂ ಒಂದು ವಿನೋದವಾಗುತ್ತ ಬಂತು ಮನೆಯವರಿಗೆ. ನಮ್ಮ ಮಾತಿನ ಬಿರುಸು ಕಾವುಗಳು ಎಷ್ಟರಮಟ್ಟಿಗೆ ಇರುತ್ತಿತ್ತು ಎಂದರೆ, ಎಂದಾದರೂ ನಾವು ತಣ್ಣಗೆ ತೆಪ್ಪಗೆ ಕುಳಿತಿದ್ದರೆ ಅಂದೇನೋ ಅನಾಹುತವಾಗಿರಬೇಕು ಎಂದು ಶಂಕಿಸುತ್ತಿದ್ದರು. ಅವರು. ವಾದದಲ್ಲಿ ಮಾತಿನ ಬಿಸಿಬಿರುಸುಗಳೆಲ್ಲ ಸಾಮಾನ್ಯವಾಗಿ ನನ್ನವೇ ಆಗಿರುತ್ತಿದ್ದವು. ಅವರು ನಗುನಗುತ್ತ "ಯಾಕೋ ಕೂಗಿಕೊಳ್ಳುತ್ತಿ ? ನಿಧಾನವಾಗಿರೊ. ಮೆತ್ತಗೆ ಮಾತಾಡೊ" ಎಂದು ಹೇಳಿದರೆ, ಅದಕ್ಕೆ ನನ್ನ ಪ್ರತಿಕ್ರಿಯೆ "ನಿನಗೆ ಬುದ್ಧಿಗಿದ್ಧಿ ಇದೆಯೋ ಇಲ್ಲವೊ" ಎಂದು ಮೇಲೆ ಬೀಳುವುದು. "ನನಗೆ ಬುದ್ಧಿ ಇಲ್ಲಪ್ಪಾ ! ಕೊಂಚ ನಿಧಾನವಾಗಿ ಯೋಚಿಸೋಣ, ತಾಳು" ಎಂದು ಸಮಾಧಾನದಿಂದ ಹೇಳಿದರೆ, "ಏನು ನಿನ್ನ ತಲೆ ! ಯೋಚಿಸೋದು ? ಕರತಲಾಮಲಕದಂತೆ ಸ್ಪಷ್ಟವಾಗಿದೆ" ಎಂದು ನನ್ನ ಅರ್ಭಟ. ಅದಕ್ಕೆ ಅವರ ಮುಗುಳುನಗೆಯ ಮರುಮಾತು "ನಿಜ ಕಣೋ. ನನಗೆ ಬೇಗ ಕಾಣಿಸೋದಿಲ್ಲ. ನನ್ನದು ದಪ್ಪ ಕನ್ನಡಕ." ಇಷ್ಟೆಲ್ಲಾ ಆವಶ್ಯಕ ಅನಾವಶ್ಯಕ ರಾದ್ಧಾಂತವಾದ ಮೇಲೆ ಉಭಯ ಸಂಮತವಾದ ತೀರ್ಮಾನಕ್ಕೆ ಬಂದು ಒಳಗೊಳಗೇ ನಗುತ್ತಿದ್ದೆವು..."

ಶಬ್ದರೂಪ, ಶಬ್ದಾರ್ಥ, ಶಬ್ದಪ್ರಯೋಗಗಳನ್ನು ಕುರಿತು ಕೂಲಂಕಷ ಚರ್ಚೆ ನಡೆದಾಗ ಕೆಲವೊಮ್ಮೆ ಭಿನ್ನಾಭಿಪ್ರಾಯಗಳು ತಲೆದೋರುತ್ತಿರುತ್ತಿದ್ದವು. ಪಂಪನ ಆದಿಪುರಾಣದ ಆ. ೨ ಪ. ೧೧ರಲ್ಲಿನ ಕಸಕಳಿ ಎಂಬ ಒಂದು ಶಬ್ದದ ಬಗೆಗೆ ನಡೆದ ಸ್ವಾರಸ್ಯಕರ ಚರ್ಚೆಯನ್ನು ಕ.ವೆಂ. ರಾಘವಾಚಾರ್ ರವರು ಹೀಗೆ ನಿರೂಪಿಸಿರುವರು[1] : "ನಿಘಂಟು ಕಾರ್ಯಾಲಯದವರು "ಎನಲ್+ಕಸಕಳಿ+ಅಂತು" ಎಂದು ಪದವಿಭಾಗ ಮಾಡಿ ಕರಡಿನಲ್ಲಿ "ಕಸಕಳಿ" ಎಂಬ ಶಬ್ದವನ್ನು ಉಲ್ಲೇಖಿಸಿ ಅರ್ಥಕ್ಕೆ ಪ್ರಶ್ನಾರ್ಥಕ ಚಿಹ್ನೆ ಹಾಕಿದ್ದರು. ನರಸಿಂಹಾಚಾರ್ಯರು ತಮ್ಮ ಕರಡುಪ್ರತಿಯಲ್ಲಿ ಆ ಶಬ್ದದ ಮುಂದೆ "ಇದು ಮಿಥ್ಯಾಶಬ್ದ" ಎನಲ್ಕೆ+ಅಸಕಳಿ ಎಂದು ಸರಿಯಾಗಿ ಬಿಡಿಸದೆ, ಎನಲ್+ಕಸಕಳಿ ಎಂದು ತಪ್ಪಾಗಿ ಬಿಡಿಸುವುದರಿಂದ ಬರುವ ಅಪಶಬ್ದ" ಎಂದು ಬರೆದಿದ್ದರು ! ನಾನು ನನ್ನ ಆದಿಪುರಾಣದ ಪ್ರತಿಯಲ್ಲಿ ನಲವತ್ತೈದೂ ವರ್ಷಕ್ಕೆ ಹಿಂದೆ ಗುರುತುಮಾಡಿದ್ದ ಕಸಪೊರಕೆ, ಬರಲು ಎಂಬ ಅರ್ಥವನ್ನು ನನ್ನ ಕರಡುಪ್ರತಿಯಲ್ಲಿ ಸೂಚಿಸಿದ್ದೆ. ನಾವಿಬ್ಬರೂ ಸೇರಿ ಚರ್ಚೆಗೆ ತೊಡಗಿದಾಗ ಎಂದಿಗಿಂತ ಬಿರುಸಾದ ಮಾತೇ ನಡೆಯಿತು. ಅವರು "ಕಸಕಳಿ is impossible nonsense" ಎಂದಾಗ ನಾನು "your ಅಸಕಳಿ is equally impossible and nonsense" ಎಂದೆ. ಅವರು "ಅಸಕಳಿ" ಶಬ್ದದ ನೂರಾರು ಪ್ರಯೋಗಗಳಿವೆ, ಕಸಕಳಿ ಶಬ್ದದ ಇನ್ನೊಂದು ಪ್ರಯೋಗ ತೋರಿಸು ನೀನು" ಎಂದರು. "ಇನ್ನೊಂದು ಪ್ರಯೋಗ ಸಿಕ್ಕಿದ್ದರೆ ಶ್ರಮವೂ ಇರುತ್ತಿರಲಿಲ್ಲ, ವ್ಯಾಜ್ಯವೂ ಇರುತ್ತಿರಲಿಲ್ಲ" ಎಂದು ಹೇಳಿದ್ದಕ್ಕೆ, ಅವರು "ಹೋಗಲಿ. ವ್ಯುತ್ಪತ್ತಿಯೇನು" ಎಂದು ಕೇಳಿದರು. ನಾನು "ಕಸವನ್ನು ಕಳೆಯುವುದು ಕಸಕಳಿ (ಕಸ+ಕಳೆ+ಇ)" ಎಂದಾಗ "ನಾನು ಒಪ್ಪುವುದಿಲ್ಲ" ಎಂದು ಅವರು ಪಟ್ಟು ಹಿಡಿದರು. ಅದಕ್ಕೆ ನಾನು "ನೀನು ಒಪ್ಪು, ಬಿಡು. ಆ ಅರ್ಥವೂ ಸಾಧ್ಯ. ಇರುವುದನ್ನು ಇಲ್ಲ, ಇಲ್ಲದ್ದನ್ನು ಇದೆ ಎಂದು ವಾದಮಾಡುವ ನಾಲಗೆ ಕಸಬರಲು ಹೊರಳಾಡುವಂತೆ ಹೊರಳಾಡುತ್ತದೆ ಎಂದು ಕವಿ ರಸವತ್ತಾಗಿ ಚಿತ್ರಿಸಿದ್ದಾನೆ" ಎಂದು ಹೇಳಿ ಸುಮ್ಮನಾದೆ. ಅವರೂ ಸುಮ್ಮನಾದರು. ಐದು ನಿಮಿಷ ಬಿಟ್ಟುಕೊಂಡು

---

1. ಅದೇ.

ಅವರು "ಸರಿಯೇ ! ಈಗೇನು ಮಾಡೋಣ" ಎಂದಾಗ ನಾನು "ನನ್ನನ್ನೇನು ಕೇಳುತ್ತಿ, ಬೇಕಾದ್ದು ಮಾಡಿಕೊ. ನಿನ್ನದು ಹಟವಾದರೆ ನನ್ನದೂ ಹಟ," ಎಂದು ಮೊಂಡಾಟಕ್ಕೆ ತೊಡಗಿದೆ. ಅವರು ಸಮಾಧಾನಚಿತ್ತರಾಗಿಯೆ "ಏಕೋ ಹೀಗಾಡುತ್ತಿ ? ಏನಾದರೂ ಬರೆಯಬೇಕಲ್ಲೊ. ಎರಡೂ ಅಭಿಪ್ರಾಯಗಳನ್ನು ಸೂಚಿಸಿಬಿಡೋಣ" ಎಂದರು. ಅದಕ್ಕೆ ನಾನೂ ಒಪ್ಪಿ ಕೊನೆಗೆ "ಕಸಕಳಿ" ಮಿಥ್ಯಾಶಬ್ದವೆಂದು ಸೂಚಿಸಿ, "ಕಸಕಳಿ ಎನ್ನುವುದನ್ನು ಕಸ+ಕಳೆ+ಇ ಎಂದು ನಿಷ್ಪತ್ತಿ ಹೇಳಿ ಕಸಪೊರಕೆ, ಬರಲು ಎಂದು ಒಬ್ಬರು ಅರ್ಥೈಸಿದ್ದಾರೆ. ಇದು ಕನ್ನಡದಲ್ಲೆ ಏಕೈಕ ಪ್ರಯೋಗವಾಗಿರುವುದರಿಂದಲೂ ಜ್ಞಾತಿಶಬ್ದಗಳು ಯಾವುದೂ ಕಾಣಿಸದಿರುವುದರಿಂದಲೂ ಅರ್ಥವನ್ನಾಗಲಿ ನಿಷ್ಪತ್ತಿಯನ್ನಾಗಲಿ ಸಮರ್ಥಿಸುವುದು ಕಷ್ಟ" ಎಂದು ಟಿಪ್ಪಣಿ ಬರೆವದ್ದಾಯಿತು.

ಮೇಲಿನ ಘಟನೆ ನರಸಿಂಹಾಚಾರ್ಯರ ವ್ಯಕ್ತಿತ್ವವನ್ನು ಸೊಗಸಾಗಿ ಪರಿಚಯಿಸುತ್ತದೆ. ಅವರು ಆಧಾರಗಳಿಲ್ಲದ ಯಾವ ವಾದವನ್ನು ಒಪ್ಪುವುದಿಲ್ಲವಾದರೂ ತಮ್ಮದೇ ಸರಿಯೆಂದು ವಾದಿಸುವವರೂ ಅಲ್ಲ. ಒಂದು ಶಬ್ದದ ಅರ್ಥನಿರ್ಣಯದಲ್ಲಿ ಅವರದು ತೆರೆದ ಮನಸ್ಸು. ಅನ್ಯರ ವಾದಗಳಲ್ಲಿ ಸತ್ಯಾಂಶ ಗೋಚರವಾದರೆ ಅದನ್ನು ಸ್ವೀಕರಿಸುವ ಉದಾರಗುಣ ಅವರದು. ಒಂದು ಶಬ್ದದ ಸರಿಯಾದ ಪಾಠ ಆಕಸ್ಮಿಕವಾಗಿ ಹೊಳೆದಾಗ ಆಗುವ ಆನಂದ ವರ್ಣನಾತೀತ. ಕ್ರಿ.ಶ. ೧೦೫೭ರ ಚಾಲುಕ್ಯರಾಜ ತ್ರೈಲೋಕ್ಯಮಲ್ಲದೇವನ ಕಾಲದ ಬಳ್ಳಾರಿ ಹಿರೇಹಡಗಲಿಯ ಒಂದು ಶಾಸನದ (SII IX, Part I, Page 118, Line 42) ಕಂದಪದ್ಯದಲ್ಲಿ ಬರುವ "ಕುಗೆ" ಶಬ್ದಕ್ಕೆ ನಿಘಂಟು ಕಾರ್ಯಾಲಯದವರು ಪ್ರಶ್ನಾರ್ಥಕ ಚಿಹ್ನೆ ಹಾಕಿದ್ದರು. ಕ.ವೆಂ. ರಾಘವಾಚಾರ್‌ರವರು ನಿತ್ಯದಂತೆ ಪೂಜೆ ಮುಗಿಸಿಕೊಂಡು ಕರಡು ನೋಡಲು ಕುಳಿತಾಗ ಆ ಶಬ್ದ ಕಣ್ಣಿಗೆ ಬಿದ್ದಿತು. ಪೂಜೆಯ ಸಂದರ್ಭದಲ್ಲಿ ತಮಿಳು ಪಾಶುರಗಳನ್ನು ಹೇಳುವುದು ಅವರ ಪದ್ಧತಿ. ಅಂದಿನ ಸ್ತೋತ್ರದ ತಮಿಳು ಪಾಶುರವೊಂದರಲ್ಲಿ "ಕೊಂಗೈ" ಪದ ಬಂದಿದ್ದು ಆ ಸಾಲು ಅವರ ಕಿವಿಯಲ್ಲಿ ಇನ್ನೂ ಗುಂಯ್‌ಗುಟ್ಟುತ್ತಿತ್ತು. ಆದ್ದರಿಂದ ಅವರು ಒಡನೆಯೆ ಕುಗೆ= ಸ್ತನ ಎಂದು ತಮ್ಮ ಕರಡಿನಲ್ಲಿ ಗುರುತುಹಾಕಿದರು, ವಿಷಯ ತಿಳಿದಾಗ

ನರಸಿಂಹಾಚಾರ್ಯರ ಸಂತೋಷ ಅಷ್ಟಿಷ್ಟಲ್ಲ. ಆ ಆನಂದೋದ್ರೇಕದಲ್ಲಿ ನರಸಿಂಹಾಚಾರ್ಯರು ಆರಾಮಕುರ್ಚಿಯಲ್ಲಿ ಹೂಗದಸ್ತಾಗಿ ಮುಂಡಿಸಿದ್ದ ತಮ್ಮ ಸ್ಥೂಲ ದೇಹವನ್ನು ಒಮ್ಮೆಲೆ ಜಗಿಸಿ "ಲೇ ರಾಘವಾಚಾರಿ ! ಒಳ್ಳೆಯ ಭರ್ಜರಿ ಸಂಶೋಧನೆ ಇದು. ನಾವಿಬ್ಬರೂ ನಿಘಂಟು ಸಮಿತಿಯ ಸದಸ್ಯ ರಾಗಿದ್ದದ್ದು ಸಾರ್ಥಕವಾಯಿತು. ಇನ್ನೇನು ಮಾಡಲಿ ಬಿಡಲಿ, ಕನ್ನಡದ ಒಂದು ಅಜ್ಞಾತಗುಪ್ತ ಶಬ್ದವನ್ನು ಗುರುತಿಸಿ ಕೋಶಕ್ಕೆ ಸೇರಿಸಿದ್ದೇವೆ" ಎಂದು ಹೆಮ್ಮೆಯಿಂದ ನಲಿದಾಡಿದರು.[1]

'ಕನ್ನಡದಲ್ಲಿ ಶಬ್ದರಚನೆ' ಎಂಬ ಡಿ.ಎಲ್.ಎನ್.ರವರ ದೀರ್ಘ ಲೇಖನ (ಸು. 62 ಪುಟಗಳು–ಡೆಮಿ) ಅವರ ಆಳವಾದ ವ್ಯಾಸಂಗ, ಪಾಂಡಿತ್ಯವನ್ನು ಎತ್ತಿಹೇಳುತ್ತದೆ. ಕನ್ನಡನುಡಿಯ ಶಬ್ದಭಂಡಾರದಲ್ಲಿ ದೇಶ್ಯಶಬ್ದಗಳು; ಸಂಸ್ಕೃತ ಪ್ರಾಕೃತಗಳಿಂದ ಬಂದು ಸೇರಿದ ಶಬ್ದಗಳು; ಗ್ರೀಕ್, ಪಾರ್ಸಿ, ಲ್ಯಾಟಿನ್, ಅರಬ್ಬಿ, ಪೋರ್ಚುಗೀಸ್ ಶಬ್ದಗಳು ಎರವಲು ಶಬ್ದಗಳಾಗಿ ಕನ್ನಡಕ್ಕೆ ಬಂದಿರುವುದು–ಇವುಗಳಿಂದಾಗಿ ಶಬ್ದಗಳು ಅಪಾರಸಂಖ್ಯೆಯಲ್ಲಿವೆ. ದ್ರಾವಿಡಶಬ್ದಗಳಲ್ಲಿರುವ ಹಾಗೆಯೇ ಕನ್ನಡದಲ್ಲೂ ಅಂತ್ಯಪ್ರತ್ಯಯಗಳ ಪ್ರಯೋಗದಿಂದ ನೂತನ ಶಬ್ದನಿರ್ಮಾಣ ಸಾಧ್ಯವೆಂದು ಡಿ.ಎಲ್.ಎನ್. ಹೇಳುವರು. ಸಂಸ್ಕೃತ ಅರಬ್ಬಿ ಮುಂತಾದ ಭಾಷೆಗಳಲ್ಲಿ ಆದಿಮಧ್ಯಾವಸಾನ ಪ್ರತ್ಯಯಗಳಿಂದ ನೂತನ ಶಬ್ದ ನಿರ್ಮಿತಿ ಆಗುವುದರಿಂದ ಅವುಗಳಲ್ಲಿರುವ ಶಬ್ದಸಂಪದ ದ್ರಾವಿಡ ಭಾಷೆಗಳಲ್ಲಿರುವುದಕ್ಕಿಂತ ಕನಿಷ್ಠಪಕ್ಷ ಮೂರರಷ್ಟು ಅಧಿಕವಾಗಿರುವುದೆಂದೂ, ಇರುವ ಅಂತ್ಯಪ್ರತ್ಯಯಸಂಶ್ಲೇಷ ವಿಧಾನವನ್ನು ಕೂಡ ಕನ್ನಡ ಸಮರ್ಪಕವಾಗಿ ಉಪಯೋಗಿಸಿಕೊಂಡಿಲ್ಲವೆಂದೂ ಅಭಿಪ್ರಾಯ ಪಡುವ ಅವರು "ಸ್ವಂತ ಆಸ್ತಿಯನ್ನು ವೃದ್ಧಿಮಾಡುವುದು ಕಷ್ಟ ; ಪ್ರಯತ್ನ ಮಾಡಬೇಕಾಗುತ್ತದೆ. ಸಾಲ ತೆಗೆದುಕೊಳ್ಳುವುದು ಸುಲಭ; ಯಾವ ಮಾನಸಿಕ ಪ್ರಯತ್ನವೂ ಬೇಕಿಲ್ಲ. ಕನ್ನಡ ಈ ದಾರಿಯನ್ನು ಹಿಡಿದು ಪಿತ್ರಾರ್ಜಿತವಾದು ದನ್ನು ಕಳೆದುಕೊಳ್ಳುತ್ತ ಬರುತ್ತಿದೆ. ಇದನ್ನು ತಡೆಗಟ್ಟಬೇಕಾಗಿದೆ; ಹಳೆಯ ಶಬ್ದಗಳನ್ನು, ವ್ಯವಹಾರದಲ್ಲಿ ನಿಂತುಹೋಗಿರುವವನ್ನು, ಮೆಲ್ಲಮೆಲ್ಲನೆ

---

1 ಅದೇ, ಪು. ೧೨

ಸಪ್ರಾಣಿಸಬೇಕು. ತನ್ನದನ್ನು ಕಾಪಾಡಿಕೊಂಡು ಅನ್ಯ ಶಬ್ದಭಂಡಾರವನ್ನು ಅವಶ್ಯಕತೆಗೆ ಅನುಗುಣವಾಗಿ, ಉಪಯೋಗಿಸಿಕೊಳ್ಳುತ್ತ ಧೀರಗಮನದಿಂದ ಕನ್ನಡ ಮುಂದೆ ಸಾಗಬೇಕು..." ಎಂದು ಅವರು ನಮ್ಮನ್ನು ಎಚ್ಚರಿಸಿರುವರು.[1]

ಕನ್ನಡ ಕಾವ್ಯಗಳಲ್ಲಿ, ಶಾಸನಗಳಲ್ಲಿ, ಮೇಗಾಳಿ ಕಿಗ್ಗಾಳಿ, ಹುಡುಕು ನೀರು, ಬಡಪ, ಓಹರಿ ಸಾಹರಿ, ಒಲ್ಲಣಿಗೆ, ಮೂವಿಟ್ಟಿ, ಪೊರಸು, ಬಾದುಬೆ, ಅಗ್ರಹಾರ, ಕಾಳಸೆ, ಡಂಗಹಾಕು, ರಪಣ, ಮದನಾವತಾರ, ಕಾರೋಹಣದ ಪಟಿ, ಬರಡಗೆ, ಪಟಿಂಗಾಸು, ಗುಯ್ಯಲ್, ಮೇಕು, ಈಜಿಲ್, ತಕ್ಕೊಮ್ಮೆ, ಭಗವತಿಯೇಜು—ಇಂತಹ ಸಾವಿರಾರು ಪದಗಳು ಅವಿತುಕೊಂಡಿವೆ. ಡಿ.ಎಲ್.ಎನ್. ಇಂತಹ ಪದಗಳು ಕಣ್ಣಿಗೆ ಬಿದ್ದಾಗ ಅವುಗಳ ಅರ್ಥ ಮತ್ತು ನಿಷ್ಪತ್ತಿ ಹೇಳುವ ವಿಧಾನ ಅನನ್ಯವಾದುದು. ಈ ಕನ್ನಡ ಪದಗಳಿಗೆ ಅರ್ಥವನ್ನು ನಿಶ್ಚಯಿಸುವಾಗ ಕನ್ನಡದಲ್ಲಿ ಬಳಕೆಗೊಂಡಿರುವ ಕವಿಪ್ರಯೋಗಗಳನು ಕೊಡುವರು. ಪ್ರಾಕೃತ, ಸಂಸ್ಕೃತ, ತಮಿಳು, ತೆಲುಗು, ಮಲೆಯಾಳಗಳಲ್ಲಿ ಬರುವ ಪ್ರಯೋಗಗಳನ್ನು ಹೇಳುವರು. ಪದಪ್ರಯೋಗದಲ್ಲಿ ಲಿಪಿಕಾರ ಸ್ಖಾಲಿತ್ಯವಿದ್ದರೆ ಅದರ ಸರಿಯಾದ ಪ್ರಯೋಗವನ್ನು ಕೊಡುವರು. ಎಲ್ಲಿಯೇ ಇರಲಿ, ಎಲ್ಲಿಗೇ ಹೋಗಲಿ ಅವರು ಕನ್ನಡ ಪದಗಳ ಬಳಕೆ ಪ್ರಯೋಗಗಳ ಬಗೆಗೆ ಲಕ್ಷ್ಯವಿಟ್ಟು ಕೇಳುವರು. ಹೀಗಾಗಿ, ಹಳ್ಳಿಯ ಜನರಲ್ಲಿ ಬಳಕೆಯಲ್ಲಿದ್ದ ಮೇಗಾಳಿ ಕಿಗ್ಗಾಳಿಯೆಂಬ ಕನ್ನಡದ ಅಪೂರ್ವಪದದ ಅರ್ಥವನ್ನು ಸರಿಯಾಗಿ ವಿವರಿಸಲು ಸಾಧ್ಯವಾಯಿತು. ಶನಿವಾರದ ದಿನ ಭಿಕ್ಷೆ ಬೇಡಲು ಬಂದ ಹಳ್ಳಿಯ ಹೆಂಗಸೊಬ್ಬಳು "ಬುದ್ದಿ, ಇವತ್ತು ವಡವಾರ, ಅಕ್ಕಿಕೊಡಿ" ಎಂದು ಕೇಳಿದ್ದು, ಕನ್ನಡ ಶಾಸನಗಳಲ್ಲಿ ಹಲವು ಸಲ ಬರುವ ವಡ್ಡವಾರ ಪದದ ಅರ್ಥ ತಿಳಿಯಲು ಸಾಧ್ಯವಾಯಿತು.

"...ನಿಘಂಟುಕಾರನಿಗೆ ವಿವಿಧ ಶಾಸ್ತ್ರ ಪರಿಭಾಷೆಗಳ ಪರಿಚಯು ಇರಲೇಬೇಕು. ಕನ್ನಡ ಭಾಷೆ ಸಾಹಿತ್ಯಗಳ ತುಂಬು ಪಾಂಡಿತ್ಯದೊಡನೆ ಸಂಸ್ಕೃತ

---

1 ಕನ್ನಡದಲ್ಲಿ ಶಬ್ದರಚನೆ ('ಪೀಠಿಕೆಗಳು ಲೇಖನಗಳು' ಪು. ೨೨೨)

ಪ್ರಾಕೃತ, ತಮಿಳು, ತೆಲುಗು, ಮಲೆಯಾಳವೇ ಮುಂತಾದ ಭಾಷೆಗಳ ಪರಿಜ್ಞಾನವೂ ಸಾಹಿತ್ಯಗಳ ಲೋಲುಪ್ತಿಯೂ ತುಳು ಮೊದಲಾದ ಇತರ ದ್ರಾವಿಡ ಭಾಷೆಗಳ ವ್ಯಾಕರಣ ಕೋಶಗಳ ಸಾನ್ನಿಧ್ಯವೂ ಆಧುನಿಕ ಭಾಷಾಶಾಸ್ತ್ರದ ತಿರುವುಮುರುವುಗಳ ಗಂಭೀರ ಜ್ಞಾನವೂ ಭಾಷೆಯ ಒಳಭೇದಗಳ ತಿಳುವಳಿಕೆಯೂ ಗ್ರಾಮಜೀವನದ ಅರಿವೂ ಅಲ್ಲದೆ ಶಕ್ತಿಯೂ ತಾಳ್ಮೆಯೂ ಸಹೃದಯತೆಯಿಂದ ಸೇರಬೇಕು. ಇಷ್ಟೆಲ್ಲ ಒಂದೇ ವ್ಯಕ್ತಿಯಲ್ಲಿ ಸಂಗಮಿಸಿದ್ದರೆ ಅದು ಅವನ ಪುಣ್ಯ, ಭಾಷೆಯ ಭಾಗ್ಯ..." ಎಂದು ಡಿ.ಎಲ್.ಎನ್. ಹೇಳುವರು. ಇದು ನಿಜ; ಇಷ್ಟೆಲ್ಲವೂ ಅವರಲ್ಲಿ ಮೇಳವಿಸಿದ್ದಿತು. ಅದು ನಮ್ಮ ಭಾಗ್ಯ, ಕನ್ನಡದ ಭಾಗ್ಯ !

ನಿಘಂಟು ಕೆಲಸದಿಂದಾಗಿ ಡಿ.ಎಲ್.ಎನ್. ತಮ್ಮ ಕೊನೆಗಾಲದಲ್ಲಿ ತೀವ್ರ ಹೃದಯಾಘಾತಕ್ಕೆ ಒಳಗಾದರು. ಅವರ ನಿರಂತರವಾದ ಶ್ರಮದ ಹಿಂದೆ ಒಂದು ದೊಡ್ಡ ಧ್ಯೇಯವಿದೆ: 'ಕನ್ನಡಕ್ಕೆ ತನ್ನದೇ ಆದ ಶಾಸ್ತ್ರೀಯ ನಿಘಂಟನ್ನು ಕೊಡಬೇಕು' ಎಂಬುದು. ಆ ಧ್ಯೇಯದ ಪೂರೈಕೆಗಾಗಿ ಅವರು ಹಗಲೂ ಇರುಳೂ ಶ್ರಮಿಸಿದರು. ಇದರ ಪರಿಣಾಮವಾಗಿ ಅವರ ಆರೋಗ್ಯ ಕೆಟ್ಟಿತು. ೧೯೭೧ರ ಮೇ ಏಳರ ರಾತ್ರಿ ಕಣ್ಣುಮುಚ್ಚಿ ಅವರು ತಮ್ಮ ಐಹಿಕ ಯಾತ್ರೆಯನ್ನು ಮುಗಿಸಿದರು. ಅವರು ಸಾಯುವ ಕೊನೆಗಳಿಗೆಯಲ್ಲಿ ಜ್ಞಾನಶೂನ್ಯರಾಗಿದ್ದಾಗಲೂ ಅವರ ಬಾಯಿಯಿಂದ ಕನ್ನಡ ನಿಘಂಟು ಮತ್ತು ಆ ನಿಘಂಟಿನ ಶಬ್ದಗಳು ಅಸ್ಪಷ್ಟವಾಗಿ ಹೊರಬರುತ್ತಿದ್ದುವಂತೆ ! 1945ರಲ್ಲಿ ಡಿ.ಎಲ್.ಎನ್. ನಿಘಂಟಿನ ಪ್ರಧಾನ ಸಂಪಾದಕರಾಗಿ ನೇಮಕಗೊಂಡರು. ಅಂದಿನಿಂದ ಅವರು ನಿಧನರಾಗುವವರೆವಿಗೂ ನಿಘಂಟು ಅವರ ಬದುಕಿನ ಅವಿಭಾಜ್ಯ ಅಂಗವಾಗಿದ್ದಿತು. ಅದು ಅವರ ಉಸಿರು, ಪ್ರಾಣ. ನಿಘಂಟು ರಚನೆಗೆ ಅವರು ಪಟ್ಟ ಶ್ರಮ ಮಾತಿನಲ್ಲಿ ವಿವರಿಸಲಾಗದ್ದು. ನಿಘಂಟು ಎಂದಾಗ ಅನಿವಾರ್ಯವಾಗಿ ಡಿ.ಎಲ್.ಎನ್. ಅವರ ಹೆಸರು ನೆನಪಿಗೆ ಬರುತ್ತದೆ.

ಸ್ವತಂತ್ರ ಕೃತಿಗಳು

ಕನ್ನಡ ಗ್ರಂಥ ಸಂಪಾದನೆ

1964ರಲ್ಲಿ ಹೊರಬಂದ ಈ ಕೃತಿ ಕನ್ನಡದಲ್ಲಿ ಗ್ರಂಥ ಸಂಪಾದನಾಶಾಸ್ತ್ರವನ್ನು ತಿಳಿಸುವ ಮೊದಲ ಕೃತಿ. ಪ್ರಾಚೀನ ಕೃತಿಗಳನ್ನು ಶಾಸ್ತ್ರೀಯವಾಗಿ ಸಂಪಾದಿಸುವ ವಿಧಾನವನ್ನು ಕುರಿತಂತೆ ಜರ್ಮನ್ ಮತ್ತು ಫ್ರೆಂಚ್ ಭಾಷೆಗಳಲ್ಲಿ ವಿಶೇಷವಾದ ಕೆಲಸ ನಡೆದಿದೆ. ಈ ಶಾಸ್ತ್ರವನ್ನು ತಿಳಿಯಹೇಳುವ ಗ್ರಂಥಗಳು ಇಂಗ್ಲೀಷ್‌ನಲ್ಲಿ ಸಾಕಷ್ಟು ಇವೆ. ಈ ಶಾಸ್ತ್ರದ ಸಾಮಾನ್ಯ ತತ್ವಗಳನ್ನು ಕನ್ನಡದ ಪ್ರಾಚೀನ ಗ್ರಂಥಗಳಿಗೆ ಅನ್ವಯಿಸುವ ಪ್ರಥಮ ಪ್ರಯತ್ನವನ್ನು ಡಿ.ಎಲ್‌ಎನ್.ರವರು ಇಲ್ಲಿ ಮಾಡಿರುವರು. ಅವರ ಮೂವತ್ತಕ್ಕೂ ಹೆಚ್ಚು ವರ್ಷಗಳ ವ್ಯಾಸಂಗ, ಅನುಭವ ಇಲ್ಲಿ ಮೈಗೂಡಿದೆ. ಈ ಅಪೂರ್ವ ಕೃತಿಯಲ್ಲಿ ಅವರು ಗ್ರಂಥ ಸಂಪಾದನಾಶಾಸ್ತ್ರದ ತತ್ವಗಳನ್ನು ಕನ್ನಡಕ್ಕೆ ಅನ್ವಯಿಸುವ ಸಂದರ್ಭದಲ್ಲಿ ಹಳಗನ್ನಡ ಹಾಗೂ ನಡುಗನ್ನಡ ಕೃತಿಗಳ ಅನೇಕ ಪ್ರಯೋಗಗಳನ್ನು ಕೊಟ್ಟು ವಿವರಿಸಿರುವರು. ಗ್ರಂಥಸಂಪಾದನೆಯ ಸಂದರ್ಭದಲ್ಲಿ ಸಂಪಾದಕ ಯಾವ ಯಾವ ಘಟ್ಟಗಳಲ್ಲಿ ಏನೇನು ಸಮಸ್ಯೆಗಳನ್ನು ಎದುರಿಸುತ್ತಾನೆ, ಅವುಗಳ ಪರಿಹಾರ ಹೇಗೆ ? ಎಂಬೆಲ್ಲ ವಿಚಾರಗಳು ಇಲ್ಲಿ ಮೌಲಿಕವಾಗಿವೆ. ಗ್ರಂಥ ಸಂಪಾದನೆಯನ್ನು ಒಂದ ಶಾಸ್ತ್ರದ ಮಟ್ಟಕ್ಕೆ ಕೊಂಡೊಯ್ಯುವ ಪ್ರಯತ್ನವನ್ನು 'ಕನ್ನಡ ಗ್ರಂಥ ಸಂಪಾದನೆ'ಯಲ್ಲಿ ಮಾಡಿರುವರು. ಅವರು ಹೀಗೆಂದಿರುವರು : "ಸತ್ಯದ ಸ್ವರೂಪವನ್ನು ತಿಳಿಯುವುದಕ್ಕಾಗಿ ಮಾಡುವ ಎಲ್ಲ ಅನ್ವೇಷಣೆಯೂ ವೈಜ್ಞಾನಿಕ ಗುಣಯುಕ್ತವಾಗಿರುತ್ತದೆ. ಗ್ರಂಥಸಂಪಾದನೆಯಲ್ಲಿ ಸತ್ಯವೆನ್ನುವುದು ಕವಿಲಿಖಿತ ಪಾಠ, ಅದರ ಅನ್ವೇಷಣೆ ಸಂಪಾದನ ಕಾರ್ಯ. ಒಂದು ಗ್ರಂಥದ ಪರಂಪರಾಗತ ಹಸ್ತಪ್ರತಿಗಳು ಮತ್ತು ಅದಕ್ಕೆ ಸಂಬಂಧಿಸಿದ ಲಿಖಿತರೂಪವಾದ ಇತರ ಸಾಮಗ್ರಿ

ಗಳು – ಇವುಗಳನ್ನು ಸಂಗ್ರಹಿಸುವುದು; ಸಂಗ್ರಹಿತವಾದ ಸಾಮಗ್ರಿಯನ್ನು ಸ್ಪಷ್ಟ ವಿಮರ್ಶಕ ದೃಷ್ಟಿಯಿಂದ ಪರೀಕ್ಷಿಸಿ ಯಾವುದು ಗ್ರಾಹ್ಯ ಅಥವಾ ಅಗ್ರಾಹ್ಯ ಎಂಬುವನ್ನು ನಿರ್ಣಯಿಸುವುದು; ಸ್ಖಾಲಿತ್ಯಗಳ ಆಧಾರದ ಮೇಲೆ ರಚಿತವಾಗುವ ಪ್ರತಿಗಳ ಸಂಬಂಧ, ಅದರಿಂದ ಮೂಡುವ ವಂಶವೃಕ್ಷ ರಚನೆ ಪ್ರಾಚೀನತರ ಪಾಠ ಸಂಪ್ರದಾಯದ ನಿರ್ಣಯ, ಮೂಲ ಪಾಠನಿರ್ಣಯ – ಇವುಗಳೆಲ್ಲ ತರ್ಕಬದ್ಧವಾಗಿಯೇ ನಡೆಯುತ್ತವೆ. ಯಾವ ಬಗೆಯ ಪೂರ್ವ ಗ್ರಹಿಕೆಯಾಗಲೀ, ಇಷ್ಟಾನಿಷ್ಟಗಳಿಗಾಗಲಿ ಇಲ್ಲಿ ಅವಕಾಶವಿಲ್ಲ. ಎಲ್ಲೆಡೆಗಳಲ್ಲೂ ವಾಸ್ತವಾಂಶಗಳ ಆಧಾರದ ಮೇಲೆ ಬುದ್ಧಿಯ ಕಾರ್ಯ ನಡೆಯುತ್ತದೆ. ಇವೆಲ್ಲ ಸಹಜವಾದ ವೈಜ್ಞಾನಿಕ ವಿಧಾನಗಳೇ ಆಗಿವೆ. ಆದ್ದರಿಂದ ಗ್ರಂಥಸಂಪಾದನೆ ಯನ್ನು ಶಾಸ್ತ್ರವೆಂದು ಕರೆಯಬಹುದು."[1]

ಈ ವಿಚಾರದಲ್ಲಿ ಮುಂದುವರಿದ ಅವರು "ಈ ಶಾಸ್ತ್ರದ ಒಂದು ಅಂಗವಾದ ಊಹಾತ್ಮಕ ಪರಿಷ್ಕರಣದಲ್ಲಿ ಮಾತ್ರ ಬುದ್ಧಿಯ ಕಾರ್ಯ ಮುಂದುವರಿಯದೆ ನಿಂತುಬಿಡಬಹುದು; ಆಗ ಪ್ರತಿಭಾಶಕ್ತಿ ಕಾರ್ಯೋನ್ಮುಖ ವಾಗುತ್ತದೆ, ಮಿಂಚಿನ ವೇಗದಿಂದ ಕವಿಪಾಠದ ಹೊಳಹನ್ನು ಕಾಣುತ್ತದೆ. ಇಲ್ಲಿ ಗ್ರಂಥಸಂಪಾದನೆ ಕಲಾತ್ಮಕವಾಗುತ್ತದೆ. ಕಲೆಯಿಂದ ಉಂಟಾಗುವ ರಸಾನುಭವ ಗ್ರಂಥಸಂಪಾದನೆಯ ಈ ಹಂತದಲ್ಲಿ ಸಂಪಾದಕನಿಗೆ ಉಂಟಾಗು ತ್ತದೆ; ಅವನ ಕಾರ್ಯವನ್ನು ಏಕಾಗ್ರಚಿತ್ತದಿಂದ ಪರಿಭಾವಿಸುವವರಿಗೂ ಈ ಅನುಭವದ ಸ್ಪರ್ಶವಾಗುತ್ತದೆ. ಆದ್ದರಿಂದ ಗ್ರಂಥಸಂಪಾದನೆಯನ್ನು ಈ ದೃಷ್ಟಿಯಿಂದ ಕಲೆಯೆಂದು ಕರೆಯಬಹುದು. ಆದರೆ ಕಲೆ ಅದರ ಪ್ರಧಾನ ತಮವಾದ ಅಂಶವಾಗಿಲ್ಲ, ಗೌಣಾಂಶ ಮಾತ್ರ. ಒಟ್ಟಿನಲ್ಲಿ ಗ್ರಂಥಸಂಪಾದನೆ ಕಲಾಸ್ಪರ್ಶವುಳ್ಳ ಒಂದು ಶಾಸ್ತ್ರ" ಎಂದಿರುವರು.[2]

'ಕನ್ನಡ ಗ್ರಂಥಸಂಪಾದನೆ' ಡಿ.ಎಲ್.ಎನ್.ರವರ ಮಹತ್ತರವಾದ ಕೃತಿ. ಅವರ ವಿದ್ವತ್ತು, ಆಳವಾದ ಪ್ರಾಚೀನ ಹಾಗೂ ನಡುಗನ್ನಡ ಸಾಹಿತ್ಯದ ಅಧ್ಯಯನ – ಇವುಗಳಿಗೆ ಒರೆಗಲ್ಲು ಈ ಕೃತಿ. ಡಾ|| ಎ. ನೆ. ಉಪಾಧ್ಯೆ

---

1. ಕನ್ನಡ ಗ್ರಂಥಸಂಪಾದನೆ, ಪು. ೨೪೫
2. ಅದೇ, ಪು. ೨೪೭

ಯವರು ಅಭಿಪ್ರಾಯಪಡುವಂತೆ "ಭಾರತೀಯ ಯಾವ ಭಾಷೆಯಲ್ಲಿಯೂ ಸುಲಭವಾಗಿ ದೊರೆಯದಂತಿರುವ ಅಮೂಲ್ಯವಾದ ಗ್ರಂಥ... ಇದೊಂದು ಸಾಧನೆ. ಕಿಟ್ಟೆಲ್, ರೈಸ್ ಮೊದಲಾದವರು ನಮಗೆ ನೀಡಿದ ಮೌಲಿಕ ಸಾಧನೆಗಳಷ್ಟೇ ಮಹತ್ವದ್ದು... ನರಸಿಂಹಾಚಾರ್ಯರು ಈ ಗ್ರಂಥ ಸಂಪಾದನಾ ಕಲೆಯಲ್ಲಿ ನಿಪುಣರು. ಅವರ ಹಳೆಗನ್ನಡ ಭಾಷೆಯ ಅಭ್ಯಾಸ ಆಳವಾದುದು. ಬೇರೆ ಬೇರೆ ಕಾವ್ಯಗಳನ್ನು ಓದಿ ಅವರು ಅನುಭವ ಪಡೆದವರು. ಗ್ರಂಥ ಸಂಪಾದನೆಯಲ್ಲಿ ಮೌಲಿಕ ತತ್ವಗಳನ್ನು ಅವರು ತಿಳಿದು ಕನ್ನಡ ಕಾವ್ಯಗಳಲ್ಲಿ ಅವನ್ನೆಲ್ಲಾ ಹೇಗೆ ಉಪಯೋಗಿಸಬೇಕು ಎಂಬ ಮಾತನ್ನು ಸೋದಾಹರಣವಾಗಿ ತಮ್ಮ ಈ ಗ್ರಂಥದಲ್ಲಿ ತಿಳಿಸಿ ಹೇಳಿದ್ದಾರೆ. ನರಸಿಂಹಾಚಾರ್ಯರ ಈ ಗ್ರಂಥವನ್ನು ಅಭ್ಯಸಿಸಿ ಅವರು ತೋರಿಸಿದ ದಾರಿಯನ್ನು ತಿಳಿದುಕೊಂಡು ಪ್ರಾಚೀನ ಕನ್ನಡ ಕಾವ್ಯಗಳ ಸಂಪಾದನೆಯಾದರೆ ಅದೊಂದು ಕನ್ನಡ ಸಾಹಿತ್ಯಕ್ಕೆ ಗೌರವ; ಭಾರತೀಯ ಸಾಹಿತ್ಯಕ್ಕೆ ಹೆಮ್ಮೆಯ ಮಾತು..."

ಹಂಪೆಯ ಹರಿಹರ

ಕನ್ನಡ ಸಾಹಿತ್ಯದಲ್ಲಿ ವಚನಕಾರರ ನಂತರ ದೊಡ್ಡ ಪರಿವರ್ತನೆಯನ್ನು ತಂದು ಅದರ ದಿಕ್ಕು ದೆಸೆ ಬದಲಿಸಿದ ಕ್ರಾಂತಿಕಾರ ಕವಿ ಹರಿಹರನ ಜೀವನ ಕೃತಿಗಳನ್ನು ಸಾಮಾನ್ಯರಿಗೆ ಪರಿಚಯಿಸುವ ಪ್ರಯತ್ನವನ್ನು ಡಿ.ಎಲ್.ಎನ್. ಈ ಪ್ರಚಾರೋಪನ್ಯಾಸ ಗ್ರಂಥದಲ್ಲಿ ಮಾಡಿರುವರು. ಕನ್ನಡದ ಶ್ರೇಷ್ಠ ಭಕ್ತಕವಿ ಹರಿಹರನ ಬಗೆಗೆ ಅನನ್ಯವಾದ ರೀತಿಯಲ್ಲಿ ಗೌರವಭಾವನೆಯನ್ನು ಹೊಂದಿರುವ ಡಿ.ಎಲ್.ಎನ್. ಬಹಳ ಸೊಗಸಾಗಿ ಕವಿಯ ವ್ಯಕ್ತಿತ್ವದ ಪರಿಚಯ ಮಾಡಿಕೊಟ್ಟಿರುವರು. ಕೃತಿಯ ಪ್ರಾರಂಭವೇ ಚೇತೋಹಾರಿಯಾಗಿದೆ. ಪೂರ್ವದಲ್ಲಿ ಕೆಂಪು ಹರಡುವ ಹೊತ್ತಿನಲ್ಲಿ ಶಿವನ ಭಕ್ತನೊಬ್ಬನು ಶಿವಸ್ತೋತ್ರ ಮಾಡುತ್ತ ಹೂಕೊಯ್ದು, ಮಾಲೆಮಾಡಿ, ದೇವಾಲಯಕ್ಕೆ ಬಂದು ದೇವರಿಗೆ ಬಗೆಬಗೆಯ ಹೂಗಳನ್ನು ಧರಿಸಿ, ದಿವ್ಯಮೂರ್ತಿಯ ಅಲಂಕಾರವನ್ನು ಕಣ್ತುಂಬ ನೋಡಿ ರೋಮಾಂಚನಗೊಂಡು ಆನಂದಭಾಷ್ಪ ಸುರಿಸುತ್ತ ದೇವನನ್ನು ಸ್ತುತಿಸುತ್ತ ಭಕ್ತಿಯ ಭರದಲ್ಲಿ ಇಹಲೋಕದ ಅರಿವು ಅಳಿದು ಆನಂದದ ಕಡಲಿನಲ್ಲಿ ಮನಸ್ಸು

ತೇಲುತ್ತ ಶಿವನ ಕರುಣೆಗೆ ಪಾತ್ರನಾದ ಪರಮಭಕ್ತ ಹರಿಹರನ ಚಿತ್ರ ಸೊಗಸಾಗಿ ಮೂಡಿಬಂದಿದೆ.

ಹರಿಹರ ಬರೆದಿರುವ ಚಂಪೂಮಹಾಕಾವ್ಯವಾದ 'ಗಿರಿಜಾ ಕಲ್ಯಾಣ'ವನ್ನು ವಸ್ತು, ಪಾತ್ರ, ಸನ್ನಿವೇಶಗಳ ಹಿನ್ನೆಲೆಯಲ್ಲಿ ಪರಿಚಯಮಾಡಿಕೊಟ್ಟಿರುವರು. ಹಾಗೆಯೇ, ಹರಿಹರನ 'ಅಂತರಾತ್ಮದ ವಾಣಿ'ಯಾದ ಪಂಪಾಶತಕ, ರಕ್ಷಾಶತಕಗಳಲ್ಲಿ ವೈರಾಗ್ಯ, ಭಕ್ತಿಗಳು ಹೇಗೆ ಪ್ರಧಾನವಾಗಿವೆ ಎಂಬುದನ್ನು ತಿಳಿಸಿರುವರು. ಹರಿಹರನ ರಗಳೆಗಳ ವೈಶಿಷ್ಟ್ಯವನ್ನು ಒಂದು ಅಧ್ಯಾಯದಲ್ಲಿ ವಿವರಿಸಿರುವರು. ಹರಿಹರನ ಗದ್ಯದ ಉತ್ಕೃಷ್ಟತೆಯನ್ನು ಡಿ.ಎಲ್.ಎನ್. ಹೇಳುತ್ತ "ತೂಕಮಾಡಿ ಆರಿಸಿದ ಉಚಿತ ಪದಪ್ರಯೋಗ, ಕಿವಿಗೆ ಇಂಪಾದ ಸರಣಿ, ಸರಳವಾದ ನಿರೂಪಣೆ, ಸಂದರ್ಭಕ್ಕೆ ತಕ್ಕಂತೆ ವಾಕ್ಯಗಳ ವೈವಿಧ್ಯ – ಇವೆಲ್ಲ ಉತ್ತಮ ಗದ್ಯದಲ್ಲಿರಬೇಕಾದ ಲಕ್ಷಣಗಳು" ಎಂದು ಅವರು ಹೇಳಿರುವರು.

ಹರಿಹರನ ಶೈಲಿಯ ಮುಖ್ಯ ಲಕ್ಷಣ 'ಉತ್ಸಾಹ'ವೆಂದು ಹೇಳುವ ಡಿ.ಎಲ್.ಎನ್. ಅದನ್ನು ಹೀಗೆ ವಿವರಿಸಿರುವರು : ಅವನ ಗಮನಕ್ಕೆ ಬಂದ ಯಾವ ವಿಷಯವಾದರೂ ಅಡಗಿಸಲಸಾಧ್ಯವಾದ ಭಾವಗಳನ್ನು ಅವನಲ್ಲಿ ಉಂಟುಮಾಡುತ್ತದೆ. ಅವು ನಾನು ಮುಂದೆ ತಾನು ಮುಂದೆ ಎಂದು ತಮ್ಮೊಳಗೆ ಹೊಯ್ದಾಡುತ್ತ ಸ್ಪರ್ಧಿಸುತ್ತವೆ. ಇದರಿಂದ ಅವನ ಮನಸ್ಸು ಭಾವಗಳ ನೃತ್ಯಶಾಲೆಯಾಗುತ್ತದೆ. ಅವುಗಳನ್ನು ಎಷ್ಟು ವಿಧವಾಗಿ ಹೇಳಲು ಪ್ರಯತ್ನಿಸಿದರೂ ಅವನಿಗೆ ತೃಪ್ತಿಯಿಲ್ಲ. ಹೇಳಿದ್ದು ಸಾಲದು, ಇನ್ನೂ ಹೇಳಬೇಕು, ಇನ್ನೂ ಚೆನ್ನಾಗಿ ಹೇಳಬೇಕು ಎಂಬುದು ಅವನ ಮನಸ್ಸಿನ ಸ್ವಭಾವ. ಇದನ್ನೇ ಉತ್ಸಾಹ ಎಂದು ಅವನು ಕರೆದಿರುವುದು. ಅವನ ಕಾವ್ಯಗಳಲ್ಲೆಲ್ಲ ಪದಗಳ, ಚಿತ್ರಗಳ, ನಾದಗಳ, ಭಾವಗಳ ಚೆಂಡಾಟವು ಕಾಣುತ್ತದೆ. ಪುಟ ಹೊಡೆದ ಚೆಂಡು ಕೊಂಚ ಎತ್ತರ ಹೋದರೆ ಅದು ಇನ್ನೂ ಮೇಲಕ್ಕೆ ನೆಗೆಯಲಿಲ್ಲವಲ್ಲಾ ಎಂದು ಮರಳಿ ಮರಳಿ ಹೊಡೆಯುವ ಹಾಗೆ ಹರಿಹರನ ಶೈಲಿ ಇದೆ... ಉತ್ಸಾಹ ಅವನ ಸಂಗೀತಕ್ಕೆ ಶ್ರುತಿ ಇದ್ದಂತೆ. ಅವನ ಅನುಭವಕ್ಕೆ ಅದಾವ ತೀವ್ರತೆಯೋ ಶಕ್ತಿಯೋ ಶಿವನೇ ಬಲ್ಲ!"

"ಚಿತ್ರಮಯವಾದ ಶೈಲಿ ದೊಡ್ಡ ಕವಿಯ ಹುಟ್ಟು ಆಸ್ತಿ. ಹರಿಹರನ ರಗಳೆಗಳು ಒಂದೊಂದೂ ಹಲವು ಚಿತ್ರಗಳ ಸುರುಳಿ. ಅವನ್ನು ಬಿಚ್ಚಿ ನೋ

ವಾಗಿ ವೇಗವಾಗಿ ತಿರುಗಿಸುತ್ತಾನೆ ಅವನು. ಕಣ್ಣಮುಂದೆ ಚಿತ್ರಗಳ ಮಾಲೆ ಸಜೀವವಾಗಿ ಸಂಚಾರ ಮಾಡುತ್ತದೆ. ಚಲನಚಿತ್ರವನ್ನು ನೋಡಿದಂತೆ ಅನುಭವ ಆಗುತ್ತದೆ. ಪ್ರತಿಯೊಂದು ರಗಳೆಯಲ್ಲಿಯೂ ಕಥಾನಾಯಕನ ದೇಶ, ಊರು, ಅಲ್ಲಿನ ಶಿವದೇವಾಲಯ, ಭಕ್ತನ ಓಡಾಟ, ಪೂಜೆ, ನಿಷ್ಠೆ, ಭಕ್ತಿ, ದಿನದಿನದ ಬದುಕು, ಅವನ ಮನಸ್ಸನ್ನು ಒರೆದು ನೋಡಬೇಕೆಂದು ಶಿವನಿಗೆ ಸಂಕಲ್ಪ ಬಂದು ವೇಷಧಾರಣೆ ಮಾಡುವುದು, ಪರೀಕ್ಷೆ, ಭಕ್ತನ ಗೆಲವು, ಪುಷ್ಪಕ ವಿಮಾನ, ಕೈಲಾಸ ಪ್ರಯಾಣ, ಶಿವನ ಪ್ರಶಂಸೆ, ಸಭೆ – ಈ ಚಿತ್ರಗಳು ಒಂದಾದಮೇಲೊಂದು ಬರುತ್ತವೆ. ಉಸಿರಾಡದೆ ಎವೆಯಿಕ್ಕದೆ ಕುಳಿತು ನೋಡುವ ಕೆಲಸ ಓದುವವನದು..."

ಹರಿಹರನಿಗೆ ರೂಪಕ ನಿರ್ಮಾಣ ಶಕ್ತಿ ವಿಶೇಷವಾಗಿದೆಯೆಂದು ಹೇಳುವ ಅವರು ಅದನ್ನು ಹೀಗೆ ವಿವರಿಸುವರು : "ಒಂದು ವಸ್ತುವನ್ನು ಬಹಳ ಬೇಗನೆ ಭಾವಬಲದಿಂದ ಇನ್ನೊಂದನ್ನಾಗಿ ಮಾಡುವ ಕೌಶಲ್ಯ ರೂಪಕದ ಸಾರ; ಗಾಜಿಗೆ ರಸದ ಲೇಪ ಕೊಟ್ಟು ಕನ್ನಡಿಯ ಕಾಂತಿಯನ್ನು ತರುವಂತೆ." ಇದನ್ನು ಸಮರ್ಥಿಸಲು ಇಳೆಯಾಂಡ ಗುಡಿಮಾರನೆಂಬ ಭಕ್ತನ ಕಥೆ ಹೇಳುವರು.

ಹರಿಹರನ ಶೈಲಿಯ ಇನ್ನೊಂದು ಗುಣವಾಗಿ 'ಪ್ರಯತ್ನರಹಿತತೆ'ಯನ್ನು ಡಿ.ಎಲ್.ಎನ್. ಗುರುತಿಸುವರು : "ಒಳಗಿನ ಶಕ್ತಿಯಿಂದ ಪ್ರಚೋದಿತವಾಗಿ ಅವನ ನಾಲಗೆ ಹಾಡುತ್ತದೆ; ಇಲ್ಲವೆಂದರೆ ಅದು ಬಿಡುವಂತಿಲ್ಲ. ಅದ್ದರಿಂದ ಅವನ ಕಾವ್ಯ ಯಾವಾಗಲೂ ಚಿಮ್ಮುವ ಚಿಲುಮೆ; ಶೈಲಿ ಪ್ರಯತ್ನರಹಿತ ವಾಗಿದೆ. ರಗಳೆಯ ಓಟಕ್ಕೆ ಯಾವ ತಡೆಯೂ ಇಲ್ಲ. ಆರಂಭವಾಗುವುದೇ ತಡ, ಗುರಿಮುಟ್ಟಿದ ಮೇಲೆಯೇ ಅದು ನಿಲ್ಲುವುದು, ಓಡಿ ಓಡಿ ನಿಟ್ಟುಸಿರು ಬಿಡುತ್ತ ನಿಲ್ಲುವ ಜೂಜು ಕುದುರೆಯಂತೆ. ಪ್ರಯತ್ನರಹಿತತೆ, ದ್ರುತಗತಿ – ಇವೆರಡೂ ಹರಿಹರನ ವಾಣಿಯ ಸಂಪತ್ತು. ಹಾಲು ಸಕ್ಕರೆಗಳಂತೆ ಹೊಂದಿ ಕೊಂಡಿವೆ ಅವು."

ಹರಿಹರನ ಕಲೆಯಲ್ಲಿಯೂ ಶೈಲಿಯಲ್ಲಿಯೂ ಸ್ಪಷ್ಟವಾದ ಬೆಳವಣಿಗೆ ಇರುವುದನ್ನು ಗಿರಿಜಾಕಲ್ಯಾಣ ಹಾಗೂ ರಗಳೆಗಳನ್ನು ಹೋಲಿಸುವ ಮೂಲಕ ಡಿ.ಎಲ್.ಎನ್. ಸ್ಪಷ್ಟಪಡಿಸುವರು : "ಒಂದರ (ಗಿರಿಜಾಕಲ್ಯಾಣ) ಕಥಾರಚನೆ ಯಲ್ಲಿ ಕೌಶಲ್ಯ ಕಡಿಮೆ, ಪಾತ್ರಗಳ ಗುಣ ಸ್ವಭಾವ ಪರಿಜ್ಞಾನ ಆಳವಾಗಿಲ್ಲ,

ಹೊಸದಾಗಿ ನಿರ್ಮಿಸಿದ ಸಂದರ್ಭಗಳಲ್ಲಿ ಪ್ರತಿಭೆ ಮಿಂಚಿದ್ದರೂ ನಿರೂಪಣೆ ಹಿತ ವಾಗಿಲ್ಲ, ಭೇದವಾದ ವರ್ಣನೆಗಳ ಹೊರೆಯು ಹುಲುಸಾಗಿದೆ, ಪಾಂಡಿತ್ಯ ಪ್ರದರ್ಶನದ ಆಸೆ ಹಿರಿದಾಗಿದೆ, ಇನ್ನೊಂದರಲ್ಲಿ ಸಂವಿಧಾನ ಕೌಶಲ್ಯ ಹೊಳೆಯುತ್ತಿದೆ, ಪಾತ್ರಗಳ ಹೃದಯ ವ್ಯಾಪಾರದ ತೀವ್ರಾನುಭವ ವಿದೆ, ಸನ್ನಿವೇಶ ನಿರೂಪಣೆಯಲ್ಲಿ ಸಮತ್ವ ನಾಟಕೀಯತೆಯೂ ಹೆಚ್ಚು, ವರ್ಣನೆ ಮಿತವಾಗಿದೆ, ಪಾಂಡಿತ್ಯದ ಚಾಪಲ್ಯ ಮಾಯವಾಗಿ ಸರಳತೆಯ ಸೊಗಸು ಪ್ರತ್ಯಕ್ಷವಾಗಿದೆ..."

ಹರಿಹರನ ಬಗೆಗೆ ತಮ್ಮ ಹೃದಯಾಂತರಾಳದ ಗೌರವವನ್ನು, ಪ್ರೀತಿ ಯನ್ನು ಡಿ.ಎಲ್.ಎನ್. ಹೀಗೆ ತಿಳಿಸುವರು : "...ತನ್ನ ಕಾಲದ ಸಾಹಿತ್ಯಕ್ಕೆ ಸೀಮಾಪುರುಷ ಹರಿಹರ. ಕನ್ನಡ ಸಾಹಿತ್ಯ ಮಂದಿರದ ಚಿನ್ನದ ಕಲಶಗಳಲ್ಲಿ ಅವನು ಒಬ್ಬನು. ಬಹು ಎತ್ತರದಲ್ಲಿ ನಿಂತು ಆ ಕಲಶ ತನ್ನ ಕಾಂತಿಯನ್ನು ಎಲ್ಲ ದಿಕ್ಕುಗಳಿಗೂ ಚೆಲ್ಲಿ ನಾಡ ಮೇಲೆಲ್ಲ ಬೆಳುದಿಂಗಳನ್ನು ಹರಡಿದೆ. ಅದು ಎಂದೂ ಮಸುಳದೆ ನಿಲ್ಲಲಿ; ಕನ್ನಡ ಜನತೆಗೆ ಹೆಮ್ಮೆಯ ಕೀರ್ತಿಸ್ತಂಭ ವಾಗಿರಲಿ."

ಪಂಪ ಭಾರತ ದೀಪಿಕೆ

ಕನ್ನಡದ ಪ್ರಾಚೀನ ಕಾವ್ಯಗಳಿಗೆ ಶಾಸ್ತ್ರಶುದ್ಧವಾದ ಟೀಕೆಗಳು ಬಹಳ ಕಡಿಮೆ. ಡಿ.ಎಲ್.ಎನ್.ರವರ 'ಪಂಪ ಭಾರತ ದೀಪಿಕೆ'ಯು ಮಹಾಕವಿ ಪಂಪನ 'ವಿಕ್ರಮಾರ್ಜುನ ವಿಜಯ'ಕ್ಕೆ ಬರೆದ ವ್ಯಾಖ್ಯಾನ. ಅವರ ಹಲವು ವರ್ಷಗಳ ಅಧ್ಯಯನ, ಸಂಶೋಧನೆಗಳ ಪಾಂಡಿತ್ಯಪೂರ್ಣ ಫಲ ಈ ವ್ಯಾಖ್ಯಾನ ಗ್ರಂಥ. ದಿವಂಗತ ಬೆಳ್ಳಾವೆ ವೆಂಕಟನಾರಾಯಣಪ್ಪನವರಿಂದ ಸಂಪಾದಿತವಾದ 1931ರಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಮೂಲಕ ಪ್ರಕಟವಾದ 'ಪಂಪ ಭಾರತ' ಅಥವಾ 'ವಿಕ್ರಮಾರ್ಜುನ ವಿಜಯ'ವು ಸದ್ಯಕ್ಕೆ ಕನ್ನಡದಲ್ಲಿನ ಆದ್ಯ ಲೌಕಿಕ ಕೃತಿ. ತನ್ನ ಕಥಾನಾಯಕ ಎರಡನೆಯ ಅರಿಕೇಸರಿಯನ್ನು ಮಹಾ ಭಾರತದ ಅರ್ಜುನನಿಗೆ 'ತಗುಳ್ಚಿ' ಮಹಾಭಾರತದ ಕಥೆಯನ್ನು ಪಂಪನು ಇಲ್ಲಿ ಹೇಳಿರುವನು. ಹತ್ತನೆಯ ಶತಮಾನದ ರಾಜಕೀಯ, ಸಾಮಾಜಿಕ, ಧಾರ್ಮಿಕ ವಿವರಗಳನ್ನು ತಿಳಿಯುವ ನೆಲೆಯಲ್ಲಿ 'ಪಂಪ ಭಾರತ'ವು 10ನೇ ಶತಮಾನದ ಪ್ರಮುಖ ಕೃತಿಯಾಗುತ್ತದೆ. ಡಿ.ಎಲ್.ಎನ್.ರವರು ಈ ಪ್ರಾಚೀನ ಕೃತಿಯನ್ನು ಮೇಲಿಂದ ಮೇಲೆ ಅಧ್ಯಯನ ಮಾಡಿ, ಅಲ್ಲಿ ಇದಿರಾಗುವ ಮುದ್ರಿತಪಾಠದ ತೊಡಕುಗಳನ್ನೂ ಸಮಸ್ಯೆಗಳನ್ನೂ ಪರಿಹರಿಸಿ

ಕೊಂಡು ಶುದ್ಧ ಪಾಠಗಳನ್ನು ಈ ವ್ಯಾಖ್ಯಾನದಲ್ಲಿ ಕೊಟ್ಟಿರುವರು. ಇದು ಸಾಹಿತ್ಯಾಸಕ್ತರಿಗೆ ಮಾಡಿರುವ ಮಹದುಪಕಾರ. ಈ ಟೀಕೆಯು ಪ್ರತಿಪದಾರ್ಥ ಸಹಿತವಾಗಿದೆ. ವ್ಯಾಕರಣ, ಛಂದಸ್ಸು, ಪೂರ್ವಕಥಾ ವೃತ್ತಾಂತ, ಶಬ್ದಾರ್ಥ ನಿರ್ಣಯ, ಆಕರ ಗ್ರಂಥಗಳು - ಮುಂತಾದ ಅನೇಕ ವಿಷಯಗಳು ಈ ಟೀಕೆಯಲ್ಲಿ ನಿರೂಪಿತವಾಗಿದೆ. ಜಿಜ್ಞಾಸುವಿನ ದೃಷ್ಟಿಯಿಂದ ಕೆಲವಂಶಗಳನು ಚರ್ಚಿಸಲಾಗಿದೆ. ಡಿ.ಎಲ್.ಎನ್. ತಮಗೆ ಸಂದೇಹವೆಂದು ತೋರಿದೆಡೆಗಳಲ್ಲಿ ಪ್ರಶ್ನ ಚಿಹ್ನೆಗಳನ್ನು ಅಲ್ಲಲ್ಲಿ ಹಾಕಿರುವರು. ಪಂಪ ಭಾರತವು ತನ್ನ ಕಾಲದ ಅನೇಕ ಅಪರೂಪದ ಪ್ರಯೋಗಗಳನ್ನು ಒಳಗೊಂಡಿದೆ. ಡಿ.ಎಲ್.ಎನ್. ವ್ಯಾಖ್ಯಾನಿಸುವಾಗ ಅವುಗಳ ಶಬ್ದಾರ್ಥ ನಿರ್ಣಯ ಮಾಡಿರುವ ರೀತಿ ಅವರ ಪಾಂಡಿತ್ಯ ಹಾಗೂ ಪ್ರತಿಭೆಗೆ ನಿದರ್ಶನವಾಗಿದೆ. ಉದಾಹರಣೆಗೆ ಪಂಪನು ತನ್ನ ಮೈಬಣ್ಣವನ್ನು ವರ್ಣಿಸಿಕೊಳ್ಳುವಾಗ 'ಕದಳೀಗರ್ಭಶ್ಯಾಮಂ' ಎಂದಿರುವನು. 'ಕದಳೀಗರ್ಭ' ಎಂದರೆ ಏನು ? ಎನ್ನುವ ಪ್ರಶ್ನೆಗೆ ಅವರು ಹೀಗೆ ವಿವರಣೆ ನೀಡುವರು : "ಇದರಲ್ಲಿ ಭಿನ್ನಾಭಿಪ್ರಾಯಗಳಿವೆ ; ಕದಲೀ ಗರ್ಭ = ರಂಭಾಗರ್ಭ ಎಂಬ ಮಾತು ಹರ್ಷಚರಿತೆಯಲ್ಲಿ ಬರುತ್ತದೆ ; ಇದಕ್ಕೆ ಕೋವೆಲ್(Cowell) ಮತ್ತು ಟಾನಿ (Tawney) ಎಂಬ ವಿದ್ವಾಂಸರು 'ಬಾಳೆಯ ಕಾಯಿನ ತಿರುಳಿನಂತೆ' (The unripe Plantain fruit) ಎಂದು ವಿವರಣೆ ಹೇಳಿದ್ದಾರೆ ; ಇದು ಸರಿಯಲ್ಲವೆಂದೂ ರಂಭಾ ಎಂದರೆ ಬಾಳೆಯ ಮರವಲ್ಲದೆ, ಅದರ ಕಾಯಿಯೆಂದು ಅರ್ಥವಲ್ಲವೆಂದೂ ಬಾಳೆಯ ಕಂಬ ದೊಳಗಿನ ದಿಂಡು ಎಂದು ಅರ್ಥವೆಂದೂ ಪಿ. ವಿ. ಕಾಣೆಯವರು ಹೇಳುತ್ತಾರೆ (ಹರ್ಷ ಚರಿತ ಟಿಪ್ಪಣಿ ಪುಟ ೫೫). ರವಿಷೇಣನ ಜೈನ ರಾಮಾಯಣದಲ್ಲಿ 'ಕದಲೀಗರ್ಭ ಪಾಂಡುರಾ' ಎಂಬ ಮಾತು ದೊರೆಯುತ್ತದೆ ; ಇದಕ್ಕೆ ಪಿ. ವಿ. ಕಾಣೆಯವರ ಅರ್ಥ ಶ್ಯಾಮಲವರ್ಣವುಳ್ಳ ಮೋತೆ ಎಂದು ಇಲ್ಲಿ ಅರ್ಥ ಮಾಡಿದೆ ; ಎಣ್ಣೆಗೆಂಪಿನ ಬಣ್ಣ ಎಂದು ತಿಳಿಯಬಹುದು. ಕದಳೀ ಎಂದರೆ ಬಾಳೆಯಕಾಯಿ, ಹಣ್ಣೂ ಆಗಬಹುದು." (ಪು. ೭೨)

ತೃತೀಯಾಶ್ವಾಸದ ಪದ್ಯ ೩೨ರಲ್ಲಿ ಬರುವ ಕೆಲವು ಪಾಠ ಸಮಸ್ಯೆಗಳನ್ನು ಪರಿಹರಿಸುವಲ್ಲಿ ತೋರುವ ಜಾಣ್ಮೆಯನ್ನು ಈ ಕೆಳಗಿನ ಅವರ ವಿವರಣೆಯಲ್ಲಿ ನೋಡಬಹುದು : "ಈ ಪದ್ಯದಲ್ಲಿ ಬರುವ 'ಸುತರುಂ'

ಎಂಬಲ್ಲಿನ ಸಮುಚ್ಚಯಕ್ಕೆ ಸಾರ್ಥಕತೆಯಿಲ್ಲ. ಸಾತ[ರಾ] ಎಂದು ಪಾಠವಿ
ಬಹುದು ; ಅಜಿಯರ್ ಎಂಬ ಪಾಠ ಸರಿಯೆಂದು ತೋರುವುದಿಲ್ಲವಾದ್ದರಿಂ
ಅದನ್ನು 'ಅರಿಯರ್' ಎಂದು ತಿದ್ದಿದೆ. ಅರ್ಥ, ಅರಿದು + ಅರ್ = ಅಸಾಧ್ಯರು
'ಅರಿಯರ್ ಪಾಂಡವರವರೊಳ್ ವಿರೋಧಮಂ ಬಿಸುಟು ಸಂಧಿಯಂ ಮಾಡ
ವುದೆಂಬರ ನುಡಿಯುಂ' ಎಂದು ರನ್ನನ ಪ್ರಯೋಗವಿದೆ (ಗದಾ. ೬-೮)
ಗೆಲಲ್ಕರಿಯನುಮೋದಿಬಾರದನುಮಂಕದ ಕರ್ಣನೆ (ಪಂಪಭಾ. ೬-೬೦
ಎಂದೂ ಉಂಟು. ವೇಮಾಜಿರ್ – ಈ ಶಬ್ದದ ಸ್ವರೂಪ ವಿಚಾರದಲ್ಲ
ಅರ್ಥವಿಚಾರದಲ್ಲೂ ಸಂದೇಹವಿದೆ ; ಏಮಾಜು(ತ), ಏಮಾಳಿ (ಮ)
ಏಮಾರು(ತೆ) ಎಂಬ ಶಬ್ದವು, ಮೋಸಮಾಡು, ಮೋಸಕ್ಕೆ ಒಳಗಾಗು ಎಂಬರ್ಥ
ದಲ್ಲಿ ದೊರೆಯುತ್ತವೆ. ಇಲ್ಲಿ ಇದೇ ಅರ್ಥವನ್ನು ಇಟ್ಟುಕೊಂಡಿದೆ ; ಈ ಶಬ್
'ವೇಮಾಜು' ಏಕೆ ಆಯಿತೆಂದು ಹೇಳುವುದು ಕಷ್ಟ. "ಸಂತಂ ಬಸಂತಂ ಕರಂ
ಎಂದು ಮುಗಿಯುವ ಕೆಲವು ಪದ್ಯಗಳು ಶಾಸನಗಳಲ್ಲಿ ಅಲ್ಲಲ್ಲಿ ನಗರ ವರ್ಣನ
ಯಲ್ಲೋ, ದೇಶವರ್ಣನೆಯಲ್ಲೊ ದೊರೆಯುತ್ತವೆ : 'ಮಾಧವಪುರಂ ಸಂತ
ಬಸಂತಂ ಕರಂ' ಎಂದು ಕಡೂರು ೧೨೯ನೆಯ ಶಾಸನದಲ್ಲಿದೆ, 'ಬಲ್ಲಕುಂದ
ನಡುನಾಟ್ ಸಂತಂ ಬಸಂತಂ ಕರಂ' ಎನ್ನುತ್ತದೆ ಕುಜುಗೋಡಿನ ಶಾಸನ
(ಶಾಸನಪದ್ಯಮಂಜರಿ ೧೮೬) ; ಇನ್ನೊಂದು ಶಾಸನದಲ್ಲಿ (ಅರಸಿಯಕೆರೆ ೧೧೭)
"ಕೆಲ್ಲಂಗೆಜಿಯುಂದ ಮಿಂದ್ರನಮರಾವತಿಯಂತೆ ಬಸಂತಮಾಗಳುಂ" ಎಂದು
ಸ್ವಲ್ಪ ವ್ಯತ್ಯಾಸಮಾಡಿ ಹೇಳಿದೆ. ಪಂಪನ ಈ ಪದ್ಯ ಇವೆಲ್ಲಕ್ಕೂ ಪ್ರೇರಕ
ವಾಗಿದ್ದಿರಬಹುದು." (ಪು.೧೦೫).

ಪಂಪನಲ್ಲಿ ಒಂದು ವಿಶೇಷಪದ ಕಂಡುಬಂದಾಗ, ಆ ಪದದ ಪ್ರಯೋಗ
ಬೇರೆ ಎಲ್ಲಿ ಬಳಕೆಗೊಂಡಿದೆಯೆಂಬುದನ್ನು ಡಿ.ಎಲ್.ಎನ್. ತಿಳಿಸುವರು.
ಉದಾಹರಣೆಗೆ ಕೀರ್ತಿಮುಖ. "ಮಂಗಳಪಾತ್ರ ಚೂಡಾಮಣಿ ಎಂಬ
ನರ್ತಕಿಯ ಅಲಂಕಾರಗಳನ್ನು ವರ್ಣಿಸುವಾಗ ವೃತ್ತವಿಲಾಸನು "ಮೂಗಿನ
ಮೂಗುತಿಯ ತೋರಹಾರದ, ಕೀರ್ತಿಮುಖದ, ತೋಳಬಂದಿಯ... ಕಾಲ
ಹೆಳಚಿನುಂಗುರದ" ಎಂಬಲ್ಲಿ ಈ ಶಬ್ದವನ್ನು ಬಳಸಿದ್ದಾನೆ. "ಬಳಿಗೋದುದು
ಕೀರ್ತಿ ವಿಶಾಕರಿಕಳಭಂಗಳ ನಿಗ್ರಹಂಗಳೊಳ್" ಎಂಬ ಜನ್ನನ ಪ್ರಯೋಗವನ್ನು
ಶಬ್ದದ ಅರ್ಥವ್ಯಕ್ತಿಯಿಂದ ನೋಡಬಹುದು." (ಪು. ೨೩೩).

ಪಂಪನಲ್ಲಿ ಬರುವ ದ್ಯೂತಪ್ರಸಂಗವನ್ನು ವಿವರಿಸುವ ಸಂದರ್ಭದಲ್ಲಿ ಇದು ಕರ್ಣಪಾರ್ಯನ 'ನೇಮಿನಾಥಪುರಾಣ'ದಲ್ಲಿಯೂ (x, ೧೪-೩೫) ಮಂಗರಸನ 'ನೇಮಿಜಿನೇಶ ಸಂಗತಿ'ಯಲ್ಲೂ (xxiv, ೧೪-೩೯) ಬಂದಿದೆ ಯೆಂದು ಹೇಳಿ ಪಂಪನನ್ನು ಇವರು ಈ ಪ್ರಸಂಗ ಚಿತ್ರಿಸುವಾಗ ಅನುಕರಿಸಿದ್ದಾ ರೆಂದು ಡಿ.ಎಲ್.ಎನ್. ಹೇಳುವರು (ನೋಡಿ : ಪು.೨೩೮).

ಪಂಪನ ಶಿಶುಪಾಲವಧೆಯ ಪ್ರಸಂಗದ ಸೊಗಸನ್ನು ಡಿ.ಎಲ್.ಎನ್. ಸಹೃದಯರಾಗಿ ಹೀಗೆ ಚಿತ್ರಿಸುವರು : "...ವ್ಯಾಸಭಾರತದಲ್ಲಿ ಈ ಉಪಾಖ್ಯಾನ ಆರು ಅಧ್ಯಾಯಗಳಷ್ಟು ವಿಸ್ತಾರವಾಗಿದೆ. ಪಂಪನು ಇಪ್ಪತ್ತೈದು ಪದ್ಯ ಗಳಲ್ಲಿ ಇದನ್ನು ನಾಟಕೀಯತೆಯಿಂದ ಸಂಗ್ರಹಿಸಿದ್ದಾನೆ. ಈ ಪ್ರಸಂಗದಲ್ಲಿ ನೇರವಾಗಿ ಸಂಬಂಧವನ್ನುಳ್ಳ ವ್ಯಕ್ತಿಗಳು ಇಬ್ಬರು : ಶಿಶುಪಾಲ ಮತ್ತು ಶ್ರೀಕೃಷ್ಣ. ಪಂಪನು ಅವರನ್ನು ಮುಂದ ಬಿಟ್ಟು ಈ ನಾಟಕವನ್ನಾಡಿಸಿದ್ದಾನೆ. ಅಗ್ರಪೂಜೆಗೆ ಶ್ರೀಕೃಷ್ಣನನ್ನೇ ಸೂಚಿಸಿದ ಭೀಷ್ಮ, ಅದರಂತೆ ಒಪ್ಪಿ ಮಾಡಲು ತೊಡಗಿದ ಧರ್ಮರಾಜ – ಇವರಿಬ್ಬರನ್ನು ಶಿಶುಪಾಲ ನಿಂದಿಸುವುದು ಅವನ ಸ್ವಭಾವಕ್ಕೆ ತಕ್ಕುದಾಗಿಯೇ ಇದೆ : ಅನಂತರ ಕೃಷ್ಣನ ನಿಂದೆ, ಸ್ವಾತ್ಮಪ್ರಶಂಸೆ. ಕೃಷ್ಣನು ಸ್ವಲ್ಪವಾದರೂ ಉದ್ರಿಕ್ತನಾಗದೆ ಸ್ಥಿತಪ್ರಜ್ಞನಂತೆ ಇದ್ದು ಶಿಶುಪಾಲನ ತೆಗಳಿಕೆಗಳನ್ನು ಕೇಳಿ ಸಮಾಧಾನಚಿತ್ತದಿಂದ ತನ್ನ ಮಾತನ್ನು ಆರಂಭಿಸುತ್ತಾನೆ. ಆಮೇಲೆ ಕೋಪ ಬಂದು ಅರ್ಘ್ಯದ ತಟ್ಟೆಯಿಂದಲೇ ಶಿಶುಪಾಲನ ಕೊರಳನ್ನು ಕತ್ತರಿಸುತ್ತಾನೆ. ಇಲ್ಲಿ ಒಂದು ಯುದ್ಧವೇ ನಡೆಯುತ್ತದೆ. ಕೃಷ್ಣ ಚಕ್ರಾ ಯುಧವನ್ನು ಪ್ರಯೋಗಿಸುತ್ತಾನೆ, ವ್ಯಾಸಭಾರತದಲ್ಲಿ. ಶಿಶುಪಾಲನ ಸಂಹಾರಕ್ಕೆ ಇಷ್ಟೆಲ್ಲ ಗೊಂದಲವೇಕೆ ? ತಟ್ಟೆಯೊಂದು ಸಾಕು ಎಂದು ಪಂಪನು ಭಾವಿಸಿದ್ದಾನೆ. ಈ ದೃಶ್ಯದ ಕ್ರಿಯೆಯ ಆರೋಹಣ, ಶಿಖರ, ಅವರೋಹಣ ಗಳು ಕಲಾಮಯವಾಗಿವೆ ; ಪಾತ್ರಗಳ ಗುಣ ಸ್ವಭಾವ ಪ್ರಸ್ಫುಟವಾಗಿ ಚಿತ್ರಿತ ವಾಗಿವೆ. ಬೇರೊಬ್ಬರ ಮಾತುಗಾರಿಗೆ ನಡುವೆ ಬರುವುದಿಲ್ಲ. ಶೈಲಿ ಮಿತ ಹಿತವಾಗಿದೆ. ಒಟ್ಟಿನಲ್ಲಿ ಪಂಪನ ಚಿತ್ರಣ ನಾಟಕದ ಒಂದು ದೃಶ್ಯದಂತೆ ರಮಣೀಯವಾಗಿದೆ. ಇಲ್ಲಿ ಅವನ ಎಲ್ಲ ಶಕ್ತಿವಿಶೇಷಗಳನ್ನೂ ಕಾಣಬಹುದು." (ಪುಟ ೨೩೩–೨೩೪).

ಡಿ.ಎಲ್.ಎನ್.ರವರ ಸೂಕ್ಷ್ಮಮತಿ 'ಪಂಪಭಾರತ'ದಲ್ಲಿ ಬರುವ ಅಪೂರ್ವಪದವನ್ನು ಕಂಡಕ್ಷಣವೇ ಗುರುತಿಸುತ್ತದೆ. ಉದಾಹರಣೆಗೆ ಆ. ೧೨ ಪ.೧೬೦ರಲ್ಲಿ ಬರುವ 'ಸುಪ್ಪಲ್' ಎನ್ನುವ ಪದ. ಈ ಪದದ ವ್ಯುತ್ಪತ್ತಿಯ ಬಗೆಗೆ ಅವರು ವಿಚಾರಮಾಡುತ್ತಾ ಹೀಗೆನ್ನುವರು : ಉಪ್ಪು ಎಂಬ ತಮಿಳು ತೆಲುಗು, ಕನ್ನಡ, ಮಲೆಯಾಳ, ತುಳು ಶಬ್ದಕ್ಕೆ ಉತ್ತರ ದ್ರಾವಿಡ ಭಾಷೆಗಳಲ್ಲಿ ಸುಪ್ಪು ಎಂದಿದೆ; ಉತ್ತರ ದ್ರಾವಿಡದ ಆದಿ ಸಕಾರ ದಕ್ಷಿಣ ದ್ರಾವಿಡದಲ್ಲಿ ಲೋಪವಾಗುವುದೆಂಬ ನಿಯಮದಂತೆ ಸುಪ್ಪು > ಉಪ್ಪು ಆಗುತ್ತದೆ; ಈ ಸುಪ್ಪು + ಅಲ್ ಎನ್ನುವುದು ಕನ್ನಡದಲ್ಲಿ ಇದೊಂದೆಡೆ ಉಳಿದುಕೊಂಡಿದೆ; ಇದು ಬಹುಶಃ ಪ್ರಾಚೀನ ದ್ರಾವಿಡದ ಅವಶೇಷ." (ಪುಟ ೪೯೦).

ಪಂಪಭಾರತದಲ್ಲಿ ಬರುವ ಸಂದರ್ಭಗಳನ್ನು ತೌಲನಿಕವಾಗಿ ವಿವೇಚಿಸುವ ಪ್ರಯತ್ನವನ್ನೂ ಡಿ.ಎಲ್.ಎನ್. 'ಪಂಪಭಾರತ ದೀಪಿಕೆ'ಯಲ್ಲಿ ಮಾಡಿರುವರು. ಉದಾಹರಣೆಗೆ ಭೀಮಸೇನನು ರಣಾಂಗಣದಲ್ಲಿ ನಡೆಸುವ ಪೈಶಾಚಿಕ ವರ್ತನೆಯನ್ನು ಆ. ೧೨ ಪ. ೧೬೧ರಲ್ಲಿ ಹೇಳುವಾಗ 'ಮುಕುಟ ತಾಡಿತಕ' ಎಂಬೊಂದು ನಷ್ಟ ನಾಟಕದಲ್ಲಿ ಇರುವುದೆಂದು ಹೇಳಲಾಗಿರುವ ಒಂದು ಪದ್ಯವನ್ನು ಹೋಲಿಕೆಗೆ ಕೊಟ್ಟಿರುವರು. ಆ ಪದ್ಯ ಹೀಗಿದೆ :

> ಧ್ವಸ್ತಾಃ ಕ್ಷುದ್ರಾಃ ಧಾರ್ತರಾಷ್ಟ್ರಾಃ ಸಮಸ್ತಾಃ
> ಪೀತಂ ರಕ್ತಂ ಸಾಧು ದುಶ್ಶಾಸನಸ್ಯ ।
> ಪೂರ್ಣಾ ಕೃಷ್ಣಾ ಕೇಶಬಂಧೇ ಪ್ರತಿಜ್ಞಾ
> ತಿಷ್ಠತ್ಯೇಕಂ ಕೌರವಸ್ಯೋರು ಭಂಗಃ ॥
>
> (ಪು-೪೯೧)

ಪಂಪಭಾರತದಲ್ಲಿ ಕರ್ಣನ ಮಗ ವೃಷಸೇನನ ಮರಣಭಾಗವನ್ನು ವ್ಯಾಖ್ಯಾನಿಸುವಾಗ (ಆ. ೧೨ ಪ. ೧೬೨–೧೬೯) ವ್ಯಾಸಭಾರತದಲ್ಲಿ ವೃಷಸೇನನ ವಧೆಯ ಪ್ರಸಂಗ ಬೇರೆ ರೀತಿಯಲ್ಲಿರುವುದನ್ನು ಅವರು ವಿವರಿಸುವರು : "ವೃಷಸೇನನ ರಥಕಲ್ಪದ ಮಹಿಮೆಯಾಗಲಿ, ಅದರಿಂದ ಅವನು ರಥಸ್ತಂಭನವನ್ನು ಮಾಡಿದ್ದಾಗಲಿ, ಅರ್ಜುನ ಅಚ್ಚರಿಪಟ್ಟುದಾಗಲಿ, ಮುಕುಂದನ ಸಲಹೆಯನ್ನು ಕೇಳಿ ಪಡೆದದ್ದಾಗಲಿ, ವಿನಾಯಕಾಸ್ತ್ರದಿಂದ ಅವನ ತಲೆಯನ್ನು ಕತ್ತರಿಸಿದ್ದಾಗಲಿ,

ಅವನನ್ನು ಪರಸ್ತ್ರೀಯರು ಸ್ವರ್ಗಕ್ಕೆ ಒಯ್ದುದ್ದಾಗಲಿ–ಯಾವುದೂ ವ್ಯಾಸ ಭಾರತದಲ್ಲಿಲ್ಲ. ಆ ರಕ್ತನೇತ್ರವಾದ ಅರ್ಜುನ ಕರ್ಣ ದುರ್ಯೋಧನ ಅಶ್ವತ್ಥಾಮಾದಿಗಳನ್ನು ಕೂಗಿ ಕರೆಯುತ್ತ ನಿಮ್ಮೆದುರಿಗೇ ವೃಷಸೇನನನ್ನು ಕೊಲ್ಲುತ್ತೇನೆ ಎಂದು ಹೇಳುತ್ತ "ಸಸರ್ಜ ಬಾಣಾನ್ ವಿಶಿಖಾನ್ ಮಹಾತ್ಮಾ, ವಧಾಯ ರಾಜನ್ ಕರ್ಣಸುತಸ್ಯ ಸಂಖ್ಯೇ। ವಿವ್ಯಾಧ ಚೈನಂ ದಶಭಿಃ ಪೃಷತ್ಕೈಃ ಮರ್ಮಸ್ವಶಂಕಂ ಪ್ರಹಸನ್ ಕಿರೀಟೀ ॥ ಚಿಚ್ಛೇದ ಚಾಸ್ಯೇಷ್ವಸನಂ ಭುಜೌಚ, ಕ್ಷುರೈಶ್ಚತುರ್ಭಿರ್ನಿಸಿತೈಃ ಶಿರಶ್ಚ। ಸ ಪಾರ್ಥ ಬಾಣಾಭಿಹತಃ ಪಪಾತ, ರಥಾದ್ ವಿಬಾಹುಃ ವಿಶಿರಾ ಧರಾಯಾಂ ॥" ಇಷ್ಟೇ ಅಲ್ಲಿರುವುದು (ಪು. ೪೯೩).

ಪಂಪಭಾರತದಲ್ಲಿ ಬರುವ ಅನೇಕ ಪಾಠಸಮಸ್ಯೆಗಳನ್ನು ಡಿ.ಎಲ್.ಎನ್. ಅತ್ಯಂತ ಸಮರ್ಪಕವಾಗಿ ಬಿಡಿಸಿ ಸರಿಯಾದ ಪಾಠವನ್ನು 'ಪಂಪಭಾರತ ದೀಪಿಕೆ'ಯಲ್ಲಿ ಚೌಕಕಂಸಗಳಲ್ಲಿ ಕೊಟ್ಟಿರುವರು. ಆ. ೧೪ ಪ. ೧೫ರಲ್ಲಿ ಬರುವ 'ಸುಯ್ಯತಾಣದ' ಎನ್ನುವ ಪಾಠ ದೋಷಯುಕ್ತವಾಗಿರುವುದನ್ನು ಕಂಡುಕೊಂಡ ಡಿ.ಎಲ್.ಎನ್. ಅದನ್ನು [ಸೂಯಿಯಾಣದ] ಎಂದು ಊಹಾತ್ಮಕ ಪಾಠವಾಗಿ ಕೊಟ್ಟಿರುವರು. ಈ ಪಾಠದ ಬಗೆಗೆ ಅವರು ಕೊಟ್ಟಿರುವ ವಿವರಣೆ ಹೀಗಿದೆ: ಸೂಚೀಯಾನ> ಸೂಯಿಯಾಣ: ವಾತ್ಸ್ಯಾಯನನ "ಕಾಮಸೂತ್ರ"ದಲ್ಲಿ ಚತುಃಷಷ್ಟಿ ಕಲೆಗಳನ್ನು ಹೆಸರಿಸುವಾಗ (ಅಧಿಕರಣ ೧. ಅಧ್ಯಾಯ ೩, ಸೂತ್ರ ೧೬) ೨೫ನೆಯದಾಗಿ "ಸೂಚೀವಾನ ಕರ್ಮಾಣೀತಿ, ಸೂಚ್ಯಾ ಯತ್ಸಂಧಾನ ಕರಣಂ ತತ್ಸೂಚೀವಾನಂ; ತ್ರಿವಿಧಂ–ಸೀವನಮ್, ಊತಾಮ್ ವಿರಚನಮ್": ತತ್ರಾದ್ಯಂ ಕಂಚುಕಾದೀನಾಮ್, ಇಯಂ ಪ್ರತೀತಾರ್ಥೈವ" ಎಂದಿದೆ. ಇದರಂತೆ "ಸೂಚೀವಾನ" ಎಂಬುದು ಶಬ್ದವಾಗುತ್ತದೆ. "ಸಾಹಿಯಾಣ" ಎಂದು "ಆದಿಪುರಾಣ"ದ ಮುದ್ರಿತ ಪ್ರತಿಗಳಲ್ಲಿ ಇವೆ (೪-೩೪ಗ), ಇದೇ ರೂಪ "ಸುಕುಮಾರ ಚರಿತ"ದಲ್ಲೂ ಉಂಟು (೧೦–೯೧ಗ); "ಆದಿ ಪುರಾಣ"ದ ಒಂದು ಹಸ್ತಪ್ರತಿಯಲ್ಲಿ "ಸುಯಿಯಾಣ" ಎಂಬ ಪಾಠಾಂತರವಿದೆ, ಸೂಚೀಯಾನದ ತದ್ಭವ ಸೂಯಾಣಂ ಎಂದು ಕೇಶಿರಾಜ (ಸೂ ೩೦೯); ಭಟ್ಟಾಕಳಂಕನು ಕೀಲಾರಾದಿ ಆಕೃತಿಗಣದಲ್ಲಿ (ಸೂ ೩೭೮) ಸೂಯಾಣ ಶಬ್ದವನ್ನು ಕಾಣಿಸಿ ವ್ಯಾಖ್ಯಾನದಲ್ಲಿ "ಸೂಯಾಣಂ ಸೂಪಸ್ಥಾನಂ, ಮಹಾನ

ಸಮಿತಿಯಾವತ್" ಎಂದು ಬರೆದಿದ್ದಾನೆ; ಇದರಂತೆ ಸೂಯಾಣವೆಂದರೆ ಅಡಿಗೆ ಮಾಡುವ ಎಡೆ, ಪಾಕಶಾಲೆ, ಬಾಣಸಿನಮನೆ ಎಂದರ್ಥವಾಗುತ್ತದೆ. ಆದರೆ ಸೂಪಸ್ಥಾನ ಶಬ್ದವು ಸೂಯಟ್ಠಾಣ, ಸೂಯಠಾಣ ಎಂಬ ರೂಪಗಳನ್ನು ಪ್ರಾಕೃತದಲ್ಲಾಗಲೀ ಕನ್ನಡದಲ್ಲಾಗಲೀ ಆಗದು. ಕೇಶಿರಾಜನು ಸೂಚೀಯಾನದ ತದ್ಭವ ಸೂಯಾಣ ಎಂದು ಹೇಳಿದ್ದರೂ ಭಟ್ಟಾಕಳಂಕನು ಹೀಗೆ ಹೇಳಿರುವುದು ಸೋಜಿಗವಾಗಿದೆ. ಅವನ ಸೂಪಸ್ಥಾನ>ಸೂಯಾಣ ಎಂಬ ಅಭಿಪ್ರಾಯವನ್ನು ಬಿಡಬಹುದು. ಸುಯಿಯಾಣ, ಸೂಯಿಯಾಣ, ಸುಯ್ಯಾಣ, ಸುಯಾಣ ಎಂಬೀ ರೂಪಗಳು ಸಾಧುವೆಂದು ಪರಿಗ್ರಹಿಸಬಹುದು; ಇವುಗಳಿಗೆ ಸಂಸ್ಕೃತದ ಮೂಲ ಸೂಚೀಯಾನವೆಂದು ಸ್ಪಷ್ಟವಾಗಿದೆ. ವಾತ್ಸ್ಯಾಯನನು ಕೊಟ್ಟಿರುವ ಸೂಚೀವಾನವೆಂಬುದು ಇನ್ನೊಂದು ರೂಪವಿರಬೇಕು; ಇದಕ್ಕೆ ಹರಿದ ವಸ್ತ್ರಗಳನ್ನು ಸೇರಿಸಿ ಹೊಲಿಯುವುದು, ಹಾಗೆ ಹೊಲಿದ ಬಟ್ಟೆ ಎಂಬರ್ಥವಿದೆ. ಇಲ್ಲಿ ಕಸೂತಿ ಕೆಲಸ ಎಂದು ಆಧುನಿಕ ದೃಷ್ಟಿಯಿಂದ ಹೇಳಿದೆ." (ಪ್ರ. ೫೫೮).

'ಪಂಪಭಾರತ ದೀಪಿಕೆ'ಯಂತೆ ಕನ್ನಡದ ಇನ್ನೂ ಕೆಲವು ಕವಿಗಳ ಕೃತಿಗೆ 'ದೀಪಿಕೆ' ಬರೆಯಬೇಕೆಂಬ ಉದ್ದೇಶವನ್ನು ಡಿ.ಎಲ್.ಎನ್. ಹೊಂದಿದ್ದರಂತೆ. ನಮ್ಮ ದುರದೃಷ್ಟ, ಕನ್ನಡದ ದೌರ್ಭಾಗ್ಯ, ಡಿ.ಎಲ್.ಎನ್. ಅವರನ್ನು ಇನ್ನಷ್ಟು ಕಾಲ ನಮ್ಮ ನಡುವೆ ಉಳಿಸಿಕೊಳ್ಳುವ ಭಾಗ್ಯ ನಮ್ಮದಾಗಲಿಲ್ಲ.

ಸಂಪಾದಿತ ಕೃತಿಗಳು

ಪ್ರಾಚೀನ ಕವಿಗಳ ಕೃತಿಗಳು ಶುದ್ಧವಾಗಿ ಮೂಲಕ್ಕೆ ಅತ್ಯಂತ ಸಮೀಪವಾಗಿ ಹೇಗೆ ಸಂಪಾದಿಸಿಕೊಡಬೇಕೆಂಬುದನ್ನು ತಿಳಿಸುವ ಶಾಸ್ತ್ರ ಗ್ರಂಥಸಂಪಾದನೆ. ಕನ್ನಡದ ಪ್ರಾಚೀನ ಕವಿಗಳ ಬಗೆಗೆ ವಿಶೇಷ ಮಮತೆ ಹೊಂದಿರುವ ಡಿ.ಎಲ್.ಎನ್. ಅವರಿಗೆ ಈ ಕ್ಷೇತ್ರದಲ್ಲಿ ಹೆಚ್ಚಿನ ತಿಳುವಳಿಕೆಯಿದೆ, ಪಾಂಡಿತ್ಯವಿದೆ. ಅವರು ಗ್ರಂಥಸಂಪಾದನಾ ಕ್ಷೇತ್ರದಲ್ಲಿ ಕೆಲಸ ಮಾಡಹೊರಟಾಗ ಆ ಕ್ಷೇತ್ರವು ವೈಜ್ಞಾನಿಕ ಶಿಸ್ತಿಗೆ ಒಳಪಡಲು ಪ್ರಯತ್ನಿಸುತ್ತಿತ್ತು. ಪುಣೆಯ ಭಂಡಾರ್ಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನವರ ಮಹಾಭಾರತ ಪರಿಷ್ಕರಣಕಾರ್ಯ ಈ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಆದರ್ಶವಾಗಿದ್ದಿತು. ಪಾಶ್ಚಾತ್ಯ ದೇಶಗಳಲ್ಲಿ ಈ ಕ್ಷೇತ್ರದಲ್ಲಿ ನಡೆಸಿರುವ ಸಾಧನೆಗಳನ್ನು ನೋಡಿ, ಕನ್ನಡ ಪ್ರಾಚೀನ ಕಾವ್ಯಗಳನ್ನು ವೈಜ್ಞಾನಿಕ ಶಿಸ್ತಿಗೆ ಒಳಪಡಿಸಿ ಗ್ರಂಥವನ್ನು ಸಂಪಾದಿಸುವ ಪ್ರಯತ್ನ ನಡೆದಿದ್ದಿತು. ಹಾಗೆ ಶ್ರದ್ಧೆಯಿಂದ ಕಾರ್ಯನಿರತರಾದವರಲ್ಲಿ ಡಿ.ಎಲ್.ಎನ್. ಒಬ್ಬರು.

ಡಿ.ಎಲ್.ಎನ್. ಅವರಿಗೆ ಹಲವು ಶಾಸ್ತ್ರಗಳ ಜ್ಞಾನವಿದ್ದುದರಿಂದ ಅವರಿಗೆ ಸಂಪಾದನಕಾರ್ಯ ಸುಲಭವಾಯಿತು. ಅವರ ಸಂಪಾದಿತ ಕೃತಿಗಳಲ್ಲಿ ಎದ್ದು ಕಾಣುವುದು ಪಾಠನಿಷ್ಕರ್ಷೆಯಲ್ಲಿ ತೋರುವ ಪ್ರಾಮಾಣಿಕತೆ. ಹಲವು ಹಸ್ತಪ್ರತಿಗಳ ನೆರವು ಪಡೆದು, ಪಾಠಾಂತರಗಳನ್ನು ಗುರುತುಮಾಡಿಕೊಂಡು, ಅವುಗಳಲ್ಲಿ ಶುದ್ಧಪಾಠವನ್ನು ಆಯ್ದು, ಮೂಲಕ್ಕೆ ಸಮೀಪವಾಗಿರುವಂತೆ ಕಾವ್ಯವೊಂದನ್ನು ಸಂಪಾದಿಸುವ ಅವರ ಕ್ರಮ ಬಹಳ ಅಚ್ಚುಕಟ್ಟಾದುದು. ಅವರು ಕೊಟ್ಟಿರುವ ಪಾಠಗಳು, ಊಹಾತ್ಮಕ ಪಾಠಗಳು ಅತ್ಯಂತ ಸಮರ್ಪಕವಾಗಿರುತ್ತವೆ. ಅವರ ಸಂಪಾದಿತ ಕೃತಿಗಳಲ್ಲಿ ಕಂಡುಬರುವ ಇನ್ನೊಂದು ವಿಶಿಷ್ಟ ಅಂಶವೆಂದರೆ, ಅವರ ಪೀಠಿಕೆಗಳು. ಸಂಪಾದಿತಕೃತಿಗಳ ಪೀಠಿಕೆಗಳಲ್ಲಿ ಅವರು ಕವಿ ಕಾಲ ದೇಶಗಳ ವಿಚಾರವಾಗಿ ವಿಪುಲವಾಗಿ ಚರ್ಚೆಮಾಡುವರು:

ಕೃತಿಯ ಕಥಾಸಾರಕೊಡುವರು, ಸಹೃದಯಪರವಾದ ಕಾವ್ಯವಿಮರ್ಶೆ ಮಾಡುವರು. ಇಲ್ಲೆಲ್ಲಾ ಅವರ ಪ್ರತಿಭೆ, ಪಾಂಡಿತ್ಯ, ರಸಗ್ರಾಹಿಯಾದ ಪರಿಣ ಮನಸ್ಸು ಕೆಲಸ ಮಾಡಿದೆ. ಒಂದು ಕಾವ್ಯದ ರಸಗ್ರಹಣೆಗೆ ಅನುಕೂಲವಾಗಲು ಏನೇನು ಸೌಲಭ್ಯಗಳು ಓದುಗನಿಗೆ ಬೇಕೊ ಅವನ್ನೆಲ್ಲಾ ಅನುಬಂಧಗಳಲ್ಲಿ ಕೊಡುವರು. ಒಂದು ಮಾತಿನಲ್ಲಿ ಹೇಳುವುದಾದರೆ, ಕವಿಗೂ ಓದುಗನಿಗೂ ನಡುವೆ ಸಂಪರ್ಕ ಸೇತುವೆಯಾಗಿ ಡಿ.ಎಲ್.ಎನ್. ನಿಲ್ಲುವರು ; ಕವಿ ಹಾಗೂ ಓದುಗ ಇವರ ನಡುವೆ ಮಧುರವಾದ ಬಾಂಧವ್ಯ ಮೂಡಲು ಇವರು ನೆರವಾಗುವರು.

ವಡ್ಡಾರಾಧನೆ

'ವಡ್ಡಾರಾಧನೆ' ಕನ್ನಡದ ಮೊದಲ ಗದ್ಯ ಕೃತಿ. ಇದು ಡಿ.ಎಲ್.ಎನ್. ೧೯೩೦ರಲ್ಲಿ ಓರಿಯಂಟಲ್ ಲೈಬ್ರರಿಯಲ್ಲಿ ಕನ್ನಡ ಹಸ್ತಪ್ರತಿಗಳ ಪಟ್ಟಿಯನ್ನು ನೋಡುವಾಗ ಕಣ್ಣಿಗೆ ಬಿದ್ದಿತು. ಕವಿಯ ಹೆಸರು ಉಕ್ತವಾಗಿರದ ಈ ಕೃತಿ ವಾರ್ಧಕ ಷಟ್ಪದಿಯಲ್ಲಿ ರಚಿತವಾದುದೆಂದು ಆ ಪಟ್ಟಿಯಲ್ಲಿ ಹೇಳಲಾಗಿತ್ತು. ಕುತೂಹಲದಿಂದ ಆ ಓಲೆ ಪ್ರತಿಯನ್ನು (ಕೆ415) ತರಿಸಿ ನೋಡಿದಾಗ ಅದು ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿರದೆ ಗದ್ಯದಲ್ಲಿ ರಚಿತವಾಗಿರುವುದು ತಿಳಿಯಿತು. ಆರಂಭದ ಕೆಲವು ಓಲೆಗಳನ್ನು ಓದುತ್ತಾ ಹೋದಂತೆ ಅಲ್ಲಿನ ಗದ್ಯಶೈಲಿ ಡಿ.ಎಲ್.ಎನ್. ಅವರನ್ನು ಆಕರ್ಷಿಸಿತು. ಇಷ್ಟು ಒಳ್ಳೆಯ ಗದ್ಯ ಹಳಗನ್ನಡದಲ್ಲಿ ರಚಿತವಾಗಿರುವುದನ್ನು ಕಂಡು ಅವರಿಗೆ ಆಶ್ಚರ್ಯವೂ ಸಂತೋಷವೂ ಉಂಟಾಯಿತು. ಆ ಓಲೆ ಪ್ರತಿಯಲ್ಲಿನ ೧೯ ಕಥೆಗಳಲ್ಲಿ ಮೂರನ್ನು ಮಾತ್ರ ಆರಿಸಿಕೊಂಡು ಅಚ್ಚಿನಪ್ರತಿ ಸಿದ್ಧಪಡಿಸಿ ಅದನ್ನು 'ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ'ಯ ೧೯೩೧ರ ಅಕ್ಟೋಬರ್ ಸಂಚಿಕೆಯಲ್ಲಿ ಪ್ರಕಟಪಡಿಸಿದರು. ವಡ್ಡಾರಾಧನೆಯ ಇನ್ನಷ್ಟು ಹಸ್ತಪ್ರತಿಗಳು ದೊರೆಯುವ ಇದೇ ಗ್ರಂಥವನ್ನು ಮುದ್ರಿಸುವುದು ಸರಿಯಲ್ಲವೆಂದು ಅಷ್ಟಕ್ಕೇ ಡಿ.ಎಲ್.ಎನ್. ತೃಪ್ತಿಪಟ್ಟುಕೊಂಡರು. ೧೯೩೯ರಲ್ಲಿ ಮೂಡಬಿದರೆಯ ಶ್ರೀ ಲೋಕನಾಥ ಶಾಸ್ತ್ರಿಗಳ ಬಳಿ 'ವಡ್ಡಾರಾಧನೆ'ಯ ಒಂದು ಓಲೆಯ ಪ್ರತಿಯಿರುವುದು

ತಿಳಿಯಿತು. ಇದರಲ್ಲಿರುವ ಪಾಠಾಂತರಗಳನ್ನು ಶ್ರೀ ಎನ್. ಅನಂತರಂಗಾಚಾರ್ಯರು ಗುರುತುಹಾಕಿಕೊಟ್ಟರು. ಆಚಾರ್ಯ ಬಿ.ಎಂ.ಶ್ರೀ. ಅವರು 'ವಡ್ಡಾರಾಧನೆ'ಯನ್ನು ಪರಿಷತ್ಪತ್ರಿಕೆಯಲ್ಲಿ ಭಾಗಶಃ ಮುದ್ರಿಸುವ ಆಶ್ವಾಸನೆ, ಪ್ರೋತ್ಸಾಹಗಳನ್ನು ಡಿ.ಎಲ್.ಎನ್. ಅವರಿಗೆ ನೀಡಿದರು. ದೊರೆತ ಎರಡು ಪ್ರತಿಗಳ ಸಹಾಯದಿಂದ 'ಸುಕುಮಾರಸ್ವಾಮಿಯ ಕಥೆ'ಯನ್ನು ಸಿದ್ಧಗೊಳಿಸಿ ಪರಿಷತ್ಪತ್ರಿಕೆಯಲ್ಲಿ (ಸಂಪುಟ ೨೪ ಸಂಚಿಕೆ ೪) ಪ್ರಕಟಿಸಲಾಯಿತು. ಸಾಹಿತ್ಯ ಪರಿಷತ್ತು ಇಡೀ ಗ್ರಂಥದ ಮುದ್ರಣ ಮಾಡಲು ಕೈಗೊಂಡಿದ್ದ ಏರ್ಪಾಟನ್ನು ತಿಳಿದ ಸಾಲಿಗ್ರಾಮದ ಸರಾಫ್ ಶ್ರೀ ಪದ್ಮರಾಜಯ್ಯನವರು ತಮ್ಮಲ್ಲಿದ್ದ ಮೂರು ಪ್ರತಿಗಳನ್ನು ಡಿ.ಎಲ್.ಎನ್. ಅವರಿಗೆ ಕಳುಹಿಸಿಕೊಟ್ಟರು. (ಮೊದಲಿಗೆ ಗ್ರಂಥ ಪ್ರಕಟವಾಗುತ್ತದೊ ಇಲ್ಲವೊ ಎನ್ನುವ ಸಂದೇಹದಿಂದ ಡಿ.ಎಲ್.ಎನ್. ಅವರಿಗೆ 'ವಡ್ಡಾರಾಧನೆ'ಯ ಪ್ರತಿಗಳನ್ನು ತೋರಿಸಿದ್ದರು, ಆದರೆ ಕೊಟ್ಟಿರಲಿಲ್ಲ.) ಇದಾದ ಮೇಲೆ, ಅರಾದ ಸೆಂಟ್ರಲ್ ಜೈನ ಲೈಬ್ರರಿಯಲ್ಲಿದ್ದ ಇನ್ನೊಂದು ಪ್ರತಿಯನ್ನು ಸಾಹಿತ್ಯ ಪರಿಷತ್ತು ತರಿಸಿಕೊಂಡಿತು. ಈ ಆರು ಪ್ರತಿಗಳ ಸಹಾಯದಿಂದ ಗ್ರಂಥದ ಸಂಸ್ಕರಣಕಾರ್ಯ ನೆರವೇರಿ, ಪರಿಷತ್ಪತ್ರಿಕೆಯಲ್ಲಿ ಭಾಗಶಃ ಮುದ್ರಣವಾಗುತ್ತ ೧೯೪೯ನೆಯ ಇಸವಿಯಲ್ಲಿ ಇಡೀ ಗ್ರಂಥವು ಅಚ್ಚಾಗಿ ಪ್ರಕಟವಾಯಿತು. 'ವಡ್ಡಾರಾಧನೆ' ಪೂರ್ಣರೂಪದಲ್ಲಿ ಪ್ರಕಟವಾಗಲು ೧೯ ವರ್ಷ ತೆಗೆದುಕೊಂಡುದು ಈಗ ಇತಿಹಾಸವಾಗಿದೆ.

'ವಡ್ಡಾರಾಧನೆ'ಯ ನಾಲ್ಕನೆಯ ಮುದ್ರಣದಲ್ಲಿ ಡಿ.ಎಲ್.ಎನ್. ಅದಕ್ಕೆ ಒಂದು ಉಪಯುಕ್ತ 'ಪೀಠಿಕೆ' ಬರೆದು ಉಪಕರಿಸಿರುವರು. ಅಷ್ಟೇ ಅಲ್ಲ, ಓದುಗರಿಗೆ ಅನುಕೂಲವಾಗಲೆಂದು ಅದರ ೧೯ ಕಥೆಗಳಿಗೂ ಗ್ರಂಥದ ಕೊನೆಯಲ್ಲಿ ಟಿಪ್ಪಣಿ ಕೊಟ್ಟಿರುವರು. ಟಿಪ್ಪಣಿಯಲ್ಲಿ ಕಠಿಣ ಪದಗಳಿಗೆ ವಿವರಣೆಯಲ್ಲದೆ, ಕಥೆಗಳಲ್ಲಿ ಮಧ್ಯೆ ಮಧ್ಯೆ ಬರುವ ಸಂಸ್ಕೃತ ವೃತ್ತ, ಶ್ಲೋಕಗಳಿಗೂ, ಪ್ರಾಕೃತ ಗಾಹೆಗಳಿಗೂ ವಿವರಣೆ ಬಂದಿರುವುದು ಕೃತಿಯನ್ನು ಅರ್ಥೈಸಲು ಬಹಳ ಸಹಾಯಮಾಡಿದಂತಾಗಿದೆ. ಹರಿಷೇಣನ 'ಬೃಹತ್ಕಥಾಕೋಶ'ದ ಕಥೆಗಳನ್ನೂ ವಡ್ಡಾರಾಧನೆಯ ಕಥೆಗಳನ್ನೂ ತುಲನಾತ್ಮಕವಾಗಿ ವಿಮರ್ಶಿಸಲೆಂದು ಕೊನೆಯಲ್ಲಿ 'ಬೃಹತ್ಕಥಾಕೋಶ'ದ ಕಥೆಗಳ ಸಾರಾಂಶವನ್ನು ಕೊಡಲಾಗಿದೆ. ಕಠಿಣ ಪದಗಳ ಕೋಶ, ಜೈನ ಪಾರಿಭಾಷಿಕ ಶಬ್ದಕೋಶ, ಪ್ರಾಕೃತ, ಸಂಸ್ಕೃತ,

ಕನ್ನಡ ಉದ್ಧೃತ ಪದ್ಯಗಳ ಅಕಾರಾದಿ—ಇವುಗಳನ್ನೂ ಕೊಡಲಾಗಿದೆ. ಕೃತಿಯನ್ನು ಗ್ರಹಿಸಲು ಈ ಪರಿಕರ ಸಾಮಗ್ರಿಗಳು ವಿಶೇಷ ನೆರವು ನೀಡುತ್ತವೆ ಎಂಬುದರಲ್ಲಿ ಅತಿಶಯೋಕ್ತಿಯೇನೂ ಇಲ್ಲ. 'ಪೀಠಿಕೆ'ಯಲ್ಲಿ ಸಂಪಾದನೆಗೆ ಬಳಸಲಾಗಿರುವ ಹಸ್ತಪ್ರತಿಗಳ ಪರಸ್ಪರ ಸಂಬಂಧವನ್ನು ವೈಜ್ಞಾನಿಕವಾಗಿ ತಿಳಿಯಪಡಿಸಿರುವುದು ಮೆಚ್ಚಬೇಕಾದ ಅಂಶ. ಹಸ್ತಪ್ರತಿಗಳ ಪೀಳಿಗೆ ನಿರ್ಣಯವನ್ನು ಖಚಿತವಾಗಿ ಹೇಳುವುದು ಕಷ್ಟಸಾಧ್ಯದ ಕೆಲಸ, ಅತ್ಯಂತ ಪರಿಶ್ರಮದಾಯಿಯಾದದ್ದು. ಸಂಪಾದನೆಗೆ ಬಳಸಲಾದ ಎಲ್ಲ ಹಸ್ತಪ್ರತಿಗಳ ಪಾಠಗಳನ್ನು ಮುಂದಿಟ್ಟುಕೊಂಡು ಮಾಡಬೇಕಾದ ಈ ಕೆಲಸದಲ್ಲಿ ಡಿ.ಎಲ್.ಎನ್. ತೋರಿರುವ ಶ್ರದ್ಧೆ, ನಿಷ್ಠೆ ಇತರರಿಗೆ ಮಾದರಿಯಾಗಿದೆ. ಗ್ರಂಥಕ್ಕೆ ಕವಿ ಇಟ್ಟಿರುವ ಹೆಸರು 'ವಡ್ಡಾರಾಧನೆ' ಎಂಬುದನ್ನೂ; ಈ ಕೃತಿಯ ಕರ್ತೃ ಶಿವಕೋಟಿ ಎಂದೂ; ಕೃತಿರಚನಾಕಾಲ ೮೯೨ ರಿಂದ ೯೪೧ ಎಂದೂ; ವಡ್ಡಾರಾಧನೆಯು ಶಿವಕೋಟಿಯೂ ಬಳ್ಳಾರಿ ಜಿಲ್ಲೆಯ ಕೋಗಳಿ ನಾಡಿಗೆ ಎಂದರೆ ಈಗಿನ ಬಳ್ಳಾರಿ ಜಿಲ್ಲೆಯ ಪಶ್ಚಿಮ ಭಾಗಕ್ಕೆ ಸೇರಿದವನೆಂದೂ ಡಿ.ಎಲ್.ಎನ್. ಸಾಧಾರಪೂರ್ವಕವಾಗಿ ನಿರ್ಣಯಿಸಿರುವರು. ಹರಿಷೇಣನಿಗೂ ('ಬೃಹತ್ಕಥಾಕೋಶ'ದ ಕರ್ತೃ) ಹಾಗೂ ಶಿವಕೋಟ್ಯಾಚಾರ್ಯ—ಇವರಿಬ್ಬರಿಗೂ ಕೃತಿರಚನೆಗೆ ಸಮಾನಮೂಲವೊಂದು ಇದ್ದಿತೆಂದೂ ಅದು 'ಭಗವತೀ ಆರಾಧನಾ' ಗ್ರಂಥಕ್ಕೆ ಇದ್ದಿರಬಹುದಾದ ಯಾವುದೋ ಪ್ರಾಕೃತ ವ್ಯಾಖ್ಯಾನವೆಂದೂ ಡಾ॥ ಆ. ನೇ. ಉಪಾಧ್ಯೆಯವರು ಕೆಲವು ಆಧಾರಗಳ ಮೇಲೆ ಊಹಿಸಿರುವುದನ್ನು ಡಿ.ಎಲ್.ಎನ್. ಒಪ್ಪಿಕೊಳ್ಳುತ್ತಾ "ಇದು ಅತ್ಯಂತ ಸಂಭವನೀಯವೆಂದೂ ಪರಿಗ್ರಾಹ್ಯ ಯೋಗ್ಯ"ವೆಂದೂ ಹೇಳಿರುವರು. ಅಷ್ಟೇ ಅಲ್ಲ, "ಈ ಮೂಲದಲ್ಲಿ ಒಂದೊಂದು ಗಾಹೆಯಲ್ಲೇ ಸೂಚಿತವಾಗಿದ್ದ ಕಥೆಗಳನ್ನು ವ್ಯಾಖ್ಯಾನದಲ್ಲಿ ವಿಸ್ತರಿಸಿ ನಿರೂಪಣೆ ಮಾಡಿದ್ದಿತೆಂದು ಹೇಳಬಹುದು. ಈ ವಿಸ್ತೃತ ಕಥೆಗಳನ್ನು ಕವಿಯ ದೃಷ್ಟಿಯಿಂದ ಹರಿಷೇಣನೂ ಶಿವಕೋಟಿಯೂ ನೋಡಿ ಅವುಗಳ ನಿರೂಪಣೆಯಲ್ಲಿ ತಮ್ಮ ಕೌಶಲವನ್ನೂ ಪ್ರತಿಭೆಯನ್ನೂ ಪ್ರಕಾಶಪಡಿಸಿರುವರೆಂದು ತಿಳಿಯಬಹುದು" ಎಂದಿರುವರು. 'ವಡ್ಡಾರಾಧನೆ'ಗೆ ಮೂಲವಾಗಿರಬಹುದಾದ ಕೃತಿ ದೊರಕಿದ್ದರೆ ಶಿವಕೋಟಿ ಸ್ವೀಕರಿಸಿದ್ದೇನು, ಹೊಸದಾಗಿ ಸೇರಿಸಿದ್ದೇನು, ಮಾಡಿಕೊಂಡ ಮಾರ್ಪಾಟುಗಳೇನು—ಇವನ್ನೆಲ್ಲಾ

ವಿಶ್ಲೇಷಣೆ ಮಾಡಿ ಸಾಹಿತ್ಯದೃಷ್ಟಿಯಿಂದ ಕೃತಿಯ ಮೌಲ್ಯವನ್ನು ಒರೆಯಿಟ್ಟು ನಿರ್ಣಯಿಸಬಹುದಾಗಿತ್ತು—ಎಂದೂ ಅವರು ಅಭಿಪ್ರಾಯಪಡುವರು. ಹರಿಷೇಣ ಹಾಗೂ ಶಿವಕೋಟಿ ಇವರ ಕೃತಿಗಳ ತುಲನಾತ್ಮಕ ಅಧ್ಯಯನ ನಡೆದಲ್ಲಿ 'ವಡ್ಡಾರಾಧನೆ'ಯ ನಿರೂಪಣೆ, ಸನ್ನಿವೇಶ ನಿರ್ಮಾಣ, ಪಾತ್ರರಚನೆ, ರಸಾವಿಷ್ಕರಣ, ಗದ್ಯದ ರಮಣೀಯತೆ, ವಾಕ್ಯಗಳ ವೈವಿಧ್ಯ, ಧ್ವನಿ—ಇವೆಲ್ಲ ಹರಿಷೇಣನ ಕೃತಿಯಲ್ಲಿರುವುದಕ್ಕಿಂತ ಅಧಿಕ ಪ್ರಮಾಣದಲ್ಲೂ ಗುಣದಲ್ಲೂ 'ವಡ್ಡಾರಾಧನೆ'ಯಲ್ಲಿ ಇವೆಯೆಂದು ಸ್ಥಾಪಿಸಲು ಸಾಧ್ಯವಾಗುತ್ತದೆಂದೂ, ಈ ತೌಲನಾತ್ಮಕ ದೃಷ್ಟಿಯಿಂದಲೇ ಈ ಕೃತಿಯ ಮೌಲ್ಯವಿಚಾರ ನಡೆಯಬೇಕಾಗಿದೆಯೆಂದೂ ಡಿ.ಎಲ್.ಎನ್. ಹೇಳುವರು. 'ಪೀಠಿಕೆ'ಯಲ್ಲಿ ಗ್ರಂಥ ವಿಮರ್ಶೆ, ವಡ್ಡಾರಾಧನೆಯ ಶೈಲಿಯ ಸ್ವರೂಪ, ಗ್ರಂಥದಲ್ಲಿ ಕಂಡುಬರುವ ಸಾಮಾಜಿಕ ಜೀವನ—ಇವೇ ಮೊದಲಾದ ವಿಷಯಗಳನ್ನು ಸೇರಿಸಬೇಕೆಂಬ ಆಸೆ ಡಿ.ಎಲ್.ಎನ್.ಅವರಿಗಿದ್ದಿತು. ಈ ಆಸೆ ಕೊನೆಗೂ ಕೈಗೂಡಲೇ ಇಲ್ಲ. ದೊಡ್ಡ ನಷ್ಟ ಸಾಹಿತ್ಯದ ವಿದ್ಯಾರ್ಥಿಗಳಿಗೆ.

'ವಡ್ಡಾರಾಧನೆ' ಡಿ.ಎಲ್.ಎನ್. ಅವರ ಸಂಪಾದಿತ ಕೃತಿಗಳಲ್ಲಿ ಅತ್ಯಂತ ಮಹತ್ವದ ಕೃತಿ. ಅವರು ಕೊಟ್ಟಿರುವ ಪಾಠಗಳಿಗಿಂತ ಉತ್ತಮ ಪಾಠಗಳನ್ನು ಕೊಡುವುದು ಕಷ್ಟ. ಅವರು 'ವಡ್ಡಾರಾಧನೆ' ಕೃತಿಯನ್ನು ಸಂಪಾದಿಸಲು ಪಟ್ಟಿರುವ ಶ್ರಮ, ಪೀಠಿಕೆ, ಅನುಬಂಧಗಳಲ್ಲಿನ ಪರಿಕರ ಸಾಮಗ್ರಿಗಳನ್ನು ಕೊಡುವಲ್ಲಿ ತೋರಿರುವ ಶ್ರದ್ಧೆ, ನಿಷ್ಠೆ ಅನುಪಮವಾದುದು.

ಸಕಲವೈದ್ಯ ಸಂಹಿತಾಸಾರಾರ್ಣವಂ

ಕಳಲೆಯ ಪ್ರಭುವಾದ ವೀರರಾಜನು ಬರೆದ 'ಸಕಲವೈದ್ಯ ಸಂಹಿತಾ ಸಾರಾರ್ಣವ'ಕ್ಕೆ 'ವೀರರಾಜೇಂದ್ರೋಕ್ತಿ ವಿಲಾಸ'ವೆಂಬ ಇನ್ನೊಂದು ಹೆಸರೂ ಇದೆ. ಇದು ವೈದ್ಯಗ್ರಂಥ. ಕಳಲೆಯ ವೀರರಾಜನ ವಿಷಯವಾಗಿಯೂ ಅವನ ವಂಶಸ್ಥರ ವಿಷಯವಾಗಿಯೂ ಕೆಲವು ಸಂಗತಿಗಳು 'ಕಳಲೆ ಅರಸುಗಳ ವಂಶಾವಳಿ' ಎಂಬ ಕೈಬರೆಹದ ಕಾಗದದ ಪ್ರತಿಯಿಂದ ತಿಳಿದುಬರುತ್ತದೆ. ಇದನ್ನು ಕಳಲೆ ನಿವಾಸಿಗಳಾದ ಮ॥ರಾ॥ಶ್ರೀ ಕಳಲೆ ರಂಗಸ್ವಾಮಿ ಅಯ್ಯಂಗಾರ್ಯರ

ಮೂಲಪ್ರತಿಯಿಂದ ಬರೆಯಲಾಗಿದೆ. ಇಲ್ಲಿ ಪ್ರಸ್ತಾಪಿತವಾಗಿರುವ ವಿಷಯ ಗಳು ನಂಬಿಕೆಗೆ ಅರ್ಹವಲ್ಲವಾದರೂ ಇವುಗಳನ್ನು ಪ್ರತೀಕರಿಸಲು ಬೇರೆ ಪ್ರಮಾಣಗಳು ದೊರೆತರೆ ಇವುಗಳ ಬೆಲೆ ಹೆಚ್ಚುತ್ತದೆಯೆಂದು ಪ್ರಸ್ತಾವನೆಯಲ್ಲಿ ಡಿ.ಎಲ್.ಎನ್. ಹೇಳಿರುವರು. ಬರೋಡದ ಓರಿಯಂಟಲ್ ಇನ್‌ಸ್ಟಿಟ್ಯೂಟ್ ನವರು ಪ್ರಕಟಿಸಿರುವ 'ನಂಜರಾಜ ಯಶೋಭೂಷಣ' (ಸಂಪಾದಕರು : ಯಂಬಾರ್ ಕೃಷ್ಣಮಾಚಾರ್ಯ)ವೆನ್ನುವ ಅಲಂಕಾರ ಗ್ರಂಥದ ಉಪೋದ್ಘಾತ ದಿಂದ ವಿಷಯ ಸಂಗ್ರಹಣೆಮಾಡಿ ವೀರರಾಜನ ವಂಶಾವಳಿಯನ್ನು ಡಿ.ಎಲ್.ಎನ್. ಕೊಟ್ಟಿರುವರು. ಈ ವಂಶಾವಳಿಗೂ 'ಕಳಲೆಯ ಅರಸುಗಳ ವಂಶಾವಳಿ'ಯ ಕೊನೆಯಲ್ಲಿ ಕೊಟ್ಟಿರುವ ವಂಶಾವಳಿಗೂ ಇರುವ ವ್ಯತ್ಯಾಸ ಗಳನ್ನು ಡಿ.ಎಲ್.ಎನ್. ಗುರುತಿಸುವರು. ವೀರರಾಜನು ತನ್ನ ಕೃತಿಯ ರಚನಾಕಾಲವನ್ನು ಹೇಳಿಲ್ಲವಾದರೂ ಮೇಲೆ ತಿಳಿಸಿದ ವಂಶಾವಳಿಯ ಆಧಾರದ ಮೇಲೆ ಡಿ.ಎಲ್.ಎನ್. ವೀರರಾಜನು ೧೬೯೧ ರಿಂದ ೧೭೩೪ರ ವರೆಗಿನ ಕಾಲಾ ವಧಿಯಲ್ಲಿ ಜೀವಿಸಿದ್ದಿರಬೇಕೆಂದು ಹೇಳುವರು. ಕವಿಚರಿತಕಾರರು ಹೇಳುವ ಸು ೧೭೨೦ ಎಂಬುದನ್ನು ಒಪ್ಪುವ ಡಿ.ಎಲ್.ಎನ್. ಅದನ್ನು ಕವಿಯ ಕಾಲ ವಾಗಿ ಕೊಟ್ಟಿರುವರು. 'ರಾಜಾವಳೀ ಕಥೆ'ಯನ್ನು ಬರೆದ ದೇವಚಂದ್ರನು (೧೮೩೮) "ಅನೇಕ ವೈದ್ಯಶಾಸ್ತ್ರಂಗಳೊಳಿರ್ಪ ರೋಗಪರಮಪ್ಪ ಚಿಕಿತ್ಸೆಗಳಂ ಕನ್ನಡ ವಾಕ್ಯದೊಳ್ ವೀರರಾಜೋಕ್ತಿ ವಿಲಾಸಮೆಂದು ಬರೆಯಿಸಿದಂ" ಎಂದು ತನ್ನ ಕೃತಿಯಲ್ಲಿ ಹೇಳಿರುವುದನ್ನು ಗಮನಿಸಿದಾಗ ವೀರರಾಜನು ಈ ಗ್ರಂಥ ವನ್ನು ಬೇರೆ ಯಾರಿಂದಲೊ ಬರೆಯಿಸಿರಬಹುದೆಂಬ ಸಂದೇಹ ಬರುತ್ತದೆ.

ವೀರರಾಜನು ತನ್ನ ಕೃತಿಯ ಪ್ರಸ್ತಾವನೆಯಲ್ಲಿ ತನ್ನ ತಂದೆ ದೊಡ್ಡೇಂದ್ರನ ಪರಾಕ್ರಮವನ್ನು ಹೆಚ್ಚಾಗಿ ಹೊಗಳಿ ಮರಾಠರೊಡನೆ ನಡೆದ ಒಂದು ದೊಡ್ಡ ಯುದ್ಧವನ್ನು ವರ್ಣಿಸಿರುವನು. ಈ ಯುದ್ಧವು ಕ್ರಿ. ಶ. ೧೬೯೭ರಲ್ಲಿ ನಡೆದಿರಬಹುದೆಂದು ವಿಲ್ಕ್ಸ್‌ರವರು ಅಭಿಪ್ರಾಯಪಡುವರು. ಕವಿಯು ಈ ಗ್ರಂಥದ ಬಹುಭಾಗವನ್ನು ಕನ್ನಡದಲ್ಲಿ ಬರೆದಿರುವನು. ಉಳಿದ ಭಾಗವನ್ನು ತೆಲುಗು ಭಾಷೆಯ ಗದ್ಯಸರಣಿಯಲ್ಲಿ ಬರೆದಿರುವನು. ಇದರಲ್ಲಿ ೧೬೯ ವಿಧವಾದ ಪ್ರಯೋಗಗಳಿವೆ. ರೋಗನಿಧಾನಪದ್ಧತಿಯಾಗಲಿ ಚಿಕಿತ್ಸಾ

ಕ್ರಮಾವಳಿಯಾಗಲಿ ಇರುವ ಭಿನ್ನಾಭಿಪ್ರಾಯಗಳನ್ನು 'ಮತಾಂತರೇ' ಎಂದು ಬರೆದು ಸೂಚಿಸಿರುವುದಾಗಿ ಡಿ.ಎಲ್.ಎನ್. ಹೇಳುವರು.

ಈ ಗ್ರಂಥವನ್ನು ಡಿ.ಎಲ್.ಎನ್. ಎರಡು ಪ್ರತಿಗಳ (ಒಂದು ಓಲೆ, ಇನ್ನೊಂದು ಕಾಗದದ ಪ್ರತಿ) ಆಧಾರದಿಂದ ಸಂಪಾದಿಸಿರುವರು. ಮೊದಲನೆಯದು ತಕ್ಕಮಟ್ಟಿಗೆ ಶುದ್ಧವಾಗಿದೆ, ಅಲ್ಲಲ್ಲಿ ಹಲವು ಓಲೆಗಳು ಲುಪ್ತವಾಗಿವೆ. ಎರಡನೆಯದು, ಅಷ್ಟಾಗಿ ಶುದ್ಧವಾಗಿಲ್ಲ. ಗ್ರಂಥಸಂಪಾದನೆಗೆ ಮೊದಲನೆಯದನ್ನೇ ಆಧಾರವಾಗಿಟ್ಟುಕೊಂಡಿರುವರು. ಈಗ ಅಚ್ಚಾಗಿರುವುದು ಗ್ರಂಥದ ಮೊದಲ ಭಾಗ ಮಾತ್ರ. ೧೯೩೮ರಲ್ಲಿ ಸಂಪಾದಿತವಾಗಿರುವ ಈ ಕೃತಿಯ ಪ್ರಸ್ತಾವನೆಯಲ್ಲಿ ಡಿ.ಎಲ್.ಎನ್. "ಅನುಭವವುಳ್ಳ ವೈದ್ಯರ ಅನುಮತಿಯನ್ನೂ ಸಲಹೆಯನ್ನೂ ಪಡೆದು ಅದರಂತೆ ವರ್ತಿಸಬೇಕಲ್ಲದೆ ಬರಿಯ ಪುಸ್ತಕವನ್ನು ನೆಚ್ಚಿಕೊಂಡುಹೋಗಬಾರದು" ಎಂಬ ಎಚ್ಚರಿಕೆಯನ್ನು ವಾಚಕರಿಗೆ ಕೊಟ್ಟಿರುವರು.

ಶಬ್ದಮಣಿದರ್ಪಣಂ :

ಕೇಶಿರಾಜನ 'ಶಬ್ದಮಣಿದರ್ಪಣ'ವು ಮೊದಲಿಗೆ 1868ರಲ್ಲಿ ಆಗ ವಿದ್ಯಾಭ್ಯಾಸ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದ ಜೆ. ಗ್ಯಾರೆಟ್ ಅವರಿಂದ ಸಂಪಾದಿತವಾಯಿತು. ಡಿ.ಎಲ್.ಎನ್. ಹೇಳುವಂತೆ "ತೀರ ಅಶುದ್ಧವಾದ ಹಸ್ತಪ್ರತಿಯೊಂದರ ಬೆಲೆಯನ್ನು ಮಾತ್ರ ಈ ಮುದ್ರಣಕ್ಕೆ ಕೊಡಬಹುದು." 1872ರಲ್ಲಿ ಹತ್ತು ಹಸ್ತಪ್ರತಿಗಳನ್ನು (5 ಓಲೆಪ್ರತಿ + 5 ಕಾಗದದ ಪ್ರತಿ) ಬಳಸಿಕೊಂಡು ರೆವರೆಂಡ್ ಕಿಟ್ಟೆಲ್‌ರವರು ಇದನ್ನು ಮತ್ತೆ ಸಂಪಾದಿಸಿದರು. 1899ರಲ್ಲಿ ಅವರೇ ಇದರ ಎರಡನೆಯ ಸುಧಾರಿಸಲ್ಪಟ್ಟ ಆವೃತ್ತಿಯನ್ನು ಪ್ರಕಟಿಸಿದರು. ಇದರಲ್ಲಿ ಪ್ರಯೋಗಗಳ ಪಾಠವನ್ನು ಹೆಚ್ಚು ಸಮರ್ಪಕವಾಗಿ ಪರಿಷ್ಕರಿಸಲಾಗಿದೆ. ಇದನ್ನೇ ಇನ್ನಷ್ಟು ಪರಿಷ್ಕರಿಸಿ 1920ರಲ್ಲಿ ಮೂರನೆಯ ಮುದ್ರಣವನ್ನು ಪ್ರಕಟಿಸಲಾಯಿತು. ಈ ಕೆಲಸ ಮಾಡಿದವರು ಪಂಜೆ ಮಂಗೇಶರಾಯರು. 1920ರಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತಿನ ವತಿಯಿಂದಲೂ ಇದರ ಪರಿಷ್ಕೃತ ಮುದ್ರಣವೊಂದು ಪ್ರಕಟವಾಯಿತು. ಇದರ ಸಂಪಾದಕರು ಯಾರೆಂಬುದು ಗೊತ್ತಾಗುವುದಿಲ್ಲ. 1930ರಲ್ಲಿ ಮದ್ರಾಸು

ವಿಶ್ವವಿದ್ಯಾಲಯವು ತನ್ನ ಕನ್ನಡ ಗ್ರಂಥಮಾಲೆಯಲ್ಲಿ 'ಶಬ್ದಮಣಿದರ್ಪಣ'ವನ್ನು ಪ್ರಕಟಿಸಿತು. ಇದರ ಸಂಪಾದಕರು ಎ. ವೆಂಕಟರಾವ್ ಮತ್ತು ಎಚ್. ಶೇಷಅಯ್ಯಂಗಾರ್. ಇದರಲ್ಲಿ ಕೇಶಿರಾಜನ ವೃತ್ತಿಯಿಲ್ಲ, ಲಿಂಗಣಾರಾಧ್ಯ ರಚಿತವಾದ ವೃತ್ತಿಯಿದೆ. ಸಂಪಾದಕರು ಪ್ರಾರಂಭದಲ್ಲಿ ಕೊಟ್ಟಿರುವ 'ಅವತರಣಿಕೆ' ಬಹಳ ಉಪಯುಕ್ತವಿದೆ.

ಡಿ.ಎಲ್.ಎನ್. 'ಶಬ್ದಮಣಿದರ್ಪಣ'ವನ್ನು ಮತ್ತೆ ಸಂಪಾದಿಸಲು ಪ್ರಯತ್ನಿಸಿ ಅದಕ್ಕಾಗಿ ನಾಲ್ಕು ಪ್ರತಿಗಳನ್ನು ಬಳಸಿಕೊಂಡಿರುವರು. (ಎರಡು ಓಲೆ ಪ್ರತಿ + 2 ಮುದ್ರಿತ ಪ್ರತಿ). "ಗ್ರಂಥ ಸಂಪಾದನೆಯ ಪರಮೋದ್ದೇಶ ಕವಿಲಿಖಿತ ಪ್ರತಿಯ ಪಾಠವನ್ನು ದೊರಕುವ ಸಾಮಗ್ರಿಗಳ ಸಹಾಯದಿಂದ ಕಂಡುಹಿಡಿಯುವುದು; ಅದು ಸಾಧ್ಯವಾಗದಿದ್ದರೆ ಮೂಲಪ್ರತಿಗೆ ಸಮೀಪತಮವಾದ ಪಾಠವನ್ನು ನಿರ್ದೇಶಿಸುವುದು; ಇವೆರಡೂ ಆಗದೆ ಹೋದಾಗ ಅರ್ಥದ ದೃಷ್ಟಿಯಿಂದ ಸ್ಪಷ್ಟವಾಗಿರುವ, ಸ್ಖಾಲಿತ್ಯಾದಿ ದೋಷಗಳಿಂದ ಆದಷ್ಟು ಮುಕ್ತವಾಗಿರುವ ಪಾಠವೊಂದನ್ನು ಕೊಡುವುದು. ಇವುಗಳಲ್ಲಿ ಕೊನೆಯ ಉದ್ದೇಶ ಈ ಮುದ್ರಣಗಳಲ್ಲಿ ಸ್ವಲ್ಪಮಟ್ಟಿಗೆ ಸಾಧಿತವಾಗಿದೆಯೆಂದು ನಂಬಬಹುದು. ಉಳಿದ ಎರಡು ಉದ್ದೇಶಗಳು ಸಾಧ್ಯವಾಗದಿರುವುದಕ್ಕೆ ಕೆಲವು ಪಾಠಸಮಸ್ಯೆಗಳನ್ನು ಸಮರ್ಪಕವಾಗಿ ಬಿಡಿಸಲಾಗದಿರುವುದೇ ಕಾರಣವಾಗಿದೆ" ಎಂದು ಹೇಳುವ ಡಿ.ಎಲ್.ಎನ್. ಆ ಪಾಠ ಸಮಸ್ಯೆಗಳ ಸ್ವರೂಪವನ್ನು ವಿವರಿಸಿರುವರು.

'ಶಬ್ದಮಣಿದರ್ಪಣ'ದ ಅದುವರೆಗಿನ ಎಲ್ಲ ಸಂಪಾದನೆಗಳ ಬಗೆಗೆ (ತಮ್ಮದನ್ನೂ ಸೇರಿಸಿ) ಅತೃಪ್ತಿಯಿರುವ ಡಿ.ಎಲ್.ಎನ್. ಅದರ ಸಶಾಸ್ತ್ರೀಯ ಸವಿಮರ್ಶ ಪರಿಷ್ಕರಣವನ್ನು (Variorum and critical Edition based on the Science of Textual Criticism) ಸಿದ್ಧಪಡಿಸಬೇಕಾದ ಅಗತ್ಯವಿದೆಯೆಂದು ಹೇಳುವರು. ಅವರ ಪ್ರಕಾರ, ಪುಣೆಯ ಭಂಡಾರ್ಕರ್ ಸಂಸ್ಥೆಯವರು ಮಹಾಭಾರತದ ಪರಿಷ್ಕೃತ ಮುದ್ರಣಕ್ಕೆ ಯಾವ ಕಾರ್ಯವನ್ನು ಮಾಡಿದ್ದಾರೆಯೊ ಅಂಥ ಕೆಲಸವನ್ನು, ಅಷ್ಟು ದೊಡ್ಡ ಪ್ರಮಾಣದಲ್ಲಿ ಅಲ್ಲದೇ ಇದ್ದರೂ ತಕ್ಕಷ್ಟು ಪ್ರಮಾಣದಲ್ಲಿ 'ಶಬ್ದಮಣಿದರ್ಪಣ'ದ ಪರಿಷ್ಕರಣ ಮಾಡಬೇಕಾಗಿದೆ, ಡಿ.ಎಲ್.ಎನ್. ತಮ್ಮ ಟೀಕೆಯಲ್ಲಿ ಶಬ್ದಮಣಿದರ್ಪಣದ

ವೈಶಿಷ್ಟವೂ ರಮಣೀಯತೆಯೂ ಅವರ ಪ್ರಯೋಗಗಳಲ್ಲಿರುವುದನ್ನು ಬಹಳ ಚೆನ್ನಾಗಿ ತೋರಿಸಿಕೊಟ್ಟಿರುವರು; ಕೇಶಿರಾಜನ ಮನೋಧರ್ಮ ಅವನ ವ್ಯಾಕರಣದಲ್ಲಿ ಸ್ಪಷ್ಟವಾಗಿ ಪ್ರತಿಫಲಿಸಿದೆಯೆಂದಿರುವರು. 'ಶಬ್ದಮಣಿ ದರ್ಪಣ' ಕಾವ್ಯವೂ ಹೌದು, ಶಾಸ್ತ್ರವೂ ಹೌದು; ಕಾವ್ಯಲೇಪನವನ್ನು ಪಡೆದಿರುವ ಶಾಸ್ತ್ರವೆಂದರೂ ಸರಿಯೆ. ಅದು ಒಳಗಿರುವ ಮೀನುಗಳ ಚೆಲ್ಲಾಟವನ್ನು ತೆರೆದು ತೋರಿಸುವ ಶರತ್ಕಾಲದ ಹೊಳೆ. ಕೇಶಿರಾಜನ ಮನಃಕ್ರೀಡೆ ಅದರಲ್ಲಿ ರಮ್ಯವಾಗಿ ರೂಪುಗೊಂಡಿದೆ ಎಂದಿರುವರು.

ಪಂಪರಾಮಾಯಣ ಸಂಗ್ರಹ

ನಾಗಚಂದ್ರನ 'ಪಂಪರಾಮಾಯಣ' ಅಥವಾ 'ರಾಮಚಂದ್ರ ಚರಿತ ಪುರಾಣ' ಸಂಗ್ರಹಕ್ಕೆ ಡಿ.ಎಲ್.ಎನ್. ಬರೆದ ಪೀಠಿಕೆ ಅತ್ಯಂತ ಪ್ರಸಿದ್ಧವಾದುದು. 'ಆದಿಪುರಾಣ ಸಂಗ್ರಹ'ಕ್ಕೆ ಎಲ್. ಗುಂಡಪ್ಪನವರು, 'ಹರಿಶ್ಚಂದ್ರ ಕಾವ್ಯ ಸಂಗ್ರಹ'ಕ್ಕೆ ಎ. ಆರ್. ಕೃಷ್ಣಶಾಸ್ತ್ರಿಗಳು, 'ಯಶೋಧರ ಚರಿತೆ'ಗೆ ಕ.ವೆಂ. ರಾಘವಾಚಾರ್ಯರು, 'ಪ್ರಭುಲಿಂಗ ಲೀಲೆಯ ಸಂಗ್ರಹ'ಕ್ಕೆ ಎಂ.ಆರ್. ಶ್ರೀನಿವಾಸಮೂರ್ತಿಯವರು ಬರೆದಿರುವ ಪೀಠಿಕೆಗಳು ಹೇಗೆ ವಿದ್ವಜ್ಜನಮಾನ್ಯವಾಗಿವೆಯೊ ಹಾಗೆ 'ಪಂಪರಾಮಾಯಣ ಸಂಗ್ರಹ'ಕ್ಕೆ ಡಿ.ಎಲ್.ಎನ್. ಬರೆದಿರುವ ಪೀಠಿಕೆ ಮಾನ್ಯವಾಗಿದೆ. ಪೀಠಿಕೆಯಲ್ಲಿ ಅವರು ಮೊದಲಿಗೆ ಕವಿಯ ಬಗೆಗೆ ಕಾಲದ ಬಗೆಗೆ ಚರ್ಚೆ ಮಾಡಿರುವರು. ದೊರೆಯುವ ಸಾಕ್ಷ್ಯಾಧಾರಗಳ ಮೇಲಿಂದ 'ಪಂಪರಾಮಾಯಣ'ವು ಕ್ರಿ. ಶ. ೧೧೪೦ರಲ್ಲಿ ರಚಿತವಾಗಿರಬೇಕೆಂದೂ, ನಾಗಚಂದ್ರನು ೧೨ನೆಯ ಶತಮಾನದ ಪೂರ್ವಾರ್ಧದಲ್ಲಿ ಪ್ರಸಿದ್ಧನಾಗಿ ಬಾಳಿದನೆಂಬುದರಲ್ಲಿ ಸಂದೇಹಕ್ಕೆ ಅವಕಾಶವೇ ಇಲ್ಲವೆಂದೂ ಅಭಿಪ್ರಾಯಪಡುವರು. ಮುಂದಿನ ವಿಚಾರ ಜೈನರಾಮಾಯಣಗಳ ಬಗೆಗೆ. ವೈದಿಕ ರಾಮಾಯಣದಂತೆ ಬೌದ್ಧ ಜೈನ ರಾಮಾಯಣಗಳು ಹುಟ್ಟಿಕೊಳ್ಳಲು ವಿಶೇಷ ಕಾರಣಗಳಲ್ಲಿ ಮತ ಮುಖ್ಯವಾದದ್ದೆಂದು ಅವರು ಸರಿಯಾಗಿಯೇ ಊಹಿಸಿರುವರು. ಪರಂಪರೆಯ ವೈದಿಕ ರಾಮಾಯಣ ಕಥೆಯನ್ನು ಬೌದ್ಧರು ತಮ್ಮ ಮತಕ್ಕೆ ಅನುಗುಣವಾಗಿ ಹೇಗೆ ಬದಲಾಯಿಸಿಕೊಂಡರೆಂಬುದನ್ನು ಪ್ರಸ್ತಾಪಿಸಿ,

"ಬೌದ್ಧರಿಗೆ ಬೇಕಾಗಿದ್ದದ್ದು ಧರ್ಮಮೂರ್ತಿಯಾದ ರಾಮಭದ್ರನ ಪಾತ್ರ. ಅವನನ್ನು ತಮ್ಮವನನ್ನಾಗಿ ಮಾಡಿಕೊಂಡಿದ್ದಾರೆ. ಅಲ್ಲದೆ ಬುದ್ಧನ ಹಿಂದಿನ ಜನ್ಮಾವಳಿಗಳಲ್ಲಿ ರಾಮನ ಅವತಾರವೂ ಒಂದೆಂದು ಅವರು ಪರಿಗಣಿಸಿದ್ದಾರೆ. ಇವರಿಂದ ಬೌದ್ಧ ಮತದ ಕಡೆಗೆ ಜನತೆಯು ಒಲವು ಕೊಂಚಮಟ್ಟಿಗಾದರೂ ಹರಿಯಲು ಅವಕಾಶವಾಗಿರಬೇಕು. ಜನಜೀವನಕ್ಕೆ ಆದರ್ಶಪ್ರಾಯವಾಗಿದ್ದ ರಾಮಾಯಣವನ್ನು ಅವರು ಧರ್ಮಕಥೆಯನ್ನಾಗಿ ಮಾಡಿಕೊಂಡು ತಮ್ಮ ಮತಕ್ಕೆ ಹೆಚ್ಚು ಜನರು ಬಂದು ಸೇರುವಂತೆ ಪ್ರೋತ್ಸಾಹಿಸಿರಬಹುದು" ಎಂದು ಅಭಿಪ್ರಾಯಪಡುವರು. ಬೌದ್ಧರಂತೆ ಜೈನರೂ ರಾಮಾಯಣಕಥೆಯನ್ನು ತಮ್ಮ ಮತಾನುಸಾರಿಯಾಗಿ ಮಾರ್ಪಾಟುಮಾಡಿಕೊಂಡರು. ಇದರ ವಿವರವನ್ನು ವಿಸ್ತೃತವಾಗಿ ಡಿ.ಎಲ್.ಎನ್. ಕೊಟ್ಟಿರುವರು.

ಜೈನರಾಮಾಯಣಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದುದು ವಿಮಲಸೂರಿಯ 'ಪಉಮಚರಿಯ'. ಗೌತಮ ಗಣಧರನ ಮುಖದಿಂದ ಕಥೆಯನ್ನು ಕೇಳುವುದಕ್ಕೆ ಮುನ್ನವೇ ಶ್ರೇಣಿಕ ಮಹಾರಾಜನಿಗೆ ರಾಮಾಯಣದ ಕಥೆಯ ವಿಚಾರವಾಗಿ ಕೆಲವು ಸಂದೇಹಗಳು ಉಂಟಾದುವು ಎಂದು ಹೇಳಿ ವಿಮಲಸೂರಿ ಕಥೆಯನ್ನು ಪ್ರಾರಂಭಿಸುವನು. ಇದನ್ನು ನೋಡಿದರೆ ಅವನಿಗೆ ವಾಲ್ಮೀಕಿ ರಾಮಾಯಣದ ಪರಿಚಯವಿದ್ದಿತೆಂದೂ ಅವನು ಅದರಲ್ಲಿರುವುದನ್ನೆಲ್ಲ ನಂಬಿಕೊಳ್ಳದೆ ಜೈನ ಧರ್ಮಕ್ಕನುಸಾರವಾಗಿ ಅದನ್ನು ತಿದ್ದಲು ತೊಡಗಿದನೆಂದೂ ಡಿ.ಎಲ್.ಎನ್. ಅಭಿಪ್ರಾಯಪಡುವರು. ಜೈನರಾಮಾಯಣದಲ್ಲಿ ವಿಮಲಸೂರಿ ಹಾಗೂ ಗುಣಭದ್ರಾಚಾರ್ಯರ ಕಥಾಸಂಪ್ರದಾಯಗಳಿರುವುದನ್ನು ಹೇಳುವ ಡಿ.ಎಲ್.ಎನ್. ದೇವಚಂದ್ರನು ಇವೆರಡಕ್ಕೂ ಸಮನ್ವಯಮಾಡಲು ಪ್ರಯತ್ನಪಟ್ಟಿರುವುದನ್ನು ಗುರುತಿಸುವರು. ವಾಲ್ಮೀಕಿ ರಾಮಾಯಣಕ್ಕೂ ವಿಮಲಸೂರಿಯ ಸಂಪ್ರದಾಯಕ್ಕೂ ಇರುವ ಕೆಲವು ಮುಖ್ಯ ವ್ಯತ್ಯಾಸಗಳನ್ನು ಡಿ.ಎಲ್.ಎನ್. ವಿವರಿಸಿರುವರು. ಗುಣಭದ್ರನ ಸಂಪ್ರದಾಯವನ್ನು ಹೇಳುವಾಗ ಅವನ 'ಉತ್ತರಪುರಾಣ'ದ ಮುನಿಸುವ್ರತ ಜಿನನ ಕಥೆಯಲ್ಲಿ ಬರುವ ರಾಮಾಯಣದ ಕಥೆಯನ್ನು ಸಂಕ್ಷೇಪಿಸಿ ಹೇಳಿರುವರು. "ಗುಣಭದ್ರನ ಸಂಪ್ರದಾಯಕ್ಕೆ ಯಾವ ಒಂದು ರಾಮಾಯಣವನ್ನೂ ಮೂಲವೆಂದು ಹೇಳುವ ಹಾಗಿಲ್ಲ. ಅದು ಹಲವು ರಾಮಕಥೆಗಳು ಸಮ್ಮಿಶ್ರವಾದ ಕಲಸುಮೇಲೋಗರ

ವೆಂದು ಕಾಣುತ್ತದೆ" ಎಂಬ ಅವರ ನಿರ್ಣಯ ಅರ್ಥಪೂರ್ಣವಾಗಿದೆ. ಸಾಹಿತ್ಯ ದೃಷ್ಟಿಯಿಂದ ಗುಣಭದ್ರನ ಕಥೆ ನೀರಸವಾದುದು; ಅದರಲ್ಲಿ ಯಾವ ಬಗೆಯ ಉತ್ಕೃಷ್ಟ ಕಲೆಯೂ ಕಾಣುವುದಿಲ್ಲ. ವಿಮಲಸೂರಿಯ ಕಥೆ, ಅನೇಕ ಸುಂದರ ಸನ್ನಿವೇಶಗಳನ್ನೊಳಗೊಂಡು ರಮಣೀಯವಾಗಿದೆ; ಕವಿಗಳ ಮೆಚ್ಚಿಕೆಗೆ ಹೆಚ್ಚು ಪಾತ್ರವಾಗಿದೆ, ಜನಪ್ರಿಯವಾಗಿದೆ–ಎಂದು ವಿಮರ್ಶಿಸಿರುವ ಅವರು ಮುಂದೆ ವಿಮಲಸೂರಿಯ ರಾವಣನ ಬಗೆಗೆ ವಿಸ್ತೃತವಾದ ವಿವರಣೆ ನೀಡುವರು.

ನಾಗಚಂದ್ರನು ವಿಮಲಸೂರಿ ರವಿಷೇಣರಿಬ್ಬರ ಕೃತಿಗಳಲ್ಲಿ ಯಾವು ದನ್ನು ಮೂಲವಾಗಿಟ್ಟುಕೊಂಡು ಅನುಸರಿಸಿದ್ದಾನೆ ಎಂಬ ವಿಷಯದಲ್ಲಿ ನಿಷ್ಕೃಷ್ಟವಾಗಿ ಹೇಳುವಂತಿಲ್ಲವೆಂದಿರುವರಾದರೂ 'ಪಂಪರಾಮಾಯಣ'ವು ವಿಮಲಸೂರಿಯ ಸಂಪ್ರದಾಯಕ್ಕೆ ಸೇರಿದೆಯೆಂಬುದು ಅವರ ಅಂತರಂಗಕ್ಕೆ ಗೋಚರವಾಗಿರುವಂತಿದೆ. ನಾಗಚಂದ್ರನ ದುರಂತ ರಾವಣನ ಪಾತ್ರದ ರಾಮಣೀಯಕ ಸೃಷ್ಟಿಗೆ ವಿಮಲಸೂರಿಯ ಪ್ರಭಾವ ಸಾಕಷ್ಟು ಆಗಿದೆಯೆಂಬು ದನ್ನು ತಿಳಿಸಲು ಅವರು ವಿಮಲಸೂರಿಯ ರಾವಣನ ಚಿತ್ರವನ್ನು ಸಾಕಷ್ಟು ವಿಶದವಾಗಿಯೇ ಕೊಟ್ಟಿರುವರು. ವಿಮಲಸೂರಿಯ ರಾವಣನ ಪಾತ್ರ ನಾಗಚಂದ್ರನಿಗೆ ಮಾದರಿ. ಈ ಚಿತ್ರದ ಸೌಂದರ್ಯವನ್ನು ತನ್ನ ದೃಷ್ಟಿಗೆ ನಿಲುಕು ವಷ್ಟು ಮಟ್ಟಿಗೆ ನಾಗಚಂದ್ರನು ಅನುಭವಿಸಿ ಕೆಲವೆಡೆಗಳಲ್ಲಿ ಅದಕ್ಕೆ ಹೆಚ್ಚು ಕಳೆಯೇರುವಂತೆ ವರ್ಣಿಸಿರುವನು ಎಂದು ಡಿ.ಎಲ್.ಎನ್. ಹೇಳುವರು. ಇದರ ವಿವರ ಇನ್ನಷ್ಟು ಸ್ಫುಟವಾಗುವುದು 'ನಾಗಚಂದ್ರನ ರಾವಣ' ಎನ್ನುವ ಭಾಗದಲ್ಲಿ, ರಾವಣನ ಪಾತ್ರವನ್ನು ವಿಶದೀಕರಿಸುವಲ್ಲಿ ವಿಮರ್ಶಕನಿಗೆ ಕವಿಯ ಪ್ರಾತಿಭಚಕ್ಷುವೇ ಬೇಕಾಗುತ್ತದೆ. ಇಲ್ಲಿ ವಿಮರ್ಶಕ ಡಿ.ಎಲ್.ಎನ್. ಅವರ ಪ್ರತಿಭೆ ಆ ಕೆಲಸ ಮಾಡಿದೆ. "ವಿಮಲಸೂರಿ ತನ್ನ ಅದ್ಭುತ ಕುಂಚಿಕೆಯಿಂದ ಬರೆದ ರಾವಣನ ವರ್ಣಚಿತ್ರವನ್ನು ತನ್ನ ಪ್ರತಿಭೆಯಲ್ಲಿ ನಕಲುಮಾಡಿಕೊಳ್ಳು ವಾಗ ನಾಗಚಂದ್ರನು ಕೆಲವು ಛಾಯೆಗಳನ್ನು ತೇಲಿಸಿ ಕೆಲವನ್ನು ಗಟ್ಟಿಮಾಡಿ ಕೊಂಡಿರುವನು. ಇವನ ಚಿತ್ರ ಮೂಲಕೃತಿಯನ್ನು ಬಲುಮಟ್ಟಿಗೆ ಹೋಲು ತ್ತದೆ. ಆದರೆ ಅದರಲ್ಲಿ ಮೂಲದಲ್ಲಿರುವಷ್ಟು ಸೌಂದರ್ಯವಿಲ್ಲ, ಗಾಂಭೀರ್ಯ ವಿಲ್ಲ, ದುರಂತತೆಯ ಬೃಹತ್ಪ್ರಮಾಣವಿಲ್ಲ. ತುಪ್ಪದ ಹನಿ ಅಲ್ಲಲ್ಲಿ ಹತ್ತಿದ ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬದಂತೆ ಆ ಚಿತ್ರಣವಿದೆ. ಅದರೂ ಮನೋ

ಪರವಾಗಿದೆ" ಇಷ್ಟು ಸಂಗ್ರಹವಾಗಿ ವಸ್ತುನಿಷ್ಠವಾಗಿ ತುಲನೆ ಮಾಡಿರುವ ಡಿ.ಎಲ್.ಎಲ್. ಅವರ ಪ್ರಾತಿಭಶಕ್ತಿಯನ್ನು ಎಷ್ಟು ಹೊಗಳಿದರೂ ಸಾಲದು.

ನಾಗಚಂದ್ರನದು ಸಂಗ್ರಹಕಾರನ ದೃಷ್ಟಿ ಎಂದು ಹೇಳುವ ಡಿ.ಎಲ್.ಎನ್. ನಾಗಚಂದ್ರ 'ಪಿರಿದೆನಿಸಿರ್ದ ರಾಮಕಥೆ'ಯನ್ನು ಕಿರಿದಾಗಿಸಿ, ಅಷ್ಟೇ ರಸವತ್ತಾಗಿ ಹೇಳಲು ವಿಮಲಸೂರಿಯ ಕೃತಿಯಲ್ಲಿನ ನೀರಸವಾದ ಭಾಗಗಳನ್ನು ನಿರ್ದಾಕ್ಷಿಣ್ಯವಾಗಿ ಬಿಟ್ಟಿರುವನೆನ್ನುವರು. ಬಿಡಬಾರದ ಕೆಲವು ಸನ್ನಿವೇಶಗಳು ಬಂದಾಗಲೂ ನಾಗಚಂದ್ರನ ವಿವೇಕ ಎಚ್ಚರವಹಿಸಿರುವುದನ್ನು ಡಿ.ಎಲ್.ಎನ್. ಅವರ ಪ್ರತಿಭಾ ಚಕ್ಷು ಗುರುತಿಸಿದೆ. ಇದಕ್ಕೆ ಸಹಸ್ರಬಾಹುವಿನ ಜಲಕೇಳೀ ವರ್ಣನೆಯನ್ನು ಉದಾಹರಣೆಯಾಗಿ ಕೊಟ್ಟಿರುವರು. ಈ ವರ್ಣನೆಯಿಂದ ಮೂಲಕಥೆಗೆ ಪ್ರಯೋಜನವೇನೂ ಇಲ್ಲದಿರುವುದರಿಂದ ನಾಗಚಂದ್ರನು ಇದರ ವರ್ಣನೆ ಮಾಡಬೇಕೆಂಬ ಚಾಪಲ್ಯವನ್ನು ಅಮುಕಿಹಿಡಿದು ಮುಂದಿನ ಕಥೆಗೆ ದಾಟುವನು. ಇದರಿಂದ ಅವನ ಯುಕ್ತಾಯುಕ್ತ ಪರಿಜ್ಞಾನ ಗೊತ್ತಾಗುತ್ತದೆನ್ನುವರು. ಆದರೆ ಇದೇ ವಿಮರ್ಶನಶಕ್ತಿಯನ್ನು ಅವನು ಕೆಲವು ಕಡೆ ಸರಿಯಾಗಿ ಉಪಯೋಗಿಸಿಕೊಂಡಿಲ್ಲವೆಂದು ಹೇಳುವ ಅವರು ಅದಕ್ಕೆ ಉದಾಹರಣೆಯಾಗಿ ಅನಂತವೀರ್ಯಕೇವಲಿಗಳ ಬಳಿ ರಾವಣನು 'ಪರವಧೂವಿರತಿವ್ರತ' ಸ್ವೀಕರಿಸಿದ ಮಹತ್ವದ ಸನ್ನಿವೇಶವನ್ನು ಕೈಬಿಟ್ಟಿರುವುದನ್ನು ಕೊಟ್ಟಿರುವರು. ನಾಗಚಂದ್ರನ ರಾವಣನು ಸೀತೆಯನ್ನು ಕದ್ದು ವಿಮಾನವಲ್ಲಿಟ್ಟು ಲಂಕೆಗೆ ಒಯ್ಯುತ್ತಿರುವಾಗ ಮನ್ಮಥಚೇಷ್ಟೆಯಿಂದಾಗಿ ಬಗೆ ಕದಡಿ ಅವಳನ್ನು ಮುಟ್ಟಲು ಕಾತುರನಾಗುವನು ; ಆಗ ಆ ಸನ್ನಿವೇಶದ ನೆನಪುಮಾಡಿಕೊಡುವನು. ಡಿ.ಎಲ್.ಎನ್.ರವರು ತೀರ ಭಾವುಕರಾಗಿ ನಾಗಚಂದ್ರ ಎಂತಹ ಮಹತ್ವದ ಸನ್ನಿವೇಶವನ್ನು ಬಿಟ್ಟುಬಿಟ್ಟನಲ್ಲಾ ಎಂದು ವಿಚಾರ ಮಾಡುವರು. ಭಾವತೀವ್ರವಾದ ಅವರ ಮನದ ಮಿಡಿತವನ್ನು ಅವರ ಈ ಮಾತುಗಳು ಸಮರ್ಥವಾಗಿ ತಿಳಿಯಹೇಳುತ್ತವೆ : "...ಹಿಂದಿನ ಕಥೆಯನ್ನು (ಪರಾಂಗನಾವಿರತಿವ್ರತ ಸ್ವೀಕರಣದ ಸನ್ನಿವೇಶವನ್ನು) ಅವನು ಕೈಬಿಟ್ಟಿರುವುದರಿಂದ...ಆ ವ್ರತದಿಂದ ರಾವಣನ ಮನಸ್ಸಿನ ಮೇಲೆ ಉಂಟಾಗಿದ್ದ ಪ್ರಭಾವದ ಆಳವು ಗೊತ್ತಾಗುವುದಿಲ್ಲ. ದುರ್ಮೋಹದ ಸುಳಿಗೆ ಸಿಕ್ಕಿ ತರಗೆಲೆಯಂತೆ ತಿರ್ರನೆ ತಿರುಗುವ ಅವನ ಮನಸ್ಸು ಇಂಥ ಸಮಯದಲ್ಲಿ ಆ ವ್ರತ

ವನ್ನು ಸ್ಮರಿಸಿಕೊಂಡಿತೆಂದರೆ ಅವರ ಪ್ರಭಾವವೆಂಥದಿರಬೇಕು! ಅದನ್ನು ಅವನು ತೆಗೆದುಕೊಂಡ ಸನ್ನಿವೇಶದ ಸಾತ್ವಿಕಪ್ರಭೆ ಎಂಥದು! ಎಂಥದೋ ಅವನ ಆಗಿನ ಪುಣ್ಯಮಯ ಮಾನಸಿಕ ಪರಿಸ್ಥಿತಿ! ಇದುವರೆಗೂ ಅವನ ಶೌಚ ಗುಣವನ್ನು ಕಾಪಾಡಿಕೊಂಡು ಬಂದ ಆ ವ್ರತದ ಕಟ್ಟು ಎಷ್ಟು ಬಿಗಿಯಾದದ್ದು! ಅದರ ಬಲದಿಂದಲ್ಲವೇ ಅವನ ಆ ಅದಮ್ಯ ದುರ್ಮೋಹವಾಹಿನಿಯು ಒಂದು ಕ್ಷಣವಾದರೂ ತಡೆದದ್ದು! ಅವನೇನು ಹುಡುಗಾಟಕ್ಕಾಗಿ ಆ ವ್ರತವನ್ನು ಹಿಡಿದನೆ? ಮೋಹಕ್ಕೂ ಧರ್ಮಕ್ಕೂ ಅವನ ಮನಸ್ಸಿನಲ್ಲಿ ಎಂಥ ಹೋರಾಟ ನಡೆದಿದೆ! ಈ ಸೊಗಸೆಲ್ಲ ನಾಗಚಂದ್ರನ ಕಾವ್ಯದಲ್ಲಿ ಮಾಯವಾಗಿದೆ."

'ಕಂದರ್ಪವಿಮೋಹ' ರಾವಣನ ದುರಂತ ದೌರ್ಬಲ್ಯ. ಸೀತೆಯನ್ನು ಕದ್ದುತರುವ ಉದ್ದೇಶ ಮೊದಲಿಗೆ ಅವನಿಗಿರಲಿಲ್ಲ. ತನ್ನ ತಂಗಿ ಚಂದ್ರನಖಿಗೆ ಆದಂತಹ ದುಃಖಕ್ಕೆ ಪ್ರತೀಕಾರ ತೆಗೆದುಕೊಳ್ಳಲು ಬಂದ ರಾವಣ ಸೀತೆಯ ಅನುಪಮ ಸೌಂದರ್ಯದ ಸೆರೆಗೆ ಸಿಕ್ಕಿಬಿದ್ದ; ಸ್ತ್ರೀರತ್ನಕ್ಕಾನಿರೆ "ಪೆಱರಾರೊಡೆಯರ್", "ಪೌಲಸ್ತ್ಯನಂ ಸಮರದೊಳ್ ಮಾನವರ್ ಮಿಱುವರೆ?" ಎನ್ನುವ ವಿಮೋಹ ಹಾಗೂ ದರ್ಪ ಅವನ ಮನಸ್ಸಿನಲ್ಲಿರುತ್ತದೆ. ಅವನ ಬುದ್ಧಿಗೆ ಕವಿದ ಮಂಕು ಅಥವಾ ಭ್ರಮೆ ಯುದ್ಧರಂಗದಲ್ಲಿ ತನ್ನ ನೆಚ್ಚಿನ ಬಂಟರೆಲ್ಲ ಹತರಾದ ಮೇಲೆ ಹರಿಯುತ್ತದೆ. ಈ ಘಟ್ಟದಲ್ಲಿ ಅವನು ಸಂಧಿ ಮಾಡಿಕೊಳ್ಳುವುದಕ್ಕೂ ಪ್ರಯತ್ನಿಸುವನು. "ಈ ಅಪೂರ್ವ ಸಂದರ್ಭವನ್ನು ಕಲ್ಪಿಸಿಕೊಂಡು ವಿಮಲಸೂರಿ ರಾವಣನ ಮನೋಯುದ್ಧ ಬಿಡಿಸಿ ತೋರಿಸಿರುವನು. ನಾಗಚಂದ್ರನಾದರೆ, ಸಂಧಿ ಹೇಗಿದ್ದರೂ ಆಗುವುದಿಲ್ಲ, ಅದನ್ನು ಹೇಳಿದರೂ ಒಂದೇ ಬಿಟ್ಟರೂ ಒಂದೇ ಎಂದು ಭಾವಿಸಿಕೊಂಡು ಈ ದೃಶ್ಯವನ್ನು ಬಿಟ್ಟಿರುವಂತೆ ಕಾಣುತ್ತದೆ. ಇಲ್ಲಿ ಅವನ ವಿಮರ್ಶೆ ಅವನನ್ನು ತಪ್ಪುದಾರಿಗೆ ಎಳೆದುಬಿಟ್ಟಿದೆ" ಎಂದು ಡಿ.ಎಲ್.ಎನ್, ನಾಗಚಂದ್ರನಲ್ಲಿನ ಕೊರತೆಯನ್ನು ಸರಿಯಾಗಿ ಹೇಳಿರುವರು.

ಶಂಭುಕನ ವಧೆಗೆ ಪ್ರತೀಕಾರ ತೆಗೆದುಕೊಳ್ಳಲು ಬಂದ ರಾವಣ 'ಬಜಿಸಿಡಿಲ ಬೞಿವಿಡಿದು ಪೊೞೆವ ಕುಡುಮಿಂಚಿನಂತೆ ಬಲಭದ್ರನ ಕೆಲದೊಳಿರ್ದ ಸೀತೆ'ಯನ್ನು ಕಂಡಕೂಡಲೆ ರಾವಣನ ಮನಸ್ಸು ಅವಳಲ್ಲಿ ನಾಟಿಹೋಯಿತು. ಕಾಮಾಂಧನಾದ ರಾವಣ ಅವಳು ಯಾರೆಂಬುದನ್ನು ತಿಳಿದುಕೊಳ್ಳಲು ಹಾಗೂ

ಅವಳನ್ನು ರಾಮನಿಂದ ಅಗಲಿಸುವ ಬಗೆ ಹೇಗೆಂಬುದನ್ನು ಅರಿಯಲು ಅವಲೋಕಿನೀವಿದ್ಯೆಯನ್ನು ಅವನು ಸ್ಮರಿಸುವನು. ಆ ವಿದ್ಯೆ ತೊತ್ತಿನಂತೆ ಮುಂದೆ ಬಂದು ಅಪ್ಪಣೆ ಏನೆಂದು ಕೈಮುಗಿದು ನಿಲ್ಲುತ್ತದೆ. ವಿಮಲಸೂರಿಯ ರಾಮಾಯಣದಲ್ಲಿ ಅದು ಸೀತಾದೇವಿಯ ಪರಿಚಯವನ್ನು ಮಾತ್ರ ರಾವಣನಿಗೆ ಹೇಳುತ್ತದೆ. ರಾವಣನೇ ಸಿಂಹನಾದ ಮಾಡಿ ರಾಮನನ್ನು ಲಕ್ಷ್ಮಣನ ಬಳಿಗೆ ಕಳುಹಿಸುತ್ತಾನೆ. ಮೂಲದಲ್ಲಿ ವಿಶದವಾದ ಚಿತ್ರವಿಲ್ಲದ "ಈ ದೃಶ್ಯವು ರೂಪರೇಖೆಗಳಿಲ್ಲದ ಅಸ್ಪಷ್ಟ ಚಿತ್ರದಂತಿದೆ. ವ್ಯಾಪಾರ ಮಾಡುವವರೂ ಇಷ್ಟು ಬೇಗನೆ ಮುಗಿಸುವುದಿಲ್ಲ; ಸ್ವಲ್ಪವಾದರೂ ಚೌಕಾಸಿ ಮಾಡುತ್ತಾರೆ. ನಾಗಚಂದ್ರನಿಗೆ ಇದು ಸರಿಯಾಗಿಲ್ಲವೆಂದು ಹೊಳೆಯಿತು. ರಾವಣನಿಗೂ ವಿದ್ಯೆಗೂ ನಡೆದ ಸಂವಾದವನ್ನು ಅವನು ಚೆನ್ನಾಗಿ ಬಣ್ಣಿಸಿದ್ದಾನೆ." ಎಂದು ಡಿ.ಎಲ್.ಎನ್. ನಾಗಚಂದ್ರ ಮಾಡಿಕೊಂಡ ಮಾರ್ಪಾಟಿನ ಬಗೆಗೆ ಮೆಚ್ಚುಗೆ ಮಾಡಿರುವರು. ರಾಮಲಕ್ಷ್ಮಣರು ಸಾಧಾರಣಪುರುಷರಲ್ಲ, ಅವರೊಡನೆ ವಿದ್ವೇಷ ಸಲ್ಲದೆಂದು ಬುದ್ಧಿಮಾತು ಹೇಳಿದ ಅವಲೋಕಿನಿ ವಿದ್ಯೆಯನ್ನೇ ಗದರಿಸುವನು ರಾವಣ. ಸೀತೆಯ ಕಾರಣದಿಂದ ರಾವಣನ ಅಳವನ್ನು ನೆನೆದ ವಿದ್ಯಾದೇವತೆ 'ಪುರಾತನ ಕರ್ಮಾಯತ್ತಮಲ್ತೆ ದೇಹಿಗಳೆಸಕಂ' ಎಂದು ಚಿಂತಿಸಿ ರಾಮನಿಂದ ಸೀತೆಯನ್ನು ಅಗಲಿಸುವ ಬಗೆಯನ್ನು ತಿಳಿಸುತ್ತದೆ. "ದಿವ್ಯವಚನಂ ಹೃದಯಕ್ಕೆಯ್ದುದುದಿಲ್ಲ. ಬಿದಿಯುಂ ಮಿಾಜುಗುಮೆ ಪೆಜರ ಪೇಳ್ದುಪದೇಶಂ" ಎಂಬ ಮಾತುಗಳಲ್ಲಿ ರಾವಣನ ಬೆನ್ನಂಟಿದ ವಿಧಿಯ ಮಹಿಮೆಯನ್ನು ನಾಗಚಂದ್ರನು ತೋರಿಸಿದ್ದಾನೆ. ಡಿ.ಎಲ್.ಎನ್. ಹೇಳುವಂತೆ "ಈ ದೃಶ್ಯದಲ್ಲಿ ಅವನ ಪ್ರತಿಭೆ ಕಿಡಿಗುಟ್ಟಿದೆ."

ನಾಗಚಂದ್ರನ ಮೇಲೆ ವಿಮಲಸೂರಿಯ ಪ್ರಭಾವ ಎಷ್ಟೆಂಬುದನ್ನು ಡಿ.ಎಲ್.ಎನ್. ಬಹಳ ಚೆನ್ನಾಗಿ ಹೇಳಿರುವರು. ಅವರು ನಿರ್ಣಯಿಸುವಂತೆ "ಕೆಲವು ಸಣ್ಣ ಸಣ್ಣ ಮಾರ್ಪಾಟುಗಳನ್ನು ನಾಗಚಂದ್ರನು ಮೂಲಕಥೆಯಲ್ಲಿ ಮಾಡಿಕೊಂಡಿದ್ದಾನೆ. ಇವನ್ನು ಬಿಟ್ಟರೆ ವಿಮಲಸೂರಿಯ ಜಾಡನ್ನೇ ಚಾಚೂ ತಪ್ಪದೆ ಅವನು ಹಿಡಿದಿದ್ದಾನೆ; ಅಲ್ಲಲ್ಲಿ ಸ್ವಲ್ಪ ನಿಂತು ಸುತ್ತಲೂ ನೋಡಿ ತಾನು ಕಂಡ ಸೊಗಸನ್ನು ಬಣ್ಣಿಸುತ್ತ ಹೋಗಿದ್ದಾನೆ. ಉತ್ಕೃಷ್ಟ ಕಲೆಯಿಂದ ತುಂಬಿದ ಮಾರ್ಪಾಟುಗಳಾವುವೂ ಅವನ ಕಾವ್ಯದಲ್ಲಿ ಕಂಡುಬರುವುದಿಲ್ಲ.

ಮೇಲೆ ತೋರಿಸಿರುವ ಒಂದೆರಡು ಕೊರತೆಗಳನ್ನು ಬಿಟ್ಟರೆ ಅವರ ಸಂಗ್ರಹ ಕಾರ್ಯ ಸಮರ್ಪಕವಾಗಿ ನಡೆದಿದೆ ಎಂದು ಹೇಳಬಹುದು. ಮೂಲ ಜೈನ ರಾಮಾಯಣದ ಸಂಪ್ರದಾಯ ನಾಗಚಂದ್ರನಲ್ಲಿ ಪೂರ್ತಿಯಾಗಿ ಪ್ರತಿಫಲಿಸಿದೆ."

ನಾಗಚಂದ್ರನ ಮೇಲೆ ರವಿಷೇಣನ ಸಂಸ್ಕೃತ 'ಪದ್ಮಪುರಾಣ'ದ ಪ್ರಭಾವವೂ ಆಗಿದೆ. ರವಿಷೇಣನಿಗೆ ಮೂಲ ವಿಮಲಸೂರಿಯ 'ಪಉಮ ಚರಿಯ' ಅವನು ಸಮಯ ಸಿಕ್ಕಿದಾಗಲೆಲ್ಲಾ ಹಿಗ್ಗಲಿಸಿ ಮೂಲವನ್ನು ದೊಡ್ಡದು ಮಾಡಿದ್ದಾನೆ. 'ಅವನ ದೃಷ್ಟಿ ಪುರಾಣಕಾರನ ದೃಷ್ಟಿ' ಎನ್ನುವ ಡಿ.ಎಲ್.ಎನ್. ಅವನ ಕಾವ್ಯದಲ್ಲಿ ಆಂಗಿಕ ಸೌಂದರ್ಯ ಹೆಚ್ಚಾಗಿ ಕಂಡುಬರುತ್ತದೆನ್ನುವರು. ನಾಗಚಂದ್ರನು ಕೊಟ್ಟಿರುವ ಕೆಲವು ದೃಶ್ಯಗಳ ವರ್ಣನೆಗಳು ರವಿಷೇಣನ ಗ್ರಂಥದಲ್ಲಿರುವ ಆ ಆ ದೃಶ್ಯಗಳ ಸಂಕುಚಿತ ಸ್ವರೂಪವೆಂದು ಕಾಣುತ್ತದೆಂದೂ ಅವರು ಅಭಿಪ್ರಾಯಪಡುವರು. ನಾಗಚಂದ್ರನ ಮೇಲೆ ರವಿಷೇಣನ ಪ್ರಭಾವ ಎಂಥದೆಂಬುದನ್ನು ನಿರೂಪಿಸಲು ಉಪರಂಭೆಯ ಪ್ರಸಂಗ ಹಾಗೂ ಶ್ರೀಕಂಠ—ಪದ್ಮೋತ್ತರೆಯ ಪ್ರಣಯ ಪ್ರಸಂಗಗಳನ್ನು ಉದಾಹರಣೆಯಾಗಿ ಡಿ.ಎಲ್.ಎನ್. ತೆಗೆದುಕೊಂಡು ತುಲನೆಮಾಡಿರುವರು.

ವಿಮಲಸೂರಿ, ರವಿಷೇಣ—ಇವರೀರ್ವರಲ್ಲೂ ದೊರೆಯದಿರುವ ಕೆಲವು ದೃಶ್ಯ ವಿಸ್ತರಣೆಗಳೂ ಹೊಸ ಸೊಗಸುಗಳೂ ನಾಗಚಂದ್ರನಲ್ಲಿ ದೊರೆಯುವುದನ್ನು ಡಿ.ಎಲ್.ಎನ್. ಸಗರ ಚಕ್ರವರ್ತಿ ಸಹಸ್ರಲೋಚನನ ತಂಗಿಯಾದ ಉತ್ಪಲನೇತ್ರೆಯನ್ನು ಮದುವೆ ಮಾಡಿಕೊಳ್ಳುವ ಸಂದರ್ಭದ ವಿವರಣೆಯ ಮೂಲಕ ನಿರೂಪಿಸುವರು. ಮೂಲ ಕಾವ್ಯಗಳಲ್ಲಿ ಶುಷ್ಕರೀತಿಯಿಂದ ಪ್ರತಿಪಾದಿತವಾಗಿರುವ ಕೆಲವು ವಿಷಯಗಳಲ್ಲಿ ನಾಗಚಂದ್ರನು ಜೀವತುಂಬಿರುವುದನ್ನು —ಖರನು ಚಂದ್ರನಖಿಯನ್ನು ಕದ್ದೊಯ್ದಾಗ ರಾವಣನ ಕೋಪತಾಪವನ್ನು ಸಂತೈಸಿದ ಮಂಡೋದರಿಯ ಪಾತ್ರ ಚಿತ್ರಣದಲ್ಲಿ—ಡಿ.ಎಲ್.ಎನ್. ತೋರಿಸಿ ಕೊಟ್ಟಿರುವರು.

ನಾಗಚಂದ್ರನ ಶೈಲಿಯನ್ನು ಕುರಿತು ಹೇಳುವಾಗ ಡಿ.ಎಲ್.ಎನ್. ಶೈಲಿ ಎಂದರೇನು ? ಎಂಬುವರ ಬಗೆಗೆ ಸುದೀರ್ಘವಾಗಿ ಚರ್ಚಿಸಿರುವರು. ನಾಗಚಂದ್ರನ ಶೈಲಿಯ ಮುಖ್ಯ ಗುಣ ಅದರ ಅರ್ಥವ್ಯಕ್ತಿ ; ಅವನ ಪದಚಿತ್ರಗಳ ಸೊಗಸು (Picturesqueness) ಚಿತ್ರಮೋಹಕವಾದದ್ದು ; ಶೈಲಿಯಲ್ಲಿ

ಕಾವ್ಯವನ್ನು ಕುರಿತ ಪ್ರಸ್ತಾವನೆಯಾಗಲೀ, ಅರ್ಥಕೋಶವಾಗಲೀ ಕಂಡು ಬಂದಿಲ್ಲ.

ಶಾಂತಿನಾಥನ 'ಸುಕುಮಾರ ಚರಿತಂ'

ಶಿವಮೊಗ್ಗ ಜಿಲ್ಲೆಯವನಾದ ಶಾಂತಿನಾಥನು (ಕಾಲ ೧೦೬೦) 'ಸುಕುಮಾರ ಚರಿತಂ' ಎನ್ನುವ ಚಂಪೂಕಾವ್ಯವನ್ನಲ್ಲದ, ಶಿಕಾರಿಪುರದ ೧೩೬ ನೆಯ ಶಾಸನವನ್ನೂ ಬರೆದಿರುವನು. ಈ ಶಾಸನ ೫೦ ಕಂದ ವೃತ್ತಗಳ ನ್ನೊಳಗೊಂಡ ಚಂಪೂಶೈಲಿಯ ಪ್ರೌಢರಚನೆಯಾಗಿದೆ (ಶಾಸನವನ್ನು ಪರಿಶಿಷ್ಟ ೧ ರಲ್ಲಿ ಕೊಡಲಾಗಿದೆ). ಈ ಕೃತಿಯನ್ನು ಎರಡು ಕೈಬರಹದ ಮಾತೃಕೆಗಳನ್ನು ಬಳಸಿಕೊಂಡು ಡಿ.ಎಲ್.ಎಸ್. ಹಾಗೂ ಟಿ. ಎಸ್. ಶಾಮರಾವ್‌ರವರು ಸಂಪಾದಿಸಿರುವರು (೧೯೫೪). ಈ ಸಂಪಾದಿತ ಕೃತಿಗೆ ಡಿ.ಎಲ್.ಎಸ್. ವಿಸ್ತಾರವಾದ ಪೀಠಿಕೆ ಬರೆದಿರುವರು. ಶಾಂತಿನಾಥನು ತನ್ನ ಕೃತಿಯ ಆದಿ ಮತ್ತು ಅಂತ್ಯ ಭಾಗಗಳಲ್ಲಿ ತನಗೆ ಸಂಬಂಧಿಸಿದ ಕೆಲವು ಸಂಗತಿಗಳನ್ನು ತಿಳಿಸಿರುವನು. ಶಿಕಾರಿಪುರದ ೧೩೬ನೆಯ ಶಾಸನದಿಂದಲೂ ಕವಿಯ ಕಾಲ ಅವನ, ಪೋಷಕ, ಅವನ ಕೃತಿ – ಈ ಅಂಶಗಳನ್ನು ಕುರಿತು ಕೆಲವು ಸಂಗತಿಗಳು ತಿಳಿದುಬರುತ್ತವೆ. ಶಾಂತಿನಾಥನು ತನ್ನ ಕೃತಿಯಲ್ಲಿ ಕೊಂಡಕುಂದಾನ್ವಯ ಮೂಲ ಸಂಘ ದೇಶಿಗಣ ಪುಸ್ತಕಗಚ್ಛಕ್ಕೆ ಸೇರಿದ ಗುರುಗಳನ್ನು ಹೆಸರಿಸಿರುವನು. ಅವನ ಒಂದು ಕಂದ ಪದ್ಯ (೧.೨೮) ಶ್ರವಣಬೆಳುಗೊಳದ ೧೧೭ನೆಯ ಶಾಸನದಲ್ಲಿ ಕಂಡುಬರುತ್ತದೆ. ಶಾಂತಿನಾಥನು ತನಗೆ ಅಧಿಪತಿಯಾಗಿದ್ದ ಲಕ್ಷ್ಮಣರಾಜನ ಹೆಸರನ್ನು ತನ್ನ ಕಾವ್ಯದಲ್ಲಿ ಎಲ್ಲಿಯೂ ಸೂಚಿಸಿರುವಂತೆ ಕಂಡುಬರುವುದಿಲ್ಲ. ಶಿಕಾರಿಪುರದ ಶಾಸನದ (೧೩೬) ಕಾಲಕ್ಕಾಗಲೀ ಕ್ರಿ. ಶ. ೧೦೬೮ರ ವೇಳೆಗೆ ಶಾಂತಿನಾಥನು 'ಸುಕುಮಾರ ಚರಿತ'ವನ್ನು ಬರೆದಿರುವಂತಿದೆ. ಇದನ್ನು ಬರೆದ ಕಾಲಕ್ಕೆ ಕವಿಯು ಲಕ್ಷ್ಮಣ ರಾಜನ ಆಶ್ರಿತನಾಗಿರಲಿಲ್ಲವೆಂದು ಡಿ.ಎಲ್.ಎಸ್. ಅನುಮಾನ ಪಡುವರು. ಶಾಸನಗಳ ಆಧಾರದಿಂದ ಡಿ.ಎಲ್.ಎಸ್. "ಲಕ್ಷ್ಮಣರಾಜನು ಬನವಸೆ ೧೨,೦೦೦ಕ್ಕೆ ಮಹಾಮಂಡಲೇಶ್ವರನಾಗಿದ್ದುದು ಸು. ೧೦೬೫ ರಿಂದ ೧೦೬೮–೬೯ರ ಮಧ್ಯಕಾಲದ ವರೆಗೆ. ಲಕ್ಷ್ಮಣರಾಜನು ಬನವಾಸಿಗೆ ಬರುವ ಮುನ್ನವೇ

ಕವಿಯು ತನ್ನ ಕೃತಿಯನ್ನು ರಚಿಸಿರಬೇಕಾದುದರಿಂದ ಆ ಕಾವ್ಯ ಸು. ೧೦೬೫ಕ್ಕಿಂತ ಹಿಂದೆಯೇ ಹುಟ್ಟಿರಬೇಕು ಎಂದು ಡಿ.ಎಲ್.ಎನ್. ತೀರ್ಮಾನಿಸುವರು. ನಗರದ ೫೬, ೫೮ನೆಯ ಶಾಸನಗಳ ಕರ್ತೃವಾದ ಮಲ್ಲಿನಾಥನು ನಗರದ ೫೭ನೆಯ ಶಾಸನದಲ್ಲಿ ಬರುವ ದಿವಾಕರಣಂದಿ ಸ್ತುತಿ ಪದ್ಯವನ್ನು ರಚಿಸುವಲ್ಲಿ ಶಾಂತಿನಾಥನ 'ಸುಕುಮಾರ ಚರಿತ'ದ ೧.೨೬ನೆಯ ಪದ್ಯದ ಅನುಕರಣೆ ಮಾಡಿರಬೇಕೆಂದೂ 'ಸುಕುಮಾರ ಚರಿತ'ವು ೧೦೬೨ಕ್ಕಿಂತ ಹಿಂದೆ ಅಂದರೆ, ಸು. ಕ್ರಿ.ಶ. ೧೦೬೦ರಲ್ಲಿ ರಚಿತವಾಗಿರಬೇಕೆಂದೂ ಅಭಿಪ್ರಾಯಪಡುವರು ('ಪೀಠಿಕೆ' ಪು. x). ಡಿ.ಎಲ್.ಎನ್, ತಮ್ಮ 'ಪೀಠಿಕೆ'ಯಲ್ಲಿ ವಿಸ್ತಾರವಾಗಿ ಕೃತಿಯ ಕಥಾಸಾರವನ್ನು ಕೊಟ್ಟಿರುವರು. ಸುಕುಮಾರಸ್ವಾಮಿಯ ಕಥೆ ಜೈನಸಾಹಿತ್ಯದಲ್ಲಿ ಪ್ರಸಿದ್ಧವಾಗಿದ್ದು, ಶಾಂತಿನಾಥನಿಗಿಂತ ಹಿಂದೆ ಪ್ರಾಕೃತದಲ್ಲಿ ಕೆಲವು ಕೃತಿಗಳು ಬಂದಿದ್ದುವು. ಅವನು ಕೃತಿರಚನೆ ಮಾಡುವಾಗ ವಡ್ಡಾರಾಧನೆಯ ಸುಕುಮಾರಸ್ವಾಮಿಯ ಕಥೆಯಿಂದ ಸ್ವಲ್ಪ ಉಪಕೃತನಾಗಿರುವನೆಂಬುದನ್ನು ಡಿ.ಎಲ್.ಎನ್. ತೋರಿಸಿಕೊಟ್ಟಿರುವರು ('ಪೀಠಿಕೆ' ಪು. xxxvii – xl). "ಶಾಂತಿನಾಥನು ಸುಕುಮಾರನ ಇಡೀ ಕಥೆಯಲ್ಲಿ ಅವಕಾಶ ದೊರೆತಾಗಲೆಲ್ಲ ವಡ್ಡಾರಾಧನೆಯಲ್ಲಿ ಕಾಣುವ ಸಣ್ಣ ಸಣ್ಣ ಸೂಚನೆಗಳನ್ನು ಅವಲಂಬಿಸಿ ಅವನ್ನು ಪರಿಷ್ಕಾರವಾಗಿ ವಿಸ್ತರಿಸುತ್ತ ಮುಂದುವರಿದಿರುವುದು ಕಾಣುತ್ತದೆ. ಇಷ್ಟೇ ಅಲ್ಲದೆ ವಡ್ಡಾರಾಧನೆಯಲ್ಲಿ ಎಲ್ಲಿಯಾದರೂ ಸಂಗ್ರಹವಾಗಿ ಜಿನತತ್ತ್ವೋಪದೇಶ ಬಂದಿದ್ದರೆ ಅಲ್ಲಿಯೂ ಶಾಂತಿನಾಥನು ವಿಸ್ತರಿಸಿ ಹೇಳಿರುವನು." ಎಂದು ಅವರು ಅಭಿಪ್ರಾಯಪಡುವರು ('ಪೀಠಿಕೆ' ಪು. xli). 'ಸುಕುಮಾರ ಚರಿತೆ'ಗೆ 'ವಡ್ಡಾರಾಧನೆ'ಯೇ ಮೂಲವಾಗಿದ್ದರೂ ಅಲ್ಲಲ್ಲಿ ಕೆಲವು ಉಪಾಖ್ಯಾನಗಳನ್ನು ಶಾಂತಿನಾಥನು ಬಿಟ್ಟಿರುವುದನ್ನು ಡಿ.ಎಲ್.ಎನ್. ಗಮನಿಸಿರುವರು; ಹಾಗೆಯೇ ಕಥೆ ಹೇಳುವಾಗ ಕೆಲವು ನವೀನ ಸನ್ನಿವೇಶಗಳನ್ನೂ ಅವನು ತಂದಿರುವುದನ್ನು ಅವರು ಉಲ್ಲೇಖಿಸಿರುವರು. ವಡ್ಡಾರಾಧನೆಯಲ್ಲಿ ದೊರೆಯುವ ಕೆಲವು ಸೂಚನೆಗಳನ್ನು ಗಮನಿಸಿ ಶಾಂತಿನಾಥನು ಅವನ್ನು ಉಚಿತವಾಗಿ ವಿಸ್ತರಿಸಿರುವುದನ್ನೂ ಅವರು ಹೇಳುವರು. "ವಡ್ಡಾರಾಧನೆಯ ಧ್ವನಿಪೂರ್ಣ ಸಂಕ್ಷಿಪ್ತತೆಯನ್ನು ಸಸಂಯಮ ವಿಸ್ತಾರಕ್ಕೆ ಸವಿಲಾಸದಿಂದ ಪರಿವರ್ತಿಸಿರುವ ಶಾಂತಿನಾಥನ ಕವಿಕಾರ್ಯ ರನ್ನನ ಕವಿಕರ್ಮವನ್ನು ಹಲವು ಬಾರಿ ನೆನಪಿಗೆ ತರುತ್ತದೆ:

ಪಂಪನಿಗೆ ರನ್ನನು ಹೇಗೋ 'ಪದ್ಮಾರಾಧನೆ'ಯ ಸುಕುಮಾರ ಕಥೆಗೆ ಶಾಂತಿನಾಥನು ಬಲುಮಟ್ಟಿಗೆ ಹಾಗೆ" ಎಂಬ ಡಿ.ಎಲ್.ಎನ್. ರವರ ಅಭಿಪ್ರಾಯ ಅರ್ಥಪೂರ್ಣವಾಗಿದೆ (ಪು. lii). ಕೃತಿಯನ್ನು ಹಲವು ದೃಷ್ಟಿಗಳಿಂದ ನೋಡಿ ಸಹೃದಯಪರವಾದ ವಿಸ್ತಾರ ವಿಮರ್ಶೆಯನ್ನು ಡಿ.ಎಲ್.ಎನ್. ಮಾಡಿರುವರು. ಈ ವಿಮರ್ಶೆಯಲ್ಲಿ ಭಾವುಕರಾಗಿ ಡಿ.ಎಲ್.ಎನ್. ಕವಿಯ ಅಂತರಂಗವನ್ನು ಗ್ರಹಿಸುವಲ್ಲಿ ಸಾರ್ಥಕ್ಯವನ್ನು ಹೊಂದಿರುವರು. ಶಾಂತಿನಾಥನ ನಂತರ ಸುಕುಮಾರಸ್ವಾಮಿಯ ಕಥೆಯನ್ನು ಹೇಳಿರುವ ಕೃತಿಗಳ ಪ್ರಸ್ತಾಪವನ್ನೂ ಡಿ.ಎಲ್.ಎನ್. ಮಾಡಿರುವರು. ವ್ಯಾಕರಣ ಛಂದಸ್ಸುಗಳನ್ನು ಪ್ರಸ್ತಾಪಿಸುವಾಗ ರಗಳೆಯ ಬಗೆಗೆ (ಅದರಲ್ಲೂ 'ಪದ್ದಳಿ'ಯ ಬಗೆಗೆ) ಹೇಳುವಾಗ ಅಮೂಲ್ಯವಾದ ಸಂಗತಿ ಪ್ರಸ್ತಾಪಿಸಿರುವರು. ಪದ್ದಳಿಯು ಸಂಸ್ಕೃತದ 'ಪದ್ಧತಿ'ಯಿಂದ ಬಂದಿದೆ; ಪ್ರಾಕೃತದಲ್ಲಿ 'ಪದ್ದಡಿ' ಎಂಬ ರೂಪವಾಗಿ ಅದರ ವಿಕಾರವೇ 'ಪದ್ದಳಿ'. ಪ್ರಾಕೃತದಲ್ಲಿರುವ ಮಾತ್ರಾವೃತ್ತ 'ಪಜ್ಝಟಿಕಾ' ಎಂಬುದಕ್ಕೂ 'ಪದ್ಧತಿಕಾ' ಎಂಬುದೇ ಮೂಲ. ಹೀಗೆ ಅಭಿಪ್ರಾಯಪಡುವ ಡಿ.ಎಲ್.ಎನ್. 'ಪಜ್ಝಟಿಕೆ'ಯ ಲಕ್ಷಣವನ್ನು ವಿವರಿಸಿರುವರು. ಬಹಳ ಅಮೂಲ್ಯವಾದ ಈ ಸಂಗತಿ ಇಲ್ಲಿ ವಿವರಣೆಗೊಂಡಿರುವುದು ಲಕ್ಷಿಸಬೇಕಾದ ವಿಚಾರ.

ಸಿದ್ಧರಾಮ ಚಾರಿತ್ರ

ರಾಘವಾಂಕನ 'ಸಿದ್ಧರಾಮ ಚಾರಿತ್ರ'ವು ಪ್ರೊ. ಟಿ. ಎಸ್. ವೆಂಕಣ್ಣಯ್ಯನವರ ಜೊತೆ ಸೇರಿ ಡಿ.ಎಲ್.ಎನ್. ಸಂಪಾದಿಸಿರುವ ಕೃತಿ. ಶಿವಮೊಗ್ಗದ ಕರ್ಣಾಟಕ ಸಂಘದ ವತಿಯಿಂದ ೧೯೪೧ರಲ್ಲಿ ಪ್ರಕಟವಾದ ಈ ಕೃತಿ ಶಾಸ್ತ್ರೀಯವಾಗಿ ಸಂಪಾದಿತವಾಗಿದೆ. ನಾಲ್ಕು ಪ್ರತಿಗಳ ಸಹಾಯದಿಂದ ಈ ಕೃತಿಯ ಪಾಠವನ್ನು ಪರಿಷ್ಕರಿಸಲಾಗಿದೆ. "ಸಂಪಾದನೆಗೆ ಬಳಸಿಕೊಂಡಿರುವ ಪ್ರತಿಗಳಲ್ಲಿ ಯಾವುದೂ ಸರ್ವ ಶುದ್ಧವಾಗಿಲ್ಲ; ಯಾವ ಒಂದನ್ನೂ ಮೂಲಪಾಠವಾಗಿ ಸ್ವೀಕರಿಸುವ ಹಾಗಿಲ್ಲ. ಯಾವ ಪ್ರತಿಗಳ ಅಥವಾ ಪ್ರತಿಯ ಪಾಠ ಉಚಿತವೆಂದು ಕಂಡುಬಂದಿದೆಯೋ ಅದನ್ನು ಇಲ್ಲಿ ಮೂಲವಾಗಿ ಕೊಟ್ಟಿದೆ. ಅದ್ದರಿಂದ ಈಗ ಮುದ್ರಿತವಾಗಿರುವ ಪಾಠ ಎಲ್ಲ ಪ್ರತಿಗಳ ಗುಣಾಂಶಗಳನ್ನೊಳ

ಗೊಂಡ ಮಿಶ್ರಪಾಠವಾಗಿದೆ (Eclectic text). ದೊರೆತಿರುವ ಪ್ರತಿಗಳು ಅಶುದ್ಧತೆಯಲ್ಲಿ ಒಂದನ್ನೊಂದು ಮೀರಿಸಿರುವುದರಿಂದ ಬೇರೆ ಯಾವ ಕ್ರಮವನ್ನೂ ಪಾಠಶೋಧನೆ ಮಾಡುವಾಗ ಹಿಡಿಯಲು ಸಾಧ್ಯವಾಗಿಲ್ಲ. ಕವಿಯ ಪಾಠ ಯಾವುದಿರಬಹುದೆಂಬುದರ ಅರಿವು ಕೊಂಚಮಟ್ಟಿಗಾದರೂ ಈಗಿನ ಪರಿಷ್ಕರಣದಿಂದುಂಟಾಗುವಂತಿದ್ದರೆ ಸಾಕು. ಅದಷ್ಟು ಮಟ್ಟಿಗೆ ಈ ಧ್ಯೇಯವನ್ನು ಸಾಧಿಸುವ ಪ್ರಯತ್ನ ಮಾಡಿದೆ." ಸಂಪಾದಕರ ಪೀಠಿಕೆಯಲ್ಲಿನ (ಪು. lxiv) ಈ ಮಾತುಗಳು ಕವಿಯ ಮೂಲಪಾಠವನ್ನು ನಿರ್ಣಯಿಸುವಲ್ಲಿ ಸಂಪಾದಕರು ಪಟ್ಟಿರಬಹುದಾದ ಶ್ರಮವನ್ನು ತಿಳಿಯಪಡಿಸುತ್ತವೆ.

ಡಿ.ಎಲ್.ಎನ್.ರವರು ಈ ಕೃತಿಗೆ ಉಪಯುಕ್ತ ಪೀಠಿಕೆಯನ್ನು ಬರೆದಿರುವರು. ಅದರಲ್ಲಿ, ದೊರೆಯಬಹುದಾದ ಎಲ್ಲ ಆಧಾರ ಸಾಮಗ್ರಿಗಳ ಮೇಲಿಂದ ಹರಿಹರ–ರಾಘವಾಂಕರ ಕಾಲನಿರ್ಣಯವನ್ನು ಸಮರ್ಪಕವಾಗಿ ಮಾಡಿರುವರು. ಅವರು ಅಭಿಪ್ರಾಯಪಡುವಂತೆ "ಹರಿಹರನು ಒಂದನೆಯ ನರಸಿಂಹನ ಆಳಿಕೆಯಲ್ಲಿಯೋ ಅವನ ಮಗನಾದ ಎರಡನೆಯ ವೀರಬಲ್ಲಾಳನಲ್ಲಿಯೋ (೧೧೭೭–೧೨೨೦) ಕೆಲವು ವರ್ಷ ಕರಣಿಕನಾಗಿದ್ದು ಹಂಪೆಗೆ ಬಂದು ಅಲ್ಲಿ ನೆಲಸಿ ೧೨೧೦ರ ಸುಮಾರಿಗೆ ಪಂಪಾಶತಕ ಗಿರಿಜಾಕಲ್ಯಾಣಗಳನ್ನು ರಚಿಸಿ ಆಮೇಲೆ ರಗಳೆಗಳನ್ನು ಬರೆದು ಎರಡನೆಯ ನರಸಿಂಹನ ಆಳಿಕೆಯ ಪ್ರಾರಂಭದಲ್ಲಿ ಎಂದರೆ ಸು. ೧೨೨೫ರಲ್ಲಿ ವಿರೂಪಾಕ್ಷನಲ್ಲಿ ಐಕ್ಯವಾದಂತೆ ಊಹಿಸಬಹುದು. ಕೆರೆಯ ಪದ್ಮರಸನೂ ಮೇಲೆ ಹೇಳಿದ ರಾಜರ ಆಳಿಕೆಗಳಲ್ಲಿ ಬಾಳಿದ್ದು ಹರಿಹರನು ಲಿಂಗೈಕ್ಯನಾದ ಸುಮಾರಿನಲ್ಲಿ ಗತಿಸಿರಬೇಕು. ಇವರಿಬ್ಬರಿಗಿಂತಲೂ ೧೫–೨೦ ವರ್ಷಗಳು ಕಿರಿಯವರಾಗಿದ್ದ ರಾಘವಾಂಕ ಕುಮಾರ ಪದ್ಮರಸರು ೧೨೫೪ರ ವರೆಗೂ ಆಳಿದ ವೀರಸೋಮೇಶ್ವರನ ಆಳಿಕೆಯಲ್ಲಿ ಕೆಲವು ವರ್ಷಗಳವರೆಗೂ ಇದ್ದು ಸು. ೧೨೬೦ರಲ್ಲಿ ಗತಿಸಿರಬೇಕು. ಈ ವಿಷಯಗಳನ್ನು ನಿಶ್ಚಿತವಾಗಿ ಹೇಳಲು ತಕ್ಕ ಆಧಾರಗಳು ಸಾಲವಾದರೂ ವಸ್ತುಸ್ಥಿತಿಗೆ ಇದು ಅವಿರೋಧವಾಗಿರುವಂತೆ ಕಾಣುತ್ತದೆ. ರಾಘವಾಂಕನು ತನ್ನ 'ವೀರೇಶ ಚರಿತೆ' ಹೊರತಾದ ಇತರ ಕಾವ್ಯಗಳನ್ನು ೧೨೦೦ರಿಂದ ಈಚೆಗೆ ರಚಿಸಿರಬೇಕೆಂಬ ಪಕ್ಷ ವಿಶ್ವಸನೀಯವೆಂದು ಹೇಳಬಹುದು." (ಪೀಠಿಕೆ, ಪು. xxi–xxii). 'ಸಿದ್ಧರಾಮ ಚಾರಿತ್ರ'ದ ಕಥಾಸಾರವನ್ನು ಕೊಟ್ಟು ಕಥೆಯ ಮೂಲ

ಹಾಗೂ ಅದರ ಬೆಳವಣಿಗೆಯ ಬಗೆಗೆ ಪೀಠಿಕೆಯಲ್ಲಿ ಸವಿಸ್ತಾರವಾಗಿ ಡಿ.ಎಲ್.ಎನ್. ಚರ್ಚಿಸಿರುವರು. ಮೂಲಕಥೆಯು ರಾಘವಾಂಕನಿಗೆ ಹರಿಹರ ಬರೆದಿರಬಹುದಾದ ಸಿದ್ಧರಾಮನನ್ನು ಕುರಿತ ರಗಳೆಯಿಂದ ದೊರೆತಿರಬಹುದೆಂದೂ, ಸಿದ್ಧರಾಮನ ಬದುಕಿನ ಕೆಲವು ವಿವರಗಳು ಜನರ ಬಾಯಲ್ಲಿದ್ದುದನ್ನು ರಾಘವಾಂಕ ಕೇಳಿ ಅವನ್ನು ತನ್ನ ಕೃತಿಯಲ್ಲಿ ಬಳಸಿಕೊಂಡಿರಬಹುದೆಂದೂ ಅವರು ಊಹಿಸಿರುವರು. ರಾಘವಾಂಕನ ನಂತರ ಬಂದ ವೀರಶೈವ ಕವಿಗಳು ಸಿದ್ಧರಾಮನಿಗೆ ಸಂಬಂಧಿಸಿದ ಕಥೆಗಳನ್ನು (ರಾಘವಾಂಕನಲ್ಲಿ ಇಲ್ಲದಿರುವ ಕೆಲವು ಹೊಸ ಕಥೆಗಳನ್ನು) ತಮ್ಮ ಕೃತಿಗಳಲ್ಲಿ ಹೇಳಿರುವುದನ್ನು ಡಿ.ಎಲ್.ಎನ್. ಪ್ರಸ್ತಾಪಿಸಿರುವರು. ಮೂಲಕಥೆ ಕಾಲದಿಂದ ಕಾಲಕ್ಕೆ ಹೇಗೆ ಬೆಳೆದಿದೆಯೆಂಬುದನ್ನು ಅಲ್ಲಿ ತೋರಿಸಿಕೊಟ್ಟಿರುವರು. ಸಿದ್ಧರಾಮನ ವ್ಯಕ್ತಿತ್ವ ಅಥವಾ ಮೂರ್ತಿಸ್ವರೂಪವೇನೆಂಬುದನ್ನು, ಕವಿಯ ದೃಷ್ಟಿ ಯಾವುದೆಂಬುದನ್ನು ಡಿ.ಎಲ್.ಎನ್. ಸೊಗಸಾಗಿ ನಿರೂಪಿಸಿರುವರು. "ಸಿದ್ಧರಾಮನ ಬಾಯಿಂದಲೇ ಕವಿ ಅವನ ಜೀವನಾದರ್ಶವನ್ನು 'ಸಾಕಾರನಿಷ್ಠೆ ಭೂತಂಗಳೊಳನುಕಂಪೆ ತಾನೆ ಪರಬೊಮ್ಮ' ಎಂದು ಹೇಳಿಸಿದ್ದಾನೆ. ಈ ಸೂತ್ರ ಸಿದ್ಧನ ಬದುಕಿನ ಸಾರ. ಅವನ ಕಥೆ ಇದಕ್ಕೆ ವ್ಯಾಖ್ಯಾನ. ಅಲ್ಲಿ ಬರುವ ಎಲ್ಲ ಸಂದರ್ಭಗಳನ್ನೂ, ಆಖ್ಯಾನಗಳನ್ನೂ ಇದು ಪೋಣಿಸಿ ಕಥೆಯನ್ನು ಮಾಲಾಕಾರವಾಗಿ ಮಾಡಿದೆ" ಎಂದು ಹೇಳುವ ಅವರು ತಮ್ಮ ಆ ಅಭಿಪ್ರಾಯವನ್ನು ಮುಂದೆ ಚೆನ್ನಾಗಿ ವಿವರಿಸಿರುವರು.

'ಪೀಠಿಕೆ'ಯಲ್ಲಿ ಡಿ.ಎಲ್.ಎನ್. ಸಿದ್ಧರಾಮನು ಶೈವನೆಂಬುದನ್ನು ಹಲವು ಆಧಾರಗಳ ಮೂಲಕ ಮಂಡಿಸಿರುವರು. ಈ ಮಾತು ಚರ್ಚೆಗೆ ಗ್ರಾಸವಾಯಿತು. ತಮ್ಮ ಶಿಷ್ಯರೊಬ್ಬರು ಸಿದ್ಧರಾಮನಿಗೆ ಚೆನ್ನಬಸವಣ್ಣನ ಮೂಲಕ ಲಿಂಗದೀಕ್ಷೆಯಾಗಿದ್ದಿತೆಂಬ ವಿಚಾರದಲ್ಲಿ ವಚನವೊಂದನ್ನು ಅವರ ಗಮನಕ್ಕೆ ತಂದಾಗ ಅದನ್ನು ಒಪ್ಪಿಕೊಂಡು ತಮ್ಮ ತಪ್ಪನ್ನು ತಿದ್ದಿಕೊಂಡರು. ಇದು ಅವರ ದೊಡ್ಡಗುಣ. ತಾವು ಹೇಳಿದ್ದೇ ಸರಿ ಎನ್ನುವ ಮೊಂಡುತನ ಅವರದಲ್ಲ. ತಮ್ಮನ್ನು ಟೀಕಿಸಿದವರಿಗೆ ಸೌಜನ್ಯದಿಂದ ಡಿ.ಎಲ್.ಎನ್. ಹೀಗೆ ಉತ್ತರಕೊಟ್ಟಿರುವರು: "ಸಿದ್ಧರಾಮನು ಶೈವನೋ, ವೀರಶೈವನೋ ಎಂಬ ಸಮಸ್ಯೆಯನ್ನು ನಾನು ವಿದ್ವಾಂಸನ ದೃಷ್ಟಿಯಿಂದ ನೋಡಿದೆ. ಎರಡಕ್ಕೂ

ದೊರೆಯುವ ಆಧಾರಗಳನ್ನು ತಿಳಿವಮಟ್ಟಿಗೆ ತೋರಿಸಿ ತಾತ್ಕಾಲಿಕ ತೀರ್ಮಾನವನ್ನು ಹೇಳಿದೆ. ಇದು ತಪ್ಪೇ ಇರಬಹುದು. ಹಾಗೆಂದು ಸ್ಥಾಪಿಸುವ ಆಧಾರಗಳನ್ನು ಕಂಡುಹಿಡಿದು ಹೇಳಬೇಕಲ್ಲವೆ ? ಇದಕ್ಕಾಗಿ ಇನ್ನೂ ಬೆಳಕಿಗೆ ಬಾರದೆ ಅವಿತುಕೊಂಡಿರುವ ಗ್ರಂಥಗಳನ್ನು ಹೊರಕ್ಕೆಳೆಯಲಿ, ಓದಲಿ, ಆಧಾರ ತೋರಿಸಲಿ, ತೀರ್ಮಾನವನ್ನು ಕದಲಿಸಲಿ. ಈ ರೀತಿ ಮಾಡಿದರೆ ವಿದ್ವತ್ತು ಬೆಳೆಯುತ್ತದೆ. ಹೊಸ ವಿಷಯ ವಿದ್ವಾಂಸರಿಗೆ ಸಿಕ್ಕಂತಾಗುತ್ತದೆ. ಕೇವಲ ಟೀಕೆ ಮಾಡಿದರೆ ಏನು ಪ್ರಯೋಜನ ? ಸಿದ್ಧರಾಮನಂಥ ಮಹಾವ್ಯಕ್ತಿ ಯಾವ ಸಮಾಜಕ್ಕೆ ಸೇರಿದರೂ ಅದಕ್ಕೆ ಘನತೆ ಗೌರವವುಂಟಾಗುತ್ತದೆ. ಇಂಥ ಸಮಾಜಕ್ಕೆ ಸೇರಿದವನು ಅವನು ಎಂಬಷ್ಟರಿಂದಲೇ ವ್ಯಕ್ತಿಗೆ ಮಹತ್ವ ಬರುತ್ತದೆಯೆ ? ಆ ಮಹಾತ್ಮ ನಮ್ಮ ಪುಣ್ಯದಿಂದ ತನ್ನ ಸಮಾಧಿಯಿಂದ ಇಂದು ಎದ್ದುಬಂದರೆ ಅವನ ಪಾದಕ್ಕೆ ತಲೆಯನ್ನು ಚಾಚುವ ಮೊದಲ ಸರದಿ ನನ್ನ ಪಾಲಿಗಿರಲಿ. ಇಷ್ಟು ಭಕ್ತಿಗೌರವಗಳು ನನಗೆ ಆತನಲ್ಲುಂಟು. ಮೇಲಿನ ಸಮಸ್ಯೆ ವಿದ್ವತ್ತಿನ ಸಮಸ್ಯೆ. ಅದನ್ನು ವಿದ್ವಾಂಸನ ದೃಷ್ಟಿಯಿಂದ ನೋಡಿ ಎಂದು ವಿನಮ್ರನಾಗಿ ಬೇಡುತ್ತೇನೆ. ಸರಸ್ವತಿಯ ರಾಜ್ಯದಲ್ಲಿ ಜಾತೀಯತೆ, ಮತೀಯತೆಗಳಿಗೆ ಸ್ಥಾನವಿಲ್ಲ. ಅಲ್ಲಮಪ್ರಭು, ನಿಜಗುಣ ಶಿವಯೋಗಿ, ಸಪ್ತಕಾವ್ಯದ ಗುರುಬಸವ—ಈ ಮಹನೀಯರಲ್ಲಿದ್ದ ಉದಾರವೂ, ಸಹನಾಮಯವೂ, ಮಾನವಪ್ರೇಮ ಕಂಪಿತವೂ ಆದ ದೃಷ್ಟಿ ಎಲ್ಲರಿಗೂ ಆದರ್ಶವಾಗಿರಲಿ. ಒಟ್ಟಿನಲ್ಲಿ ಕವಿ, ವಿಮರ್ಶಕ, ಜಾತೀಯತೆ—ಈ ವಿಷಯಗಳಿಗೆ ಸಂಬಂಧಿಸಿದ ಮನಃಕಷಾಯಗಳು ತೊಲಗಿ ಶುದ್ಧ ವಾಯುಗುಣ ನೆಲೆಗೊಂಡ ಹೊರತು ಕನ್ನಡ ಸಾಹಿತ್ಯ ವಿಮರ್ಶೆ ಬೆಳೆಯಲಾರದು."[1]

ಡಿ.ಎಲ್.ಎನ್. ಅಲ್ಲಮನ ಪಾತ್ರವನ್ನು ಕುರಿತು ಬರೆಯುತ್ತಾ "ಅವನು (=ಅಲ್ಲಮನು) ವ್ಯಕ್ತಿವಾದಿ; ತನ್ನ ಸುಖವನ್ನು ತಾನು ಗಳಿಸಿಕೊಂಡರೆ ಸಾಕೆಂದು ಅವನ ಸಿದ್ಧಾಂತ. ಸಿದ್ಧನು ಸಮಾಜವಾದಿ: ಸಮಾಜದ ಯೋಗಕ್ಷೇಮದಲ್ಲಿ ವ್ಯಕ್ತಿ ಭಾಗವಹಿಸಬೇಕೆಂದು ಅವನ ದೃಷ್ಟಿ. ಅಲ್ಲಮನು ತನ್ನ ಸಂಕುಚಿತವಾದ ಮನಸ್ಸನ್ನು ತಿಳಿದು ಸಿದ್ಧನನ್ನು ಶ್ಲಾಘಿಸಿ ಹೇಳುತ್ತಾನೆ."

---

1 ನಲವತ್ತೆರಡನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಿಂದ.

ಎಂದಿರುವರು.[1] ಇದನ್ನು ಒಪ್ಪದ ಎಂ. ಆರ್. ಶ್ರೀನಿವಾಸಮೂರ್ತಿಯವರು 'ಸಿದ್ಧರಾಮಚಾರಿತ್ರ'ದ ಅಲ್ಲಮಪ್ರಭು ಎಂಬ ತಮ್ಮ ಲೇಖನದಲ್ಲಿ[2] ರಾಘವಾಂಕನು ಅಲ್ಲಮನ ಸಂಕುಚಿತ ಮನೋಭಾವವನ್ನಾಗಲೀ ನಿಷ್ಕರುಣೆಯನ್ನಾಗಲೀ ತೋರಿಸುವುದಕ್ಕೆ ಪ್ರಯತ್ನಪಟ್ಟಿಲ್ಲವೆಂದೂ ಸಿದ್ಧರಾಮನ ವಾದವನ್ನು ಅಲ್ಲಮನು ಒಪ್ಪಿಕೊಂಡು ಹೊಗಳಿ ಹೋದಂತೆ ನಿರೂಪಿಸುವುದು ರಾಘವಾಂಕನ ಆಶಯವಲ್ಲವೆಂದೂ ಸಾಧಾರಪೂರ್ವಕವಾಗಿ ಪ್ರತಿಪಾದಿಸಿದರು. ಡಿ.ಎಲ್.ಎನ್. ಅದನ್ನು ಮುಕ್ತಕಂಠದಿಂದ ಒಪ್ಪಿಕೊಂಡು ತಮ್ಮ 'ಸಿದ್ಧರಾಮ ಚರಿತೆಯ ಸಂಗ್ರಹ'ದ 'ಮುನ್ನುಡಿ'ಯಲ್ಲಿ ಎಂ.ಆರ್.ಶ್ರೀ.ಯವರ ಲೇಖನವನ್ನು ನಿರ್ದೇಶಿಸಿ "ಸಿದ್ಧರಾಮನ ಬಾಳಿಗೆ ತಕ್ಕುದಾದ ಮುಕ್ತಾಯವನ್ನು ಅಲ್ಲಮ ಕರುಣೆಯಿಂದ ತೋರಿಸಿದ್ದಾನೆ" ಎಂದು ತಮ್ಮ ಅಭಿಪ್ರಾಯವನ್ನು ತಿದ್ದಿಕೊಂಡರು. ಇಂತಹ ತೆರೆದಮನಸ್ಸಿನ ಔದಾರ್ಯ, ಸಜ್ಜನಿಕೆ ಎಷ್ಟು ಮಂದಿ ವಿದ್ವಾಂಸರಲ್ಲಿದೆ !

'ಸಿದ್ಧರಾಮ ಚಾರಿತ್ರ'ವನ್ನು ಉತ್ಕೃಷ್ಟವಾದ ವೀರಶೈವ ಪುರಾಣವೆಂದು ಧೈರ್ಯವಾಗಿ ಹೇಳಬಹುದೆನ್ನುವ ಡಿ.ಎಲ್.ಎನ್. "ವೀರಶೈವ ಪುರಾಣ ಪದ್ಧತಿಗೆ ಈ ಕಾವ್ಯ ಮೇಲ್ಪಂಕ್ತಿ. 'ಚೆನ್ನಬಸವ ಪುರಾಣ'ದಂಥ ಇತರ ಕಾವ್ಯಗಳು ರಾಘವಾಂಕನ ಪದ್ಧತಿಯನ್ನೇ ಹಿಡಿದು ಸಾಗಿದ್ದರೆ ಅವುಗಳ ಬೆಲೆ ಏರುತ್ತಿತ್ತು" ಎಂದಿರುವರು (ಪೀಠಿಕೆ, ಪು. lx). ಇದು ಬೆಲೆಬಾಳುವ ಮಾತು; ಎಲ್ಲರೂ ಒಪ್ಪುವ ಮಾತು.

ಡಿ.ಎಲ್.ಎನ್. 'ಸಿದ್ಧರಾಮ ಚಾರಿತ್ರ ಸಂಗ್ರಹ'ವನ್ನೂ ಹೊರತಂದಿರುವರು. ಮೂಲಕಾವ್ಯವನ್ನು ಓದಲು ಸಾಧ್ಯವಾಗದವರಿಗಾಗಿ, ವಿದ್ಯಾರ್ಥಿಗಳಿಗಾಗಿ ಈ ಸಂಗ್ರಹವನ್ನು ತಂದಿರುವರು. ಸಂಗ್ರಹದಲ್ಲಿ ಮೂಲಕಾವ್ಯದ ಸೊಗಸು ಮುಕ್ಕಾಗದಂತೆ, ಪ್ರಮುಖ ಭಾಗ ಬಿಟ್ಟುಹೋಗದಂತೆ, ಕಥಾನಾಯಕನ ವ್ಯಕ್ತಿತ್ವ ಮಸುಳಿಹೋಗದಂತೆ ಪ್ರಯತ್ನಿಸಿರುವುದು ಮೆಚ್ಚಬೇಕಾದ

1 ಸಿದ್ಧರಾಮ ಚಾರಿತ್ರ, ಪೀಠಿಕೆ, ಪು. lviii (೧೯೭೫).

2 ನೋಡಿ : ಸಾಹಿತ್ಯಾಲೋಕ (ಎಂ.ಆರ್.ಶ್ರೀ. ಅವರ ಲೇಖನ ಸಂಪುಟ) ಪು. ೯೯–೧೧೫

ಸಂಗತಿ. ಸಂಗ್ರಹದಲ್ಲಿ ಮೂಲದ ಒಂದು ಪದ್ಯದ ಪೂರ್ವಾರ್ಧವನ್ನು ಇನ್ನೊಂದು ಪದ್ಯದ ಉತ್ತರಾರ್ಧದೊಡನೆ ಸೇರಿಸಿ ಪ್ರಾಸಕ್ಕೆ, ಅರ್ಥಕ್ಕೆ ಭಂಗ ಬರದಂತೆ ಜೋಡಿಸಿರುವುದು ಕವಿಯ ಕಾರಯಿತ್ರೀ ಪ್ರತಿಭೆಗೆ ಮಾತ್ರ ಸಾಧ್ಯವಾಗುವಂತಹದು.

ಗೋವಿನ ಹಾಡು

ಜನಪದ ಕಾವ್ಯವೊಂದನ್ನು ಹೇಗೆ ಸಂಪಾದಿಸುವುದು? ಲಿಖಿತ ಪರಂಪರೆಗೆ ಒಳಗಾದ ನಮ್ಮ ಕನ್ನಡ ಕವಿಗಳ ಕೃತಿಗಳನ್ನು ಅವುಗಳ ಲಬ್ಧ ಹಸ್ತಪ್ರತಿಗಳ ಸಹಾಯದಿಂದ ಸಂಪಾದಿಸಬಹುದು. ಆದರೆ ಅಲಿಖಿತ, ಕವಿ ಯಾರೆಂಬುದು ತಿಳಿಯದ, ವಾಗ್‌ಪರಂಪರೆಗೆ ಒಳಗಾದ, ಪ್ರಾದೇಶಿಕ ಪಾಠಗಳನ್ನೊಳಗೊಂಡ ಜನಪದಕಾವ್ಯವನ್ನು ಹೇಗೆ ಸಂಪಾದಿಸುವುದು? ಇದು ಬಹಳ ಕಷ್ಟದ ಕೆಲಸ. 'ಗೋವಿನ ಹಾಡು' ಜನಪದ ಲಘುಕಾವ್ಯವನ್ನು ಸಂಪಾದಿಸುವ ಮೂಲಕ ಡಿ.ಎಲ್.ಎನ್. ಮುಂದಿನವರಿಗೆ ಒಂದು ಮಾದರಿಯಾಗಿರುವರು. ಡಿ.ಎಲ್.ಎನ್. ಗೋವಿನ ಹಾಡಿನ ಕಥೆ ಹಾಡಿನ ರೂಪದಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಹೇಗೆ ಪ್ರಚಾರದಲ್ಲಿದೆಯೆಂಬುದನ್ನು ಅಭ್ಯಾಸಮಾಡಿ (ಬೇರೆ ಬೇರೆ ಕಡೆ ಪ್ರಚಾರದಲ್ಲಿರುವ ಗೋವಿನ ಹಾಡನ್ನು ಸಂಗ್ರಹಿಸಿ) ಅವುಗಳ ಪಾಠಾಂತರಗಳನ್ನು ಗಮನಿಸಿ, ಮೂಲದಲ್ಲಿ ಅದು ಹೇಗಿರಬಹುದೆಂಬುದನ್ನು ತೋರಿಸಿಕೊಟ್ಟಿರುವರು.

ಮುನ್ನುಡಿಗಳು

ಡಿ.ಎಲ್.ಎನ್. ತಮ್ಮ ಮಿತ್ರರು ಹಾಗೂ ಶಿಷ್ಯರು ಬರೆದ ಕೃತಿಗಳಿಗೆ 'ಮುನ್ನುಡಿ' ಬರೆದಿರುವರು. ಅವರು ಕೆ. ಎಸ್. ನರಸಿಂಹಸ್ವಾಮಿಯವರ 'ಶಿಲಾಲತೆ' ಕವನ ಸಂಕಲನಕ್ಕೆ ಬರೆದಿರುವ 'ಮುನ್ನುಡಿ' ಬಹಳ ಪ್ರಸಿದ್ಧವಾದುದು (ಇವರ ಬಗೆಗೆ ಈ ಕೃತಿಯಲ್ಲಿ ಪ್ರಸ್ತಾಪಿಸಲಾಗಿದೆ). ಎಚ್. ದೇವೀರಪ್ಪನವರ 'ಶರಣಚರಿತ ಮಾನಸಂ' ಕೃತಿಗೆ ಬರೆದಿರುವ 'ಮುನ್ನುಡಿ'ಯೂ ಹಲವು ದೃಷ್ಟಿಗಳಿಂದ ಮುಖ್ಯವಾಗಿದೆ. ಹರಿಹರ ಡಿ.ಎಲ್.ಎನ್. ಅವರ ಮೆಚ್ಚಿನ ಕವಿ. ಈ ಕೃತಿಗೆ ಮುನ್ನುಡಿ ಬರೆಯುವುದಕ್ಕೆ ಎರಡು ಮುಖ್ಯ ಕಾರಣಗಳಿರುವುದನ್ನು ಡಿ.ಎಲ್.ಎನ್. ಹೇಳುವರು : "ಹರಿಹರನ ಕೃತಿಗಳ ವಿಷಯವಾಗಿ ಎಚ್. ದೇವೀರಪ್ಪನವರು ನಡೆಸಿರುವ ದೀರ್ಘಕಾಲಿಕವೂ ವಿಸ್ತಾರವೂ ಆದ ಅಧ್ಯಯನದ ಫಲ ಈ ಗ್ರಂಥವಾಗಿರುವುದರಿಂದ ಅದರಲ್ಲಿ ಸಮಾವೇಶಗೊಂಡಿರುವ ವಿಷಯಗಳ ವೈಪುಲ್ಯಕ್ಕೆ ಹೊಸದಾಗಿ ಏನನ್ನೂ ಸೇರಿಸಬೇಕಾದ್ದು ಇಲ್ಲ. ಆದರೆ ಅವರು ಮಾಡಿರುವ ಕೆಲಸದ ಸ್ವರೂಪವನ್ನು ತಿಳಿಸಿ ಅದರ ಬಗ್ಗೆ ಒಂದೆರಡು ಮೆಚ್ಚಿಕೆಯ ಮಾತುಗಳನ್ನು ಹೇಳುವುದು ನನ್ನ ಸಂತೋಷದ ಕರ್ತವ್ಯವಾಗಿದೆ. ಅಲ್ಲದೆ ನನ್ನ ಮೆಚ್ಚಿನ ಕನ್ನಡ ಕವಿಗಳಲ್ಲಿ ಹರಿಹರ ಅಗ್ರಶ್ರೇಣಿಗೆ ಸೇರಿದವನಾಗಿದ್ದಾನೆ ; ಅವನ ಕಾವ್ಯಗಳನ್ನು ಓದಿ ಓದಿಸಿ ಅನೇಕ ರಸನಿಮಿಷಗಳನ್ನು ಅನುಭವಿಸಿದ್ದೇನೆ, ಅವನ ಭಕ್ತಿಯ ಆವೇಶ ನನ್ನ ಹೃದಯವನ್ನು ಹೊಕ್ಕು ಅನುಭಾವದ ಅಲೆಗಳನ್ನು ಚಿಮ್ಮಿಸಿದೆ. ಇದಕ್ಕಾಗಿ ನಾನು ಹರಿಹರನಿಗೆ ಸಲ್ಲಿಸಬೇಕಾದ ಪೂಜೆಯನ್ನು ಈ ಮುನ್ನುಡಿಯ ಮೂಲಕ ಮಾಡಲು ದೊರೆತಿರುವ ಅವಕಾಶವನ್ನು ಬಿಡಲಾರದವನಾಗಿದ್ದೇನೆ."

ತಮ್ಮ ಕೃತಿಗೆ ಎಚ್. ದೇವೀರಪ್ಪನವರು ಬರೆದಿರುವ ಸುಮಾರು 300 ಪುಟಗಳಷ್ಟು ದೀರ್ಘವಾದ ಪೀಠಿಕೆಯನ್ನು ಮೆಚ್ಚಿರುವ ಡಿ.ಎಲ್.ಎನ್. ಅದು

'ಒಂದು ಸ್ವತಂತ್ರ ಗ್ರಂಥದ ಮೌಲ್ಯವನ್ನುಳ್ಳದ್ದಾಗಿದೆ' ಎಂದಿದ್ದಾರೆ. ಹರಿಹರನ ಕಾಲ, ರಗಳೆಗಳ ಸಂಖ್ಯಾ ನಿರ್ಣಯ—ಇವುಗಳ ಬಗೆಗೆ ದೇವೀರಪ್ಪನವರು ತಳೆದಿರುವ ನಿಲುವನ್ನು ಡಿ.ಎಲ್.ಎನ್. ಪ್ರಶ್ನಿಸುವುದಿಲ್ಲ. ಹರಿಹರನು ರಚಿಸಿರುವ ಪುರಾತನರ ರಗಳೆಗಳ ಸಂಖ್ಯೆ ೨೪ ಮಾತ್ರವೆಂದೂ ಇತರ ರಗಳೆಗಳ ಸಂಖ್ಯೆ ೩೭ ಮಾತ್ರವೆಂದೂ ತೀರ್ಮಾನಿಸುವ ದೇವೀರಪ್ಪನವರ ವಾದದ ಬಗೆಗೆ ವಿಚಾರ ಮಾಡುತ್ತಾ ಹೀಗಾದರೆ ಉಳಿದ ೩೯ ಪುರಾತನ ರಗಳೆಗಳ ಕರ್ತೃತ್ವ ಯಾರು ಯಾರಿಗೆ ಸೇರುತ್ತದೆ ? ಎಂಬ ಪ್ರಶ್ನೆ ಎತ್ತಿದ್ದಾರೆ. ಈ ಸಮಸ್ಯೆಯ ಮೇಲೆ ಬೆಳಕು ಚೆಲ್ಲಲು ಸುರಂಗಕವಿಯ 'ತ್ರಿಷಷ್ಟಿ ಪುರಾತನ ವಿಳಾಸ', ಗುಬ್ಬಿಯ ಮಲ್ಲಣಾರ್ಯನ 'ಪುರಾತನ ರಗಳೆ' (ಅನುಪಲಬ್ಧ ಕೃತಿ), ವೀರಭದ್ರ ಕವಿಯ 'ಅರುವತ್ತುಮೂವರ ಚರಿತ್ರೆ', ಶಿವಯೋಗಿ ಸೋಮೇಶನ 'ಅರುವತ್ತು ಮೂವರ ಸಾಂಗತ್ಯ'—ಈ ಕೃತಿಗಳು ನೆರವಾಗಬಹುದು. ಎಚ್. ದೇವೀರಪ್ಪ ನವರು ಹೇಳುವ ಹರಿಹರನ ಪುರಾತನರ ರಚನೆಗಳ ಸಂಖ್ಯೆ ೨೪ ಎಂಬ ನಿರ್ಣಯ ತಾತ್ಕಾಲಿಕವಾದುದೆಂದು ಅವರು ಹೇಳುವರು. ಪೀಠಿಕೆಯಲ್ಲಿ ಕಥಾ ಸಮೀಕ್ಷೆಯ ವಿಭಾಗ. ಸಹಜವಾಗಿಯೇ ಬಹುಭಾಗವನ್ನು ಆಕ್ರಮಿಸಿಕೊಂಡಿ ರುವುದನ್ನು ಅವರು ಗಮನಿಸಿರುವರು. ಕೃತಿ ಪರೀಕ್ಷಣ ವಿಭಾಗದಲ್ಲಿ ಸಂಪಾದಕರ ಆರ್ದ್ರತೆ, ಅಭಿರುಚಿ; ರಸಿಕತೆ, ಕಲಾದೃಷ್ಟಿ ಮುಂತಾದುವು ಅಭಿವ್ಯಕ್ತವಾಗಿದೆಯೆಂದು ಅವರು ಹೇಳುವರು.

ರಗಳೆಗಳ ರಮಣೀಯತೆಯನ್ನು ದೇವೀರಪ್ಪನವರು ಅನುಭವಿಸಿದ್ದಾರೆ ಎಂದು ಹೇಳುವ ಅವರು "ಎಷ್ಟೇ ಪ್ರಶಂಸೆ ಮಾತುಗಳನ್ನು ಹೇಳಿದರೂ ರಗಳೆಗಳ ಲಾವಣ್ಯವನ್ನು ಪೂರ್ತಿ ಹೇಳಿದಂತಾಗುವುದಿಲ್ಲ. ಮಾತುಗಳಿಗೆ ಮೀರಿದ, ಅನುಭವೈಕ ವೇದ್ಯವಾದ, ಚಿತ್ತ ಸಂಸ್ಕಾರ ಗೋಚರವಾದ, ಒಂದು ಅನಂತತೆ ಈ ರಗಳೆಗಳಲ್ಲಿ ಇರುವುದು ಅವುಗಳ ಅತಿಶಯತೆಗೆ ಕಾರಣ. ವಾಚಕರೂ ವಿಮರ್ಶಕರೂ ತಂತಮ್ಮ ಶಕ್ತಿಗನುಗುಣವಾಗಿ ಈ [illegible] ಲ್ಲಿ ಪಾಲುಗೊಳ್ಳಬಹುದು. ಎಲ್ಲಾ ರಗಳೆಗಳಲ್ಲಿಯೂ ಬರುವ ವಿರೂಪಾಕ್ಷ ಶಿವನ ಲೀಲೆಗಳನ್ನು ಧ್ಯಾನಗಮ್ಯ ಮಾಡಿಕೊಂಡಾಗ ಅಚಿಂತ್ಯಾದ್ಭುತ ವಿಸ್ಮಯಾನಂದ ಗಳಲ್ಲಿ ನಮ್ಮ ತನ ಕರಗಿಹೋಗುತ್ತದೆ ; ಚಿತ್ತವು ವ್ಯೋಮವಿಹಾರಿಯಾಗುತ್ತದೆ ; ಮನಸ್ಸು ಪ್ರಫುಲ್ಲವಾಗಿ ಹೊಸ ಕಂಪನ್ನು ಸೂಸುತ್ತದೆ. ಎಂಥ ವಿಮರ್ಶೆ

ಯಾಗಲಿ ಮೂಲಕಾವ್ಯದ ರಸಸ್ರೋತವನ್ನು ಅಳಿದು ಮುಗಿಸಲಾರದು, ಅದರ ಸ್ಥಾನಕ್ಕೆ ವಿಮರ್ಶೆ ಏರಲಾರದು. ಆ ನಿಟ್ಟಿನಲ್ಲಿ ಅದು ನಮ್ಮನ್ನು ಸ್ವಲ್ಪ ದೂರ ಕರೆದುಕೊಂಡು ಹೋಗಬಲ್ಲುದು ; ಆಮೇಲೆ ನಮ್ಮನ್ನು ಅಲ್ಲಿಯೇ ಬಿಟ್ಟು ತಾನು ಹಿಂಜರಿಯುತ್ತದೆ, ಇನ್ನು ಮುಂದೆ ನೀನುಂಟು, ನಿನ್ನ ಸಂಸ್ಕಾರ ವುಂಟು ಎಂದು ಹೇಳಿ. ಆದ್ದರಿಂದ ವಿಮರ್ಶೆಯಷ್ಟನ್ನೇ ಓದಿ ತೃಪ್ತಿಪಡದೆ ರಗಳೆಗಳನ್ನು ಒಂದು ಸಲವಲ್ಲ, ಹತ್ತು ಸಲವಾದರೂ ಓದಬೇಕಾದ ಇನಿಯ ಕರ್ತವ್ಯವುಂಟು" ಎಂದು ಅಭಿಪ್ರಾಯಪಡುವರು.

ಹರಿಹರನ ರಗಳೆಗಳ ತುಲನಾತ್ಮಕ ವಿಮರ್ಶೆಯ ಅಗತ್ಯವನ್ನು ಒತ್ತಿ ಹೇಳುವ ಡಿ.ಎಲ್.ಎನ್. ಹರಿಹರನಿಗಿಂತ ಸ್ವಲ್ಪ ಹಿಂದಿನವನಾದ ಶೇಕ್ಕಿಳಾರನ ಪೆರಿಯಪುರಾಣದಲ್ಲಿ ಬರುವ ನಾಯನ್ಮಾರರ ಕಥೆ ಹಾಗೂ ಹರಿಹರನಲ್ಲಿ ಬರುವ ಪುರಾತನರ ಕಥೆ ಇವುಗಳ ತೌಲನಾತ್ಮಕ ವಿಮರ್ಶೆಯಾಗಬೇಕೆನ್ನುವರು. ಇದು ಸರಿಯಲ್ಲ. ಏಕೆಂದರೆ, ಹರಿಹರ ಶೇಕ್ಕಿಳಾರನ 'ಪೆರಿಯಪುರಾಣ'ವನ್ನು ಅನುಸರಿಸಿಲ್ಲ, ಬಾಯಿಮಾತಿನಲ್ಲಿ ಆಗ ಪ್ರಚಲಿತವಿದ್ದ ಪುರಾತನರ ಕಥೆಗಳನ್ನು ಆತ ಕೃತಿರಚನೆಗೆ ಆಧರಿಸಿರುವನು.

ಪೀಠಿಕೆಯಲ್ಲಿ ಸಂಪಾದಕರು ಪ್ರಸ್ತಾಪಿಸಿರುವ ವರ್ಣನೆ, ಶೈಲಿ, ಛಂದೋ ವಿಚಾರ—ಇವನ್ನು ಹಾಗೂ ಅನುಬಂಧದಲ್ಲಿ ಬರುವ ವಿವರಗಳನ್ನೂ ಮೆಚ್ಚಿ ಕೊಂಡ ಡಿ.ಎಲ್.ಎನ್. ಬಾಯ್ತುಂಬ ಹೊಗಳಿರುವರು. ಹರಿಹರನ ಬಗೆಗೆ ಅವರಿಗೆ ಎಷ್ಟು ಹೇಳಿದರೂ ಕಡಿಮೆಯೇ : "ಹರಿಹರ ಭಕ್ತಿಪ್ರಪಂಚ ವಿಹಾರಿ ; ಅವನ ಕಾವ್ಯಕಲೆ ಭಕ್ತಿಯ ಒಂದು ಉಪಾಸನಾಮಾರ್ಗ. ಅವನ ದೃಷ್ಟಿ ಅಖಿಲ ಭರತಖಂಡ ವ್ಯಾಪ್ತಿಯುಳ್ಳದ್ದು. ಕಾಶ್ಮೀರದಿಂದ ರಾಮೇಶ್ವರದವರೆಗೆ ಅವನ ದೃಷ್ಟಿ ಪಸರಿಸಿ ಶೈವಭಕ್ತರನ್ನು ಅರಸಿಕೊಂಡುಬಂದಿದೆ. ಸಾತ್ವಿಕ ರಾಜಸ ತಾಮಸ ಭಕ್ತಿಸ್ವರೂಪಗಳೆಲ್ಲ ಅವನ ರಗಳೆಗಳಲ್ಲಿ ಮೂರ್ತಿಗೊಂಡಿವೆ. ಸತಿಪತಿ ಭಾವ, ದಾಸ್ಯರಸನಿಧಿಯಾದ ಸ್ವಾಮಿ ಭೃತ್ಯ ಭಾವ ಮೊದಲಾದ ಎಲ್ಲ ಭಾವ ಗಳಿಗೂ ಅವನ ರಗಳೆಗಳಲ್ಲಿ ಎಡೆ ದೊರೆತಿದೆ. ಲೌಕಿಕ ಪ್ರಪಂಚದ ಎಲ್ಲ ವಸ್ತು ಗಳೂ ಎಲ್ಲಾ ಕಾರ್ಯಗಳೂ ಅವನಿಗೆ ಭಕ್ತಿಯ ಉದ್ದೀಪನ ಸಾಮಗ್ರಿಗಳು. ಏಕೆಂದರೆ ಎಲ್ಲವೂ ವಿರೂಪಾಕ್ಷಮಯವಾದುವು. ಭಕ್ತಿ ಪ್ರಪಂಚದ ವಿಸ್ತೀರ್ಣ ವನ್ನೂ ಅದರ ಸಂದುಗೊಂದುಗಳನ್ನೂ ಇವನಂತೆ ಹೊಕ್ಕು ಸುಳಿದಾಡಿ

ಸಲವೇರಿ ಪ್ರಾಸಾದಿಕವಾಣಿಯಿಂದ ಕಲಾಮಯವಾಗಿ ನಿರೂಪಿಸಿರುವ ಬೇರೊಬ್ಬ ಕನ್ನಡ ಕವಿಯಿಲ್ಲ. ಇವನ ಕಾವ್ಯಗಳು ಸನತ್ಕುಮಾರನಂತೆ ಶಾಶ್ವತ ಯೌವನದಿಂದ ಕಂಗೊಳಿಸುತ್ತವೆ; ವಿಶ್ವವ್ಯಾಪಕ ಗುಣದಿಂದ ಅಮರವಾಗಿವೆ; ಕನ್ನಡ ಕಲಾಸಿದ್ಧಿಯ ರನ್ನಕಲಶಗಳಾಗಿವೆ."

ತಮ್ಮ ವಿಮರ್ಶೆಯ ಕೊನೆಯಲ್ಲಿ ದೇವೀರಪ್ಪನವರು ಮಾಡಿರುವ ಸ್ತುತ್ಯವಾದ ಹರಿಹರ ಸೇವೆಯನ್ನು ಮೆಚ್ಚಿ ಕೊಂಡಾಡಿ ಕನ್ನಡ ಲೋಕ ಅವರನ್ನು ಆದರಿಸಲಿ ಎಂದು ಹಾರೈಸಿರುವರು.

ಟಿ. ವಿ. ವೆಂಕಟಾಚಲಶಾಸ್ತ್ರೀ ಅವರ 'ಕನ್ನಡ ಛಂದಸ್ಸು' ಗ್ರಂಥಕ್ಕೆ ಬರೆದಿರುವ ಮುನ್ನುಡಿಯು ಪರಿಚಯಾತ್ಮಕವಾಗಿದೆ. ಹಂಪ. ನಾಗರಾಜಯ್ಯನವರ 'ಭಾಷಾವಿಜ್ಞಾನ' ಗ್ರಂಥಕ್ಕೆ ಬರೆದಿರುವ ಮುನ್ನುಡಿಯಲ್ಲಿ ಭಾಷಾ ವಿಜ್ಞಾನದ ಆಳವಾದ ಪರಿಚಯ ಸಾಹಿತ್ಯಾಭ್ಯಾಸಿಗಳಿಗೆ ಎಷ್ಟು ಅಗತ್ಯವೆಂಬುದನ್ನು ಕುರಿತು ಕೆಲವು ಸಂಗತಿಗಳನ್ನು ತಿಳಿಯಪಡಿಸಲಾಗಿದೆ. ಒಳ್ಳೆಯ ಶಾಸ್ತ್ರ ಗ್ರಂಥವನ್ನು ಬರೆದ ಲೇಖಕರನ್ನು ಡಿ.ಎಲ್. ಅಭಿನಂದಿಸಿರುವರು.

ಡಾ॥ ಎಸ್. ಎಂ. ಕತ್ರೆಯವರು ೧೯೪೧ರಲ್ಲಿ ಬರೆದ 'ಭಾರತೀಯ ಗ್ರಂಥ ಸಂಪಾದನಾ ಪ್ರವೇಶಿಕಾ' (Introduction to Indian Textual criticism) ಎಂಬ ಆಂಗ್ಲ ಗ್ರಂಥವನ್ನು 'ಭಾರತೀಯ ಗ್ರಂಥಸಂಪಾದನ ಪರಿಚಯ'ವೆಂಬ ಹೆಸರಿನಲ್ಲಿ ಕನ್ನಡಕ್ಕೆ ಎನ್.ಎಸ್. ಲಕ್ಷ್ಮೀನಾರಾಯಣಭಟ್ಟರು ಅನುವಾದ ಮಾಡಿರುವರು. ಆ ಗ್ರಂಥಕ್ಕೆ ಡಿ.ಎಲ್.ಎನ್. ಮುನ್ನುಡಿ ಬರೆದಿರುವರು. ಗ್ರಂಥ ಸಂಪಾದನೆ ಇಂದು ವಿಶ್ವದಾದ್ಯಂತ ಒಂದು ಶಾಸ್ತ್ರವಾಗಿ ಮಾನ್ಯವಾಗಿದೆ. ಈ ಶಾಸ್ತ್ರವನ್ನು ಕುರಿತು ಬರೆದ ಭಾರತೀಯ ವಿದ್ವಾಂಸರಲ್ಲಿ ಡಾ॥ ಎಸ್. ಎಂ. ಕತ್ರೆಯವರು ಮೊದಲಿಗರು. ಈ ಗ್ರಂಥದ ಮಹತ್ವವನ್ನು ಡಿ.ಎಲ್.ಎನ್. ಪ್ರಾರಂಭದಲ್ಲಿ ತಿಳಿಸಿರುವರು. ಈ ಮುನ್ನುಡಿಯಲ್ಲಿ ಡಿ.ಎಲ್.ಎನ್. ಕನ್ನಡ ಗ್ರಂಥಸಂಪಾದನೆ ಕರ್ನಾಟಕದಲ್ಲಿ ಹೇಗೆ ಪ್ರಾರಂಭವಾಯಿತು, ಬೆಳೆಯಿತು, ಸರಕಾರಿ ಹಾಗೂ ಸಾಂಸ್ಕೃತಿಕ ಸಂಸ್ಥೆಗಳು ಗ್ರಂಥ ಪರಿಷ್ಕರಣಕಾರ್ಯದಲ್ಲಿ ನಿರ್ವಹಿಸಿದ ಪ್ರಮುಖ ಪಾತ್ರವೇನು, ಕನ್ನಡ ಗ್ರಂಥಸಂಪಾದನೆಗೆ ನಮ್ಮ ವಿದ್ವಾಂಸರ ಕೊಡುಗೆಯೇನು - ಈ ಎಲ್ಲ ಮುಖ್ಯ ವಿವರಗಳನ್ನು ಡಿ. ಎಲ್. ಎನ್. ಪ್ರಸ್ತಾಪಿಸಿರುವರು. ಕನ್ನಡ

ದಲ್ಲಿ ಗ್ರಂಥಸಂಪಾದನೆ ಬೆಳೆದುಬಂದ ಇತಿಹಾಸ ಇಲ್ಲಿದೆ. ಈ ಕಾರಣಕ್ಕಾಗಿ ಮುನ್ನುಡಿ ಮಹತ್ವದ್ದಾಗುತ್ತದೆ. ಎಸ್. ಎಸ್. ಲಕ್ಷ್ಮೀನಾರಾಯಣಭಟ್ಟರ ತರ್ಜುಮೆಯು ಕಾರ್ಯ ತುಂಬ ಸಮರ್ಪಕವಾಗಿದೆಯೆಂದೂ ಪ್ರಾಚೀನ ಗ್ರಂಥಗಳನ್ನು ಪರಿಶೋಧಿಸಿ ಸಂಪಾದನ ಮಾಡಲು ಇಷ್ಟಪಡುವವರಿಗೆಲ್ಲ ಈ ಗ್ರಂಥ ಪ್ರಮಾಣಭೂತವಾದ ಕೈಪಿಡಿಯೆಂದೂ ಡಿ.ಎಲ್.ಎನ್. ಅಭಿಪ್ರಾಯಪಟ್ಟು ಈ ಕಾರ್ಯ ಮಾಡಿದ್ದಕ್ಕಾಗಿ ಅನುವಾದಕರನ್ನು ಅವರು ಅಭಿನಂದಿಸಿರುವರು.

ಎಚ್ಚೆಸ್ಕೆಯವರ 'ಕನ್ನಡದಲ್ಲಿ ವಿಡಂಬನ ಸಾಹಿತ್ಯ'ಕ್ಕೆ ಬರೆದ ಮುನ್ನುಡಿ ಔಪಚಾರಿಕವಾಗಿದೆ. ಸಿದ್ಧರಾಮನ 'ಬಸವಸ್ತೋತ್ರ ಗೀತೆ'ಯನ್ನು ಶಿವಬಸವ ಸ್ವಾಮಿಯವರು ಸಂಪಾದಿಸಿದ್ದು, ಇದಕ್ಕೆ ಡಿ,ಎಲ್.ಎನ್. ಬರೆದ ಮುನ್ನುಡಿಯಲ್ಲಿ ಕೃತಿಯಲ್ಲಿನ ನ್ಯೂನತೆಗಳನ್ನು ಎತ್ತಿತೋರಿಸಿರುವರು. ಸಂಪಾದಕರು ಬಸವಸ್ತೋತ್ರಗೀತೆಗಳ ಛಂದಸ್ಸನ್ನು ಕುರಿತು ಪ್ರಸ್ತಾಪಿಸುವಾಗ 'ಆಟಗೀತೆ' ಎಂದು ಅದನ್ನು ಕರೆದಿರುವುದನ್ನು ಡಿ.ಎಲ್.ಎನ್. ಒಪ್ಪುವುದಿಲ್ಲ. ಕೈಬರಹದ ಮೂಲ ಪ್ರತಿಯಲ್ಲಿ ಈ ಹೆಸರು ಇದ್ದಿರಲಾರದು, ಇದರ ಬಗ್ಗೆ ಇನ್ನೂ ಹೆಚ್ಚಿನ ವಿಚಾರ ಅವಶ್ಯಕವೆಂದಿರುವರು. ಕೆ. ವೆಂಕಟರಾಯಾಚಾರ್ಯರ 'ಸಾಹಿತ್ಯದ ಒನ್ನೆಲೆ' ಕೃತಿಗೆ ಡಿ.ಎಲ್.ಎನ್. ಬರೆದಿರುವ ಮುನ್ನುಡಿ ವಿಸ್ತಾರವಾಗಿದೆ. ಇದರಲ್ಲಿ ಅವರು ಸಂಶೋಧಕನ ಗುಣಾವಗುಣಗಳನ್ನೂ, ಓದುಗರಿಂದ ಅವನಿಗೆ ಸಿಗುತ್ತಿರುವ ಪ್ರಶಂಸೆ ನಿಂದನೆಗಳನ್ನೂ ಪ್ರಸ್ತಾಪಿಸಿರುವರು. ಸಂಶೋಧನೆ, ವಿಮರ್ಶೆಗಳಿಗಿಂತ ಕವಿತೆ, ಕಥೆ, ಕಾದಂಬರಿಗಳಿಗೆ ಹೆಚ್ಚಿನ ಪ್ರೋತ್ಸಾಹ ಓದುಗರಿಂದ ಲಭ್ಯವಾಗಿರುವ ಪ್ರಸ್ತುತ ಪರಿಸ್ಥಿತಿಯನ್ನು ಅವರು ಬಹಳ ವಿಷಾದದಿಂದ ಉಲ್ಲೇಖಿಸಿರುವರು. ಸ್ವತಃ ಸಂಶೋಧಕರಾದ ಅವರಿಗೆ ಓದುಗರ ಈ ಅನಾದರ ನೋವನ್ನುಂಟುಮಾಡಿರುವಂತಿದೆ. ಸಂಶೋಧನೆಯು ಕಾರ್ಯ ಕ್ಲೇಶಕರವಾದುದು, ಸಂಶೋನೆಯಲ್ಲಿ ವೈಜ್ಞಾನಿಕ ಮನೋಧರ್ಮವಿರಬೇಕು, ಸಂಶೋಧಕನಲ್ಲಿ ಮುಖ್ಯವಾಗಿ ಇರಬೇಕಾದದ್ದು ಪ್ರಾಮಾಣಿಕತೆ ಎಂಬ ಅವರ ಮಾತುಗಳು ಮನನೀಯವಾಗಿವೆ.

ಎಲ್. ಬಸವರಾಜು ಅವರ 'ಶಿವದಾಸ ಗೀತಾಂಜಲಿ'ಗೆ ಡಿ.ಎಲ್.ಎನ್. ಇಂಗ್ಲಿಷಿನಲ್ಲಿ ಮುನ್ನುಡಿ ಬರೆದಿರುವರು. ಜಕ್ಕಣ್ಣನ ಏಕೋತ್ತರ ಶತಸ್ಥಲವನ್ನು ಎಲ್. ಬಸವರಾಜು ಅವರು ಶಾಸ್ತ್ರೀಯವಾಗಿ ಸಂಪಾದಿಸಿ ಶಿವದಾಸ

ಗೀತಾಂಜಲಿ' ಎಂಬ ಹೆಸರು ಕೊಟ್ಟಿರುವರು. ಇಲ್ಲಿ ಬಸವಾದಿ ಶಿವಶರಣರ (ಇವರನ್ನು ಎಲ್. ಬಸವರಾಜು ಅವರು 'ಶಿವದಾಸ'ರೆಂದು ಕರೆದಿರುವರು) 188 ಗೀತ (= ಹಾಡು)ಗಳಿವೆ. ಡಿ.ಎಲ್.ಎನ್. ತಮ್ಮ ಮುನ್ನುಡಿಯಲ್ಲಿ ಎಲ್. ಬಸವರಾಜು ಅವರು ಶಿವಶರಣರ ಹಾಡುಗಳನ್ನು ರಾಗ ತಾಳಗಳ ಉಲ್ಲೇಖದೊಂದಿಗೆ ಶಾಸ್ತ್ರೀಯವಾಗಿ ಸಂಪಾದಿಸಿರುವುದನ್ನೂ, ಈ ಹಾಡುಗಳ ಗ್ರಹಿಕೆಗೆ ನೆರವಾಗುವಂತೆ ಅನುಬಂಧರೂಪದಲ್ಲಿ ಕೊಟ್ಟಿರುವ ವಿವರಣೆಗಳನ್ನೂ ಬಹಳವಾಗಿ ಮೆಚ್ಚಿಕೊಂಡಿರುವರು. ಸಂಪಾದಕರು ಈ ಕೃತಿಗೆ ಬರೆದಿರುವ 142 ಪುಟಗಳ ವಿಸ್ತಾರವಾದ ಪೀಠಿಕೆ ವಿದ್ವತ್ಪೂರ್ಣವಾಗಿರುವುದನ್ನು ಮೆಚ್ಚುವ ಅವರು ಹರಿದಾಸರಿಗಿಂತ ಪೂರ್ವದಲ್ಲಿಯೇ, ಶಿವಶರಣರು ಹಾಡುಗಳನ್ನು ರಚಿಸಿ ಕರ್ಣಾಟಕ ಸಂಗೀತ ಪರಂಪರೆಗೆ ದೊಡ್ಡ ಕಾಣಿಕೆಯನ್ನು ಸಲ್ಲಿಸಿರುವರೆಂಬ ಎಲ್. ಬಸವರಾಜುರವರ ಹೊಸ ಶೋಧವನ್ನು ಸ್ವಾಗತಿಸಿ, ಇದರ ಬಗೆಗೆ ಇನ್ನಷ್ಟು ಹೆಚ್ಚಿನ ಸಂಶೋಧನೆ ಅಗತ್ಯವೆಂದು ಹೇಳಿರುವರು. ಸಂಪಾದಕರು ಅನುಬಂಧದಲ್ಲಿ ಕೊಟ್ಟಿರುವ ಸಹಾಯಕ ಸಾಮಗ್ರಿಗಳು ಅವರ ಅಪಾರ ಶ್ರಮಕ್ಕೆ ನಿದರ್ಶನಗಳಾಗಿವೆ ಎಂದು ತುಂಬುಹೃದಯದಿಂದ ನುಡಿದಿರುವರು. ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಿಂದಿನ ವಿದ್ವಾಂಸರು ಮಾಡಿರುವ ಕೆಲಸವನ್ನು ಕೃತಜ್ಞತಾಪೂರ್ವಕವಾಗಿ ನೆನೆಯದಿರುವ ಇಂದಿನ ಯುವಪೀಳಿಗೆಯ ವಿದ್ವಾಂಸರ ವರ್ತನೆಯನ್ನು ಡಿ.ಎಲ್.ಎನ್. ಖಂಡಿಸಿರುವರು. ವಿದ್ವದ್ ಪರಂಪರೆಯನ್ನು ಕಾಪಾಡಿಕೊಂಡು ಹೋಗುವ ದೃಷ್ಟಿಯಿಂದ ಇದು ಸಲ್ಲದೆಂದು ಎಚ್ಚರಿಸಿರುವರು.

ಗ್ರಂಥ ವಿಮರ್ಶೆ

ಗುಣವರ್ಮನ 'ಪುಷ್ಪದಂತ ಪುರಾಣ', ಕರ್ಣಪಾರ್ಯನ 'ನೇಮಿನಾಥ ಪುರಾಣ', ಕುಮುದೇಂದುವಿನ 'ರಾಮಾಯಣ', ಯಳಂದೂರ ಹರೀಶ್ವರನ ಪ್ರಭುದೇವರ ಪುರಾಣ – ಈ ಸಂಪಾದಿತ ಕೃತಿಗಳ ಬಗೆಗೆ ಹಾಗೂ 'ಅಭಿನವ ಪಂಪ' ಎಂಬ ಪ್ರಶಸ್ತಿ ಗ್ರಂಥವನ್ನು ಕುರಿತಂತೆ ಡಿ.ಎಲ್.ಎನ್. ಮಾಡಿರುವ ಗ್ರಂಥ ವಿಮರ್ಶೆ ಬಹಳ ಮುಖ್ಯವಾದುವು. ಇಲ್ಲಿನ ವಿಮರ್ಶೆಗಳು ಪರಿಚಯಾತ್ಮಕವಾಗಿರದೆ ವಸ್ತುನಿಷ್ಠವಾಗಿರುವುದು ಗಮನಿಸಬೇಕಾದ ಸಂಗತಿ. ಕೃತಿಗಳನ್ನು ಎಷ್ಟು ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ ಎಂಬುದು ಹಾಗೂ ಕೃತಿಗಳಲ್ಲಿನ ಗುಣದೋಷಗಳನ್ನು ಎಷ್ಟು ನಿಷ್ಪಕ್ಷಪಾತವಾಗಿ ವಿವೇಚಿಸಿರುವರು ಎಂಬುದು ಮೊದಲ ನೋಟಕ್ಕೆ ಅರಿವಾಗುತ್ತದೆ. ದೋಷಗಳನ್ನು ಹೇಳುವಾಗ, ಅವರ ವಿನಯ ಮೆಚ್ಚುವಂತಹದು. ಸಂಶೋಧಕ–ವಿಮರ್ಶಕರಾಗಿ ಅವರು ತೋರಿಸಿರುವ ದೋಷಗಳು ಅಲ್ಲಗಳೆಯುವಂತಿಲ್ಲ. ಉದಾಹರಣೆಗೆ 'ಪುಷ್ಪದಂತ ಪುರಾಣ'ವನ್ನು ಪ್ರತಿಮಾಡಿದ ನವಿಲುಗುಂದದ ಮಾದಿರಾಜನೂ ಮತ್ತು ಬಾಂಬೆ ಬ್ರಾಂಚ್ ರಾಯಲ್ ಏಷ್ಯಾಟಿಕ್ ಸೊಸೈಟಿಯ ಪತ್ರಿಕೆಯಲ್ಲಿ (ಸಂ. x. ಪು. ೨೬೦) ಇರುವ ಒಂದು ಶಾಸನವನ್ನು ಬರೆದ ಮಾದಿರಾಜನೂ ಅಭಿನ್ನರೆಂದು ಸಂಪಾದಕರು ಅಭಿಪ್ರಾಯಪಟ್ಟಿರುವುದನ್ನು ಡಿ.ಎಲ್.ಎನ್. ಒಪ್ಪುವುದಿಲ್ಲ. "ಒಬ್ಬನು ಸಾಕಲ್ಯ ಕುಲದವನು; ಇನ್ನೊಬ್ಬನು 'ಸಾಮಾಸಿಗ ಕುಲದ ಅತ್ರಿಗೋತ್ರದ ಬ್ರಾಹ್ಮಣನು. ಒಬ್ಬನ ತಂದೆಯ ಹೆಸರು ಚಾಮ; ಇನ್ನೊಬ್ಬನ ತಂದೆ ಕೇಶಿರಾಜ. ಒಬ್ಬನ ಬಿರುದು 'ಬುಧಮಾನವ'; ಇನ್ನೊಬ್ಬನಿಗೆ ಅಂಥ ಬಿರುದಿದ್ದಂತೆ ತಿಳಿದಿಲ್ಲ. ಇಷ್ಟೇ ಸಾಕು ಈ ಇಬ್ಬರು ಮಾದಿರಾಜರು ಬೇರೆ ಬೇರೆ ಎಂದು ಹೇಳುವುದಕ್ಕೆ ಎಂದಿರುವರು.

ಸಂಪಾದಕರು ತಮ್ಮ ಮುಂದೆ ಎಲ್ಲ ಪ್ರತಿಗಳಿಗಿಂತಲೂ ಹೆಚ್ಚು ಶುದ್ಧವಾಗಿಯೂ ಹೆಚ್ಚು ಹಳೆಯದಾಗಿಯೂ ಇರುವ (ಪ್ರತಿಮಾಡಿದ ಕಾಲ ೧೪೩೬)

K51ನೇ ನಂಬರಿನ ಓಲೆ ಪ್ರತಿ ಇದ್ದರೂ ಅದನ್ನು ಸರಿಯಾಗಿ ಉಪಯೋಗಿಸಿ ಕೊಂಡಿಲ್ಲವೆಂಬುದನ್ನು ಹಲವಾರು ನಿದರ್ಶನಗಳ ಮೂಲಕ ತೋರಿಸಿಕೊಟ್ಟಿರು ವರು. ಇದರಲ್ಲಿ ಱಕಾರವು ಉಚಿತವಾದೆಡೆಗಳಲ್ಲಿ ತಪ್ಪಿಲ್ಲದೆ ಬರೆದಿದೆ. ಇದನ್ನೇ ಅವಲಂಬಿಸಿದ್ದರೆ ಸಂಪಾದಕರು ಕೊಟ್ಟಿರುವ ಶುದ್ಧಾಶುದ್ಧಪತ್ರಿಕೆ ಸುಮಾರು ಒಂದು ಪುಟದಷ್ಟು ಕಡಿಮೆಯಾಗುತ್ತಿತ್ತು. ಅಲ್ಲದೆ ಈ ಪಟ್ಟಿಯಲ್ಲಿಲ್ಲದ ಇನ್ನೂ ಅನೇಕ ತಪ್ಪುಗಳನ್ನು ತಿದ್ದಬಹುದಾಗಿತ್ತು. ದೊರೆಯುವ ಹಸ್ತಪ್ರತಿಗಳಲ್ಲಿನ ಪಾಠಗಳನ್ನೆಲ್ಲ ಮುಂದಿಟ್ಟುಕೊಂಡು ಅವುಗಳ ಬಲಾಬಲಗಳನ್ನು ವಿಚಾರಮಾಡಿ ಕವಿಯ ಆಶಯವನ್ನೂ ಸಂದರ್ಭವನ್ನೂ ಮೆಲುಕು ಹಾಕಿ ಪಾಠಗಳನ್ನು ತೂಕಮಾಡಿ ಯಾವುದು ನಿರ್ದುಷ್ಟವೆಂದು ಕಂಡುಬರುತ್ತದೋ ಅದನ್ನು ಒಪ್ಪಿ ಕೊಳ್ಳುವುದು ಹಿತವಾಗಿದೆ. ಹೀಗೆ ಅಂಗೀಕಾರ ಮಾಡುವುದರಲ್ಲಿ ಅವಕಾಶ ಇದ್ದೇ ಇರುತ್ತದೆ. ಅದಕ್ಕಾಗಿ ಉಳಿದ ಪಾಠಗಳ ಸಹಾಯವಿರುತ್ತದೆ. ಯಾರಿಗೆ ಯಾವುದು ಇಷ್ಟವೋ ಅದನ್ನು ಇಟ್ಟುಕೊಳ್ಳಬಹುದು. ಸಂಪಾದಕರು ಇಷ್ಟು ಅನುಕೂಲ್ಯಗಳನ್ನು ವಾಚಕರಿಗೆ ಕಲ್ಪಿಸಿಕೊಟ್ಟರೆ ಲೇಸು – ಎಂದು ಸೂಚ್ಯವಾಗಿ ಸಂಪಾದಕರು ವಹಿಸಬೇಕಾಗಿದ್ದ ಎಚ್ಚರಿಕೆಯನ್ನು ನೆನಪಿಸಿರುವರು. ಸಂಪಾದಕ ಜವಾಬ್ದಾರಿ ಎಂಥದೆಂಬುದನ್ನು ಡಿ.ಎಲ್.ಎನ್. ಸೊಗಸಾಗಿ ಹೀಗೆ ಹೇಳಿರುವರು : "ಹಳೆಯ ಪ್ರೌಢ ಗ್ರಂಥಗಳನ್ನು ಪರಿಷ್ಕರಿಸುವಾಗಲಂತೂ ಎರಡು ಕಣ್ಣಿಗಿಂತ ನಾಲ್ಕು ಕಣ್ಣು ಉತ್ತಮ. ಸಂಪಾದನೆಯ ಕೆಲಸ ಸರ್ವ ಸಮರ್ಪಕವಾಗಿ ಆದರ್ಶಪ್ರಾಯವಾಗಿ ಆಗುವುದು ಬಹು ಕಷ್ಟ. ಈ ಸೌಭಾಗ್ಯ ಕನ್ನಡ ಗ್ರಂಥಗಳಿಗೆ ಇನ್ನೂ ಬಂದಿಲ್ಲ. ಆದರೂ ಆದಷ್ಟು ಮಟ್ಟಿಗೆ ಮೂಲ ಪ್ರತಿಗಳಿಂದ ಬರಬಹುದಾದಷ್ಟು ಹಾಲನ್ನು ಒಂದು ತೊಟ್ಟು ಉಳಿಯದ ಹಾಗೆ ಕರೆದುಕೊಂಡು ಅಳತೆ ಮೀರದಂತೆ ವಿಮರ್ಶೆ ಎಂಬ ಸಕ್ಕರೆ ಇಟ್ಟು ನೊರೆಹಾಲನ್ನು ತಯಾರುಮಾಡಬೇಕು. ಆಗ ಪರಿಷ್ಕರಣಕಾರ್ಯ ಸೊಗ ಸಾಗುವುದು."

ಸಂಪಾದಕರು ಱಕಾರವಿರಬೇಕಾದ ಸ್ಥಳಗಳಲ್ಲಿ ರೇಫವನ್ನೂ, ೞಕಾರವಿರ ಬೇಕಾದ ಸ್ಥಳಗಳಲ್ಲಿ ಕುಳವನ್ನೂ, ಕುಳವಿರಬೇಕಾದ ಸ್ಥಳಗಳಲ್ಲಿ ೞಕಾರವನ್ನೂ, ರೇಫವಿರಬೇಕಾದ ಸ್ಥಳಗಳಲ್ಲಿ ಱಕಾರವನ್ನೂ ಪ್ರಯೋಗಿಸಿರುವ ಉದಾಹರಣೆ ಗಳನ್ನು ಡಿ.ಎಲ್.ಎನ್. ತೋರಿಸಿಕೊಟ್ಟಿರುವರು. ಸಂಪಾದಕರು ತಾವು

ಬಳಸಿರುವ K51ನೇ ನಂಬರಿನ ಓಲೆಯು ಪ್ರತಿ ಹೆಚ್ಚು ಶುದ್ಧವಿರುವ ಪ್ರಾಚೀನ ಪ್ರತಿಯಾಗಿದ್ದರೂ ಅದನ್ನು ಸಂಪಾದನೆಗೆ ಅಷ್ಟಾಗಿ ಬಳಸಿದಂತಿಲ್ಲ. ಇದರಲ್ಲಿನ ಒಳ್ಳೆಯ ಪಾಠಗಳು ಇದ್ದರೂ ಅವನ್ನು ಸರಿಯಾಗಿ ಲಕ್ಷಿಸಿಲ್ಲವೆಂಬುದನ್ನು ಸಂಪಾದನೆಯಲ್ಲಿನ ದೋಷಯುಕ್ತ ಪಾಠಗಳು ಹೇಳುತ್ತವೆ. ದೋಷಯುಕ್ತ ಪಾಠಗಳನ್ನು K51ರ ಬಳಕೆಯ ಮೂಲಕ ಸರಿಪಡಿಸಬಹುದೆಂಬುದನ್ನು ಡಿ.ಎಲ್.ಎನ್. ಹಲವಾರು ನಿದರ್ಶನಗಳ ಮೂಲಕ ತೋರಿಸಿಕೊಟ್ಟಿರುವರು.

ತಮ್ಮ ವಿಮರ್ಶೆಯ ಕೊನೆಯಲ್ಲಿ ಸಂಪಾದಕರು ಇನ್ನು ಮುಂದೆ ಗ್ರಂಥ ಪರಿಷ್ಕರಣ ಮಾಡುವಾಗ ಅನುಸರಿಸಬಹುದಾದ ಒಂದೆರಡು ಸಲಹೆಗಳನ್ನು ಕೊಟ್ಟಿರುವರು :

೧. ಕಾವ್ಯದಲ್ಲಿರುವ ಪಾತ್ರರಚನೆ, ಶೈಲಿ, ವರ್ಣನೆ – ಮುಂತಾದುವನ್ನು ಸವಿದು, ಅದರ ಸೊಗಸನ್ನು ತಿಳಿಸುವಂಥ ಕಾವ್ಯವಿಮರ್ಶೆಯನ್ನು ಮುನ್ನುಡಿಯಲ್ಲಿ ಕೊಡಬಹುದು.

೨. ಪದಗಳನ್ನು ವಿಭಾಗ ಮಾಡುವಾಗ ಯಾವುದಾದರೊಂದು ಒಳ್ಳೆಯ ನಿಯಮವನ್ನು ಇಟ್ಟುಕೊಳ್ಳಬಹುದು.

೩. ಉತ್ತವಳ (೩–೮೩), ನೆಲಮುಕ್ಕು (೬–೪೮), ಮಂಚಲ್ (೨–೫), ಅತ್ತಳಗ (೭–೭೫) ಮುಂತಾದ ಅರ್ಥವಾಗದ ಅಥವಾ ಅನಿರ್ದಿಷ್ಟವಾದ ಅರ್ಥವನ್ನುಳ್ಳ ಅಪೂರ್ವ ಶಬ್ದಗಳ ಪಟ್ಟಿಯೊಂದನ್ನು ಕೊಡಬಹುದು.

ಕರ್ಣಪಾರ್ಯನ 'ನೇಮಿನಾಥಪುರಾಣ'ವನ್ನು ವಿಮರ್ಶಿಸುತ್ತ ಅದರ ಸಂಪಾದಕರು ಕವಿಯ ಕಾಲವನ್ನು ೧೧೩೦–೧೧೩೫ ಎಂದು ನಿರ್ಣಯಿಸಿರುವುದನ್ನು ಒಪ್ಪದ ಡಿ.ಎಲ್.ಎನ್. ಈ ಬಗ್ಗೆ ತೀರ್ಮಾನ ಮಾಡಿರುವ ಡಾ॥ ವೆಂಕಟಸುಬ್ಬಯ್ಯನವರ ನಿರ್ಣಯವನ್ನು ಸಾರತರವಾದುದೆಂದು ಹೇಳುವರು. "ಕರ್ಣಪಾರ್ಯನ ಕಾಲದಲ್ಲಿ ರಾಜ್ಯವಾಳುತ್ತಿದ್ದವನು ಕರಹಾಟದ ಶಿಲಾಹಾರ ವಂಶದ ವಿಜಯಾದಿತ್ಯ. ೧೧೪೩, ೧೧೫೫, ೧೧೬೫ನೆಯ ಇಸವಿಗಳಲ್ಲಿ ಲಿಖಿತವಾದ ಅವನ ಶಾಸನಗಳು ದೊರೆಯುತ್ತವೆ. ಅವನು ಯಾವಾಗ ರಾಜನಾದನೆಂಬ ಇಸವಿ ಮಾತ್ರ ಖಚಿತವಾಗಿ ತಿಳಿಯದು. ಅವನ ತಂದೆ ಗಂಡರಾದಿತ್ಯನು ೧೧೩೫ರಲ್ಲಿ ರಾಜ್ಯಭಾರ ಮಾಡುತ್ತಿದ್ದನು. ಆದ್ದರಿಂದ ವಿಜಯಾದಿತ್ಯನು ೧೧೩೫–೧೧೪೩ರ ಒಳಗೆ ಯಾವಾಗಲೋ ಪಟ್ಟಾಭಿಷಿಕ್ತ

ನಾಗಿರಬೇಕು. ಅವನ ಆಳಿಕೆ ಮುಗಿದಪ್ಪು ಯಾವ ವರ್ಷವೆಂದು ತಿಳಿದಿಲ್ಲ ಅವನ ಮಗ ಭೋಜನು ೧೧೯೦ರಲ್ಲಿ ರಾಜನಾಗಿದ್ದಂತೆ ಒಂದು ಶಾಸನ ಹೇಳು ತ್ತದೆ. ಆದ್ದರಿಂದ ೧೧೭೫–೧೧೯೦ರ ಒಳಗೆ ಯಾವಾಗಲೋ ವಿಜಯಾದಿತ್ಯನ ಆಳಿಕೆ ಕೊನೆಗೊಂಡಿರಬೇಕು. ಅವನ ಆಳಿಕೆಯ ಕಾಲ ೧೧೪೦–೧೧೮೦ ಎಂದು ಸ್ಥೂಲವಾಗಿ ಹೇಳಬಹುದು. ಆದರೂ ಶ್ರೀಮಾನ್ ಎಚ್. ಶೇಷಯ್ಯಂಗಾರ್ಯರು ೧೧೩೦–೧೧೩೫ರವರೆಗೆ ಕರ್ಣಪಾರ್ಯನ ಕಾಲವೆಂದು ಹೇಳಿರುವುದಕ್ಕೆ ಕಾರಣ ವೇನು ?" ಎಂದು ಪ್ರಶ್ನಿಸಿರುವರು.

ಸಂಪಾದಕರು ಸಾಮಾನ್ಯವಾಗಿ ಉತ್ತಮ ಪಾಠಗಳನ್ನೇ ಉದ್ಧರಿಸಿ ಕೊಟ್ಟಿದ್ದರೂ ಅಲ್ಲಲ್ಲಿ ಅಡಿಟಿಪ್ಪಣಿಯಲ್ಲಿ ಕಾಣಿಸಿರುವ ಪಾಠಗಳು ಹೆಚ್ಚು ಸುಷ್ಠುವೆಂದು ಹೇಳಿ, ಕೆಲವು ನಿದರ್ಶನಗಳನ್ನು ಡಿ.ಎಲ್.ಎನ್. ಕೊಟ್ಟಿರು ವರು. ಅವರು ಸೂಚಿಸಿರುವ ಸರಿಯಾದ ಪಾಠಗಳು ಗ್ರಾಹ್ಯವಾಗಿವೆ. ತಮ್ಮ ನಿರ್ಣಯವನ್ನು ಸಮರ್ಪಕವಾದ ಆಧಾರಕೊಟ್ಟು ಅವರು ಸಮರ್ಥಿಸಿ ಕೊಂಡಿರುವರು. ಡಿ.ಎಲ್.ಎನ್. ಸಂಪಾದನೆಯಲ್ಲಿನ ನ್ಯೂನತೆಗಳನ್ನು ಹೇಳಿದ್ದರೂ ಸಂಪಾದಕರ ಬಲ್ಮೆಯನ್ನು ಮನವಾರೆ ಶ್ಲಾಘಿಸಿರುವರು: "ಅವರ ವಿದ್ವತ್ತಿಗೂ ಸಹಜವಾದ ಆಳವಾದ ನಿರಂತರವಾದ ಅಭ್ಯಾಸಕ್ಕೂ ಸಾಹಿತ್ಯ ಪ್ರೇಮಕ್ಕೂ ಪ್ರಕೃತ ಈ ಗ್ರಂಥದ ಪರಿಷ್ಕರಣ ಕೀರ್ತಿಸ್ತಂಭದಂತೆ ನಿಲ್ಲಬಲ್ಲುದು. ಕೈಕೊಂಡ ಕೆಲಸವನ್ನು ಶ್ರದ್ಧೆಯಿಂದಲೂ ದಕ್ಷತೆಯಿಂದಲೂ ನಿರ್ವಹಿಸಿರುವ ಶ್ರೀಮಾನ್ ಎಚ್. ಶೇಷಯ್ಯಂಗಾರ್ಯರಿಗೆ ಕನ್ನಡಿಗರ ಅಭಿನಂದನೆ ಧಾರಾಳವಾಗಿ ಸಲ್ಲುವುದು. ಯಾವ ಕೊಂಡಾಟಕ್ಕೂ ಬಾಯ್ಬಿಡದೆ ಯಾವ ತೆಗಳಿಕೆಗೂ ಮುಖ ಮುರುಕಿಸದೆ ಸಮತೆಯಿಂದ ಹಿಡಿದ ಕೆಲಸವನ್ನು, ಆತ್ಮವಂಚನೆ ಯಿಲ್ಲದೆ ನೆರವೇರಿಸುವುದು ವಿದ್ವತ್ತಿನ ಲಕ್ಷಣವಲ್ಲವೆ? ಇದಕ್ಕೆ ಒಳ್ಳೆಯ ನಿದರ್ಶನ ಶ್ರೀಮಾನ್ ಎಚ್. ಶೇಷಯ್ಯಂಗಾರ್ಯರು. ಅವರ ಪರಿಷ್ಕರಣ ಕಲೆ ಕಾಂತಿಯುಕ್ತವಾಗಿ ಕಂಗೊಳಿಸುತ್ತಿದೆ." ಸ್ವತಃ ವಿದ್ವಾಂಸರಾದ ಡಿ.ಎಲ್.ಎನ್. ವಿದ್ವತ್ತಿಗೆ ಕೊಟ್ಟಿರುವ ಮರ್ಯಾದೆಯಿದು.

'ಕುಮುದೇಂದು ರಾಮಾಯಣ'ದ ಪರಿಷ್ಕರಣ ವಿಚಾರ ಎಂಬ ಗ್ರಂಥ ವಿಮರ್ಶೆಯಲ್ಲಿ ಪರಿವರ್ಧಿನಿ ಷಟ್ಪದಿಯ ಲಕ್ಷಣದ ಬಗೆಗೆ ಕೂಲಂಕಷವಾಗಿ ಡಿ.ಎಲ್,ಎನ್. ವಿಚಾರಮಾಡಿರುವರು. ಇಷ್ಟು ವಿಸ್ತೃತವಾದ ಚರ್ಚೆಗೆ

ಕಾರಣವಾಗಿರುವುದು ‘ಕುಮುದೇಂದು ರಾಮಾಯಣ’ದಲ್ಲಿನ ಪರಿವರ್ಧಿನಿಯ ಲಕ್ಷಣವು ಬೇರೆ ಗ್ರಂಥಗಳಲ್ಲಿನ ಪರಿವರ್ಧಿನಿಯ ಲಕ್ಷಣಗಳಿಗೆ ಅನುಸಾರವಾಗಿಲ್ಲದಿರುವುದು. ಸಾಮಾನ್ಯ ನಿಯಮದಂತೆ ಪರಿವರ್ಧಿನಿಯ ಮೂರು ಮತ್ತು ಆರನೆಯ ಚರಣಗಳಲ್ಲಿ ೨೬ ಮಾತ್ರೆಗಳಿರಬೇಕು (೪ ಮಾತ್ರೆಯ ಆರುಗಣ+ಗುರು). ಇಲ್ಲಿ ಮಾತ್ರ ಹೀಗೆ ಇಲ್ಲ. ಅಧಿಕ ಸಂಖ್ಯೆಯ ಮಾತ್ರೆಗಳು ಕಂಡು ಬರುತ್ತವೆ. ಈ ಸಮಸ್ಯೆ ಇಲ್ಲಿ ಪ್ರಧಾನ. ಏಕೆಂದರೆ, ಕುಮುದೇಂದುವಿಗಿಂತ ಹಿಂದೆ ಈ ಛಂದಸ್ಸನ್ನು ಯಾರೂ ಬಳಸಿದಂತೆ ಕಂಡುಬಂದಿಲ್ಲ. ಪರಿವರ್ಧಿನಿಯ ಆದ್ಯ ಆರಾಧಕನು ಕುಮುದೇಂದುವಾಗಿರುವುದರಿಂದ ಅದರಲ್ಲಿ ಅವನಿಗೆ ವಿಧವಿಧವಾದ ಪ್ರಯೋಗ ನಡೆಸಲು ಅವಕಾಶವಿತ್ತು ಎಂದು ಡಿ.ಎಲ್.ಎನ್. ಹೇಳುವರು. ಮೊದಲಿಗೆ ಅಂಶಗಣಾತ್ಮಕವಾಗಿದ್ದ ಷಟ್ಪದಿ ಕಾಲಕ್ರಮದಲ್ಲಿ ಮಾತ್ರಾಗಣಕ್ಕೆ ತಿರುಗಿತು. ಎರಡು ಬಗೆಯ ಗಣಗಳಿಗೂ ಗುರು ಲಘು ವಿನ್ಯಾಸ ಕ್ರಮದಲ್ಲಿ ಸಾದೃಶ್ಯವಿದ್ದುದರಿಂದ, ಒಂದರ ಸ್ಥಾನಕ್ಕೆ ಇನ್ನೊಂದು ಬರಲು ಅವಕಾಶವಾಯಿತು ; ಕೊನೆಗೆ ಅಂಶಗಣ ಹೋಗಿ ಮಾತ್ರಾಗಣವೇ ಉಳಿಯಿತು. ಈ ಅವಸ್ಥಾಂತರ ಕಾಲದಲ್ಲಿ ಕುಮುದೇಂದು ಷಟ್ಪದಿಯ ವಿಷಯದಲ್ಲಿ ಪ್ರಯೋಗ ನಡೆಸುತ್ತಿದ್ದನು. ಡಿ.ಎಲ್.ಎನ್. ಅಭಿಪ್ರಾಯ ಪಡುವಂತೆ ಕುಮುದೇಂದುವಿನ ಪರಿವರ್ಧಿನಿಯ ಲಕ್ಷಣ ಹೀಗಿದೆ : ಕುಮುದೇಂದುವಿನಲ್ಲಿ ಬರುವ ಗಣ ಮಾತ್ರಾಗಣವಲ್ಲ, ಅಂಶಗಣ ; ೧. ೨, ೪, ೫ನೆಯ ಪಾದಗಳಲ್ಲಿ ಪ್ರತ್ಯೇಕ ನಾಲ್ಕು ವಿಷ್ಣುಗಳು ; ೩ನೆಯ ಪಾದದಲ್ಲಿ ೬ ವಿಷ್ಣು + ೧ ಗುರು ; ೬ನೆಯ ಪಾದದಲ್ಲಿ ೬ ವಿಷ್ಣು +೧ ಬ್ರಹ್ಮ, ವಿಷ್ಣು ಅಥವಾ ರುದ್ರಗಣ (ವಿ+ಗು) ; ವಿಷ್ಣುಗಣದ ಸ್ಥಾನಗಳಲ್ಲಿ ಕೆಲವು ವೇಳೆ ಬ್ರಹ್ಮಗಣ ಬಂದರೂ ಬರಬಹುದು ; ಸಾಮಾನ್ಯವಾಗಿ ೪ ಮಾತ್ರೆಯ ವಿಷ್ಣುಗಣಗಳೇ ಇಲ್ಲಿ ಬರುತ್ತವೆ.

ಡಿ.ಎಲ್.ಎನ್. ತಮ್ಮ ವಿಚಾರಸರಣಿಯಲ್ಲಿ ಪರಿವರ್ಧಿನಿಗೆ ಸಂಬಂಧಿಸಿದಂತೆ ಕೆಲವು ಸಂದೇಹಗಳನ್ನೂ ಎತ್ತಿರುವರು : “ಕುಮುದೇಂದುವಿನ ಕಾಲದಲ್ಲಿ ಅಂಶಗಣ ಮಾತ್ರಾಗಣಕ್ಕೆ ಪೂರ್ತಿಯಾಗಿ ತಿರುಗಿರಲಿಲ್ಲವೆಂದು ಹೇಳಬಹುದು. ಆದ್ದರಿಂದಲೇ ಆತನು ೬ನೆಯ ಪಾದದ ಅಂತ್ಯದಲ್ಲಿ ಬ್ರಹ್ಮಗಣವನ್ನಿಟ್ಟರೆ ಪದ್ಯ ಹೇಗೆ ಕಿವಿಗೆ ಕೇಳಿಸುತ್ತದೆ? ವಿಷ್ಣು ಅಥವಾ ರುದ್ರಗಣ

ಗಳನ್ನಿಟ್ಟರೆ ಅದರ ಶ್ರಾವ್ಯತೆ ಹೇಗೆ? ಎಂಬುದನ್ನು ಪರೀಕ್ಷಿಸುವುದಕ್ಕಾಗಿ ತನ್ನ ಷಟ್ಪದಿಯಲ್ಲಿ ಪ್ರಯತ್ನಿಸಿದಂತೆ ಕಾಣುತ್ತದೆ. ಹಳೆಯ ಅಂಶಗಣ ಪದ್ಧತಿ ರೂಪಾಂತರವನ್ನು ಹೊಂದುವ ಸಂಧಿಕಾಲದಲ್ಲಿ ಕುಮುದೇಂದುವಿನ ಕಾವ್ಯರಚನೆ ನಡೆಯಿತು. ಪದ್ಯದಲ್ಲಿ ಬರುವ ಮಾತ್ರೆಗಳ ಸಂಖ್ಯೆಗೆ ಕಟ್ಟಿರಲಿಲ್ಲ. ಕುಮುದೇಂದುವಿನ ಕೆಲವು ಭಾಮಿನಿ, ವಾರ್ಧಕಗಳ ಕೊನೆಯ ಚರಣಗಳಲ್ಲಿಯೂ ಮಾತ್ರಾವ್ಯವಸ್ಥೆ ಇಲ್ಲ. ರಾಘವಾಂಕ, ಕುಮಾರಪದ್ಮರಸರ ಷಟ್ಪದಿಗಳಲ್ಲಿ ಗಣವ್ಯವಸ್ಥೆಯೂ ಮಾತ್ರಾವ್ಯವಸ್ಥೆಯೂ ಇವೆ. ಕುಮುದೇಂದುವಿನ ಷಟ್ಪದಿಯನ್ನು ಅವರು ಬಲ್ಲವರಾಗಿದ್ದು ಅಲ್ಲಿನ ಅವ್ಯವಸ್ಥೆಗೆ ಕಾರಣವನ್ನು ತಿಳಿದು ಅದನ್ನು ಸರಿಗೊಳಿಸಿರಬಹುದೆ? ಷಟ್ಪದಿಗೆ ಒಂದು ಕಟ್ಟನ್ನು ಉಂಟು ಮಾಡಿದ್ದರಿಂದ ರಾಘವಾಂಕನಿಗೆ ಷಟ್ಪದೀ ನಿರ್ಮಾಪಕನೆಂಬ ಪ್ರತೀತಿ ಬಂತೆ? ಅಂಶಗಣವನ್ನು ಮಾತ್ರಾಗಣಕ್ಕೆ ಪೂರ್ತಿಯಾಗಿ ಅವನು ತಿರುಗಿಸಿಕೊಂಡಿರಬಹುದೆ? ಈ ಪ್ರಶ್ನೆಗಳು ವಿಚಾರಕ್ಕೆ ಯೋಗ್ಯವಾದುವು. ರಾಘವಾಂಕ, ಕುಮಾರ ಪದ್ಮರಸ, ಪೋಲಾಳ್ವ ದಂಡನಾಥ, ಕುಮುದೇಂದು - ಈ ನಾಲ್ವರೂ ಸಮಕಾಲಿಕರಾಗಿದ್ದು ಷಟ್ಪದೀರಚನೆಯಲ್ಲಿ ಪ್ರಯೋಗ ಪರೀಕ್ಷೆಗಳನ್ನು ಸ್ವತಂತ್ರವಾಗಿ ನಡೆಸುತ್ತಿದ್ದಿರಬಹುದೆ? ಎಂಬ ಪ್ರಶ್ನೆಯೂ ಹೀಗೆಯೇ."

ಗ್ರಂಥಸಂಪಾದನೆ ಮಾಡುವಾಗ ಸಂಪಾದಕರು ಱಕಾರವನ್ನು ಬಳಸಿರುವುದನ್ನು ಪ್ರಸ್ತಾಪಿಸುತ್ತಾ, ಈ ಅಕ್ಷರವನ್ನು ಕುಮುದೇಂದು ಉಪಯೋಗಿಸಿರಲಿಲ್ಲವೆಂದು ತೋರುತ್ತದೆ. ಅವನ ಕಾಲಕ್ಕೆ ಅದು ಉಚ್ಚಾರಣೆಯಲ್ಲಿ ಗಳಿತವಾಗಿದ್ದಿತು. ಈ ಅಕ್ಷರವನ್ನು ಇಡುವುದು ಸೂಕ್ತವೆಂದು ಕಾಣುತ್ತದೆ ಎಂದಿರುವರು. ಲೇಖನದ ಕೊನೆಯಲ್ಲಿ 'ತಾವು ಹೇಳಿರುವುದೇ ಕೊನೆಯ ಮಾತಲ್ಲ; ಚರ್ಚೆಗೆ ಸಿಕ್ಕಿ ನಿಶ್ಚಯಕ್ಕೆ ಬರಬೇಕಾದುವು' ಎನ್ನುವಲ್ಲಿ ವಿಮರ್ಶೆಯು ಸತ್ಯದ ಕಡೆಗೆ ಸಾಗುವ ಹೆಜ್ಜೆಗಳೆಂಬುದು ಧ್ವನಿತವಾಗುತ್ತದೆ.

'ಅಭಿನವ ಪಂಪ' ಎನ್ನುವ ಪ್ರಶಸ್ತಿ ಗ್ರಂಥವನ್ನು ವಿಮರ್ಶಿಸುವಾಗಲೂ ಡಿ.ಎಲ್.ಎನ್. ಅವರ ಸತ್ಯದ ಕಡೆ ಮುಖಮಾಡಿರುವ ಪ್ರಾಮಾಣಿಕ ಅಭಿಪ್ರಾಯಗಳು ಸಂಶೋಧಕನಿಗಿರಬೇಕಾದ ಪ್ರಾಮಾಣಿಕತೆ, ಸತ್ಯನಿಷ್ಠೆಗಳನ್ನು ಬಿಂಬಿಸುತ್ತವೆ. ಈ ಪ್ರಶಸ್ತಿಗ್ರಂಥದ ಎಲ್ಲ ಲೇಖನಗಳಲ್ಲೂ ಕವಿಯನ್ನು ವಿಮರ್ಶಕ ಸಹಜವಾದ ದಯಾದೃಷ್ಟಿಯಿಂದ ನೋಡಿರುವುದು ಕಂಡುಬರುತ್ತ

ದೆಯೇ ಹೊರತು 'ಗುಣದೋಷಮಂ ನಿಕಷದಿಟ್ಟು ಪರೀಕ್ಷಿ'ಸುವ ಪ್ರಯತ್ನ ನಡೆದಿಲ್ಲ. ಕಾವ್ಯಕಲೆಯಲ್ಲಿ ನಾಗಚಂದ್ರನ ಸ್ವಂತ ಮಹಿಮೆ ಏನಾದರೂ ಇದ್ದಿದ್ದರೆ ಅದೇನೆಂಬುದು ಇಲ್ಲಿ ವ್ಯಕ್ತವಾಗಿಲ್ಲ—ಎನ್ನುವ ಅವರ ಮಾತುಗಳಲ್ಲಿ ನಿಷ್ಠುರಸತ್ಯದ ಬಳಕೆಯನ್ನು ಕಾಣುತ್ತೇವೆ. ವಿಮರ್ಶೆಯೂ ಒಂದು ರೀತಿಯಲ್ಲಿ ಸಂಶೋಧನೆಯೇ—ಡಿ.ಎಲ್.ಎನ್. ಅವರ ಪಾಲಿಗೆ. 'ಮಲ್ಲಿನಾಥಪುರಾಣ'ದ ಬಗೆಗೆ 'ಶ್ರೀ'ಯವರು 'ಇದ್ದ ನೂಲು ಸ್ವಲ್ಪ' ಎಂದಿರುವರು. ಕವಿಯೇ 'ಕಿಱಿದೀ ಕಥಾ ಪರಿಸ್ಪಂದವಿದಂ ನಿಮಿರ್ಚಿ ಕವಿತಾರಸಮಂ ನೆಱೆ ಪೇಟ್ದರಿಲ್ಲ ಮುನ್ನೆಂದು ಮಹಾಕವೀಶ್ವರರೊಳೊರ್ವರುಂ' ಎಂದು ಹೇಳಿರುವನು. ಆದರೂ ಈ 'ಕಿಱಿದಾದ ಕಥಾ ಪರಿಸ್ಪಂದ'ವೆಂಥದು ? ಎಷ್ಟರ ಮಟ್ಟಿಗೆ 'ಕಿಱಿದು' ಎಂಬುದನ್ನು ತಿಳಿಯುವ ಕುತೂಹಲ ಉಂಟಾಗುತ್ತದೆ. ಇದಕ್ಕೆ ಸಂಶೋಧನೆ ಆವಶ್ಯಕ. ಈಗತಾನೇ ಒಂದೊಂದಾಗಿ ಬೆಳಕನ್ನು ಕಾಣುತ್ತಿರುವ ಪ್ರಾಕೃತ ಸಾಹಿತ್ಯದಲ್ಲಿ ಏನಿದೆಯೋ? ಸಂಶೋಧನಪರವಾದ ಕಾವ್ಯವಿಮರ್ಶೆಗೆ ಹೊರಟರೆ "ವಿಮರ್ಶಕನ ಅಭಿಮಾನದ ಮತ್ತು ದಯಾತಿರೇಕದ ಪ್ರಶಂಸೆಗಳಿಗೆ ಒಂದು ಎಲ್ಲೆಕಟ್ಟುಂಟಾಗುತ್ತದೆ; ಕವಿಯ ನೈಸರ್ಗಿಕ ಶಕ್ತಿಯೂ ಖಚಿತವಾಗಿ ಹೊರಹೊಮ್ಮುತ್ತದೆ. ವಿಮರ್ಶೆಯಲ್ಲಿ ಇದೊಂದು ಮಾರ್ಗ, ಉತ್ಕೃಷ್ಟವಾದದ್ದೂ ಹೌದು" ಎಂದು ಅವರು ಅಭಿಪ್ರಾಯಪಡುವರು. 'ವಿಮರ್ಶೆಯೂ ಒಂದು ರೀತಿಯಲ್ಲಿ ಸಂಶೋಧನೆಯೇ' ಎಂಬ ಡಿ.ಎಲ್.ಎನ್. ಅವರ ನಿಲುವು ಒಪ್ಪುವಂತಹದು. ಅವರ ಅನೇಕ ವಿಮರ್ಶೆಗಳಲ್ಲಿ ಸಂಶೋಧಕ ಡಿ.ಎಲ್.ಎನ್. ಅವರನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ನಾಗಚಂದ್ರನ ಕಾಲದ ಬಗೆಗೆ ಶ್ರೀಮಾನ್ ಗೋವಿಂದ ಪೈಗಳ ನಿಲುವನ್ನು ಒಪ್ಪುವ ಅವರು ಸಾಧಾರಪೂರ್ವಕವಾಗಿ ತಮ್ಮ ಅಭಿಪ್ರಾಯ ಮಂಡಿಸುವ ರೀತಿಯನ್ನು ಮೇಲಿನ ಮಾತಿಗೆ ಉದಾಹರಣೆಯಾಗಿ ಕೊಡಬಹುದು.

ಡಿ.ಎಲ್.ಎನ್. ಮೂಲತಃ ಸಂಶೋಧಕರು. ಅವರ ಮನೋಭಾವ ಸಂಶೋಧಕನದು. ಅವರು ಸುಮಾರು ಎಂಬತ್ತು ಸಂಶೋಧನ ಪ್ರಬಂಧಗಳನ್ನು ಬರೆದಿರುವರು. ಕವಿ ಕಾಲವಿಚಾರ, ಭಾಷೆ, ಛಂದಸ್ಸು, ಕ್ಲಿಷ್ಟಪದಗಳ ಅರ್ಥನಿರ್ಣಯ ಹಾಗೂ ನಿಷ್ಪತ್ತಿ—ಇವೇ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟಂತೆ ಅವರ ಸಂಶೋಧನೆಗಳಿವೆ. ಅವರು ಹಳೆಯ ಸಾಹಿತ್ಯಕ್ಕೆ ಸಂಬಂಧ

ಪಟ್ಟಂತೆ ಎಷ್ಟೋ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿರುವರು. ಅವರು 'ಕೆಲವರು ವಚನಕಾರರು' ಎಂಬ ಲೇಖನದಲ್ಲಿ ಅನೇಕ ವಚನಕಾರರು ಹಾಗೂ ಅವರ ವಚನಗಳನ್ನು ಬೆಳಕಿಗೆ ತಂದರು. ಚೆನ್ನವೀರೇಶ್ವರ, ಶಿವಸಿದ್ಧರಾಮ, ಸಿದ್ಧಲಿಂಗೇಶ–ಇವರೇ ಮೊದಲಾದ ಅಜ್ಞಾತ ಕವಿಗಳ ಪರಿಚಯ ಮಾಡಿಕೊಟ್ಟರು. 'ಕೆಲವು ರಗಳೆಯ ಕವಿಗಳು' ಎಂಬ ಲೇಖನದಲ್ಲಿ ಅನೇಕ ರಗಳೆ ಕವಿಗಳ ಪರಿಚಯ ಮಾಡಿಕೊಟ್ಟರು. ಛಂದಸ್ಸಿಗೆ ಸಂಬಂಧಪಟ್ಟ ಅವರ 'ತೋಮರ ರಗಳೆ', 'ಧವಳ'ವೆಂಬ ಹಾಡಿನ ಸ್ವರೂಪ', 'ಮಾನಸೋಲ್ಲಾಸದಲ್ಲಿ ಛಂದಸ್ಸು', 'ಮೂರು ಷಟ್ಪದ(ದಿ)ಗಳು'—ಈ ನಾಲ್ಕು ಲೇಖನಗಳು ಬಹಳ ಮುಖ್ಯವಾದುವು. 'ತೋಮರ ರಗಳೆ' ಎಂಬಲ್ಲಿನ 'ತೋಮರ'ದ ಬಗೆಗೆ ಅವರು ವಿವರಣೆ ಕೊಟ್ಟಿದ್ದಲ್ಲದೆ, ರಗಳೆಯ ಮೂಲವನ್ನು ಅಪಭ್ರಂಶ ಸಾಹಿತ್ಯದ 'ಪಜ್ಝಟಿಕೆ'ಯಲ್ಲಿ ಮೊತ್ತಮೊದಲಿಗೆ ಕಂಡುಕೊಂಡರು. 'ಧವಳಗಳ' ಬಗೆಗೆ ಪ್ರಥಮವಾಗಿ ವಿಚಾರಮಾಡಿ ಆ ಹೆಸರಿನ ಹಾಡುಗಳ ಲಕ್ಷಣವನ್ನು ಅವರು ನಿರ್ಣಯಿಸಿದರು. ಸೋಮೇಶ್ವರನ ಮಾನಸೋಲ್ಲಾಸದಲ್ಲಿ ಕನ್ನಡ ಛಂದಸ್ಸಿಗೆ ಸಂಬಂಧಿಸಿದ ಸಂಗತಿಗಳನ್ನು ಹುಡುಕಿ ತೆಗೆದುದಲ್ಲದೆ ಅಲ್ಲಿ ವಿರೂಪಗೊಂಡು ಉಳಿದಿದ್ದ ಕೆಲವು ಕನ್ನಡ ಪದ್ಯಗಳನ್ನು ಪುನರ‍್ರಚಿಸಿದ ಶ್ರೇಯಸ್ಸು ಅವರಿಗೆ ಸೇರಿದೆ. ನಾಗವರ್ಮ, ಜಯಕೀರ್ತಿ–ಇವರು ನಿರೂಪಿಸಿರುವ ಷಟ್ಪದದ(ದಿಯ) ಲಕ್ಷಣಕ್ಕೆ ಅನುಸಾರವಾಗಿ ರಚಿತವಾಗಿರುವ ಮೂರು ಪದ್ಯಗಳನ್ನು ಕ್ರಿ. ಶ, ೧೦೬೭ರ ಚಡಚಣ ಗ್ರಾಮದ ೧೩೩ನೆಯ ಶಾಸನದಲ್ಲಿ (S.I.I. Vol. xx) ಡಿ.ಎಲ್.ಎನ್. ಗುರುತಿಸಿರುವರು. ಶಾಸನದಲ್ಲಿ ಗದ್ಯದಂತೆ ಲಿಖಿತವಾಗಿದ್ದುದನ್ನು ಅವರು ಪದ್ಯಗಳೆಂದು ಗುರುತಿಸಿ, ಮೂರು ಷಟ್ಪದಿಗಳನ್ನಾಗಿ ಅವನ್ನು ಪುನರ‍್ರಚಿಸಿಕೊಟ್ಟಿರುವರು. ಕುಮುದೇಂದು ರಾಮಾಯಣದ ಪರಿವರ್ಧಿನಿಯ ಲಕ್ಷಣವನ್ನು ನಿರೂಪಿಸಿದ ಶ್ರೇಯಸ್ಸು ಅವರಿಗೆ ಸೇರುತ್ತದೆ (ನೋಡಿ : ಕುಮುದೇಂದು ರಾಮಾಯಣದ ಪರಿಷ್ಕರಣ ವಿಚಾರ).

ಡಿ.ಎಲ್.ಎನ್. ಹಳೆಗನ್ನಡ ನಡುಗನ್ನಡ ಕೃತಿಗಳಲ್ಲಿ ಕಂಡುಬರುವ ಅನೇಕ ದೋಷಯುಕ್ತ ಪಾಠಗಳಿಗೆ ಸರಿಯಾದ ಪಾಠವನ್ನು ಕೊಟ್ಟು ಉಪಕರಿಸಿರುವರು. ಅವರು ಕೊಡುವ ಊಹಾತ್ಮಕ ಪಾಠಗಳು ಸಮರ್ಥನೀಯವೆನ್ನಿಸುತ್ತವೆ. ಅವರು ಬಸವಣ್ಣನವರ ಕೆಲವು ವಚನಗಳ ಪಾಠವನ್ನು ಅತ್ಯಂತ

ಸಮರ್ಪಕವಾಗಿ ನಿರ್ಣಯಿಸಿರುವರು. ಅವರು ಕನ್ನಡದ ಅನೇಕ ಪದಗಳ ಅರ್ಥ, ಹಾಗೂ ನಿಷ್ಪತ್ತಿಯನ್ನು ಕೊಟ್ಟಿರುವರು. 'ಪೊರಸು', 'ಅಗ್ರಹಾರ' 'ಕಾಳಸೆ', 'ಡಂಗ ಹಾಕು', 'ರಪಣ' 'ಪಟಂಗಾರು', 'ಗುಯ್ಯಲ್', 'ಮೇಕು', 'ಈಜಿಲ್' 'ತಕದ್ಮರ್ಮೆ', 'ಭಗವತಿಯೇಜು' ಮುಂತಾದ ಪದಗಳ ಮೇಲೆ ನಡೆಸಿರುವ ಚರ್ಚೆ ಅತ್ಯಪೂರ್ವವಾದುದು. 'ಮೇಗಾಳಿ', 'ಕಿಗ್ಗಾಳಿ' ಎಂಬ ಪದಗಳಿಗೆ ಅರ್ಥ ಹೊಳೆದ ಪ್ರಸಂಗವಂತೂ ಸದಾ ಕಾಲ ಶಬ್ದಗಳ ಅರ್ಥ ಹಾಗೂ ನಿಷ್ಪತ್ತಿಯನ್ನು ಒಂದು ಗುಸುಗಾಗಿ ಉಳ್ಳ ಡಿ.ಎಲ್.ಎನ್. ಅವರ ವ್ಯಕ್ತಿತ್ವದ ಒಂದು ಮುಖದ ಪರಿಚಯ ಮಾಡಿಕೊಡುತ್ತದೆ. ಡಿ.ಎಲ್.ಎನ್. 'ಇಸಿಲ' ಎಂಬ ಕನ್ನಡ ಪದ ತೇದಿಯುಳ್ಳ ಅತ್ಯಂತ ಪ್ರಾಚೀನ ಪದವೆಂದು ತೀರ್ಮಾನಿಸಿರುವರು. ಎಂ. ಚಿದಾನಂದಮೂರ್ತಿಯವರು ಹೇಳುವಂತೆ[1] "ಆ ಪದಕ್ಕೆ ಹಿಂದಿನ ಹಲವರು ಕೊಟ್ಟ ವಿವರಣೆ ಸರಿಯಲ್ಲವೆಂದು ಅವರಿಗೆ ಅನಿಸಿದ್ದರೂ ಅದು ಅವರಿಗೆ ಸಮಸ್ಯೆಯಾಗಿಯೇ ಉಳಿದಿದ್ದಿತು. ಒಮ್ಮೆ ನರಸಿಂಹಾಚಾರ್ಯರು ಕ್ಷೌರದ ಅಂಗಡಿಯಲ್ಲಿ ಕ್ಷೌರಮಾಡಿಸಿಕೊಳ್ಳುತ್ತಿರು ವಾಗ, ಆ ಪದ ಅಚ್ಚ ಕನ್ನಡದ ಸ್ಥಳವಾಚಿ ಏಕಾಗಿರಬಾರದು ಎಂದು ಅನ್ನಿಸಿತು. ಅಲ್ಲಿಂದ ಮನೆಗೆ ಬಂದವರೇ ಸಂಬಂಧಪಟ್ಟ ತಮಿಳು ಮುಂತಾದ ಭಾಷೆಗಳ ಕೋಶಗಳನ್ನು ನೋಡಿದ ಮೇಲೆ ತಮ್ಮ ಊಹೆ ಸರಿಯಾದುದು ಎಂದು ಸಮಾಧಾನವಾಯಿತಂತೆ."

ಡಿ.ಎಲ್.ಎನ್. ಹಳೆಯ ತಲೆಮಾರಿನ ಪಾಂಡಿತ್ಯವನ್ನು ಉಳಿಸಿಕೊಂಡು ಬಂದವರು; ಆ ಪಾಂಡಿತ್ಯದ ಗಳಿಕೆಗಾಗಿಯೇ ಸತತವಾಗಿ ಶ್ರಮಿಸಿದವರು. ಅವರದು ನಿರಂತರವಾದ ಅಧ್ಯಯನ. ಅವರು ಸಂಶೋಧಕರಾಗಿ ಎಂದೂ ಆತುರದ ತೀರ್ಮಾನ ಕೈಗೊಂಡವರಲ್ಲ. ವಡ್ಡಾರಾಧನೆಯನ್ನು ಸಂಪಾದಿಸಿ ಹಲವು ವರ್ಷಗಳಾದರೂ ಅದಕ್ಕೆ ಅವರು ವಿಸ್ತಾರವಾದ ಪೀಠಿಕೆ, ಟಿಪ್ಪಣಿ ಗಳನ್ನು ಕೊಟ್ಟಿರಲಿಲ್ಲ. ನಾಲ್ಕನೆಯ ಮುದ್ರಣದಲ್ಲಿ ಅವುಗಳನ್ನು ಕೊಟ್ಟರು. ಅವುಗಳು ಎಷ್ಟು ಅಮೂಲ್ಯವಾಗಿವೆಯೆಂಬುದನ್ನು ಈಗ ಎಲ್ಲರೂ ಬಲ್ಲರು. ಅವರ ಪಾಲಿಗೆ ಸಂಶೋಧನೆ ಎನ್ನುವುದು ಒಂದು ನಿರಂತರವಾದ ಪ್ರಕ್ರಿಯೆ.

---

1 ಪ್ರಬುದ್ಧ ಕರ್ಣಾಟಕ ೫೩–೨ ಪುಟ ೧೪೪

ಅದು ಬುದ್ಧಿ ಹಾಗೂ ಮನಸ್ಸಿನ ಸಾಮ್ಯರಸ್ಯಪೂರ್ಣ ಸ್ಥಿತಿ; ಸತ್ಯದ ಕಡೆಗೆ ಸಾಗುವ ಹಾದಿ; ಅಂತಿಮವಾಗಿ ಸತ್ಯವೊಂದೇ ಶಾಶ್ವತವಾದುದೆನ್ನುವ ದರ್ಶನ.

ಡಿ.ಎಲ್.ಎನ್. 'ಪ್ರಬುದ್ಧ ಕರ್ಣಾಟಕ'ದಲ್ಲಿ ಸಂಶೋಧನೆ, ನಾಟಕ, ಕಥೆ, ಕಾದಂಬರಿ, ವ್ಯಾಕರಣ—ಹೀಗೆ ವಿವಿಧ ವಿಷಯಗಳನ್ನು ಕುರಿತ ಗ್ರಂಥಗಳ ವಿಮರ್ಶೆಯನ್ನು ಮಾಡಿರುವರು. ಹಳಗನ್ನಡ, ನಡುಗನ್ನಡ ಸಾಹಿತ್ಯದಲ್ಲಿ ಮಾತ್ರ ಅವರಿಗೆ ಆಸಕ್ತಿ, ಹೊಸಗನ್ನಡ ಸಾಹಿತ್ಯದ ಬಗೆಗೆ ಅಷ್ಟಾಗಿ ಆದರವಿಲ್ಲವೆನ್ನುವ ಅಭಿಪ್ರಾಯವಿದೆ. ಇದನ್ನು ಹುಸಿಮಾಡಲೆನ್ನುವಂತೆ ಅವರ ವಿಮರ್ಶಾ ಲೇಖನಗಳಿವೆ. ಹೊಸಗನ್ನಡದಲ್ಲೂ ಒಳಿತನ್ನು ಗುರುತಿಸಿ ಮೆಚ್ಚುವ ಮನೋಭಾವ ಅವರದು. ಶಂಬಾ. ಜೋಶಿಯವರ 'ಕಣ್ಮರೆಯಾದ ಕನ್ನಡ', 'ಮಹಾರಾಷ್ಟ್ರದ ಮೂಲ' ಎಂಬ ಎರಡು ಕೃತಿಗಳು ಗಾತ್ರದಲ್ಲಿ ಸಣ್ಣವಾಗಿದ್ದರೂ ದೊಡ್ಡ ವಿಷಯವನ್ನು ಕುರಿತ ಗ್ರಂಥಗಳು ; ಸಂಶೋಧಕರಿಗೆ ಬೇರೊಂದು ಹೊಸ ಹೊಲವನ್ನು ತೆರೆದು ತೋರಿಸುವಂತಹವು. ಈ ಎರಡೂ ಕೃತಿಗಳ ಬಗೆಗೆ ಡಿ.ಎಲ್.ಎನ್. ಮಾಡಿರುವ ವಿಮರ್ಶೆ ದೊಡ್ಡದು. ಹಾಗೆಯೇ ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯನ್ನು ಕುರಿತ ವಿಮರ್ಶೆಯೂ ದೊಡ್ಡದು : ಮೌಲಿಕವಾದವು. ಡಿ.ಎಲ್.ಎನ್. ಗುಣಗ್ರಾಹಿಗಳು, ಹಾಗೆಯೇ ಒಮ್ಮೊಮ್ಮೆ ನಿಷ್ಠುರವಾದಿಗಳು. ವಿಮರ್ಶೆ ವಸ್ತುನಿಷ್ಠವಾಗಿರಬೇಕೆಂಬ ಸದಾಶಯ ಅವರದ್ದು.

ಶಂ. ಬಾ. ಜೋಶಿಯವರು ತಮ್ಮ ಎರಡೂ ಕೃತಿಗಳಲ್ಲಿ 'ಕನ್ನಡರ' ಹಾಗೂ ಮರಾಠರ ಮೂಲಸ್ಥಾನ ಯಾವುದು ? ಎಂಬ ಸಮಸ್ಯೆಯ ಸಿಕ್ಕು ಬಿಡಿಸಲು ಪ್ರಯತ್ನಿಸಿರುವರು. ಡಿ.ಎಲ್.ಎನ್. ಹೇಳುವಂತೆ "ವಿಷಯ ತೀರ ಗಂಟಾದದ್ದು. ಹಲವು ಕಾಲದಿಂದ ಎಣ್ಣೆ ನೀರುಗಳನ್ನು ಕಾಣದೆ ತಿರಿಕಟ್ಟಿಕೊಂಡಿರುವ ಜೋಗಿಯ ಗಡ್ಡದಂತಿದೆ ಅದು. ಜೊತೆಗೆ, ಆಗಾಗ ಗೂಡು ಕಟ್ಟಿಕೊಳ್ಳುತ್ತ, ಗಡ್ಡದ ಬಹುಭಾಗ ತಮಗೆ ಸೇರಿದ್ದೆಂದು ಚಿಲಿಪಿಲಿಗುಟ್ಟುತ್ತಿದ್ದ 'ಹಾರಾಡುವ ಹಕ್ಕಿಗಳು' ಬೇರೆ. ಈಗಲೂ ಈ ಕಾದಾಟ ತಪ್ಪಿಲ್ಲ." ಜೋಶಿಯವರು ಮೂಲ ಕನ್ನಡವು ನರ್ಮದಾತೀರವೆಂದು ವಾದಿಸುವರು. ಅದಕ್ಕೆ ಪೂರಕವಾಗಿ ಭಾಷಾಶಾಸ್ತ್ರ, ಪ್ರಾಚೀನ ಗ್ರಂಥಗಳು, ಚರಿತ್ರೆ, ಮಾನವ ಕುಲಶಾಸ್ತ್ರ (Ethnology)—ಹೀಗೆ ನಾನಾ ಕಡೆಗಳಿಂದ ಆಧಾರ ಒದಗಿಸು

ವರು. ಡಿ.ಎಲ್.ಎನ್. ಜೋಶಿಯವರ ವಾದವನ್ನು ಸಂಗ್ರಹರೂಪದಲ್ಲಿ ಕೊಟ್ಟು, ನಂತರ ಈ ಆಧಾರಗಳಲ್ಲಿ ತಮಗಿರುವ ಪ್ರಬಲವಾದ ಸಂಶಯ ಗಳನ್ನು ವಿಸ್ತಾರವಾಗಿ ಪ್ರಸ್ತಾಪಿಸಿರುವರು. "ಶ್ರೀಮಾನ್ ಜೋಶಿಯವರು ಹೊರಟಿರುವ ಕ್ರಮವನ್ನು ನೋಡಿದರೆ ಹೇಗಾದರೂ ಮಾಡಿ ತೆಲುಗ ಮರಾಠಿಗಳನ್ನು ಈ ಪ್ರದೇಶದಿಂದ ಪರಿಹರಿಸಿ ಅನಂತರ ಅಲ್ಲಿ ಕನ್ನಡವೇ ರಾಜ್ಯ ವಾಳುತ್ತಿತ್ತೆಂದು ತೋರಿಸುವುದೇ ಅವರ ಉದ್ದೇಶವೆಂದು ಕಾಣುತ್ತದೆ. ಇವು ಗಳನ್ನು 'ಹಸುಗೂಸು'ಗಳೆಂದು ಮೂಲೆಗೊತ್ತಿ, ಕನ್ನಡದ ಅಗ್ಗಳಿಕೆಯನ್ನು ತೋರಿಸಲು ಅವರು ಪ್ರಯತ್ನಪಟ್ಟಿದ್ದಾರೆ." ಇದು ಈ ಎರಡು ಪುಸ್ತಕಗಳ ರಚನೆಯ ಹಿಂದಿರುವ ಮೂಲೋದ್ದೇಶವನ್ನು ಕುರಿತು ಡಿ.ಎಲ್.ಎನ್. ಮಾಡಿರುವ ಟೀಕೆ. ತೆಲುಗಿನಲ್ಲಿ ೧೧ನೆಯ ಶತಮಾನಕ್ಕೆ ಮೊದಲು ಸಾಹಿತ್ಯವೇ ಇರಲಿಲ್ಲವೆನ್ನುವ ವಾದವನ್ನು ಡಿ.ಎಲ್.ಎಲ್. ಒಪ್ಪದೆ, ಹಲವು ಆಧಾರ ಗಳನ್ನು ಕೊಟ್ಟು ತೆಲುಗು ನಾಡೂ ನುಡಿಯೂ ಹೆಚ್ಚು ಕಡಮೆ ಕನಿಷ್ಠಪಕ್ಷ ಕನ್ನಡದಷ್ಟೇ ಪ್ರಾಚೀನವಾಗಿರಬೇಕೆಂದು ಹೇಳುವರು. 'ತೆಲುಗಿಗೆ ತೆಲುಗು ಧಾತುವಿನಿಂದಲೇ ಸಿದ್ಧವಾದ ಸ್ವದೇಶದರ್ಶಕ ಶಬ್ದವೇ ಇಲ್ಲ' ಎನ್ನುವುದನ್ನು ಒಪ್ಪದ ಅವರು 'ತ್ರಿಕಲಿಂಗ' ಎಂಬುದರಿಂದ 'ತೆಲುಗು' ಬಂದಿದೆಯೆಂದು ಎಲ್ಲರೂ ಸಾಧಾರಣವಾಗಿ ಒಪ್ಪಿರುವುದನ್ನು ಇನ್ನಷ್ಟು ಪುರಾವೆಗಳಿಂದ ಪ್ರತಿ ಪಾದಿಸಿರುವರು. 'ಪಂಪಭಾರತ'ದ ೧-೨೦ರಲ್ಲಿ (ಕಂದ ಪದ್ಯದ ೨ನೆಯ ಸಾಲಿನಲ್ಲಿ ಬರುವ ಕೊನೆಯ ಪದ 'ಮಂತ್ರಿಗಳಿಂ' ಎನ್ನುವ ಪಾಠಕ್ಕೆ ಬದಲಾಗಿ) 'ತ್ರಿಕಲಿಂಗಂ' ಎಂದಿರಬೇಕೆಂದು ತೋರುತ್ತದೆ ಎಂದು ಅವರು ಅಭಿಪ್ರಾಯ ಪಡುವರು. ಟಾಲೆಮಿಯು ಕೃಷ್ಣ ಗೋದಾವರಿಗಳ ನಡುವೆ ಕಲ್ಲಿಗ ನಗರ ವಿತ್ತೆಂದು ಹೇಳುವನು. ಇದು ಕಲಿಂಗ ನಗರವೇ ಎಂಬುದರಲ್ಲಿ ಸಂಶಯವಿಲ್ಲ. ಪ್ರಾಚೀನ ಕಲಿಂಗ ದೇಶವು ಮೂರು ತುಂಡುಗಳಾಗಿ ವಿಭಾಗವಾಗಿತ್ತೆಂದು ತೋರುತ್ತದೆ. ಎರಡನೆಯ ರಾಜೇಂದ್ರ ಚೋಳನು ಕ್ರಿ.ಶ. ೧೦೬೫-೬ಕ್ಕಿಂತ ಹಿಂದೆ ದಕ್ಷಿಣ ಕಲಿಂಗದ ಮೇಲೆ ದಾಳಿಯಿಟ್ಟಿದ್ದನಂತೆ. ತೆಲುಗು ಶಬ್ದಕ್ಕೆ ಮೂಲವೇನೆಂಬುದನ್ನು ಹೇಳುತ್ತ ಡಾ॥ ಬಾರ್ನೆಟ್ ಅವರು ತೆನ್ (ತೆಂಕ ಎಂಬುದರ ಮೂಲರೂಪ) ಎಂಬುದರಿಂದ ಅದು ಬಂದಿರುವ ಸಂಭವ ಹೆಚ್ಚು ಎಂದು ಅಭಿಪ್ರಾಯಪಟ್ಟಿದ್ದಾರೆ. ಆ ದಕ್ಷಿಣ ಕಲಿಂಗವೇ 'ತೆನ್ ಕಲಿಂಗ'.

ಇದು ಕೃಷ್ಣಾನದಿಯ ತೀರವೆಂದು ಹೇಳುವುದು ಪುನರುಕ್ತಿ. ಈ 'ತ್ರೆನ್ ಕಲಿಂಗ'ವೇ ತೆಲುಗು ಶಬ್ದಕ್ಕೆ ಮೂಲವಾಗಿರಬೇಕೆಂದು ಡಿ.ಎಲ್.ಎನ್. ಅಭಿಪ್ರಾಯಪಡುವರು.

'ಕಾವೇರಿಯಿಂದಮಾ ಗೋದಾವರಿವರಮಿರ್ಪ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ' ಎಂಬ ಕವಿರಾಜಮಾರ್ಗಕಾರನ ಹೇಳಿಕೆಯನ್ನು ನಂಬಿಕೊಂಡು ತೆಲುಗರಿಗೆ ರಾಜ್ಯವೂ ಇರಲಿಲ್ಲವೆಂದು ವಾದಿಸಲು ಹೊರಟ ಜೋಶಿಯವರ ವಾದವನ್ನೂ ಡಿ.ಎಲ್.ಎನ್. ಖಂಡಿಸುವರು. "ಈಗಿನ ನಿಜಾಂ ರಾಜ್ಯದ ಪೂರ್ವಭಾಗವು ಈಗಿರುವಂತೆಯೇ ಹಿಂದೆಯೂ ತೆಲುಗಾಗಿತ್ತು. ಹೀಗೆಯೇ ಕಾವೇರಿ ಕೃಷ್ಣೆಗಳ ನಡುವಿರುವ ದಕ್ಷಿಣ ಭಾಗವೆಲ್ಲಾ ಎಂದೂ ಕನ್ನಡವಾಗಿರಲಿಲ್ಲ ; ಉತ್ತರ ಭಾಗವಂತೂ ಬಹುಕಾಲದಿಂದ ತೆಲುಗೇ." ಎಂದು ಹೇಳಿ ಅವರು ತಮ್ಮ ವಾದವನ್ನು ವಿವರಿಸಿರುವರು.

ಮರಾಠಿಯಲ್ಲಿ ಸಾಹಿತ್ಯ ತಲೆದೋರಿದ್ದು ಸು. ೧೩ನೆಯ ಶತಮಾನದಲ್ಲಿ. ಇದಕ್ಕೂ ಹಿಂದೆ ಮರಾಠಿ ಭಾಷೆ ಇದ್ದಿತೆಂಬುದಕ್ಕೆ ಕ್ರಿ.ಶ. ೧೧೧೫–೮ರಲ್ಲಿ ಹುಟ್ಟಿದ ಒಂದು ಶಾಸನವೂ ೧೨೦೭ರಲ್ಲಿ ಹುಟ್ಟಿದ ಮತ್ತೊಂದು ಶಾಸನವೂ ಇದೆ. ಮರಾಠಿ ಭಾಷೆಗೆ ಮಹಾರಾಷ್ಟ್ರೀ ಪ್ರಾಕೃತವು ಮೂಲ. ಇವೆರಡಕ್ಕೂ 'ಜನ್ಯ ಜನಕ ಸಂಬಂಧವಿಲ್ಲ'ವೆಂಬ ಜೋಶಿಯವರ ಅಭಿಪ್ರಾಯವನ್ನು ಡಿ.ಎಲ್.ಎನ್. ತೀರ ಅಸಂಗತವೆಂದಿರುವರು. ಕೆಲವು ಕನ್ನಡ ಶಬ್ದಗಳು ಮರಾಠಿಯಲ್ಲಿ ಕಂಡುಬಂದ ಮಾತ್ರಕ್ಕೇ ಮರಾಠಿ ಕನ್ನಡ ತಾಯ ತೋಳ ತೊಟ್ಟಿಲಿನಲ್ಲಿಯೇ ಬೆಳೆದುಕೊಂಡು ಬಂದಿತು ಎಂದು ಹೇಳಲಾದೀತೆ ? ಭಿನ್ನ ಸಂಸ್ಕೃತಿಗಳು, ಭಿನ್ನ ಭಾಷೆಗಳು ಒಂದರ ಮಗ್ಗುಲಲ್ಲೊಂದು ಬಹುಕಾಲ ಬದುಕಿಕೊಂಡು ಬಂದರೆ, ಸಮಾನವಾದ ಶಕ್ತಿಯುಳ್ಳವುಗಳಾಗಿದ್ದರೆ, ಒಂದರಿಂದೊಂದಕ್ಕೆ ಶಬ್ದಗಳು ಎರವಲಾಗಿ ಬರುವುದು ಕಂಡ ವಿಷಯ – ಎಂದು ಅವರು ಹೇಳುವರು. ಮಹಾರಾಷ್ಟ್ರೀ ಪ್ರಾಕೃತವು ಹಲವು ಭಾಷೆಗಳ ಬೆರಕೆ, ಕೃತ್ರಿಕ, ಅದಕ್ಕೆ ವ್ಯಕ್ತಿತ್ವವೇನೂ ಇಲ್ಲ ಎಂಬ ಅಭಿಪ್ರಾಯವನ್ನೂ ಡಿ.ಎಲ್.ಎನ್. ಒಪ್ಪುವುದಿಲ್ಲ. ಮಹಾರಾಷ್ಟ್ರೀ ಪ್ರಾಕೃತಕ್ಕೂ ಜೈನ ಮಹಾರಾಷ್ಟ್ರೀಗೂ ವ್ಯತ್ಯಾಸ ಬಹಳ ಇಲ್ಲ : ಎರಡೂ ಒಂದೇ. ನೃಪತುಂಗನ ಕಾಲಕ್ಕೂ ಹಿಂದೆ ಈ ಪ್ರಾಕೃತದ ಸಾಹಿತ್ಯ ಬಹು ಪ್ರಚಾರವಾಗಿತ್ತು ಎಂದು

ಅವರು ಹೇಳುವರು. ಪ್ರಾಕೃತವು ಗ್ರಾಂಥಿಕ ಭಾಷೆಯೇ ಹೊರತು ಆ ಪ್ರಾಂತ[illegible]
ಮನೆಮಾತಾಗಿರಲಿಕ್ಕಿಲ್ಲ ಎನ್ನುವ ಜೋಶಿಯವರ ಮಾತನ್ನು ಒಪ್ಪದ ಅವರ[illegible]
ಪಂಪನು ಹಳಗನ್ನಡದಲ್ಲಿ ಬರೆದನೆಂದ ಮಾತ್ರಕ್ಕೆ ಆ ಕಾಲದಲ್ಲಿ ಮನೆಮಾತ[illegible]
ಕನ್ನಡವಾಗಿರಲಿಲ್ಲವೆಂದು ಹೇಳಲಾದೀತೆ ? ಆದ್ದರಿಂದ ವ್ಯಾವಹಾರಿಕ ಭಾಷ[illegible]
ಒಂದು ವಿಧವಾದ ಮರಾಠಿಯೇ – ಈಗಿನ ಮರಾಠಿಯಂತಿಲ್ಲದಿರಬಹುದು [illegible]
ಆದರೆ ಅವೆರಡರವರ ಜೀವ ಒಂದೇ – ಮಹಾರಾಷ್ಟ್ರದಲ್ಲಿ ಎಂದರೆ, ಗೋದಾ[illegible]
ವರಿಯ ಉತ್ತರಕ್ಕೆ ಮನೆಮಾತಾಗಿರಲೇಬೇಕು, ಅಲ್ಲಿ ಕನ್ನಡವನ್ನು ಹುಡುಕಲಿಕ್ಕೆ
ಹೊರಡುವುದು ಊರಲ್ಲಿಲ್ಲದವರ ಹೆಸರು ಹಿಡಿದು ಕೂಗಿದ ಹಾಗೆ ಅಲ್ಲವೆ ?
ಎಂದು ಕೇಳಿರುವರು.

'ಮರಹಟ್ಟ' ಎಂಬ ಕನ್ನಡಪದದಿಂದ ಮಹಾರಾಷ್ಟ್ರ ಎಂಬ ಶಬ್ದ[illegible]
ಹುಟ್ಟಿತು ಎನ್ನುವ ಜೋಶಿಯವರ ವಾದವನ್ನೂ ಡಿ.ಎಲ್.ಎನ್. ಖಂಡಿಸುತ್ತಾ[illegible]
ಆ ನಾಡು ನುಡಿಗಳ ಹೆಸರು ಕನ್ನಡವಲ್ಲವೆನ್ನುವರು. ಗೋದಾವರಿಯ[illegible]
ಉತ್ತರದಲ್ಲಿ ಕನ್ನಡದ ಕುರುಹುಗಳನ್ನು ಕಾಣುವ ಜೋಶಿಯವರ ವಾದವನ್ನೂ
ಡಿ.ಎಲ್.ಎನ್. ಒಪ್ಪುವುದಿಲ್ಲ. ರಾಷ್ಟ್ರಕೂಟ ಮೂರನೆಯ ಕನ್ನರನ ಕನ್ನಡ[illegible]
ಪ್ರಶಸ್ತಿಯೊಂದು ಜೂರಾದಲ್ಲಿ ಸಿಕ್ಕಮಾತ್ರಕ್ಕೆ ಅಲ್ಲಿಯವರೆಗೂ ಕನ್ನಡದ[illegible]
ವ್ಯಾಪ್ತಿ ಇತ್ತೆಂದು ಹೇಳಬಹುದೆ ? ಒಂದೇ ಕೋಗಿಲೆಯಿಂದ ವಸಂತಕಾಲ[illegible]
ಬರುತ್ತದೆಯೆ ? ಎಂದು ಅವರು ಪ್ರಶ್ನಿಸುವರು.

ಕಾರಂತರ 'ಮರಳಿ ಮಣ್ಣಿಗೆ' ಡಿ.ಎಲ್.ಎನ್. ಅಭಿಪ್ರಾಯಪಡುವಂತೆ
ಮಹಾ ಕಾದಂಬರಿ ; ಕಾಲದ ದೃಷ್ಟಿಯಿಂದ ಕನ್ನಡಕ್ಕೆ ಎರಡನೆಯದು (ಮೊದ[illegible]
ಲನೆಯದು ಕುವೆಂಪುರವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ'). ಟಾಲ್[illegible]
ಸ್ಟಾಯ್, ಹಾರ್ಡಿ, ಗಾಲ್ಸ್‌ವರ್ದಿ, ರೋಮೇರೋಲ ಮುಂತಾದ ಪಾಶ್ಚಾತ್ಯ
ವಿಭೂತಿಗಳ ಮಹಾಕಾದಂಬರಿಗಳಿಗೆ ಇದು ಸದೃಶವಾಗಿದೆ ; ಅವುಗಳನ್ನು
ಓದಿದಾಗ ಆಗುವಷ್ಟು ಸಂತೃಪ್ತಿ ಇದರಿಂದಲೂ ಬರುವಂತಿದೆ—ಎನ್ನುವ ಅವರ
ಮಾತುಗಳು ಬೆಲೆಯುಳ್ಳವುಗಳಾಗಿವೆ. ಕಾದಂಬರಿಯ ಕಥೆಯನ್ನು ಸಂಗ್ರಹಿಸಿ
ಹೇಳಿ, ಈ ಕಥೆಯಲ್ಲಿ ಕಾಣುವ ಪಾತ್ರಗಳು ಮನುಷ್ಯ ಸ್ವಭಾವದ ಸೂ[illegible]
ಪ್ರದರ್ಶನ ಶಾಲೆಯಾಗಿವೆ ಎಂಬುದನ್ನು ಸರಸೋತಿ–ಪಾರ್ವತಿ, ನಾಗವೇಣಿ,
ರಾಮ ಐತಾಳ, ಲಚ್ಚ, ರಾಮರಾವ್—ಈ ಪಾತ್ರಗಳ ವಿಶಿಷ್ಟ ಸ್ವಭಾವ ಗುಣ[illegible]

ಲಕ್ಷಣಗಳ ಮೂಲಕ ಅವನ್ನು ನಮ್ಮ ಕಣ್ಣಮುಂದೆ ನಿಲ್ಲಿಸುವರು ; ಭಾವಪೂರ್ಣವಾಗಿ ಚಿತ್ರಿಸುವರು. ನಿದರ್ಶನಕ್ಕೆ ಸರಸೋತಿ–ಪಾರ್ವತಿಯರನ್ನು ನೋಡಬಹುದು : "ರಾಮ ಐತಾಳರ ಮನೆದೇವರಂತಿದ್ದ ಸರಸೋತಿ ಹಳೆಯ ಸಂಸ್ಕೃತಿಯ ಉಚ್ಚ ಪ್ರತೀಕದಂತೆ ಚಿತ್ರಿತಳಾಗಿದ್ದಾಳೆ. ಚಿಕ್ಕಂದಿನಲ್ಲೆ ಗಂಡನನ್ನು ಕಳೆದುಕೊಂಡು ತನ್ನ ಮನೆಯಲ್ಲಿ ಇರಲೊಲ್ಲದೆ ಅಣ್ಣನ ಹತ್ತಿರ ಬಂದು ಸೇರಿದವಳು ಅವಳು. ತನ್ನ ದುಃಖವನ್ನು ತನಗೆ ಸಹಜವಾದ ವಿರಕ್ತಿಯಿಂದ ಗೆದ್ದವಳು. ಅಣ್ಣನ ಮನೆಯಲ್ಲಿ ಅವಳದೇ ಯಜಮಾನಿಕೆ. ಇವಳು ಇಲ್ಲದಿದ್ದರೆ ಆ ಮನೆವಾರ್ತೆ ನಡೆಯುವುದು ಕಷ್ಟ. ಹೆಚ್ಚು ಮಾತನ್ನು ಆಡುವ ಸ್ವಭಾವವಿಲ್ಲ. ಆದರೆ ಆಡಿದುದೆಲ್ಲವೂ ಪರಿಣಾಮಕಾರಕವಾದವು. ಮಳೆ, ಬಿರುಗಾಳಿ, ಬಿಸಿಲು, ಸೆಕೆ, ಬೆವರು, ಕೆಸರು, ಗೊಬ್ಬರ, ಆಸರು–ಯಾವುದನ್ನಾದರೂ ಎದುರಿಸಿ ದುಡಿಯುವ ಚೈತನ್ಯ ಅವಳದು. ಉಪ್ಪಿನ ಕಾಯಿಗಾಗಿ ಅವಳು ಪಟ್ಟ ಶ್ರಮದ ಕತೆ ಒಂದೇ ಸಾಕು ನಿದರ್ಶನಕ್ಕೆ. ನಿಷ್ಠೆ, ಆಚಾರ, ಭಕ್ತಿ ಮುಂತಾದ ಆಸ್ತಿಕ ಗುಣಗಳಿಗೆ ಅವಳು ತೌರುಮನೆ. ಮೊದಲೇ ಶುದ್ಧ ಹೃದಯದ ಅವಳಿಗೆ ಇವು ಅನಾವಶ್ಯಕವೆಂದು ನಮಗೆ ಅನ್ನಿಸಿದರೂ ಹಿಂದಿನ ನಡವಳಿಕೆ ಹೋಗಬಾರದೆಂದು ಅವಳ ಎಣಿಕೆಯಿರುವಂತೆ ಕಾಣುತ್ತದೆ. ಮುದಿಯಾದರೂ ಕಣ್ಣು ಮಂಜಾದರೂ ಕೂತಲ್ಲೆ ಕಾಲು ಕುಸಿಯುವಂತಿದ್ದರೂ ಅವಳ ಸ್ಥಿರಸಂಕಲ್ಪ ಅವಳನ್ನು ಕಾಶೀಯಾತ್ರೆ ಮಾಡಿಸಿ ಕರೆದುತಂದಿತು. ಅವಳ ಕಣ್ಣೆದುರೇ ಪಾರೋತಿಯ ಪ್ರಾಣ ಹಾರಿಹೋಯಿತು. ಅಣ್ಣನು ಅಸ್ತಮಿಸಿದನು. ಅಣ್ಣನ ಮಗ ಲಚ್ಚ ನಂಬಿಸಿ ಕೈಬಿಟ್ಟ. ಎಲ್ಲ ದುಃಖಗಳನ್ನೂ ಅನುಭವಿಸಿ ದೈವಚಿತ್ತವೆಂದು ನಂಬಿದ್ದ ಮಹಾಜೀವ ಅವಳದು. ಅವಳ ಮೇಲ್ಪಂಕ್ತಿಯಲ್ಲಿ ಬಾಳನ್ನು ಸಾಗಿಸಿದ ವ್ಯಕ್ತಿ ಪಾರೋತಿ. ತನ್ನಿಂದ ಗಂಡನಿಗೆ ಆದ ಮೂಕದುಃಖಕ್ಕೆ ಮಿತಿಯಿಲ್ಲವೆಂದು ಭಾವಿಸುವವಳು. ಸರಸೋತಿಯ ಆತ್ಮಶಕ್ತಿಯಲ್ಲಿ ತನ್ನ ಆತ್ಮಕ್ಕೆ ದೀಪ ಹಚ್ಚಿಸಿಕೊಂಡಳು. ದೈಹಿಕ ಮಾನಸಿಕ ಸಂಕಷ್ಟಗಳನ್ನು ಗಾಣದ ಎತ್ತಿನಂತೆ ಸಹಿಸಿಕೊಂಡು ಸಂಸಾರಕ್ಕೆ ಸುಖದ ಸ್ನೇಹವನ್ನು ಚೆಲ್ಲಿದ ಮಹಾ ಲಲಿತೆ ಅವಳು. ಮತ್ತೆ ಯಾರಾದರೂ ಆಗಿದ್ದರೆ ಐತಾಳರ ಎರಡನೆಯ ಮದುವೆಯ ನಂತರ ಆ ಮನೆಯನ್ನೇ ನರಕವಾಗಿ ಮಾಡುತ್ತಿದ್ದರೇನೊ ? ಬಡತನದ ನರಕವಿದ್ದರೂ ಮನಸ್ಸಿನ ರೌರವ

ವನ್ನು ಅವಳು ಸೃಷ್ಟಿಸಲಿಲ್ಲ. ಅವಳು ಸನ್ಯಾಸಿನಿ. ಅವಳು ಸಾಯುವ ದೃಶ್
ಅವಳ ಹೃದಯದ ಪರಿಪಕ್ವತೆಯನ್ನು ಕಾಣಿಸುತ್ತದೆ. ತನ್ನ ಪ್ರಾಣ ಹೋಗು
ವಾಗ ಗಂಡನ ತೊಡೆಯಮೇಲೆ ತನ್ನ ತಲೆ ಇರಬೇಕೆಂದು ಬೇಡಿದಳು.
ಅದೊಂದೇ ಅವಳ ಹಂಬಲ. ಮತ್ತೇನೂ ಬೇಕಿಲ್ಲವೆಂಬ ವೈರಾಗ್ಯ ಅವಳ
ಮನಸ್ಸಿನಲ್ಲಿ ಮಡಲಿರಿದಿದೆ. ಇಂಥ ಜೀವಗಳನ್ನು ಕುಸುಮಿಸಿದ ಹಿಂದಿನ
ಸಂಸ್ಕೃತಿ ಎಷ್ಟು ಸಾರವತ್ತಾದುದು ! ಅವರನ್ನು ನಿರ್ಮಿಸಿದ ಕಲೆಯ ಪ್ರತಿಭೆ
ಎಷ್ಟು ಮನೋಜ್ಞ !"

ನಾಗವೇಣಿಯ ಪಾತ್ರ ಇವರಿಬ್ಬರಿಗಿಂತಲೂ ಒಂದು ಬಣ್ಣ ಮೇಲೆನ್ನುವ
ಡಿ.ಎಲ್.ಎನ್. ಇಂಥ ಪಾತ್ರ ಬದುಕಿನಲ್ಲೂ ಸಾಹಿತ್ಯದಲ್ಲೂ ದೊರೆಯುವುದು
ವಿರಳ. ವಾಸ್ತವಿಕ ಲೋಕದಲ್ಲಿ ಶ್ರೀ ಕಾರಂತರು ಕಂಡಿರಬಹುದಾದ ಒಂದು
ವ್ಯಕ್ತಿ ನಾಗವೇಣಿಯ ಪಾತ್ರರಚನೆಯಲ್ಲಿ ಆದರ್ಶೀಕೃತವಾಗಿ ಹೃತ್ಸೌಂದರ್ಯ
ದಿಂದ ಬೆಳ್ಳಿಯಂತೆ ಬೆಳಗುತ್ತಿದೆ – ಎನ್ನುವರು. ಲಕ್ಷ್ಮಣ ಪಾತ್ರದ ಬಗೆಗೆ
ವಿವೇಚಿಸುತ್ತಾ ಅವನು ಹೇಗೆ ಒಂದು ಮನಶ್ಶಾಸ್ತ್ರದ ಸಮಸ್ಯೆಯಾಗಿದ್ದಾನೆ
ಎಂಬುದನ್ನು ವಿವರಿಸಿರುವರು.

ಕಾರಂತರಿಗೆ ಕಾದಂಬರಿ ರಚನೆಗೆ ಪ್ರೇರಣೆ ಅನಂತವಾದ ಕಡಲ ಹರವು;
ಅದಕ್ಕಿಂತಲೂ ಅಗಲವಾದ ಆಳವಾದ, ಸಕಲ ರೂಪಗಳನ್ನು ತಾಳುವ ಜೀವನ
ಸಾಗರ. ಮಂಗಳೂರಿನ ಪಡುಕರಾವಳಿಯ ಬದುಕು ಬಡತನದೊಡನೆ ಸೆಣ
ನಡೆಸುತ್ತಿರುವ ಸಂಗರವನ್ನು ಕಾರಂತರು ಎಳೆಎಳೆಯಾಗಿ ರಸರಸವಾಗಿ ಬಿಡಿಸಿ
ಚಿತ್ರಿಸಿದ್ದಾರೆ ಎನ್ನುವ ಡಿ.ಎಲ್.ಎನ್. ರವರ ಮಾತಿನಲ್ಲಿ ಸತ್ಯಾಂಶವಿದೆ.
ಕಾದಂಬರಿಯಲ್ಲಿ ಅಡಕವಾಗಿರುವ ಜೀವನತತ್ತ್ವ ಏನಿರಬಹುದೆಂಬ ವಿಷಯದ
ಬಗೆಗೆ ವಿಚಾರಮಾಡುತ್ತಾ "ಬಡತನವೆ ಇದಕ್ಕೆ ಒಡೆಯನಾಗಿದ್ದರೂ ಅದರ
ಒಡೆತನವನ್ನು ಮುರಿದು ಸ್ವರಾಜ್ಯ ಸಂಪಾದಿಸಲು ಮನುಷ್ಯ ಪ್ರಯತ್ನ ಕಾಳಗ
ವನ್ನು ಇಲ್ಲಿ ಹೂಡಿದೆ. ಅದರಲ್ಲಿ ಮೊದಲು ಸೋಲುಂಟಾದರೂ ಅಂತ್ಯದಲ್ಲಿ
ಜಯ ಲಭಿಸಿದೆ. ಬಡತನಕ್ಕೆ ಸೆಣಸಾಡಿಸುವ ಶಕ್ತಿ ನಾಗವೇಣಿಯದ್ದು.
ಇವಳಂತೆ ಜನ ಯತ್ನಸಹಿತವಾಗಿ ಸಿದ್ಧಿಯನ್ನು ಪಡೆಯಬೇಕೆಂಬ ತತ್ತ್ವ ಕಾಣು
ತ್ತದೆ. ಇದೊಂದೇ ಅಲ್ಲ: ಇಂಗ್ಲೀಷು ವಿದ್ಯೆ ನಮ್ಮವರಿಗೆ ತಿಳಿಯುವುದಕ್ಕೆ
ಮುಂಚೆ ಬಾಳು ಹೇಗಿತ್ತು, ತಿಳಿದ ಹೊಸದರಲ್ಲಿ ಹೇಗಾಯ್ತು, ಈಗ

ಏನಾಗಿದೆ ಎಂಬೊಂದು ಜಿಜ್ಞಾಸೆಗೆ ಸ್ಪಷ್ಟ ನಿದರ್ಶನ ಈ ಕಾದಂಬರಿ" ಎಂದು ಅವರು ಹೇಳುವರು. ಇವು ಗಂಭೀರ ಚಿಂತನೆಗೆ ಅರ್ಹವಾಗಿವೆ. ಕಲಿತವರು ಹಳ್ಳಿಯನ್ನು ಬಿಟ್ಟು ಪಟ್ಟಣ ಸೇರಿ ಹಳ್ಳಿಯ ಬದುಕು ಸ್ವಾತಂತ್ರ್ಯಪೂರ್ವದಲ್ಲಿ ಹೀನವಾಯಿತು. ಬಾಪು 'Return to the Soil' ಎಂಬ ಕರೆ ನೀಡಿದರು. 'ಮರಳಿ ಮಣ್ಣಿಗೆ' ಎಂಬ ಮಾತಿನಲ್ಲಿ ಇದು ಮೂರ್ತೀಭವಿಸಿದೆ ಎಂಬ ಅವರ ಆಲೋಚನೆಯೂ ತಾಜಾತನದಿಂದ ಕೂಡಿದೆ.

ಇಷ್ಟು ಚೆನ್ನಾದ ಕಾದಂಬರಿಯನ್ನು ಕನ್ನಡಕ್ಕೆ ಕೊಟ್ಟಿರುವ ಕಾರಂತರನ್ನು ಹೃತ್ಪೂರ್ವಕವಾಗಿ ನಾಡಿಗೆ ನಾಡೇ ಅಭಿನಂದಿಸುತ್ತದೆ. ಅವರ ಕಲೆ ಇಲ್ಲಿ ರಸಾಯನವಾಗಿದೆ ಎಂದು ಮೊದಲಾಗಿ ಹೃದಯತುಂಬಿ ಹೊಗಳಿರುವ ವಿ.ಎಲ್.ಎನ್. ಕಾದಂಬರಿಯಲ್ಲಿನ ಕೊರತೆಗಳನ್ನೂ ಹೇಳಿರುವರು: "ಕಾದಂಬರಿಯ ಮೊದಲ ಅರ್ಧ ಅಲಸಗಮನೆಯಾಗಿದ್ದು ಮುಂದಿನ ಅರ್ಧ ಉಸಿರುಕಟ್ಟಿ ಓಡುತ್ತಿದೆ. ಇದರಿಂದ ಮುಂದಿನ ಭಾಗದಲ್ಲಿ ಬರುವ ಕೆಲವು ಸಂದರ್ಭಗಳ ಅಪೇಕ್ಷಣೀಯವಾದ ವಿವರಣೆಗಳು ಮಾಯವಾಗಿ ಆತುರದಿಂದ ಮುಕ್ತಾಯವಾಗಿರುವಂತೆ ಅನ್ನಿಸುತ್ತದೆ. ಕಥೆಯನ್ನು ಓದುವಾಗ ಕೆಲವು ಬೇಸರದ ನಿಮಿಷಗಳನ್ನು ಕಳೆಯಬೇಕಾಗುತ್ತದೆ. ಒಂದೇ ವಿಷಯವನ್ನು ಕುರಿತ ವರ್ಣನೆ ಕೆಲವು ಸಲ ಬಂದಿದೆ. ಪಾರ್ವತಿ, ಸತ್ಯಭಾಮೆ, ಲಚ್ಚ ಮುಂತಾದವರ ಮದುವೆಗಳ ವರ್ಣನೆ ಒಂದು ಮಾದರಿಗೆ—ಈ ಮೂರು ಮದುವೆಗಳಲ್ಲೂ ಅದೇ ಮಳೆ, ಅದೇ ದಿಬ್ಬಣ. ಅದೇ ಗದ್ದಲಗಳ ಹಾರಾಟ, ಅದೇ ಕೋಲಾಹಲ, ಇವುಗಳಲ್ಲಿ ಪ್ರಮುಖವಾದ ಒಂದಕ್ಕೆ ಎಲ್ಲ ವರ್ಣನೆಯನ್ನು ತೆಗೆದಿಟ್ಟು ಮಿಕ್ಕುವನ್ನು ಅದರಂತೆ ತೇಲಿಸಿದ್ದರೆ ಮೊದಲ ಅರ್ಧದ ಪ್ರಮಾಣವು ಕಡಮೆಯಾಗಿ ಬೇಸರವೂ ತಿಳಿಯಾಗುತ್ತಿತ್ತು. ಗಾಣಿಕಾರರ ಮದುವೆಗೆ ಲೀನನು ಹೊರಟು ರಾಜೀವ ಚಂದಿಯರೊಡನೆ ಸಲಿಗೆ ಬೆಳಸಿದ ಸಂಗತಿಯನ್ನು ಸುಮಾರು ಒಂದು ಪ್ರಕರಣದಲ್ಲಿ ಹೇಳಿದೆ; ಕಥೆ ಸ್ವಾರಸ್ಯವಾಗಿದ್ದರೂ ಅದೆಲ್ಲ ಕಾದಂಬರಿಗೆ ಬೇಕೆ ಎನ್ನಿಸುತ್ತದೆ. ಲೀನನ ಸ್ವಭಾವ ನಿರೂಪಣೆಗೆ ಇದು ಅವಶ್ಯಕವಾದರೂ ಇಷ್ಟು ವಿಸ್ತಾರ ಅತಿ ಎನ್ನಬೇಕಾಗಿದೆ. ಪಡುಕರಾವಳಿಯ ಹಳ್ಳಿಯ ಜನರ ಬದುಕಿನ ವೃತ್ತಿಗಳ ನಾನಾ ಅಂಶದ ವಿವರಣೆಗಳು ಇಲ್ಲಿ ಕೊಟ್ಟಿರುವಷ್ಟು ಕಾದಂಬರಿಗೆ ಬೇಕೆ? ಮೇಲಿಂದ ಮೇಲೆ

ಉಳುವ ನೆಡುವ ನೀರು ಹಾಯಿಸುವ ಕಿತ್ತುವ ಹೆಕ್ಕೆಯುವ ನಾನಾ ಕಸಬಿನ ವಿವರಗಳು ಬರುವುದರಿಂದ ಇದೇನು ಸಮಾಜವಿಜ್ಞಾನವೋ ಎಂಬ ಸಂದೇಹ ಬರುವಂತಿದೆ. ಮುಂದೆ ಬರುವ ಕಥೆಯನ್ನು ಸವಿಯಲು ಉತ್ಸುಕವಾಗಿರುವ ಮನಸ್ಸಿಗೆ ಇವೆಲ್ಲ ಬೇಸರಗೊಳಿಸುತ್ತವೆ."

'ಮರಳಿ ಮಣ್ಣಿಗೆ' ಕಾದಂಬರಿ ಡಿ.ಎಲ್.ಎನ್.ರವರ ಮನಸ್ಸಿಗೆ ಬಹಳ ವಾಗಿ ಹಿಡಿಸಿದೆ. ಮನಸ್ಸಿನ ಸಂತೋಷ ಮಾತಿನಲ್ಲಿ ರೂಪುಗೊಳ್ಳುವಾಗ ಆ ಭಾವ ತುಂಬಿಬರುತ್ತದೆ. ಡಿ.ಎಲ್.ಎನ್.ರವರ ಗದ್ಯ ಭಾವಪೂರ್ಣ ವಾದಾಗ ಅವರ ಸೊಗಸೇ ಸೊಗಸು ! ಉದಾಹರಣೆಗೆ ಈ ಸಾಲುಗಳನ್ನು ನೋಡಿ : "ಪಡುಕರಾವಳಿಯ ಆ ಕಡಲು, ಆ ನೊರೆ ಅಲೆ ಕುದಿತ ಮೊರೆತ ಗಳು, ಆ ಶಾಂತಿ ಸುಪ್ತಿಗಳು, ಅದರಂಚಿನಲ್ಲಿ ಮೆಲ್ಲನೆ ಮುಳುಗುವ ಆ ನೇಸರು, ಮೂಡುವ ಆ ಮರಿದಿಂಗಳು, ಆ ಬಿರುಗಾಳಿ ಮೋಡ ಸಿಡಿಲು ಮಿಂಚುಗಳು. ಆ ಮಳೆ, ಹೆಡೆಯಲುಗಿ ತೂಗಾಡುವ ಆ ಹಸೆಮರಗಳು, ಆ ಹಾಯಿ ಮಂಜಿ ಗಳು, ಆ ಮೀನಿನ ಹೊಲಸು ನಾತಗಳು, ಆ ಕಡಲ ಕಿನಾರೆ, ಆ ಅಳುವೆ, ಆ ನಂದನವನದಂತಿರುವರ ತೆಂಗಿನ ಸಂತೆ – ಎಲ್ಲವೂ ನೂರು ವಿಧದಲ್ಲಿ ಈ ಕಾದಂಬರಿಗೆ ಭಿತ್ತಿಯಾಗಿದೆ. ಅವುಗಳ ವರ್ಣನೆಯನ್ನು ಏನೆಂದು ಹೇಳೋಣ !"

ಕಾರಂತರ 'ಕನ್ಯಾಬಲಿ ಅಥವಾ ಸೂಳೆಯ ಸಂಸಾರ' ಎಂಬ ಕಾದಂಬರಿ, 'ಹಾವು' ಎಂಬ ಕಥಾಸಂಕಲನವನ್ನು ವಿಮರ್ಶೆ ಮಾಡುವಾಗ ಡಿ.ಎಲ್.ಎನ್. ತೀರಾ ವಸ್ತುನಿಷ್ಠವಾಗುವುದನ್ನು ಗಮನಿಸಬಹುದು. "ಬಣ್ಣವಿಲ್ಲದೆ ಬಿಚ್ಚಿ ಹೇಳುವ ಬಾಯಿ ಮಾತ್ರ ಉಂಟು" ಎಂದು ಕಾರಂತರು 'ಮುನ್ನುಡಿ'ಯಲ್ಲಿ ಹೇಳಿರುವುದನ್ನೇ ಎತ್ತಿಕೊಂಡು ಅವರು "ಬಾಯಿಯೊಂದು ಇದ್ದರೆ ಸಾದಲು. ತೀವ್ರವಾಗಿ ಅನುಭವಿಸುವ ಸ್ಪಷ್ಟವಾಗಿ ನೋಡುವ ಒಳಗಣ್ಣೂ ಅವಶ್ಯಕ. ಎಂದರೆ ಲೇಖಕರಲ್ಲಿ ಒಳಗಣ್ಣಿಲ್ಲವೆಂದಲ್ಲ ; ತೆಳುವಾದ 'ನೆಯ್ದ ಗಾಳಿಯ ಪಟ' ಯಂತಹ ಸೂಕ್ಷ್ಮಭಾವಗಳ ಗ್ರಹಣಶಕ್ತಿ ಹೆಚ್ಚಾಗಿ ಬೇಕು. ಕಥೆಯಲ್ಲಿ ಅಲ್ಲಲ್ಲಿ ಬರುವ ವ್ಯಂಗ್ಯಮಯವಾದ ಹಾಸ್ಯವು (ಪು. ೬೭, ೮೩) ಕರುಣೆಯನ್ನು ಕೆರಳಿಸುತ್ತದೆ. ಮಾತಿನ ಜೋರಿನಿಂದ ಕಥೆಯು ಸತ್ಯಕ್ಕೆ ಕುಂದುತಟ್ಟುವ ಹಾಗಿದೆ. ಮನೋವ್ಯಾಪಾರಗಳ ವಿಭಜನೆಯೂ ಚಿತ್ರವೂ ಚಿತ್ತವೇಧಕವಾಗಿ

ಪ್ಪರೂ ವೀರೇಶ ಮಾಲತಿಯರ ಪಾತ್ರಗಳಲ್ಲಿ ಅದು ಅತ್ಯುಕ್ತಿಯೆಂದೂ 'ವ್ಯಾಧಿಗ್ರಸ್ತ'ವೆಂದೂ(morbid) ತೋರುತ್ತದೆ" ಎಂದು ವಿಮರ್ಶಿಸಿರುವರು. 'ಹಾವು' ಕಥಾಸಂಕಲನದ ಬಗೆಗೆ ವಿವೇಚಿಸುತ್ತಾ "'ಕನ್ಯಾಬಲಿ'ಯಲ್ಲಿ ಕಂಡು ಬರುವ ಶೈಲಿಯ ಕಾವೂ ಹುರುಪೂ ಈ ಕಥೆಗಳಲ್ಲಿಲ್ಲ. ವಸ್ತು ಭಿನ್ನತೆಯಿಂದ ಹೀಗಾಗಿರಬಹುದು. ಕೆಲವು ಕಥೆಗಳನ್ನು ಓದುವಾಗ ನಗು ಬರುತ್ತದೆ. ಒಂದೆರಡು ಘಂಟೆಗಳ ಕಾಲ ಇವನ್ನೋದಿ ಬೇಜಾರನ್ನು ಪರಿಸಿಕೊಳ್ಳಬಹುದು, ಹೆಚ್ಚಿಸಿಕೊಳ್ಳಲೂಬಹುದು. ಇದಕ್ಕಿಂತ ಹೆಚ್ಚು ಫಲವನ್ನು ಈ ಕಥೆಗಳಿಂದ ನಿರೀಕ್ಷಿಸುವುದು ಅಳತೆಗೆ ಮೀರಿದ ಮಾತು." ಎನ್ನುವಲ್ಲಿನ ನೇರವಾದ ಮಾತು ಡಿ.ಎಲ್.ಎನ್. ಅವರ ವ್ಯಕ್ತಿತ್ವದ ಒಂದು ಭಾಗವಾಗಿ ತೋರುತ್ತದೆ. ಏಕೆಂದರೆ, ಅವರು ತಮಗೆ ಪ್ರಿಯವಾದುದನ್ನು ಮನಬಿಚ್ಚಿ ಹೊಗಳುವರು ; ತಮಗೆ ಅಪ್ರಿಯವೆನ್ನಿಸಿದ್ದನ್ನು ಕಡ್ಡಿಮುರಿದ ಹಾಗೆ ಹೇಳುವವರು. ಈ ಮಾತಿಗೆ ನಿದರ್ಶನವಾಗಿ ಅ.ನ.ಕೃ. ಅವರ 'ಜೀವನಯಾತ್ರೆ' ಕಾದಂಬರಿಯ ಬಗೆಗಿನ ಅವರ ಕಟುವಾದ ವಿಮರ್ಶೆಯನ್ನು ಉಲ್ಲೇಖಿಸಬಹುದು : "ಪ್ರಕೃತ ಕಲಾದೃಷ್ಟಿಯಿಂದ 'ಜೀವನಯಾತ್ರೆ'ಯನ್ನು ನೋಡುವುದಾದರೆ, ಪಟ್ಟಣ ನೋಡುವುದಕ್ಕೆ ಹೋಗಿ ಚರಂಡಿ ಹೊಕ್ಕಂತಾಗಿದೆ. ಇಂಥ ವಿಷಯವನ್ನು ಪ್ರತಿಪಾದಿಸಬೇಕಾದರೆ, ಅದನ್ನೇ ಅಧಿಕರಿಸಿ ಸಮಗ್ರ ಕಾದಂಬರಿಯನ್ನು ಬರೆಯುವುದಕ್ಕಿಂತ ಇನ್ನಾವುದಾದರೂ ಘನವಾದ ಆದರ್ಶಯುಕ್ತವಾದ ವಸ್ತುವಿನ ನಿರೂಪಣೆಯಲ್ಲಿ ಒಂದು ಅಂಗವನ್ನಾಗಿ ಸೇರಿಸಿ ಹೇಳುವುದು ಒಳ್ಳೆಯದೆಂದು ಕಾಣುತ್ತದೆ. ಇಂಥ ನೀಚ ವಿಷಯವನ್ನೇ ಎತ್ತಿ ಹಿಡಿದರೆ (ಅ.ನ.ಕೃ. ಈ ಕಾದಂಬರಿಯ ವಸ್ತು, ಧ್ಯೇಯಗಳನ್ನು ಕುರಿತು ೩೨ ಪುಟಗಳಷ್ಟು ಉದ್ದವಾದ ಮುನ್ನುಡಿ ಬರೆದಿರುವರು) ಏನೂ ತಿಳಿಯದ ಸ್ತ್ರೀ ಪುರುಷರ ಮನಸ್ಸನ್ನು ಮಲಿನಮಾಡುವ ಸಂಭವವೇ ಹೆಚ್ಚಲ್ಲವೆ ? ಅದು ದೇವರು ಕೊಟ್ಟಿರುವ ಶಕ್ತಿಯ ಅಪವ್ಯಯ, ಅಷ್ಟೇ. ಸಮಾಜ ಸಂಸ್ಕರಣವಾಗಬೇಕೆಂದು ಲೇಖಕರಿಗೆ ಸತ್ಯವಾದ ಹಂಬಲವಿದ್ದರೂ ಇಂಥ ಪುಸ್ತಕಗಳನ್ನು ಬರೆಯುವುದರಿಂದ ಅವರ ಇಷ್ಟ ನೆರವೇರಲಾರವು." ಇಷ್ಟು ನಿಷ್ಠೂರವಾಗಿ ಬರೆಯುವಲ್ಲಿ ಅವರ ಪ್ರಾಮಾಣಿಕತೆಯನ್ನು ನಾವು ಮರೆಯಬಾರದು. ಬರೆಯುವ ಕಲೆ ಎಲ್ಲರಿಗೂ ಒಲಿದುಬಂದುದಲ್ಲ, ಅದು ದೇವರು ಕೊಟ್ಟ ಶಕ್ತಿ.

ಅವರ ಅಪಥ್ಯವುಹಾಗಬಾರದೆನ್ನುವ ಅವರ ಎಚ್ಚರಿಕೆಯು ಮಾತು ಎಲ್ಲರಿ
ಅನ್ವಯಿಸುವಂತಹದು.

ಕೃ. ಹ. ಕುಲಕರ್ಣಿಯವರ ಒಂಬತ್ತು ಕಥೆಗಳ ಸಂಕಲನವಾದ 'ಮಿಣ
ನಾದ'; ಟಿ. ವಿ. ರಾವ್‌ರವರ 'ಪ್ರೇಮಾಹುತಿ' ಕಾದಂಬರಿ - ಇವುಗಳ ವಿಮರ್
ಪ್ತವು. ಆದರೆ, ಅವು ಕೃತಿಗಳ ಅಂತರಂಗವನ್ನು ಹೊಕ್ಕು ವಿವೇಚಿಸ
ವಲ್ಲಿ ಯಶಸ್ವಿಯಾಗಿವೆ. ಶ್ರೀಮಾನ್ ಆರ್. ಎಸ್. ಸೂರ್ಯನಾರಾಯ
ಅವರ 'ತಿಳಿಗನ್ನಡ ವ್ಯಾಕರಣ'ವು ಹೊಸಗನ್ನಡ ವ್ಯಾಕರಣವನ್ನು ಬಾಲಕರ
ತಿಳಿಯಹೇಳುವ ಪ್ರಯತ್ನ. "ಮೊದಲು ನಿಯಮಗಳನ್ನು ಹೇಳಿ ಆ ಮೇ
ಉದಾಹರಣೆಗಳನ್ನು ಕೊಡುವುದಕ್ಕಿಂತ ಉದಾಹರಣೆಗಳನ್ನೇ ಮೊದಲ
ಕೊಟ್ಟು ಅವುಗಳಿಂದಲೇ ನಿಯಮಗಳನ್ನು ಕಲ್ಪಿಸುವ ಕ್ರಮವನ್ನು ಲೇಖಕರ
ಇಲ್ಲಿ ಅನುಸರಿಸಿರುವುದನ್ನು ಡಿ.ಎಲ್.ಎನ್. ಪ್ರಸ್ತಾಪಿಸುತ್ತಾ "ಲಕ್ಷ್ಯಗಳನ
ತಾವೇ ಸೃಷ್ಟಿಸುವುದಕ್ಕಿಂತ ಈಗಿನ ಸಾಹಿತ್ಯದಲ್ಲಿ ಅತ್ಯುತ್ತಮವೆನಿಸಿಕೊಂಡಿರು
ಗ್ರಂಥಗಳಿಂದ ಅವನ್ನು ಆರಿಸಿಕೊಂಡಿದ್ದರೆ ಚೆನ್ನಾಗಿರುತಿತ್ತು. ಹಾಗೆ ಮಾಡ
ವುದರಿಂದ ವ್ಯಾಕರಣಕ್ಕೆ ಗೌರವ ಬರುತ್ತದೆ; ಉದಾಹರಣೆಗಳೂ ಸುಂದರ
ವಾಗಿದ್ದು ಬಾಲಕರ ಮನಸ್ಸನ್ನು ಸೆಳೆಯುತ್ತವೆ" ಎಂದಿರುವರು.

ಶಂಬಾ ಜೋಶಿಯವರ 'ಕನ್ನಡ ನುಡಿಯ ಜುಟ್ಟು' ಗ್ರಂಥದ ಬಗೆ
ಒಳ್ಳೆಯ ಮಾತುಗಳನ್ನು ಡಿ.ಎಲ್.ಎನ್. ಆಡಿರುವರು. "ಜೋಶಿಯವರ
ತಮ್ಮ ಅನುಭವದಲ್ಲಿಯೂ ಓದಿನಲ್ಲಿಯೂ ಕಂಡುಬಂದ ಕನ್ನಡ ನುಡಿಯ
ಸಹಜ ಸುಂದರವಾದ ಪ್ರಯೋಗಗಳನ್ನು ಈ ಗ್ರಂಥದಲ್ಲಿ ಕೂಡಿಸಲು ಹವಣಿ
ದ್ದಾರೆ. ಈ ವಿಧದಲ್ಲಿ ಇಂಥ ಪ್ರಯತ್ನಗಳನ್ನು ಕೈಕೊಳ್ಳುವವರಿಗೆ ದಾರಿ
ತೋರಿಸಿದ್ದಾರೆ. ಅವರ ಮನಸ್ಸಿನಲ್ಲಿರುವ ಕನ್ನಡ ನುಡಿಯ ಮೇಲಣ
ಒಲವಿಗೂ, ಮುಂದಕ್ಕೆ ಅದು ಬೆಳೆದು ಪುಷ್ಟವಾಗಬೇಕೆಂಬ ಹಂಬಲಕ್ಕೂ ಈ
ಗ್ರಂಥದ ಪ್ರತಿಯೊಂದು ಪುಟವೂ ಸಾಕ್ಷಿಯಾಗಿದೆ. ಅಲ್ಲದೆ ಓದುವವರಲ್ಲಿಯೂ
ಇದೇ ಭಾವಗಳನ್ನು ಉದ್ದೀಪನಗೊಳಿಸುತ್ತದೆ." ಇಂತಹ ಮೆಚ್ಚುಗೆಯ
ಮಾತು ಅವರ ವಿಮರ್ಶೆಯಲ್ಲಿ ಕಂಡುಬಂದಿದೆ. ಜೋಶಿಯವರು ಕೆಲವು ಶಬ್ದ
ಗಳಿಗೆ ಕೊಟ್ಟಿರುವ ನಿರುಕ್ತದ ಬಗೆಗೆ ಅವರು ತಮ್ಮ ಆಕ್ಷೇಪಣೆಯನ್ನು ಎತ್ತಿರು
ವರು. ಶಬ್ದಗಳ ಉತ್ಪತ್ತಿಯನ್ನು ಹೇಳುವಾಗ ಜೋಶಿಯವರು ದ್ರಾವಿ

ಭಾಷೆಗಳ ಸಹಾಯವನ್ನು ಪಡೆಯಲು ಒಂದೆಗೆಯುವುದನ್ನು ಸೂಕ್ಷ್ಮವಾಗಿ ಪ್ರಸ್ತಾಪಿಸಿರುವರು.

'ಅಕ್ಕಮಹಾದೇವಿಯ ಜೀವನ ಒಂದು ಭಾವಗೀತೆ' ಎಂದಿರುವ ಡಿ.ಎಲ್.ಎನ್. ರಂ.ಶ್ರೀ. ಮುಗಳಿಯವರ 'ಅಕ್ಕಮಹಾದೇವಿ' ಎಂಬ ನಾಟಕವನ್ನು 'ಭಾವನಾಟಕ'ವೆಂದು ಕರೆದು, ಈ ನಾಟಕ ಅಕ್ಕನ ವಚನಗಳಿಗೆ ರಸಮಯವಾದ ವ್ಯಾಖ್ಯಾನವಾಗಿದೆಯೆಂದು ಹೊಗಳಿರುವರು. ಕೆ.ಜಿ. ಕುಂದಣಗಾರ ಅವರ 'ಮಹಾದೇವಿಯಕ್ಕ' ಎಂಬ ಜೀವನ ಚರಿತ್ರೆಯನ್ನು ವಿಮರ್ಶಿಸುವಾಗಲೂ ಮೆಚ್ಚಿಕೆಯ ಮಾತನಾಡಿರುವರು. ಮಹಾದೇವಿಯಕ್ಕನವರ ವಿಷಯಕವಾದ ಕಾವ್ಯಗಳನ್ನೂ ಪುರಾಣಗಳನ್ನೂ ಎಚ್ಚರಿಕೆಯಿಂದ ಅಭ್ಯಾಸ ಮಾಡಿ, ವಿಮರ್ಶಕನ ದೃಷ್ಟಿಯಿಂದ ಸತ್ಯಾಸತ್ಯಗಳನ್ನು ಕಂಡುಹಿಡಿಯಲು ಪ್ರಯತ್ನಿಸಿರುವ ಲೇಖಕರನ್ನು ಅವರು ಅಭಿನಂದಿಸಿರುವರು. ಜಿ.ಪಿ. ರಾಜರತ್ನಂ ಅವರ 'ಗಂಡುಗೊಡಲಿ ಮತ್ತು ಹನಿಗಳು' ಗ್ರಂಥಗಳ ವಿಮರ್ಶೆ ಪರಿಚಯದಷ್ಟಕ್ಕೇ ನಿಲ್ಲುತ್ತದೆ. ಇದೇ ಮಾತನ್ನು 'ಶ್ರೀರಂಗ'ರ 'ವೈದ್ಯರಾಜ' ನಾಟಕಕ್ಕೂ ಅನ್ವಯಿಸಬಹುದು. ಬುರ್ಲಿ ಬಿಂದುಮಾಧವ ಅವರು ಸಂಪಾದಿಸಿರುವ 'ಕರ್ನಾಟಕ ದರ್ಶನ' ಗ್ರಂಥವನ್ನು ಮೆಚ್ಚಲು ಹಲವು ಕಾರಣಗಳಿವೆಯೆಂದು ಡಿ.ಎಲ್.ಎನ್. ಭಾವಿಸುವರು: "ಕರ್ನಾಟಕದ ಏಕೀಕರಣವಾಗಬೇಕೆಂದು ಜನರೆಲ್ಲ ಹಾತೊರೆಯುತ್ತಿರುವಾಗ ಸಮಗ್ರ ಕರ್ನಾಟಕವನ್ನು ಕುರಿತು ತಕ್ಕ ತಿಳುವಳಿಕೆಯನ್ನು ಉಂಟುಮಾಡಬೇಕಾದದ್ದು ಆವಶ್ಯಕ. ಕನ್ನಡನಾಡಿನ ಇಂದಿನ ಸ್ಥಿತಿಗತಿಗಳನ್ನು ಪರಿಶೀಲಿಸಿರುವ ವಿದ್ವಾಂಸರ ಹಲವು ಲೇಖನಗಳು ಒಂದೆಡೆ ಸಿಕ್ಕುವುದು ಕಷ್ಟ. ಇಂಥ ಲೇಖನಗಳ ಮಾಲೆ ಈ ಪುಸ್ತಕ. ಆದ್ದರಿಂದ ಇಲ್ಲಿ ಅನೇಕ ಶೈಲಿಗಳ, ಅನೇಕ ವಿಚಾರಗಳ, ಅನೇಕ ಪ್ರತಿಭಾವಂತರ ಪರಿಚಯ ಉಂಟಾಗಿ ನಮ್ಮನಾಡು ನುಡಿಗಳಲ್ಲಿ ಹೆಮ್ಮೆಯ ಭಾವ ಮೂಡಿಬರುವುದು. ಬರಿ ಕೂಗಾಟದ ಕಾಲ ಮುಗಿದುಹೋಯಿತು. ನಾವು ಎಲ್ಲಿದ್ದೇವೆ, ಎತ್ತ ಹೋಗುತ್ತಿದ್ದೇವೆ ಎಂಬುದಾಗಿ ನಮ್ಮನ್ನು ನಾವೇ ಕೇಳಿಕೊಂಡು ವಿಚಾರಮಾಡಿ ಮುಂದಕ್ಕೆ ಹೋಗಬೇಕಾಗಿದೆ; ವಿಹಿತವಾದ ಹಾದಿಯನ್ನು ಹಿಡಿಯಬೇಕಾಗಿದೆ; ಜಳ್ಳು ಅಭಿಮಾನವು ವಿಚಾರದ ಗಾಳಿಗೆ ಸಿಕ್ಕಿ ತೂರಿಹೋಗಿ ಗಟ್ಟಿಯಾದದ್ದು. ಸಕಾರಣವಾದದ್ದು ನಿಲ್ಲಬೇಕಾಗಿದೆ. 'ಕರ್ನಾಟಕ ದರ್ಶನ' ಈ ಕಾರ್ಯವನ್ನು

ನೆರವೇರಿಸಲು ಪ್ರಯತ್ನಿಸಿದೆ." ಈ ಗ್ರಂಥದ ವಿಮರ್ಶೆಯ ಕೊನೆಯ
ಹೇಳಿರುವ "ಆಂಜನೇಯನ ಶಕ್ತಿ ಅತನಿಗೇ ತಿಳಿದಿರಲಿಲ್ಲವಂತೆ; ಅಪ್ತರ ಹೇಳಿ
ಯಿಂದ ಆ ಜ್ಞಾನ ಅತನಿಗೆ ಬಂತಂತೆ. ಇಂದು ಕನ್ನಡಿಗರ ಪಾಡು ಹೀಗಾಗಿ
ಅವರ ಸತ್ವವನ್ನು ಅವರಿಗೇ ತಿಳಿಸುವ ಕನ್ನಡಿ ಬೇಕಾಗಿದೆ. 'ಕರ್ನಾಟ
ದರ್ಶನ' ಇಂಥ ಒಂದು ಕನ್ನಡಿ" ಎಂಬ ಮಾತುಗಳು ಅರ್ಥಪೂರ್ಣವಾಗಿ
ಕೊಟ್ಟಿರುವ ಹೋಲಿಕೆಯೂ ಸೊಗಸಾಗಿದೆ.

ಆಧುನಿಕ ಸಾಹಿತ್ಯ ಹಾಗೂ ಡಿ.ಎಲ್.ಎನ್.

ಡಿ.ಎಲ್.ಎನ್.ರವರ ಪೂರ್ಣ ಪ್ರೀತಿಗೆ ಪಾತ್ರವಾದುದು ಹಳೆಗನ್ನಡ ಕಾವ್ಯ. ಅವರಿಗೆ ಅಣ್ಣಾಸ್ವಾಮಿ ಅಯ್ಯಂಗಾರ್‌ರವರ (ತಾಯಿಯ ತಂದೆ) ಮೂಲಕ ಕನ್ನಡ ಕಾವ್ಯಗಳ ಬಗೆಗೆ ಒಲವು ಮೂಡಿತಂತೆ. ತಾತನವರು ಮಾಡುತ್ತಿದ್ದ ಭಾರತ ವಾಚನ ಪೊಮ್ಮಗನ ಮನಸ್ಸಿನ ಮೇಲೆ ಪರಿಣಾಮ ಬೀರಿತು. ಸಾಹಿತ್ಯ ಪರಿಸರದಲ್ಲಿ ಬೆಳೆದ ಅವರಿಗೆ ಹನ್ನೆರಡನೆಯ ವಯಸ್ಸಿಗಾಗಲೇ ಜೈಮಿನಿಭಾರತ ಕಂಠಪಾಠವಾಗಿತ್ತು. ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗಲೇ ಅವರು ರಾಜಶೇಖರ ವಿಳಾಸ, ಗದಾಯುದ್ಧ, ಛಂದೋಂಬುಧಿಗಳನ್ನು ಓದಿದ್ದರಂತೆ! ಇದು ಅವರ ಹಳೆಗನ್ನಡ ಸಾಹಿತ್ಯದ ಬಗೆಗಿನ ಒಲವು ಅಭಿರುಚಿಯನ್ನು ತಿಳಿಸುತ್ತದೆ. ಶಾಸನತಜ್ಞರಾದ ಶ್ರೀ ಎನ್. ಲಕ್ಷ್ಮೀನಾರಾಯಣ ರಾವ್‌ರವರು ಹೇಳುವಂತೆ ಡಿ.ಎಲ್.ಎನ್. ರವರಿಗೆ ಇದ್ದಷ್ಟು ಶಾಸನ ಪರಿಚಯ ಮತ್ತಾವ ಕನ್ನಡ ವಿದ್ವಾಂಸರಿಗೂ ಇರಲಿಲ್ಲ. ಅವರ ನೆನಪಿನ ಶಕ್ತಿ ತೀಕ್ಷ್ಣವಾಗಿದ್ದುದರಿಂದ ಒಮ್ಮೆ ಓದಿದ ಕಾವ್ಯದ ಇಲ್ಲವೆ ಶಾಸನದ ಪದ್ಯಗಳು ಸುಲಭವಾಗಿ ನೆನಪಿಗೆ ಬರುತ್ತಿದ್ದುವು. ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ಡಿ.ಎಲ್.ಎನ್.ರವರ ಆಪ್ತಮಿತ್ರರಲ್ಲಿ ಓರ್ವರು. ನರಸಿಂಹಾಚಾರ್ಯರ ಸ್ವಭಾವದಲ್ಲಿ ಅವರು ಕಂಡ ಅತ್ಯಂತ ಪ್ರಾಮುಖ್ಯವಾದ ಅಂಶ, ಹಳಗನ್ನಡ ಕಾವ್ಯಗಳಲ್ಲಿ ಅವರಿಗಿದ್ದ ಅಪಾರವಾದ ನಂಬಿಕೆ, ಪೂಜ್ಯತೆ ಮತ್ತು ಪ್ರೇಮ. ಕಾವ್ಯದ ಸಂಪರ್ಕ ಹೊಂದುವುದೆಂದರೆ, ಅವರಿಗೆ ಪ್ರಿಯನು ಪ್ರೇಯಸಿಯ ಸಹವಾಸವನ್ನು ಹೊಂದಿದಷ್ಟು ಉತ್ಸಾಹವೂ ರೋಮಾಂಚವೂ ಆಗುತ್ತಿತ್ತು. ಹಸಿವು, ಕಾವ್ಯ ಸಂಗೀತಗಳ ಆಸೆಯನ್ನೂ ಕೊನೆಗೆ ಸ್ತ್ರೀ ವಿಲಾಸಭೋಗಾಪೇಕ್ಷೆಯನ್ನೂ ಸಹ ಅಡಗಿಸಿಬಿಡುವುದೆಂದು ಸಂಸ್ಕೃತದಲ್ಲಿ ಒಂದು ಶ್ಲೋಕವುಂಟು. ಅನೇಕ ಸುಭಾಷಿತ ಶ್ಲೋಕಗಳೂ ಗಾದೆಯ ಮಾತುಗಳೂ ಸರ್ವಸಾಮಾನ್ಯರಿಗೆ ಅನ್ವಯಿಸುವ ಲೋಕರೂಢಿಯ ಮಾತುಗಳಾಗಿದ್ದು. ವಿಶೇಷಪ್ರಜ್ಞೆಯ

ವಿದ್ವಾಂಸರೂ ಕಾರ್ಯದಕ್ಷರೂ ಸತತೋದ್ಯೋಗಿಗಳೂ ಏಕಾಗ್ರಚಿತ್ತರೂ ಆದವರು, ಆ ಮಾತುಗಳು ತಮಗೆ ಅನ್ವಯಿಸದೆಂಬುದನ್ನು ಸ್ಥಾಪಿಸುತ್ತಾರೆ ನರಸಿಂಹಾಚಾರ್ಯರ ಕಾವ್ಯ ಸಾಹಿತ್ಯದ ಹಸಿವು – ಗದ್ಯವಾಗಲೀ, ಹೊಸಕನ್ನಡ ವಾಗಲೀ ಹಳಗನ್ನಡವಾಗಲೀ ಶಾಸನ ತಾಳೆಗರಿ, ಹಳೆಯ ಕರಡುಪ್ರತಿಗಳ ಇವುಗಳಲ್ಲಿ ಅವರಿಗಿದ್ದ ಅತ್ಯುತ್ಸಾಹ ಸಂಭ್ರಮ ಅವರ ದೈಹಿಕ ಹಸಿವನ್ನೂ ಅಡಗಿಸಿಬಿಡುವಂತೆ ತೋರುತ್ತಿದ್ದಿತು.[1]

"ನೀವು ಹೊಸಗನ್ನಡದಲ್ಲಿ ಇನ್ನೂ ಕೆಲಸ ಮಾಡಬೇಕು" ಎಂದು ಡಿ.ಎಲ್.ಎನ್. ರವರ ಆತ್ಮೀಯ ಶಿಷ್ಯರೊಬ್ಬರು ಅವರನ್ನು ಕೇಳಿಕೊಂಡಾಗ "ಆ ಕೆಲಸ ಮಾಡುವವರು ಬೇಕಾದಷ್ಟಿದ್ದಾರೆ. ಆದರೆ ಈ ಕೆಲಸ (=ಹಳಗನ್ನಡ ಸಾಹಿತ್ಯ) ಮಾಡುವವರು ಎಷ್ಟು ಜನರಿದ್ದಾರೆ?" ಎಂದು ಡಿ.ಎಲ್.ಎನ್. ಕೇಳಿದರು. ಅವರು ಹೊಸಗನ್ನಡ ಸಾಹಿತ್ಯವನ್ನು ಕುರಿತು ಮಾತನಾಡುವಾಗ ಒಮ್ಮೊಮ್ಮೆ ನಿರಾಶೆ ತೋರಿರುವುದೂ ಉಂಟು, ಬಹುಶಃ ಪ್ರಾಚೀನಕವಿಗಳ ಕಾವ್ಯಗಳನ್ನು ಓದದೆ ಅಲ್ಲಗಳೆಯುವ ಕೆಲವರ ಉತ್ಸಾಹಾತಿರೇಕವನ್ನು ಕಂಡು ಹಾಗೆ ಆಗಿರಬಹುದು. ನಮ್ಮ ಪ್ರಾಚೀನ ಸಾಹಿತ್ಯವನ್ನು ನಮ್ಮ ತರುಣರು ಚೆನ್ನಾಗಿ ಓದಬೇಕು, ತಿಳಿಯಬೇಕು, ಹೆಚ್ಚಿನ ಅನುಭವ ಪಡೆದು ಬರೆಯುವು ದಕ್ಕೆ ತೊಡಗಬೇಕು. ನಮ್ಮ ತರುಣರಿಂದ ಉತ್ಕೃಷ್ಟಕೃತಿಗಳು ಹೊರಬರ ಬೇಕಾದರೆ ದೀರ್ಘಕಾಲದ ತಪಸ್ಸು ನಿಷ್ಠೆ, ಸತತವಾದ ಕೃಷಿ ಇವು ಅಗತ್ಯ ಸುಲಭ ಜನಪ್ರಿಯತೆ ನಮ್ಮ ಲೇಖಕರ ಗುರಿಯಾಗಬಾರದು. ಒಂದು ಬಗೆಯ ಸಾತ್ವಿಕ ಅತೃಪ್ತಿ ಅವರನ್ನು ಕಾಡಬೇಕು. ಆಗ ಪ್ರಗತಿ ಸಾಧ್ಯವೆಂದು ಅವರು ಆಗಾಗ ಹೇಳುತ್ತಿದ್ದರು. ಪರಂಪರೆ ಹಾಗೂ ಆಧುನಿಕತೆಯ ಬಗೆಗೆ ಅವರು ತುಲನೆಮಾಡುತ್ತಾ "ಪ್ರಾಚೀನ ಕವಿಗಳು ವಿಷಯವನ್ನು ಚೆನ್ನಾಗಿ ಅಭ್ಯಾಸ ಮಾಡಿ, ಭಾಷಾ ಮರ್ಯಾದೆಗೆ ಕಟ್ಟುಬಿದ್ದು ಪ್ರತಿಯೊಂದು ಮಾತನ್ನು ಪ್ರಾಮಾ ವಾಗಿ ತೂಗಿ ಬಹುಕಾಲ ವ್ಯವಸಾಯ ಮಾಡಿ ಬರೆದಿದ್ದಾರೆ. ಆಧುನಿಕರು ಅಷ್ಟು ಶ್ರಮವನ್ನು ವಹಿಸುವುದಿಲ್ಲ. ಅವರಿಗೆ ಅಷ್ಟು ಸಮಯ ಸಾವಧಾನಗಳಿಲ್ಲ ಅನೇಕ ಹೊಸಭಾವನೆಗಳು ಆಧುನಿಕರಿಗೆ ಸ್ಫುರಿಸಿದರೂ ಅವನ್ನು ಆಕರ್ಷಣೀಯ

---

1. 'ರಸಫಲ', ಪು. 169

ಹಾವ ರೀತಿಯಲ್ಲಿ ಹೇಳುವ ಶಬ್ದಸಂಪತ್ತು ಅವರಿಗೆ ಇಲ್ಲ. ತಾವು ಹೇಳಿದ್ದೇ ಕಾವ್ಯವೆಂಬ ಸ್ವಯಂ ಆಚಾರ್ಯ ಪಟ್ಟ ಅವರದು. ಯಾವುದೇ ವಿಷಯ ಹಳೆಯ ಕವಿ ಬರೆದಿರುವುದಕ್ಕೂ ಹೊಸ ಕವಿ ಬರೆದಿರುವುದಕ್ಕೂ ತೂಗಿ ನೋಡಿ, ಅವರಲ್ಲಿ ಹೆಚ್ಚು ಅಚ್ಚುಕಟ್ಟು ಕಾಣುತ್ತೆ. ಇವರಲ್ಲಿ ಅಲಕ್ಷ್ಯ ಕಾಣುತ್ತೆ. ಹೊಸಬರು ಕಾವ್ಯಮೀಮಾಂಸೆ ಕಾವ್ಯತತ್ತ್ವ ಇವನ್ನು ಇನ್ನೂ ಆಳವಾಗಿ ಹೆಚ್ಚಾಗಿ ಅಭ್ಯಾಸ ಮಾಡಬೇಕು. ತೀ.ನಂ.ಶ್ರೀ. ಬರೆದಿರುವ ಸರ್ವಸಾಮಾನ್ಯರಿಗೂ ಅರ್ಥವಾಗುವ ಕಾವ್ಯಮೀಮಾಂಸೆಯನ್ನು ಸಹ ಅನೇಕ ಆಧುನಿಕ ಕವಿಗಳು ಓದಿದ್ದಾರೆಂದು ನನಗೆ ಅನಿಸುವುದಿಲ್ಲ. ಆಧುನಿಕರಲ್ಲಿ ಭಾವನಾಶ್ರೀಮಂತಿಕೆ ಇದೆ. ಇವರು ಬರೆಯುತ್ತಿರುವುದು ಇಂದಿನವರಿಗಾಗಿ: ಆದರೆ ಭಾಷೆಯ ಪುರುಳು ವ್ಯಾಕರಣ ಛಂದಸ್ಸಿನ ಕಟ್ಟುಪಾಡು ಯಾವುದೂ ಇಲ್ಲದೆ "ಸ್ವೇಚ್ಛಾಚಾರ"ದಿಂದ, ಸೊಗಸಾದ ಭಾವನೆಗಳನ್ನು ಜನ ಅರ್ಥಮಾಡಿಕೊಳ್ಳಲಾರದೆ ಅವು ವ್ಯರ್ಥವಾಗುತ್ತವೆ. ಹಿಂದಲವರು ಪ್ರಯತ್ನಿಸದ ಛಂದಸ್ಸೇ ಇಲ್ಲ. ಅವನ್ನು ಬಿಟ್ಟು ನಾವು ಹೋಗುವುದೂ ಕಷ್ಟ. ಅವುಗಳಲ್ಲಿಯೇ ಅಲ್ಪಸ್ವಲ್ಪ ಬದಲಾವಣೆ ಮಾಡಿ ನಮ್ಮ ಕಾರ್ಯಕ್ಕೆ ಅಳವಡಿಸಿಕೊಳ್ಳಬಹುದು. ಅತ್ಯುತ್ತಮ ಆಧುನಿಕ ಕನ್ನಡ ಕವಿಗಳು ಹೀಗೆ ಮಾಡುತ್ತಲೇ ಇದ್ದಾರೆ."[1] ಎಂದು ತಮ್ಮ ಆತ್ಮೀಯ ಮಿತ್ರರಾದ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರೊಡನೆ ಮಾತನಾಡುತ್ತಿದ್ದಾಗ ಹೀಗೆ ಹೇಳಿದ್ದರು.

ಡಿ.ಎಲ್.ಎನ್. ಅವರಿಗೆ ಹೊಸಗನ್ನಡ ಸಾಹಿತ್ಯದ ಬಗೆಗೆ ಅನಾದರವೇನೂ ಇರಲಿಲ್ಲ. ಅವರ ಗುರುಗಳಾದ ಬಿ. ಎಂ. ಶ್ರೀ. ನವೋದಯದ ಹರಿಕಾರರಾಗಿ ಯುವಪೀಳಿಗೆಗೆ ಚೈತನ್ಯ ಸ್ವರೂಪಿಗಳಾದಾಗ ಅವರ ಪ್ರಭಾವಕ್ಕೆ ಒಳಗಾಗಿ ಅನೇಕರು ಬರೆಯತೊಡಗಿದರು. ಡಿ.ಎಲ್.ಎನ್. ಸಹಾ ಕವಿತೆ ಬರೆದರು. ೧೯೨೮ರಲ್ಲಿ ಮೈಸೂರು ಮಹಾರಾಜಾ ಕಾಲೇಜಿನ ಕರ್ನಾಟಕ ಸಂಘದವರು ಪ್ರಕಟಿಸಿದ 'ಕಿರಿಯ ಕಾಣಿಕೆ'ಯಲ್ಲಿ ಅವರ ಎರಡು ಕವನಗಳಿವೆ. ಆಗ ಕುವೆಂಪು, ಪುತಿನ, ತೀ.ನಂ.ಶ್ರೀ. ಕವನಗಳನ್ನು ಬರೆಯುತ್ತಿದ್ದರು. ಕುವೆಂಪು, ಪುತಿನ, ಕಾವ್ಯರಚನೆಯನ್ನು ಮುಂದುವರಿಸಿದರು. ತೀ.ನಂ.ಶ್ರೀ.

1. ಗೊರೂರು ರಾಮಸ್ವಾಮಿ ಅಯ್ಯಂಗಾರ್ : ರಸಫಲ, ಪು. 175

ಪಾತ್ರ ಆಗಾಗ ಕವನ ಬರೆಯುತ್ತಿದ್ದರು. "ಕವಿತೆ ನನ್ನ ಸ್ವಧರ್ಮ ಅ
ಎಂದು ಬಹಳ ಮುಂಚೆಯೇ ತಿಳಿದುಬಿಟ್ಟಿತು" ಎಂದು ಡಿ.ಎಲ್.ಎನ್. ಪೆ
ಮುಗುಳ್ನಗುವುದುಂಟು. ಅವರು ಕವಿತೆ ಬರೆದರೂ ಕಂದ ವೃತ್ತಗಳಲ್ಲಿಯೆ
ಬರೆಯುತ್ತಿದ್ದರೇನೊ! ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವ
ಮಗ ಚಿ॥ ಸೀತಾರಾಮನ ಬ್ರಹ್ಮೋಪದೇಶವಾದಾಗ ಡಿ.ಎಲ್.ಎನ್. ಕಂ
ದಲ್ಲಿಯೇ ಒಂದು ಆಶೀರ್ವಾದವನ್ನು ಬರೆದು ಕಳುಹಿಸಿದ್ದರಂತೆ! ಅವರ
ರಳವನ್ನು ಪ್ರಯೋಗಿಸಿರುವರು. ಸೀತಾರಾಮನ ಹೆಸರಿನಲ್ಲಿಯೇ ಒಂದ
ಚಮತ್ಕಾರವನ್ನು-ಮಾಡಿರುವರು. ಆ ಕಂದಪದ್ಯ ಹೀಗಿದೆ :

ಸೀತಾರಾಮಂ ನವವಟು
ಸೀತಾರಾಮಂಗೆ ಮಾೞ್ಕೆ ಶುಭಮಂ ನಲವಿಂ
ದಾತಂ ವರ್ಧಿಕೆ ಮಗನೆನ—
ಲೀತನೆ ಮಗನೆಂದು ಪೊಗೞ್ಗೆ ನೋೞ್ಪವರೆಲ್ಲಂ ॥

ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರ ಮನೆಯಲ್ಲಿ ನಡೆ
ಇನ್ನೊಂದು ಮಂಗಳಮುಹೂರ್ತಕ್ಕೂ ಡಿ.ಎಲ್.ಎನ್. ಕಂದಪದ್ಯದಲ್ಲಿ ಸಂದೇ
ಕಳುಹಿಸಿದ್ದರಂತೆ.[1] ಇದರಿಂದ ಅವರ ಒಲವು ಯಾವಕಡೆ ಎಂಬುದು ವಿದಿ
ವಾಗುತ್ತದೆ.

ಆಧುನಿಕ ಸಾಹಿತ್ಯವನ್ನು ಸಾರಾಸಗಟಾಗಿ ತಿರಸ್ಕರಿಸುವ ಮನೋಭಾ
ಡಿ.ಎಲ್.ಎನ್. ಅವರದ್ದಲ್ಲ. ನರಸಿಂಹಸ್ವಾಮಿಯವರ 'ಮೈಸೂರು ಮಲ್ಲಿಗೆ'
'ಶಿಲಾಲತೆ'; ಬೇಂದ್ರೆ, ಪುತಿನ, ಪುಟ್ಟಪ್ಪ—ಇವರೇ ಮೊದಲಾದ ಕವಿಗಳ ಬಿ
ಕವನಗಳು ಅವರ ಮೆಚ್ಚುಗೆಗೆ ಪಾತ್ರವಾಗಿದ್ದುವು. ಕಾರಂತರ 'ಮರಳ
ಮಣ್ಣಿಗೆ' ಕಾದಂಬರಿಯ ಬಗೆಗೆ ಅವರು ಬರೆದಿರುವ ವಿಮರ್ಶೆ ಅವರೆಂತಹ
ಸಹೃದಯಿಗಳು ಎಂಬುದನ್ನು ತಿಳಿಯಹೇಳುತ್ತದೆ. ಗೊರೂರರ 'ಊರ್ವಶಿ
ಕಾದಂಬರಿ ಓದಿ "ಸೊಗಸಾದ ಕಾದಂಬರಿ. ಪಾತ್ರಗಳ ನಿರೂಪಣೆ ಚೆಳವಣಿ
ಚೆನ್ನಾಗಿದೆ. ಇದರಲ್ಲಿ ಬರುವ ಕನ್ಯಾಕುಮಾರಿ ವರ್ಣನೆ ಶುದ್ಧಕಾವ್ಯ...

———

1. ನೋಡಿ: 'ತಪಫಲ' ಪು. 179

ಎಂದು ಬರೆವರಂತೆ. ಅವರಿಗೆ ಕಾದಂಬರಿ ದುಃಖಾಂತವಾಗಿದ್ದುದು ತುಂಬ ಕೆಡಕಾಗಿ ಕಂಡಿತು. ಅವರಲ್ಲೂ ಹೆಣ್ಣು ಹೆತ್ತ ಹೃದಯ "ಅಯ್ಯೋ ನೀವು ಬುದ್ಧಿ ನಿರ್ಘೃಣರಷ್ಟು ಇದನ್ನು ದುಃಖದಲ್ಲಿ ಮುಗಿಸಿಬಿಟ್ಟಿರಿ. ಸಹಿಸುವುದು ಕಷ್ಟ. ಇಬ್ಬರಿಗೂ ಮದುವೆ ಮಾಡಿಸಿಬಿಟ್ಟಿದ್ದರೆ ನಿಮ್ಮ ಗಂಟು ಏನು ಹೋಗುತ್ತಿತ್ತು" ಎಂದು ಅವರು ಬರೆವರಂತೆ.[1] ಗೊರೂರರ 'ಬಿಂದಿಗಮ್ಮನ ಜಾತ್ರೆ' ಎಂಬ ಪ್ರಬಂಧ 'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟವಾದಾಗ ಅವನ್ನು ಓದಿ ಮೆಚ್ಚಿದ ಡಿ.ಎಲ್.ಎನ್. ಗೊರೂರರಿಗೆ ಹೀಗೆ ಪತ್ರ ಬರೆದರು: "ನಿಮ್ಮ ಲೇಖನವನ್ನು ಓದಿದೆ. ತುಂಬ ಚೆನ್ನಾಗಿದೆ. ಅಂಥ ಲೇಖನವನ್ನು ಓದಿ ಬಹಳ ದಿನಗಳಾದುವು. ನನಗಾದ ಸಂತೋಷವನ್ನು ನಾನು ನಿಮಗೆ ತಿಳಿಸುತ್ತಿದ್ದೇನೆ. ಬಿಂದಿಗಮ್ಮನ ಕರಗ ಹೊರುವವನ ದಿವ್ಯಾವೇಶ ಬಹು ಹೃದಯಂಗಮವಾಗಿ ನಿರೂಪಿತವಾಗಿದೆ. ನಿಮ್ಮ ಭಕ್ತಿ ಶ್ರದ್ಧೆಗಳ ಅನುಕಂಪೆ ಆದರಗಳ ಲೇಪನದಿಂದ ಲೇಖನ ಬಹು ರಮ್ಯವಾಗಿದೆ. ನನ್ನ ಧನ್ಯವಾದಗಳು. ಬಿಂದಿಗಮ್ಮನ ಪೂಜೆ, ನಮ್ಮ ನಾಡ ಸಂಸ್ಕೃತಿಯಲ್ಲಿ ಬಹಳ ಹಿಂದಲ ಕಾಲಕ್ಕೆ ಸೇರಿದ್ದೆಂದು ತೋರುತ್ತದೆ. 'ಬಿಂದಿಗರ್ಕಳ್' ಎಂದು ಹಳೆಯ ಸಾಹಿತ್ಯದಲ್ಲಿ–೧೨ನೇ ಶತಮಾನದ–ಸಾಹಿತ್ಯದಲ್ಲಿ ಸಿಕ್ಕುತ್ತದೆ. ಬಿಂದಿಗ ದೇವತೆಯನ್ನು ಪೂಜಿಸುವವರು ಎಂದು ಇದರಿಂದ ಅರ್ಥವಾಗಬಹುದು. ಈ ದಿಕ್ಕಿನಲ್ಲಿ ಕೊಂಚ ಕೆಲಸ ನಡೆಯಬೇಕಾಗಿದೆ. ವಿರಾಮವಿದ್ದರೆ ಮಾಡಬಹುದು."[2] ಪ್ರತಿಭೆಯನ್ನು ಗುರುತಿಸಿ ಮೆಚ್ಚುವ, ತಮಗೆ ಮೆಚ್ಚುಗೆಯಾದುದನ್ನು ಬರೆದು ತಿಳಿಸುವ ಅಪರೂಪದ ಗುಣ ಡಿ.ಎಲ್.ಎನ್. ಅವರದ್ದು. ಕೃಷ್ಣ ಅವರು ಬರೆದಿದ್ದ 'ಮುಗುದೆಯರ ಪತ್ರ'ಗಳನ್ನು ಅಕಸ್ಮಾತ್ತಾಗಿ ನೋಡುವ ಪ್ರಸಂಗ ಬಂದಾಗ ಅವನ್ನು ಓದಿ ಮೆಚ್ಚಿದ ಡಿ.ಎಲ್.ಎನ್. ತೆಗೆದುಕೊಂಡು ಹೋಗಿ 'ಪ್ರಬುದ್ಧ ಕರ್ಣಾಟಕ'ದಲ್ಲಿ ಅಚ್ಚುಹಾಕಿಸಿದರು! ಕೃಷ್ಣರ ಸಾಹಿತ್ಯರಚನೆಗೆ ಅದೇ ಪ್ರೋತ್ಸಾಹವಾಗಿ, ಅನಂತರ 'ನನ್ನ ಅಪ್ಸರೆ, ಗೌರಿ ಮದುವೆ' ಮುಂತಾದುವನ್ನು ಬರೆದರು.

---

1 ನೋಡಿ : ರಸಘಲ, ಪು. 179-180

2 ಅದೇ, ಪು. 181

ಪುಟ್ಟಪ್ಪನವರು ಹಾಗೂ ಡಿ.ಎಲ್.ಎನ್. ಸಹಪಾಠಿಗಳು. ಡಿ.ಎ
ಎನ್. ಅವರಿಗೆ ನಶ್ಯದ ಚಟ ಹತ್ತಿಸಿದವರು ಪುಟ್ಟಪ್ಪನವರು ! ವಿಚಿತ್ರವೆಂ
ಕಲಿಸಿದ ಗುರು ಆ ಚಟ ಬಿಟ್ಟುಬಿಟ್ಟ, ಕಲಿತ ಶಿಷ್ಯ ಉಳಿಸಿಕೊಂಡ. ಪುಟ್ಟ
ನವರ 'ರಾಮಾಯಣ ದರ್ಶನ'ವನ್ನು ಮೆಚ್ಚಿಕೊಂಡಿದ್ದ ಡಿ.ಎಲ್.ಎನ್.
ಬಗ್ಗೆ ಮಿತ್ರರಾದ ಗೊರೂರು ಅವರ ಜೊತೆ ಮಾತನಾಡುತ್ತಾ "ಆ ಮನು
ಗಟ್ಟಿಗನಯ್ಯ ತನ್ನ ಮಹತ್‌ಗೆ ಅನುಗುಣವಾದ ವಿಷಯವನ್ನೇ ಎತ್ತಿಕೊಂ
ರಾಮಾಯಣವನ್ನೇ ಬರೆದ. ಶ್ರೀ ರಾಮಚರಿತ್ರೆಯಿಂದ ಅವನ ಕಾವ್ಯಕ್ಕೆ ಸ
ಒಂದು ಅಪೂರ್ವ ಶೋಭೆ ಬಂದಿತು. ಅವನ ಕಾವ್ಯದ ಕಲಶವೇ ಅದಾಯಿತ
ರಾಮಾಯಣ ಧ್ಯಾನ ಶ್ಲೋಕದಲ್ಲಿ ಹೇಳಿರುವಂತೆ ಶ್ರೀರಾಮ ನಾಮವೇ ವರಕ
ಗಳ ಮಾತಿಗೆ ವಿಶ್ರಾಮಸ್ಥಾನ ('ವಿಶ್ರಾಮಸ್ಥಾನಮೇಕಂ ಕವಿವರ ವಚಸಾಂ
ಅಂದರೆ ಅದನ್ನು ಹೇಳಿದ ಮೇಲೆ "ಮಾತು ತನ್ನ ಕಾರ್ಯವನ್ನು ಸಾಧಿಸಿತು
ಎಂಬ ಧನ್ಯತೆ ಕವಿಗೆ ಉಂಟಾಗುತ್ತದೆ. ನಮ್ಮ ದೇಶದ ಇಂದಿನ ಸಾಮಾಜಿ
ಪರಿಸರದಲ್ಲಿ ಒಂದು ಹಳ್ಳಿಯ ವ್ಯವಸಾಯ ಕುಟುಂಬದಲ್ಲಿ ಇಂಥವನು ಜನಿಸ
ವುಂದೆವರೆ ಅದು ಪರಮಾತ್ಮನ ಕರುಣೆಯೇ ಹೊರತು ಬೇರೆ ಅಲ್ಲ. ವಾಲ್ಮೀ
ರಾಮಾಯಣ ಎಷ್ಟೇ ಸುಲಭವಾಗಿದೆ ಎಂದರೂ ಅದನ್ನು ಎಲ್ಲ ಕನ್ನಡಿಗರು
ಓದಲಾರರು. ಆದರೆ ಕನ್ನಡ ಕಾವ್ಯ ಎಷ್ಟೇ ಕಷ್ಟವಾದರೂ, ಸಂಸ್ಕೃತದಷ್ಟು
ಕಷ್ಟವಲ್ಲ. ರಾಮಾಯಣ ದರ್ಶನವನ್ನು ಕನ್ನಡಿಗರೆಲ್ಲ ತೆಗೆದುಕೊಂಡು ಓದ
ತ್ತಾರೆ. ಇದೇ ಕನ್ನಡನಾಡಿನ ವೇದವಾದರೂ ಆಶ್ಚರ್ಯವಿಲ್ಲ. ಆದರೆ ನಮ
ಜನದ ಯೋಗ್ಯತೆಗೆ ಗ್ರಂಥದ ಬೆಲೆ ಹೆಚ್ಚು" ಎಂದರು.[1]

ಡಿ.ಎಲ್.ಎನ್. ೧೯೨೭ರಲ್ಲಿ, ಬಿ.ಎ. ವಿದ್ಯಾರ್ಥಿಯಾಗಿದ್ದಾಗ, 'ಕರ್ನಾ
ಟಕ ಸಾಹಿತ್ಯದಲ್ಲಿ ಪ್ರಕೃತಿ ವರ್ಣನೆ' ಎಂಬ ವಿದ್ವತ್‌ಪ್ರೌಢ ಪ್ರಬಂಧವೊಂದನ್ನು
ಬರೆದಿದ್ದರು. ಅದರ ಮುಖ್ಯಭಾಗ ಹೀಗಿದೆ: "ಈಗಿನ ಸಾಹಿತ್ಯ
ಪ್ರಕೃತಿ ವರ್ಣನೆಯ ಧ್ಯೇಯವು ಎಷ್ಟೋ ಉಚ್ಚತರವಾದುದಾಗಿದೆ. ಅವುಗ
ರೀತಿಯೇ ಬೇರೆ, ದೃಷ್ಟಿಯೇ ಬೇರೆ, ಪರಿಪಾಕವೂ ಬೇರೆ, ಆವೇಶವೂ ಬೇರ
ಶುದ್ಧವಾದ ಹೃದಯದಿಂದಲೇ ಅರಿಯಬಹುದಾದ ಆಧ್ಯಾತ್ಮಿಕ ತತ್ತ್ವಗಳನ್ನು

---

1. ಅದೇ, ಪು. 176

ಈಗಿನ ಕವಿಗಳು ಪ್ರಕೃತಿ ಸೌಂದರ್ಯದಲ್ಲಿ ಮನಗಾಣುತ್ತಿರುವರು. ಹಿಂದೆ ಕಳೆದುಹೋದ ಪಂಪ ರನ್ನರ ಕಾಲವು ಹೇಗೆ ಸಾಹಿತ್ಯದ ಪರಮಸೀಮೆ ಯನ್ನೈದಿದ್ದಿತೋ ಹಾಗೆಯೇ ಇನ್ನು ಮುಂದೆ ಬರುವ ಕಾಲವು ಪಂಪ ರನ್ನರ ಕಾಲಕ್ಕಿಂತ ನೂರ್ಮಡಿಯಷ್ಟು ಉಚ್ಚತರವಾಗುವುದೆಂಬುದನ್ನು ಯಾರಾದರೂ ಒಪ್ಪಲೇಬೇಕು. ಷೇಕ್ಸ್‌ಪಿಯರಿನಂತಹ ಕವಿಗಳು ಇನ್ನು ಮುಂದೆ ಹುಟ್ಟಬೇಕು: ಹುಟ್ಟಿಯೇ ಇದ್ದಾರೆಯೋ ಏನೋ ಯಾರಿಗೆ ಗೊತ್ತು ! ಅದಕ್ಕೆ ತಕ್ಕ ವಾತಾ ವರಣವೇನೋ ದಿನದಿನವೂ ಪರಿಶುದ್ಧವಾಗುತ್ತ ಬರುತ್ತಿರುವುದು. ಶುಭ ಚಿಹ್ನೆಗಳು ಎಲ್ಲೆಲ್ಲಿಯೂ ತಲೆದೋರಿವೆ. ಇನ್ನು ಮುಂದೆ, ಯಾರು ಎಷ್ಟು ಪ್ರಯತ್ನಪಟ್ಟರೂ ತಡೆಯಲಾಗದ ಕಾವ್ಯ ಜೀವಜ್ಯೋತಿಯ ಹೊನಲು ನಮ್ಮೆಲ್ಲರನ್ನೂ ಮುಳುಗಿಸಿ ಆನಂದ ತಾಂಡವದಲ್ಲಿ, ಮನವನ್ನು ಮೋಹಿಸುವ ಗಾನದಲ್ಲಿ ಲೀನರನ್ನಾಗಿ ಮಾಡುವುದು. ಬರುವುದು ಬೇಗ ಬರುವುದು, ಅಂತಹ ಸುದಿನವು. ನಮ್ಮ ಜೀವನವನ್ನು ಆ ವಿಮಲ ಗಂಗಾ ತಟಿನಿಯಲ್ಲಿ ತೊಳೆಯೋಣ. ಅಲ್ಲಿಯವರೆಗೆ ಅಂತಃಕರಣಗಳನ್ನು ಶುದ್ಧಿಗೊಳಿಸುತ್ತ, ಮಧುಮಾಸದ ಬರವನ್ನು ಬಯಸುತ್ತ, ಪರಿಮಳವನ್ನು ಎಲ್ಲ ಕಡೆಯಲ್ಲಿಯೂ ಚೆಲ್ಲಲು ತವಕಿಸುತ್ತಿರುವ ಅಡವಿಯ ಹೂಗಳಂತೆ ಧ್ಯಾನಾಸಕ್ತರಾಗೋಣ. ದಯಾಮಯವಾದ ಪರಂಜ್ಯೋತಿಯು ಎಲ್ಲೆಲ್ಲಿಯೂ ತುಂಬಿ ಹೊರಹೊಮ್ಮು ವುದು."[2] ಡಿ.ಎಲ್.ಎನ್. ಭಾವುಕರಾಗಿ ನುಡಿದದ್ದು "ನವೋದಯದ ಮುಂಜಾವಿನಲ್ಲಿ ಕೋಳಿ ಕೂಗುವ ಮೊದಲಲ್ಲಿ! ಅವರ ಮೇಲಿನ ಮಾತಿನಲ್ಲಿ ಆಶಾವಾದಿಯೊಬ್ಬನ ತೀವ್ರತರವಾದ ಜೀವನೋತ್ಸಾಹವಿದೆ ; ಭವ್ಯ ಭವಿಷ್ಯದ ಬಗೆಗೆ ಹೊಂಗನಸುಗಳಿವೆ ; ಮಂಗಳದ ಭವಿಷ್ಯವಾಣಿಯಿದೆ. ಅವರ ಭವಿಷ್ಯ ವಾಣಿಯನ್ನು ಕೇಳಿದ ಯಾರಿಗೇ ಆಗಲಿ ಅವರು ಆಧುನಿಕ ಸಾಹಿತ್ಯದ ವಿರೋಧಿ ಗಳೆಂದು ಹೇಳುವುದು ಸಾಧ್ಯವಿಲ್ಲ."

1943ರಲ್ಲಿ ಮೈಸೂರು ಆಕಾಶವಾಣಿಯಲ್ಲಿ 'ಇಂದಿನ ಕನ್ನಡ ಕವಿತೆ' ಎಂಬ ವಿಷಯ ಕುರಿತು ಡಿ.ಎಲ್.ಎನ್. ಭಾಷಣ ಮಾಡಿರುವರು. ನವೋದಯ ಸಾಹಿತ್ಯಕ್ಕೆ ಒದಗಿ ಬಂದ ಪ್ರೇರಣೆಗಳ ಬಗೆಗೆ ಅವರು ಮಾಡಿರುವ ಆಲೋಚನೆ

---

1 ಪೀಠಿಕೆಗಳು, ಲೇಖನಗಳು, ಪು. ೫೭೮

ಗಳು ಆ ಸಾಹಿತ್ಯದ ಬಗೆಗೆ ಅವರಿಗಿದ್ದ ಆಸಕ್ತಿಯನ್ನು ತಿಳಿಯಪಡಿಸುತ್ತ
ಕೆ. ಎಸ್. ನರಸಿಂಹಸ್ವಾಮಿಯವರ 'ಶಿಲಾಲತೆ'ಗೆ ಅವರು ಬರೆದಿರ
'ಮುನ್ನುಡಿ' ನವೋದಯ ಕಾಲದ ಕಾವ್ಯದ ಬಗೆಗೆ ಅವರಿಗಿದ್ದ ಒಲವನ
ಸ್ಪಷ್ಟವಾಗಿ ಹೇಳುತ್ತದೆ. ಹಾಗೆಯೇ, ವಸ್ತುನಿಷ್ಠವಾಗಿ ಸಹೃದಯನೊ
ಹೇಗೆ ಒಬ್ಬ ಕವಿಯ ಕಾವ್ಯವನ್ನು ವಿಮರ್ಶೆಯ ಒರೆಗೆ ಹಚ್ಚಬಲ್ಲ, ಕಾವ್ಯ
ಗುಣದೋಷಗಳೆರಡನ್ನೂ ಸಮತೂಕವಾಗಿ ಹೇಗೆ ಹೇಳಬಲ್ಲನೆಂಬುದಕ್ಕೆ ಇ
ಸೊಗಸಾದ ಉದಾಹರಣೆಯಾಗುತ್ತದೆ. 'ಮೈಸೂರು ಮಲ್ಲಿಗೆ'ಯ ಬಗ
ಡಿ.ಎಲ್.ಎನ್. ಮೆಚ್ಚುಗೆಯ ಮಾತು ಹೇಳುವರು; ಹಾಗೆಯೇ ಅವ
ಕವಿಮಾರ್ಗ ಹೊರಳು ದಾರಿಯಲ್ಲಿ ನಡೆದುದನ್ನೂ ಹೇಳುವರು: 'ಮೈಸೂರ
ಮಲ್ಲಿಗೆ' ಕಸ್ತೂರಿಯ ನೆಲದಲ್ಲಿ ಕಾಮನ ಬೀಜವನ್ನು ಬಿತ್ತಿ ಬೆಳೆಯಿಸಿರು
ಹೂದೋಟ; ಏನು ಬಣ್ಣ, ಏನು ಕಂಪು, ಎಂಥ ಸೊಗಸು! ಈ ಕ್ಷೇತ್ರದ
ಇವರಷ್ಟು ಸಿದ್ಧಿಯನ್ನು ಸಂಪಾದಿಸಿರುವವರು ತೀರ ವಿರಳ, ಹೊಸಗನ್ನ
ಕವಿತೆಯ ಸುಗ್ಗಿಯಲ್ಲಿ. ಮೇಲುನೋಟಕ್ಕೆ ಸಂಸಾರದ ಒಲವಿನ ನಗೆಯ
ಹೊಲ ವಿಸ್ತಾರಹೀನವೆಂದು ತೋರಬಹುದು. ಆದರೆ ಅಲ್ಲಿನ ವೈವಿ
ಅಪಾರ. ಕವಿದೃಷ್ಟಿ ಸೂಕ್ಷ್ಮವಾದ ಹಾಗೆಲ್ಲಾ ಇದರ ಮೇರೆ ಹಿಗ್ಗುತ
ಹೋಗುತ್ತದೆ. ಈ ನೆಲವನ್ನೇ ಮತ್ತಷ್ಟು ಹಸನಾಗಿ ಉತ್ತು ಇನ
ಅಪೂರ್ವವಾದ ಕುಸುಮಶ್ರೀಯನ್ನು ಇವರು ಕಾಣಿಸಬಲ್ಲರೆಂಬ ನಿರೀಕ್ಷೆ ಕೆಲ
ರಲ್ಲಿತ್ತು. ಈ ಕ್ಷೇತ್ರ ಮುಗಿಯಿತು, ಇಲ್ಲಿ ಅವರ ಪ್ರತಿಭೆ ಎಷ್ಟು ಮಾ
ಬಹುದೋ ಅಷ್ಟನ್ನು ಮಾಡಿಯಾಯಿತು, ಬೇರೆ ಬಯಲಿಗೆ ಇದು ಹೋಗಲ
ಬೇಕು, ಇಲ್ಲದಿದ್ದರೆ ಇವರ ಕವಿತೆಯ ಊಟೆ ಬತ್ತಿದಂತೆಯೆ—ಎಂದು ಮತ
ಕೆಲವರಿಗೆ ತೋರಿತ್ತು. 'ಐರಾವತ', 'ದೀಪದಮಲ್ಲಿ', 'ಉಂಗುರ' ಮುಂತಾ
ಇವರ ಈಚಿನ ಕಾವ್ಯಗುಚ್ಛಗಳು ಈ ಎರಡನೆಯ ನಿರೀಕ್ಷೆಗೆ ಹೆಚ್ಚು ಸಮರ್ಥ
ಕೊಡುವಂತಿವೆ. ಇಲ್ಲಿಯೂ ಒಲವಿನ ಗೀತಗಳು ಇವೆ; ಆದರೆ ಅವು 'ಮೈಸೂರ
ಮಲ್ಲಿಗೆ'ಯ ಗ್ರಂಥವಲಯದ ಕೇಂದ್ರದಿಂದ ದೂರ ಸರಿದು ಅಂಚಿನಲ್ಲಿ
ಸಂಚರಿಸುತ್ತಿರುವಂತೆ ಕಾಣುತ್ತವೆ; ಮೊದಲಿನ ಸ್ವಚ್ಛತೆ, ಸ್ಫುಟತೆ. ತೀವ್ರ
ಸಹಜತೆ, ಚಾರುತ್ವಗಳು ಅವುಗಳಲ್ಲಿ ಕಡಿಮೆಯಾಗುತ್ತ ಬಂದಿವೆ. ಮೊ
ಕಾಶ್ಯೆ ಹಿಂಜರಿಯುತ್ತ ಸಾಗಿದೆ. ಇದರಿಂದ ಮೊದಲಿನ ನಿರೀಕ್ಷೆ ಸಫಲವಾ

ತಿಲ್ಲ. ಈ ನಿರಾಶೆಯನ್ನು ಹೋಗಲಾಡಿಸುವಂತಿವೆ, ಇತರ ಕ್ಷೇತ್ರಗಳಲ್ಲಿ ಓಡಾಡಿ ಕಂಡುಂಡ ಸೊಬಗಿನ ಕವಿತೆಗಳು. ವಸ್ತುವೈವಿಧ್ಯವೂ ಅದರಿಂದ ಪ್ರಚೋದಿತವಾಗಿರುವ ಭಾವಬಾಹುಳ್ಯವೂ ಸ್ವಲ್ಪಮಟ್ಟಿಗೆ ನವೀನ ರಚನಾತಂತ್ರವೂ ಈಚಿನ ಕಾವ್ಯಗುಚ್ಛಗಳಲ್ಲಿ ಬೆಳೆಯುತ್ತ ಬಂದು ಈ 'ಶಿಲಾಲತೆ'ಯಲ್ಲಿ ಒಂದು ಹಂತವನ್ನು ಮುಟ್ಟಿದೆ. ಆದರೂ ಕೆಲವರಿಗೆ ಕೊರಗು, 'ಮೈಸೂರು ಮಲ್ಲಿಗೆ'ಯ ಸುಕುಮಾರ ಪ್ರಪಂಚ ಕವಿಗಳ ಕೈನುಣುಚಿಕೊಂಡು ಹೋಯಿತಲ್ಲಾ ಎಂದು..."

ಮೇಲಿನ ಮಾತುಗಳಲ್ಲಿ ಕೆ.ಎಸ್.ನ.ರವರ ಮೊದಲಿನ ಕಾವ್ಯದ ಬಗೆಗೆ ಮೆಚ್ಚುಗೆಯಿದೆ, ನಂತರ ಅವರ ಕಾವ್ಯಮಾರ್ಗ ಹೊರಳಿದ್ದರ ಸೂಚನೆಯಿದೆ, ಕೊನೆಯಲ್ಲಿ 'ಶಿಲಾಲತೆ'ಯ ಘಟ್ಟದಲ್ಲಿ ಕವಿ ಬೆಳೆದಿರುವುದರ ಬಗೆಗೆ ಮೆಚ್ಚುಗೆಯಿದ್ದರೂ 'ಮೈಸೂರು ಮಲ್ಲಿಗೆ'ಯ ಸುಕುಮಾರ ಪ್ರಪಂಚ ಮರೆಯಾದದ್ದರ ಬಗೆಗೆ ಅತೃಪ್ತಿಯಿದೆ. ಬಹಳ ಸೊಗಸಾಗಿ 'ಶಿಲಾಲತೆ'ಯ ವಿಮರ್ಶೆ ಮಾಡುವ ಡಿ.ಎಲ್.ಎನ್. ಕಾವ್ಯದ ವಿಶೇಷಾಂಶಗಳನ್ನು ಚೆನ್ನಾಗಿಯೇ ಗುರುತಿಸುವರು. ಅವರಿಗೆ ಭಾವಗೀತೆಗಿರಬಹುದಾದ ಇತಿಮಿತಿಗಳ ಅರಿವಿದೆ. ಅವರು ವಿನಮ್ರರಾಗಿ ಸ್ವಲ್ಪ ನಿಷ್ಠುರವೆನ್ನಬಹುದಾದ ತಮ್ಮ ಅನಿಸಿಕೆಯನ್ನು ಹೇಳುವರು. ಸತ್ಯವನ್ನು ಮರೆಮಾಡುವ ಸಂಕೋಚಪ್ರವೃತ್ತಿ ಅವರದಲ್ಲ. ಅವರು ಹೇಳುವರು : "ಭಾವಗೀತೆ ಎಷ್ಟೇ ಲೋಕೋತ್ತರವಾಗಿದ್ದರೂ ಕವಿಶಕ್ತಿಯ ಪೂರ್ಣಾವಿಷ್ಕರಣಕ್ಕೆ ಅಲ್ಲಿ ಅವಕಾಶ ಸಾಲದು—ಮಾನವ ಜೀವನ ನಾಟಕದ ಹತ್ತಾರು ದೃಶ್ಯಗಳು ಒಟ್ಟಿಗೆ ಸೇರಿ ಹತ್ತಾರು ವ್ಯಕ್ತಿಗಳ ಹೃದಯಮಥನದಿಂದ ಕ್ರಿಯಾಮಯವಾಗಿ ಭಿನ್ನ ಆದರ್ಶಗಳ ತುಮುಲದಿಂದ ರಮಣೀಯವಾಗಿ ಉನ್ನತಿಯ ನೆಲೆಗೆ ಕವಿಮನವನ್ನು ಕೊಂಡೊಯ್ಯುವ ರಚನೆಗಳಲ್ಲಿ ಕವಿಶಕ್ತಿ ಧೀರವೂ ಗಂಭೀರವೂ ಆದ ಸಿಂಹಗಮನದಿಂದ ಭವ್ಯಾನುಭೂತಿಯನ್ನುಂಟುಮಾಡಬಲ್ಲುದು. ಆ ದಿಕ್ಕಿನಲ್ಲಿ ಈ ಕವಿಗಳ ಶಕ್ತಿ ಹರಿಯಲಿ ; ದೊಡ್ಡದನ್ನು ಹಿಡಿಯಲಿ, ಸಾಧಿಸಲಿ. 'ಯೋ ವೈ ಭೂಮಾ ತತ್ಸುಖಂ ?"

ಡಿ.ಎಲ್.ಎನ್. ಅವರ ಬದುಕಿನ ಮುಖ್ಯ ಘಟನೆಗಳು

ಜನನ	:	೨೭ - ೧೦ - ೧೯೦೬ರಂದು ಚಿಕ್ಕನಾಯಕನಹಳ್ಳಿಯಲ್ಲಿ, ಮಾತಾಮಹರಾದ ಅಣ್ಣಾಸ್ವಾಮಿ ಅಯ್ಯಂಗಾರ್ಯರ ಮನೆಯಲ್ಲಿ.
ತಂದೆ–ತಾಯಿಯರು	:	ಶಾಮೈಂಗಾರ್–ಲಕ್ಷ್ಮಮ್ಮ.
ವಿದ್ಯಾಭ್ಯಾಸ	:	ಬಾಲ್ಯವಿದ್ಯಾಭ್ಯಾಸ–ಪಾವಗಡ, ಮಧುಗಿರಿ, ಶಿರಾ ಹಾಗೂ ತುಮಕೂರುಗಳಲ್ಲಿ. –ಉನ್ನತ ವಿದ್ಯಾಭ್ಯಾಸ-ಬೆಂಗಳೂರು ಮೈಸೂರುಗಳಲ್ಲಿ.
ಪದವಿ	:	ಬಿ. ಎ. (ಭೌತಶಾಸ್ತ್ರ, ರಸಾಯನಶಾಸ್ತ್ರ ಐಚ್ಛಿಕ) ೧೯೨೭ರಲ್ಲಿ. ಈ ಪರೀಕ್ಷೆಯಲ್ಲಿ ಕನ್ನಡದಲ್ಲಿ ಹೆಚ್ಚು ಅಂಕಗಳನ್ನು ಪಡೆದದ್ದಕ್ಕಾಗಿ ಬಂಗಾರದ ಪದಕ ಮತ್ತು ಬಹುಮಾನ. ಕನ್ನಡ ಎಂ.ಎ. ೧೯೨೯ರಲ್ಲಿ. ಪ್ರಥಮ ಸ್ಥಾನ ಗಳಿಸಿದ್ದಕ್ಕಾಗಿ ಪ್ರಥಮ ವೈಸ್‌ಛಾನ್ಸಲರ್ ಎಚ್. ವಿ. ನಂಜುಂಡಯ್ಯನವರ ಸುವರ್ಣ ಪದಕ.
ಸಂಶೋಧನ ವೇತನ	:	೧೯೨೯ರಲ್ಲಿ ವಿಶ್ವವಿದ್ಯಾಲಯ ಆಗ ತಾನೇ ಪ್ರಾರಂಭಿಸಿದ್ದ ಸಂಶೋಧನ ವೇತನ ಪಡೆದು ವೀರಶೈವ ಸಾಹಿತ್ಯದ ಆರಂಭ ಕಾಲ ಕುರಿತು ಸಂಶೋಧನೆ, ಎಂಟು ತಿಂಗಳಲ್ಲಿಯೇ ಸಂಶೋಧನ ಪ್ರಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಸಾದರ ಪಡಿಸಲಾಯಿತು.

ಕನ್ನಡ ಪಂಡಿತರಾಗಿ : ೧೯೩೦ರಲ್ಲಿ ಮೈಸೂರಿನ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ರೆಸಿಡೆಂಟ್ ಕನ್ನಡ ಪಂಡಿತರಾಗಿ ನೇಮಕ; ಅಲ್ಲಿದ್ದ ಎರಡು ವರ್ಷಗಳಲ್ಲಿ ಎರಡು ಪ್ರಾಚೀನ ಗ್ರಂಥಗಳ ಸಂಪಾದನಾಕಾರ್ಯ ನಿರ್ವಹಣೆ; ಇದರ ಜೊತೆಗೆ ಮಹಾರಾಜಾ ಕಾಲೇಜಿನಲ್ಲಿ ಒಪ್ಪೊತ್ತಿನ ಕನ್ನಡ ಪಂಡಿತರಾಗಿ ಅಧ್ಯಾಪನ ಕಾರ್ಯ ನಿರ್ವಹಣೆ; ೧೯೩೨ರಲ್ಲಿ ಮಹಾರಾಜಾ ಕಾಲೇಜಿನಲ್ಲಿ ಪೂರ್ಣಕಾಲದ ಕನ್ನಡ ಪಂಡಿತರಾಗಿ ನೇಮಕ.

ಕನ್ನಡ ಅಧ್ಯಾಪಕರಾಗಿ : ೧೯೩೯ರಲ್ಲಿ ಮೈಸೂರಿನ ಇಂಟರ್‌ಮೀಡಿಯೇಟ್ ಕಾಲೇಜಿಗೆ (ಈಗಿನ ಯುವರಾಜಾ ಕಾಲೇಜಿಗೆ) ಕನ್ನಡ ಅಧ್ಯಾಪಕರಾಗಿ ವರ್ಗ; ೧೯೪೧ರಲ್ಲಿ ಮತ್ತೆ ಮಹಾರಾಜಾ ಕಾಲೇಜಿಗೆ ವರ್ಗ.

ಕನ್ನಡ
ಉಪಪ್ರಾಧ್ಯಾಪಕರಾಗಿ : ೧೯೪೫ರಲ್ಲಿ ಉಪಪ್ರಾಧ್ಯಾಪಕರಾಗಿ ಬಡ್ತಿ ಪಡೆದು ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ವರ್ಗ; ೧೯೪೮ರಲ್ಲಿ ಮತ್ತೆ ಮೈಸೂರಿನ ಮಹಾರಾಜಾ ಕಾಲೇಜಿಗೆ ವರ್ಗ.

ಕನ್ನಡ-ಕನ್ನಡ ನಿಘಂಟಿನ
ಪ್ರಧಾನ ಸಂಪಾದಕರಾಗಿ : ೧೯೫೪ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟಿನ ಪ್ರಧಾನ ಸಂಪಾದಕರಾಗಿ ನೇಮಕ, ಸಂಸಾರಸಮೇತ ಬೆಂಗಳೂರಿನಲ್ಲಿ ವಾಸ.

ಕನ್ನಡ ಪ್ರಾಧ್ಯಾಪಕರಾಗಿ : ೧೯೫೭ರಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಬಡ್ತಿ ಪಡೆದು ಮತ್ತೆ ಮಹಾರಾಜಾ ಕಾಲೇಜಿಗೆ ವರ್ಗ.

ನಿವೃತ್ತಿ : ೩೧-೩-೧೯೬೨ರಲ್ಲಿ ಅಧ್ಯಾಪನ ವೃತ್ತಿಯಿಂದ ನಿವೃತ್ತಿ.

ಯು.ಜಿ.ಸಿ. ಸಂಶೋಧಕ ವಿದ್ವಾಂಸರಾಗಿ	:	ನಿವೃತ್ತಿಯ ನಂತರ ೧೯೬೩ರಿಂದ ಯು.ಜಿ.ಸಿ.ಯ ಸಂಶೋಧಕ ವಿದ್ವಾಂಸರಾಗಿ ಸುಮಾರು ಆರು ವರ್ಷಗಳ ಕಾಲ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಲ್ಲಿ ಅಧ್ಯಾಪನ ಹಾಗೂ ಸಂಶೋಧನ ಕಾರ್ಯ ನಿರ್ವಹಣೆ; ಪ್ರೊ॥ ತೀ.ನಂ.ಶ್ರೀ.ಯವರ ನಿಧನಾನಂತರ ಕನ್ನಡ-ಕನ್ನಡ ನಿಘಂಟಿನ ಅಧ್ಯಕ್ಷ ಪದವಿ ಹಾಗೂ ಪ್ರಧಾನ ಸಂಪಾದಕತ್ವ ಕಾರ್ಯನಿರ್ವಹಣೆ ; ನಿಘಂಟಿನ ಮೊದಲನೆ ಸಂಪುಟದ ಬಿಡುಗಡೆ.
ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ	:	೧೯೬೦ರಲ್ಲಿ ಬೀದರ್‌ನಲ್ಲಿ ನಡೆದ ೪೧ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ; ಆ ಸಂದರ್ಭದ ಸವಿನೆನಪಿಗಾಗಿ ಅವರ ಮಿತ್ರರೂ ಶಿಷ್ಯರೂ 'ಜ್ಞಾನೋಪಾಸಕ' ಎಂಬ ಅಭಿನಂದನ ಗ್ರಂಥದ ಸಮರ್ಪಣೆ, ಸನ್ಮಾನ; ೧೯೬೭ರಲ್ಲಿ 'ಉಪಾಯನ' ಎಂಬ ಅಭಿನಂದನ ಗ್ರಂಥದ ಸಮರ್ಪಣೆ, ಸನ್ಮಾನ.
ರಾಜ್ಯ ಪ್ರಶಸ್ತಿ	:	ಮೈಸೂರು ಸರಕಾರದ 'ರಾಜ್ಯ ಪ್ರಶಸ್ತಿ'ಯ ಗೌರವ.
ಡಿ.ಲಿಟ್. ಪದವಿ	:	ಮೈಸೂರು ವಿಶ್ವವಿದ್ಯಾನಿಲಯವು ೧೯೬೯ರಲ್ಲಿ ಡಿ.ಎಲ್.ಎನ್. ಅವರ ಅಪಾರವಾದ ವಿದ್ವತ್ತನ್ನು ಮನ್ನಿಸಿ ಅವರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿಕೆ.
'ಪ್ರಬುದ್ಧ ಕರ್ಣಾಟಕ'ದ ಪ್ರಧಾನ ಸಂಪಾದಕರಾಗಿ	:	೧೯೪೯ ರಿಂದ ೧೯೬೨ರ ವರೆವಿಗೆ 'ಪ್ರಬುದ್ಧ ಕರ್ಣಾಟಕ'ದ ಪ್ರಧಾನ ಸಂಪಾದಕರಾಗಿ ಕಾರ್ಯ ನಿರ್ವಹಣೆ,

ಕಾರ್ಯಕ್ಷೇತ್ರ – ಸಾಹಿತ್ಯ

ಸೇವೆ : ಭಾಷೆ, ವ್ಯಾಕರಣ, ನಿಘಂಟು, ಛಂದಸ್ಸು, ಗ್ರಂಥ ಸಂಪಾದನೆ, ಶಾಸನಗಳು, ಪ್ರಾಚೀನ ಸಾಹಿತ್ಯ, ಆ ಸಾಹಿತ್ಯದ ವಿಮರ್ಶೆ ಮತ್ತು ಚರಿತ್ರೆ, ಶಬ್ದಾರ್ಥವಿಚಾರ – ಹೀಗೆ ತಮಗೆ ಮೆಚ್ಚುಗೆಯಾದ ವಿಷಯಗಳಲ್ಲಿ ಅವಿಶ್ರಾಂತ ಸಂಶೋಧನೆ. ಆ ಮೂಲಕ ಕನ್ನಡ ವಿದ್ವತ್ತನ್ನು ಬಲಪಡಿಸಿದುದು; ೪೦ ವರ್ಷಗಳಲ್ಲಿ ಸು. ೮೦ ಸಂಶೋಧನ ಲೇಖನಗಳನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಬರೆದು ನಾಡಿನ ಬೇರೆ ಬೇರೆ ವಿದ್ವತ್ ಪತ್ರಿಕೆಗಳಲ್ಲಿ ಪ್ರಕಟಪಡಿಸಿದುದು.

ನಿಧನ : ೭–೫–೭೧ರ ರಾತ್ರಿ ಮೈಸೂರಿನಲ್ಲಿರುವ ಅವರ ಸ್ವಗೃಹದಲ್ಲಿ ತೀವ್ರ ಹೃದಯಾಘಾತ ಹಾಗೂ ಮೂತ್ರಕೋಶದ ತೊಂದರೆಯಿಂದಾಗಿ ನಿಧನ.

ಪ್ರೊ. ಡಿ. ಎಲ್. ನರಸಿಂಹಾಚಾರ್ಯರ ಕೃತಿಗಳು

ಗ್ರಂಥಗಳು

(ಅ) ಸ್ವತಂತ್ರ

೧. ಪಂಪನ ಹರಿಹರ : ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು : ೧೯೩೯

೨. ಶಬ್ದ ವಿಹಾರ : ಶಾರದಾ ಮಂದಿರ, ಮೈಸೂರು : ೧೯೫೬

೩. ಕನ್ನಡ ಗ್ರಂಥ ಸಂಪಾದನೆ : ಶಾರದಾ ಮಂದಿರ, ಮೈಸೂರು : ೧೯೬೪

೪. ಪೀಠಿಕೆಗಳು–ಲೇಖನಗಳು (ಸಂಶೋಧನ ಲೇಖನಗಳ ಸಮುಚ್ಚಯ ಗ್ರಂಥ) : ಡಿ. ವಿ. ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು–೪ : ೧೯೭೧

(ಆ) ಸಂಪಾದಿತ

೧. ಗೋವಿನಹಾಡು : ಶಾರದಾ ಮಂದಿರ, ಮೈಸೂರು : ೧೯೬೦

೨. ಪಂಪರಾಮಾಯಣ ಸಂಗ್ರಹ : ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು

೩. ಭೀಷ್ಮಪರ್ವ : ಪ್ರಾಚ್ಯವಸ್ತು ಸಂಶೋಧನಾಲಯ, ಮೈಸೂರು : ೧೯೫೦

೪. ವಡ್ಡಾರಾಧನೆ : ಶಾರದಾ ಮಂದಿರ, ಮೈಸೂರು : ೧೯೫೫ (ಮೂರನೆಯ ಮುದ್ರಣ) ; (ಮೊದಲ ಮುದ್ರಣ : ೧೯೪೯–ಕನ್ನಡ ಸಾಹಿತ್ಯ ಪರಿಷತ್ತು)

೫. ಸುಕುಮಾರಚರಿತಂ : ಟಿ. ಎಸ್. ಶಾಮರಾವ್ ಅವರೊಡನೆ. ಕರ್ನಾಟಕ ಸಂಘ, ಶಿವಮೊಗ್ಗ : ೧೯೫೪

೬. ಶಬ್ದಮಣಿ ದರ್ಪಣ : ಶಾರದಾ ಮಂದಿರ, ಮೈಸೂರು : ದ್ವಿತೀಯ ಮುದ್ರಣ : ೧೯೬೪

೭. ಸಕಲವೈದ್ಯಸಂಹಿತ ಸಾರಾರ್ಣವಂ : ಪ್ರಾಚ್ಯವಸ್ತು ಸಂಶೋಧನಾಲಯ, ಮೈಸೂರು : ೧೯೩೨
೮. ಸಿದ್ಧರಾಮ ಚಾರಿತ್ರ : ಪ್ರೊ|| ಟಿ. ಎಸ್. ವೆಂಕಣ್ಣಯ್ಯನವರೊಡನೆ ಕರ್ಣಾಟಕ ಸಂಘ, ಶಿವಮೊಗ್ಗ : ೧೯೪೧
೯. ಸಿದ್ಧರಾಮಚರಿತೆಯ ಸಂಗ್ರಹ : ಶಾರದಾ ಮಂದಿರ, ಮೈಸೂರು

ಮುನ್ನುಡಿಗಳು

೧, ಕನ್ನಡದಲ್ಲಿ ವಿಡಂಬನ ಸಾಹಿತ್ಯ : (ಲೇ.) ಎಚ್ಚೆಸ್ಕೆ : ೧೯೪೭
೨. ತೂಗುದೀವಿಗೆ (ಕವನ ಸಂಕಲನ) : ಟಿ. ಕೇಶವಭಟ್ಟ : ೧೯೬೩
೩. ಬಸವಸ್ತೋತ್ರಗೀತೆ (ಸಂಪಾದಿತ ಕೃತಿ) : (ಸಂ.) ಶಿವಬಸವಸ್ವಾಮಿಗಳು : ೧೯೫೪
೪. ವ್ಯವಹಾರ ಕನ್ನಡ ; (ಲೇ.) ಎಚ್ಚೆಸ್ಕೆ : ೧೯೫೭
೫. ಶಿಲಾಲತೆ (ಕವನ ಸಂಕಲನ) : (ಲೇ.) ಕೆ. ಎಸ್. ನರಸಿಂಹಸ್ವಾಮಿ : ೧೯೫೮
೬. ಶಿವದಾಸ ಗೀತಾಂಜಲಿ (ಸಂಪಾದಿತ ಕೃತಿ) : (ಸಂ.) ಎಲ್. ಬಸವ ರಾಜು : ೧೯೬೩ (ಮುನ್ನುಡಿ ಇಂಗ್ಲಿಷ್‌ನಲ್ಲಿದೆ)
೭. ಸಾಹಿತ್ಯದ ಹಿನ್ನೆಲೆ : (ಲೇ.) ಕೆ. ವೆಂಕಟರಾಯಾಚಾರ್ಯ : ೧೯೫೭
೮. ಶರಣ ಚರಿತ ಮಾನಸಂ (ಸಂಪಾದಿತ ಕೃತಿ) : (ಸಂ.) ಎಚ್. ದೇವೀರಪ್ಪ: ೧೯೬೮
೯. ಕನ್ನಡ ಛಂದಸ್ಸು : (ಲೇ.) ಟಿ. ವಿ. ವೆಂಕಟಾಚಲಶಾಸ್ತ್ರೀ
೧೦. ಭಾಷಾವಿಜ್ಞಾನ : (ಲೇ.) ಹಂಪಾ ನಾಗರಾಜಯ್ಯ
೧೧. ಭಾರತೀಯ ಗ್ರಂಥ ಸಂಪಾದನಾ ಪರಿಚಯ (ಅನುವಾದ ಕೃತಿ) : (ಅನು : ಎಸ್. ಎಸ್. ಲಕ್ಷ್ಮೀನಾರಾಯಣಭಟ್ಟ : ೧೯೬೮

ಲೇಖನಗಳು

೧. ಅಗ್ಗಳದೇವ : ಪ್ರ. ಕ, ೩೫–೪
೨. ಅಗ್ರಹಾರ : ಕನ್ನಡ ನುಡಿ ೧೯೪೬
೩. ಅಭಿನವಪಂಪನ ಕಾಲವಿಚಾರ : ಪ್ರ. ಕ. ೧೬–೩

೪. ಆದಿದೇವ (ಅಜ್ಞಾತಕವಿ) : ಜಯಕರ್ನಾಟಕ ೧೦–೪
೫. ಇಂದಿನ ಕನ್ನಡ ಕವಿತೆ : ತರಂಗರಂಗ–೧೯೪೩
೬. ಕಣ್ಣೊ ಕುರುಡೊ : ('ಮುತ್ತು–ಹವಳ' ಎಂಬ ಸಂಕಲನ ಗ್ರಂಥ ದಲ್ಲಿದೆ)
೭. ಕರ್ಣಪಾರ್ಯನ ನೇಮಿನಾಥ ಪುರಾಣದ ವಿಮರ್ಶೆ : ಪ್ರ.ಕ. ೨೩–೨
೮. ಕನ್ನಡದಲ್ಲಿ ಹೊಸ ನಿಘಂಟುವಿನ ಆವಶ್ಯಕತೆ : ಸಂಭಾವನೆ : ೧೯೪೧
೯. ಕನ್ನಡ ಸಾಹಿತ್ಯದ ಸೊಬಗು : ಉಪನ್ಯಾಸ : ಕ.ನು. ೧೬–೨
೧೦. ಕರ್ಣಾಟಕ ಸಾಹಿತ್ಯದಲ್ಲಿ ಪ್ರಕೃತಿ ವರ್ಣನೆ : ಕ.ಸಾ.ಪ.ಪ. ೧೩–೨ (೧೯೨೮)
೧೧. ಕವಿ ಲಕ್ಷ್ಮೀಶ : (ಎಂ.ಆರ್.ಶ್ರೀ. ಅವರೊಡನೆ ಪತ್ರವ್ಯವಹಾರ) ಪ್ರ. ಕ. ೧೫–೩
೧೨. ಕಾರೋಪಣದ ಪಟ್ಟಿ : ಪ್ರ.ಕ. ೪೨–೩
೧೩. ಕಾಳಸೆ–ಕಾಳಸ–ಕಳಾಸ–ಕಾಳಾಸ : ಕ.ನು. ೧೯೪೭
೧೪. ಕುಮಾರವ್ಯಾಸನ ಕರ್ಣ : ಪ್ರ.ಕ. ೩೮–೧ (೧೯೫೮)
೧೫. ಕೆಲವರು ವಚನಕಾರರು : ಪ್ರ.ಕ. ೧೯–೧
೧೬. ಕೆಲವರು ವಚನಕಾರರು : ಪ್ರ.ಕ. ೧೯–೪
೧೭. ಕೆಲವು ರಗಳೆಯ ಕವಿಗಳು : ಪ್ರ.ಕ. ೧೭–೪
೧೮. ಗಜಾಂಕುಶ : ಪ್ರ.ಕ. ೧೪–೨
೧೯. ಗುಂಯ್ಯಾಲ್–ಒಂದು ವಿವೇಚನೆ : ಪ್ರ.ಕ. ೪೫–೪
೨೦. ಚೆನ್ನವೀರೇಶ್ವರ (ಒಬ್ಬ ಅಜ್ಞಾತ ಕವಿ) : ಜಯಕರ್ನಾಟಕ ೬–೧೨
೨೧. ಚೌಂಡರಸನ ಕಾಲವಿಚಾರ : ಜಯಕರ್ನಾಟಕ ೮–೧೧
೨೨. ಜಟಾಸಿಂಹನಂದಿಯ ವರಾಂಗಚರಿತ್ರೆ : ಕ.ಸಾ.ಪ.ಪ. ೨೫–೨ (೧೯೪೫)
೨೩. ಜನ್ನನೂ ವಾದಿರಾಜನೂ : ಕ.ಸಾ.ಪ.ಪ. ೧೫–೪
೨೪. ಜಿನದತ್ತರಾಯ ಚರಿತೆ : ಚಾಗಿನ : ೧೯೫೪
೨೫. ಡಂಗ ಹಾಕು ಎಂದರೇನು ? : ಜೀವನ ೧೯೫೨
೨೬. ತುರುಗಾಹಿ ರಾಮಣ್ಣನ ವಚನಗಳು : ಶರಣ ಸಾಹಿತ್ಯ : ೧೯೪೯
೨೭. ತೋಮರ ರಗಳೆ : ಪ್ರ.ಕ. ೩೪–೧

೨೮. ದೇವಾಂಗ ದಾಸಿಮಯ್ಯನ ಪುರಾಣ : ದೇವರ ದಾಸಿಮಾರ್ಯ ಪ್ರಶಸ್ತಿ : ೧೯೫೩
೨೯, ಧವಳವೆಂಬ ಹಾಡಿನ ಸ್ವರೂಪ : ಪಂಜೆಯವರ ನೆನಪಿಗಾಗಿ ; ೧೯೫೨
೩೦. ನಲವತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಭಾಷಣ : ೧೯೬೦
೩೧. ನಾಲ್ಕನೆಯ ಮಂಗರಸ : ಕ.ಸಾ.ಪ.ಪ. ೧೮–೧
೩೨. ಪಕ್ಷಿ > ಹಕ್ಕಿಗೆ ಸಮಾನ ಕನ್ನಡ ಶಬ್ದ : ಪ್ರ.ಕ. ೪೪–೨
೩೩. ಪಟಿಂಗಾಸು : ಪ್ರ.ಕ. ೪೨–೨
೩೪. ಪಂಪ : (ಭಾಷಣ) : ಕನ್ನಡ ನುಡಿ ೧೨
೩೫. ಪೊನ್ನನ ಭುವನೈಕ ರಾಮಾಭ್ಯುದಯ : ಪ್ರ.ಕ. ೧೫-೨
೩೬. ಪೊನ್ನನೂ ಕಾಳಿದಾಸನೂ : ಪ್ರ.ಕ. ೧೨-೨
೩೭. ಪೊರಸು – ಒಂದು ವಿಚಾರ : ಪ್ರ.ಕ. ೨೭-೩
೩೮. ಬರಡಗೆ : ಪ್ರ.ಕ. ೪೨-೧
೩೯. ಬಸವಣ್ಣನವರ ಕೆಲವು ವಚನಗಳ ಪಾಠ : ಶರಣ ಸಾಹಿತ್ಯ : ೧೧-೭
೪೦. ಭಗವತಿಯೋೞುವೇಟ್ಟ ತೆಱದಿಂ ಕಥೆಯಾಯ್ತಿವರೇೞು : ಪ್ರ.ಕ. ೪೪-೨
೪೧. ಭಾಷಾ ವಿಹಾರ-೧ : ಕನ್ನಡ ನುಡಿ ೧೫
೪೨. ಭಾಷಾ ವಿಹಾರ-೨ : ಕನ್ನಡ ನುಡಿ ೧೫
೪೩. ಮದನಾವತಾರ : ಪ್ರ.ಕ. ೩೮-೪
೪೪. ಮೇಕು - ಇದರ ಅರ್ಥ ಮತ್ತು ನಿಷ್ಪತ್ತಿ : ಪ್ರ.ಕ. ೪೫-೧
೪೫. ಮೊಹೆಂಜೊದಾರೊದಲ್ಲಿ ಈಚೆಗೆ ನಡೆದ ಭೂಶೋಧನೆ : (ಅನುವಾದ ಲೇಖನ) : ಪ್ರ.ಕ. ೧೬-೪
೪೬. ರನ್ನ ಕವಿಯ ಸಹಸ್ರ ವಾರ್ಷಿಕೋತ್ಸವ (ಭಾಷಣ) : ಕನ್ನಡ ನುಡಿ ೧೨-೬
೪೭. ರಷಣ – ರವಣ : ಅಭಿವಂದನೆ: ೧೯೫೬
೪೮. ರುದ್ರಭಟ್ಟ : ಪ್ರ.ಕ. ೩೨-೪
೪೯. ರೆವರೆಂಡ್ ಎಫ್. ಕಿಟ್ಟೆಲ್ : ಪ್ರ.ಕ. ೪೦-೩

೫೦. ಲಕ್ಷ್ಮೀಶನ ಕಾಲವಿಚಾರ : ಪ್ರ.ಕ. ೧೩-೧
೫೧. ಲಾಳ ಕಟ್ಟಿಸಿಕೊಳ್ಳುವ ಎತ್ತು : ಕನ್ನಡನುಡಿ ೧೧
೫೨. ಲಿಂಗಾರ್ಜನೆ ಮತ್ತು ಲಿಂಗಾರಾಧನೆ : ಜಯಕರ್ನಾಟಕ ೮-೧೧
೫೩. ರೇವಕೋಟ್ಯಾಚಾರ್ಯ : ಕ.ಸಾ.ಪ.ಪ. ೧೬-೨ (೧೯೩೧)
೫೪. ವಡ್ಡಾರಾಧನೆಯ ಕೆಲವು ವಿಚಾರಗಳು : ಕ.ಸಾ.ಪ.ಪ. ೨೫
೫೫. ವಡ್ಡಾರಾಧನೆಯೆಂಬ ಹಳಗನ್ನಡ ಗದ್ಯಗ್ರಂಥ :
(ಮೂಲ : ಡಾ|| ಎ.ಎನ್. ಉಪಾಧ್ಯೆ) : ಪ್ರ.ಕ. ೨೪-೨
೫೬. ವರಾಂಗಚರಿತೆ (ಅನುವಾದ) : ಕ.ಸಾ.ಪ.ಪ. ೨೫-೨ (೧೯೪೩)
೫೭. ವಿಜಯನಗರ ಕಾಲದ ಸಾಹಿತ್ಯ : ಪ್ರ.ಕ. ೨೨-೪
೫೮. ವ್ಯಾಸಂಗದ ಹವ್ಯಾಸ : ಪ್ರ.ಕ. ೩೩-೨
೫೯. ಶಿವಸಿದ್ಧರಾಮ (ಒಬ್ಬ ಅಜ್ಞಾತಕವಿ) : ಜಯಕರ್ನಾಟಕ ೯-೮
೬೦. ಸಾಹಿತ್ಯ ಚರಿತ್ರೆಯ ಸ್ವರೂಪ : ಪ್ರ.ಕ. ೩೦-೨
೬೧. ಸಿದ್ಧಲಿಂಗೇಶ (ಒಬ್ಬ ಅಜ್ಞಾತ ಕವಿ): ಜಯಕರ್ನಾಟಕ ೯-೪
೬೨. ಸಿದ್ಧರಾಮನ ವೀರಶೈವತ್ವ (ಪುನರಾವಲೋಕನ) ಪ್ರ.ಕ. ೪೫-೩
೬೩. ಸೋವಿಯಟ್ ರಷ್ಯದಲ್ಲಿ ಮಕ್ಕಳ ರಂಗಭೂಮಿ: ಜಯಕರ್ನಾಟಕ
(೧೯೬೪)
೬೪. ಮೂರು ಷಟ್ಪದ(ದಿ)ಗಳು: ಪೀಠಿಕೆಗಳು ಲೇಖನಗಳು (೧೯೭೧)
೬೫. ಕನ್ನಡದಲ್ಲಿ ಶಬ್ದರಚನೆ: ಪೀಠಿಕೆಗಳು ಲೇಖನಗಳು (೧೯೭೧)
೬೬. ಬಾದುಬೆ: ಕನ್ನಡನುಡಿ ೧೫
೬೭. ತ್ರಾಸು: ಕನ್ನಡನುಡಿ ೧೫
೬೮. 'ಗದಾಯುದ್ಧ'ದ ಒಂದು ಪದ್ಯದ ಅರ್ಥವಿಚಾರ : ಕನ್ನಡನುಡಿ
(೧೯೬೭)
೬೯. ತರ್ಕ್ಯೂವರ್ಣ–ಅರ್ಥವಿಚಾರ ಮತ್ತು ನಿಷ್ಪತ್ತಿ : ದೇವಗಂಗೆ (೧೯೭೮)
೭೦. "ಈಜಿಲ್" ಎಂದರೇನು ? : ಪ್ರ.ಕ. ೪೪-೩
೭೧. ಪದಗಳ ಹುಟ್ಟು ಸಾವು : ಕೈಲಾಸ (ಸೆಪ್ಟೆಂಬರ್, ೧೯೬೩)
೭೨. 'ಅರ್ಥನೇಮಿ'ಯ ಒಂದು ಪದ್ಯ–ಟಿಪ್ಪಣಿ : ಪ್ರ.ಕ. (೧೯೬೭)
೭೩. ಭಾಷಾವಿಹಾರ (ಒಂದು ವಿಮರ್ಶೆ) : ಕನ್ನಡನುಡಿ ೧೫

೭೪. "ಭಗವತಿಂಪಿಜು" ಸಾಹಿತ್ಯಸಂದನ (೧೯೬೨)
೭೫. ಕುಮಾರರಾಮನ ಸಾಂಗತ್ಯ : ಕನ್ನಡನುಡಿ ೩-೪೪
೭೬. ದೇವೀಚಂದ್ರಗುಪ್ತ ನಾಟಕ: ಪ್ರ.ಕ. ೧೮-೨೨
೭೭. ಇಂದಿನ ಕನ್ನಡ ಕವಿತೆ : ತರಂಗರಂಗ ೧೯
೭೮. 'ಮಾನಸೋಲ್ಲಾಸ'ದಲ್ಲಿ ಛಂದಸ್ಸು : ಪೀಠಿಕೆಗಳು ಲೇಖನಗಳು (೧೯೭೧)
೭೯. ಗ್ರಂಥಸಂಪಾದನೆ : ಪೀಠಿಕೆಗಳು ಲೇಖನಗಳು (೧೯೭೧)
೮೦. ಜಕ್ಕಣಾಚಾರ್ಯ : ಪ್ರ.ಕ. ೧೮-೩
೮೧. ನಿಘಂಟು ರಚನೆ : ಕನ್ನಡನುಡಿ ೧೯-೪
೮೨. ಪ್ರಾಕೃತ ಭಾಷೆಗಳ ಹೆಸರುಗಳು : ಪ್ರಕ. ೨೧-೪
೮೩. ಪುರಾಣಗಳ ಕಾಲ : ಪ್ರ.ಕ. ೨೧-೪

ಇಂಗ್ಲಿಷ್‌ನಲ್ಲಿ

1. The Genealogy of Arikesarin II - Journal of Andhra Historical Society, Vol. 7
2. Kannada Literature under Vijayanagara - Vijayanagara Sexcentenary Volume.
3. Old Kannada Literature : A brief Survey - Karnataka Darshana.
4. The Talangere Inscription of Jayasimha : (in collaboration with N.L.N. Rao) EI-Vol. 29.
5. Social and Religious Life in Karnataka under the Satavahanas : Karnataka Through the Ages.
6. Four Etymos from old Kannada - (Emeneau Presentation Volume).
7. Empires of Karnataka - Lecture delivered on the occasion of the Golden Jubilee of the Historical Association Maharaja's College, Mysore (To be Published).

ವಿಮರ್ಶೆ : ಪುಸ್ತಕ ಪರಿಚಯ

೧. ಅಕ್ಕಮಹಾದೇವಿ : (ಲೇ.) ರಂ. ಶ್ರೀ. ಮುಗಳಿ : ಪ್ರ.ಕ. ೧೯–೨, ೩
೨. ಕನ್ಯಾಬಲಿ (ಸೂಳೆಯ ಸಂಸಾರ) : (ಲೇ.) ಶಿವರಾಮ ಕಾರಂತ
೩. ಕನ್ನಡ ನುಡಿಯ ಹುಟ್ಟು : (ಲೇ.) ಶಂ. ಬಾ. ಜೋಶಿ : ಪ್ರ.ಕ. ೧೯–೨-೩
೪. ಕರ್ನಾಟಕ ದರ್ಶನ : (ಸಂ.) ಬುರ್ಲಿ ಬಿಂದು ಮಾಧವ : ಪ್ರ. ಕ. ೨೦–೧
೫. ಕಣ್ಮರೆಯಾದ ಕನ್ನಡ, ಮಹಾರಾಷ್ಟ್ರದ ಮೂಲ : (ಲೇ.) ಶಂಬಾ. ಜೋಶಿ : ಪ್ರ.ಕ. ೧೬–೨
೬. ಗಂಡುಗೊಡಲಿ ಮತ್ತು ಹನಿಗಳು : (ಲೇ.) ಜಿ. ಪಿ. ರಾಜರತ್ನಂ : ಕ.ಸಾ.ಪ.ಪ. ೨೦-೧
೭. ಗುಣವರ್ಮನ ಪುಷ್ಪದಂತ ಪುರಾಣ : (ಸಂ.) ಎ. ವೆಂಕಟರಾವ್, ಪಂಡಿತ ಎಚ್. ಶೇಷಯ್ಯಂಗಾರ್: ಪ್ರ.ಕ. ೧೬–೧
೮. ಕರ್ಣಪಾರ್ಯನ ನೇಮಿನಾಥ ಪುರಾಣಂ: (ಸಂ.) ಎಚ್. ಶೇಷಯ್ಯಂಗಾರ್: ಪ್ರ.ಕ. ೨೩-೨
೯. ಜೀವನಯಾತ್ರೆ : (ಲೇ.) ಅ.ನ.ಕೃ.: ಪ್ರ.ಕ. ೧೭-೧
೧೦. ಪ್ರಭುದೇವರ ಪುರಾಣ : (ಸಂ.) ಬುದ್ಧಯ್ಯಸ್ವಾಮಿ ಪುರಾಣಿಕ: ಪ್ರ.ಕ. ೨೨-೧
೧೧. 'ಕುಮುದೇಂದು ರಾಮಾಯಣ'ದ ಪರಿಷ್ಕರಣ ವಿಚಾರ (ಸಂ.) ಕೆ.ಜಿ. ಕುಂದಣಗಾರ : ಕ.ಸಾ.ಪ.ಪ. ೨೨೪-೩ (೧೯೩೯)
೧೨. ಪ್ರೇಮಾಹುತಿ : (ಲೇ.) ಟಿ.ವಿ. ರಾವು :?
೧೩. ತಿಳಿಗನ್ನಡ ವ್ಯಾಕರಣ : (ಲೇ.) ಆರ್.ಎನ್. ಸೂರ್ಯನಾರಾಯಣ :?
೧೪. ಮರಳಿ ಮಣ್ಣಿಗೆ : (ಲೇ.) ಶಿವರಾಮ ಕಾರಂತ; ಪ್ರ.ಕ. ೨೪-೧
೧೫. ಮಹಾದೇವಿಯಕ್ಕ : (ಲೇ.) ಕೆ.ಜಿ. ಕುಂದಣಗಾರ; ಪ್ರ.ಕ. ೨೧-೧
೧೬. ವೀಣಾನಾದ : (ಲೇ.) ಕೃ.ಹ. ಕುಲಕರ್ಣಿ: ಪ್ರ.ಕ. ೧೭-೧
೧೭. ವೈದ್ಯರಾಜ: (ಲೇ.) ಶ್ರೀರಂಗ: ಪ್ರ.ಕ. ೧೪–೨
೧೮. ಹಾವು : (ಲೇ.) ಶಿವರಾಮ ಕಾರಂತ: ?

ಗ್ರಂಥಋಣ

೧. ಪೀಠಿಕೆಗಳು ಲೇಖನಗಳು : ಡಿ. ಎಲ್. ನರಸಿಂಹಾಚಾರ್

೨. ಜ್ಞಾನೋಪಾಸಕ ; (ಸಂ.) ಜೀ. ಶಂ. ಪರಮಶಿವಯ್ಯ ; ನ. ಕೃಷ್ಣ

೩. ಉಪಾಯನ (ಸಂಭಾವನಾ ಗ್ರಂಥ)

೪. ಕನ್ನಡ ನುಡಿ (ಡಿ. ಎಲ್. ಎನ್. ಸ್ಮರಣ ಸಂಚಿಕೆ) ೩೪–೧೫, ೧೬ (ಆಗಸ್ಟ್ ೧೯೭೧)

೫. ಪ್ರಬುದ್ಧ ಕರ್ಣಾಟಕ ೫೩-೨

೬. ರಸಫಲ; (ಲೇ.) ಗೊರೂರು ರಾಮಸ್ವಾಮಿ ಅಯ್ಯಂಗಾರ್ (ಐಬಿಎಚ್ ಪ್ರಕಾಶನ)

೭. ಪ್ರೊ॥ ಡಿ. ಎಲ್. ನರಸಿಂಹಾಚಾರ್ : (ಲೇ.) ಬಿ. ವಿ. ವೈಕುಂಠರಾಜು (ಐಬಿಎಚ್ ಪ್ರಕಾಶನ)

೮. ಸಪ್ತಶೃಂಗ : (ಲೇ.) ಬಿ. ವಿ. ವೈಕುಂಠರಾಜು (ಅಕ್ಷರ ಪ್ರಕಾಶನ; ಸಾಗರ)